ಕನ್ನಡಿಗರ ಮನೆ ಮನೆಯ ವಾರಪತ್ರಿಕೆ

ರಾಗಸಂಗಮ

15-11-92 ರೂ. 4-50



ಈ ವಾರದ
ಸಂಪೂರ್ಣ ಕಾದಂಬರಿ
ಲಕ್ಷ್ಮಣ ರೇಖೆ
ಎಸ್. ಜೆ. ಸುಜಾತ

ಉತ್ತಮ ಮಟ್ಟದ ಚಲನಚಿತ್ರ ವಾರಪತ್ರಿಕೆ

ಬೆಲೆ ರೂ. 2–50 ಮಾತ್ರ

ಏಜೆಂಟರಿಲ್ಲದ ಕಡೆ ಠೇವಣಿ ಇಡಬಲ್ಲ ಏಜೆಂಟರು ಇಂದೇ ವ್ಯವಹರಿಸಿರಿ

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ' ಬೀದಿ,
ಬೆಂಗಳೂರು – 560 002.
ದೂರವಾಣಿ : 625004

ಪುಸ್ತಕ ರೂಪದ ಏಕೈಕ ಚಲನಚಿತ್ರ ವಾರಪತ್ರಿಕೆ

ಪ್ರತಿ ಶುಕ್ರವಾರ ಹೊರಬೀಳುತ್ತದೆ

ಸಿನಿರೇಖಾ

ನೀವು ಓದಿದ್ದೀರಾ? ಇಲ್ಲದಿದ್ದರೆ ಇಂದೇ ಕೊಂಡು ಓದಿ



ಹಾವಿಡಿಯ ಪಕ್ಷಿನೋಟ

- ★ ತಾರೆಗಳ ಸಂದರ್ಶನ
- ★ ಸ್ಟುಡಿಯೋ ಜಾಗಿಂಗ್
- ★ ಇಣುಕು ನೋಟ
- ★ ಸಿನಿಬಂಧ
- ★ ತೆರೆಮರೆಯ ತಜ್ಞರು
- ★ ಸಿನಿ ಪ್ರಶ್ನೋತ್ತರ
- ★ ನೀವು ಕೇಳಿದ ವಿಳಾಸ
- ★ ಸಿನಿ ಕ್ವಿಜ್
- ★ ಚಿತ್ರ ವಿಮರ್ಶೆ
- ★ ಹೊಸ ಚಿತ್ರದ ಹಾಡಿನ ಪುಸ್ತಕ
- ★ ಫೋಟೋ ಕಲೆಕ್ಷನ್
- ★ ದಕ್ಷಿಣ ಭಾರತದ ಚಿತ್ರರಂಗ
- ★ ಹಾಲಿವುಡ್ ಸುದ್ದಿ
- ★ ಹಿಂದಿ ಚಿತ್ರರಂಗದ ಸುದ್ದಿಗಳು
- ★ ಚಿತ್ರಕಥೆ–ಸಂಭಾಷಣೆ

ರಾಗಸಂಗಮ

ಕನ್ನಡಿಗರ ಮನೆ ಮನೆಯ ವಾರಪತ್ರಿಕೆ

ಸಂಗಮ : 15 | 15-11-92 | ರಾಗ : 38

ಕಾದಂಬರಿ ವಿಭಾಗ

ಮ್ಯಾಗಜಿನ್ ವಿಭಾಗ

ಪ್ರಧಾನ ಸಂಪಾದಕ
ಎನ್. ಸುಂದರ್ ರಾಜನ್

ಕಲೆ
ಜೆ...

ಸಂಪಾದಕಿ
ಕಮಲಾ ಸುಂದರ್ ರಾಜನ್

ಮುಖಪುಟ
ವಿನಯಾ ಪ್ರಸಾದ್

ಸಹಾಯಕ ಸಂಪಾದಕಿ
ಎಸ್. ರೇಖಾ

ವರ್ಣ ಪಾರದರ್ಶಿಕೆ
ಕೆ. ಎನ್. ನಾಗೇಶ್‌ಕುಮಾರ್

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ' ಬೀದಿ
ಬೆಂಗಳೂರು—560 002
ದೂರವಾಣಿ : 625004

ಅಂಚೆ ವೆಚ್ಚ ಸೇರಿದ ಚಂದಾ ವಿವರ

52 ಸಂಚಿಕೆಗಳು (1 ವರ್ಷ)	ರೂ. 225
26 ಸಂಚಿಕೆಗಳು (6 ತಿಂಗಳು)	ರೂ. 117
ಬಿಡಿ ಪ್ರತಿಯ ಬೆಲೆ	ರೂ. 4.50

ಸಂಗಮ ಪ್ರಕಾಶನದ ಹೊಸ ಕೊಡುಗೆ

ರಾಜ್ಯೋತ್ಸವದ ಉಡುಗೊರೆಯಾಗಿ

ಮತ್ತೊಂದು ವಾರಪತ್ರಿಕೆ

6–12–1992ರ ಪ್ರಥಮ ಸಂಚಿಕೆ

ನವೆಂಬರ್ 25ರಂದು ಬಿಡುಗಡೆಯಾಗುತ್ತದೆ

ಉತ್ತಮ

ಧಾರಾವಾಹಿ

ಧಾರಾವಾಹಿಗಳಿಗೆ ಮೀಸಲಾದ ವಿನೂತನ ವಾರಪತ್ರಿಕೆ

ದಿನಕ್ಕೊಂದು ಧಾರಾವಾಹಿಯಂತೆ ಇಡೀ ವಾರ ಓದಲು

ಏಳು ಧಾರಾವಾಹಿಗಳು ಹರಿದು ಬರಲಿವೆ

ಪ್ರಥಮ ಸಂಚಿಕೆಯಲ್ಲಿ ಪ್ರಾರಂಭವಾಗುವ ಏಳು ಧಾರಾವಾಹಿಗಳು

1) ಹೆಚ್. ಜಿ. ರಾಧಾದೇವಿಯವರ – ಪ್ರೇಮ ನಕ್ಷತ್ರ
2) ಯಂಡಮೂರಿ ವೀರೇಂದ್ರನಾಥ್ / ಎಂ. ಎಲ್. ರಾಘವೇಂದ್ರರಾವ್‌ರವರ ಅಂತರ್ಮುಖಿ
3) ಸಾಸ್ಕಾ ಮೂರ್ತಿಯವರ – ಕರಿನಾಗ
4) ಹೆಚ್. ಕೆ. ಅನಸೂಯ ಸಂಪತ್‌ರವರ – ಅನುಪಲ್ಲವಿ
5) ಮಾಯಾವಿ / ಬಿ. ಆರ್. ಶಂಕರ್‌ರವರ – ಪ್ರೇಮಿಗಳ ಸ್ವರ್ಗ
6) ಬೇಲೂರು ರಾಮಮೂರ್ತಿಯವರ – ಮತ್ತೆ ಬೆಳಗಿದ ಚಂದ್ರಮ
7) ಕುಮುದರವರ – ಅಂತರ

ಪ್ರಥಮ ಸಂಚಿಕೆಯೊಂದಿಗೆ ಉಚಿತ ಕೊಡುಗೆ **‘ತಂತ್ರ’** ಸಾಸ್ಕಾ ಮೂರ್ತಿಯವರ ಸಂಪೂರ್ಣ ಕಾದಂಬರಿ

ಕಾದಂಬರಿ

ವಿಭಾಗ


ಎಸ್. ಜೆ. ಸುಜಾತ

ಸಂಪೂರ್ಣ ಕಾದಂಬರಿ

ಲಕ್ಷ್ಮಣ ರೇಖೆ

ಎಸ್. ಜೆ. ಸುಜಾತ




ಅಪ್ಪ

"ನೀನು ಇಟ್ಟುಕೊಂಡಿರುವವನು ತುಂಬ ಸಾಹುಕಾರನಂತೆ. ತುಂಬ ದುಡ್ಡು ಕೊಡ್ತಾನಾ? ಇರಲಿಬಿಡು. ಜನರ ಬಾಯಿಗೆ ಬೀಳಬೇಡ ಅಷ್ಟೇ. ಈಗ ನಿನ್ನ ಬಳಿ ಸ್ವಲ್ಪ ದುಡ್ಡು ಇದ್ದಿದ್ದರೆ ಬೇಕಾಗಿತ್ತು.''

"ನಿನ್ನ ಒಂಟಿತನ ನನಗೆ ಅರ್ಥವಾಗುತ್ತದೆ. ಕೊನೆಯು ಪಕ್ಷ ನನಗೆ ಮಕ್ಕಳಾದ್ರೂ ಇದ್ದಾರೆ. ಇದರಲ್ಲಿ ಯಾರನ್ನು ದೂಷಿಸುವುದೆಂದು ನನಗೆ ಗೊತ್ತಿಲ್ಲ. ನಾವು ಮೂವರೂ ಈ ಸ್ಥಿತಿಗೆ ಕಾರಣಕರ್ತರು.''



ನಯನ



ರಾಹುಲ್

"ಬದುಕಿನಲ್ಲಿ ನಮಗರಿವಿಲ್ಲದಂತೆ ನಡೆದ ಘಟನೆಗಳಿಗೆ ನಮ್ಮನ್ನೇ ಹೊಣೆಗಾರರನ್ನಾಗಿ ಮಾಡಿಕೊಳ್ಳುವುದು ತಪ್ಪು. ಸಂದರ್ಭಗಳು, ಕೆಲವೊಮ್ಮೆ ಅಸಹಾಯಕತೆ, ಕೆಲವೊಮ್ಮೆ ಭ್ರಮೆಗೆ ಬಲಿಯಾಗಿ ನಾವು ತಪ್ಪು ಹೆಜ್ಜೆ ಇಡುತ್ತೇವೆ.''

ಈ ಪ್ರಮುಖ ಪಾತ್ರಗಳ ಕಥೆಯೇ ಈ ಕಾದಂಬರಿ.

"ಮೇಡಂ ಬಾಸ್ ನಿಮ್ಮನ್ನು ಕರೆಯುತ್ತಿದ್ದಾರೆ."

ಅಟೆಂಡರ್ ಚಂದ್ರಪ್ಪ ಬಂದು ಹೇಳಿದಾಗ ಕೃತ್ತಿಕಾ ಬೆಚ್ಚಿಬಿದ್ದಳು. ಟೈಪ್ ಮಾಡುತ್ತಿದ್ದ ಲೆಟರನ್ನು ಹಾಗೇ ಟೈಪ್‌ರೈಟರ್ ಮೇಲಿರಿಸಿ ಮೇಲೆದ್ದಳು. ಕೆಲಸಕ್ಕೆ ಸೇರಿ ಆರು ತಿಂಗಳಾಗಿದ್ದರೂ ಅವಳಿಗೆ ಬಾಸ್ ರಾಹುಲ್‌ನನ್ನು ಭೇಟಿ ಮಾಡುವ ಪ್ರಸಂಗವೇ ಬಂದಿರಲಿಲ್ಲ. ಕಳೆದ ತಿಂಗಳು ಪೂರ್ತಿ ಟೂರೆಂದು ಆಫೀಸಿಗೇ ಬಂದಿರಲಿಲ್ಲ. ಅನಂತರ ಬಂದರೂ ಕೃತ್ತಿಕಾಳಿಗೆ ಅವನನ್ನು ನೋಡುವ ಅವಕಾಶ ಸಿಕ್ಕಿರಲಿಲ್ಲ. ದಿನಾ ಒಂದೊಂದು ಮೀಟಿಂಗು ಎಂದು ಹೆಚ್ಚಾಗಿ ಆಫೀಸಿಗೇ ಬರುತ್ತಿರಲಿಲ್ಲ. ಈಗೊಂದು ವಾರದಿಂದ ಬರುತ್ತಿದ್ದರೂ ಟೈಪ್ ಮಾಡಬೇಕಾದ ಲೆಟರ್‌ಗಳನ್ನೆಲ್ಲ ಚಂದ್ರಪ್ಪನ ಹತ್ತಿರವೇ ಕೊಟ್ಟು ಕಳುಹಿಸಿ, ಟೈಪಾದನಂತರ ಅವನಿಂದಲೇ ತರಿಸುತ್ತಿದ್ದ. ತಪ್ಪು ತಪ್ಪಾಗಿ ಟೈಪ್ ಮಾಡಿ ಎಷ್ಟೋ ಪತ್ರಗಳು ಪುನಃ ಸರಿಯಾಗಿ ಟೈಪ್ ಮಾಡಬೇಕೆಂಬ ಆದೇಶದೊಂದಿಗೆ ಹಿಂತಿರುಗಿ ಬಂದಾಗ ಕೃತ್ತಿಕಾ ಆಶ್ಚರ್ಯಗೊಂಡಳು. ಚೇಂಬರ್‌ಗೆ ಕರೆಸಿ ಬಯ್ಯಬಹುದೆಂಬ ಅವಳ ನಿರೀಕ್ಷೆ ಸುಳ್ಳಾಗಿತ್ತು. ಅವಳ ಸಹೋದ್ಯೋಗಿಗಳ ಪ್ರಕಾರ ಅವನೊಬ್ಬ ಬೆಂಕಿ ಚೆಂಡು. ಸಿಟ್ಟು ಸದಾ ಮೂಗಿನ ತುದಿಯಲ್ಲೇ ಇರುತ್ತಿತ್ತು. ಕೆಲಸದಲ್ಲಿ ಸ್ವಲ್ಪ ತಪ್ಪು ಕಂಡರೂ ಯದ್ವಾತದ್ವ ಬಯ್ದುಬಿಡುವ ಸ್ವಭಾವದವನು. ಹೀಗಾಗಿ ಚೇಂಬರ್‌ನಲ್ಲಿ ಅವನಿದ್ದಾನೆಂದರೆ ಸಾಕು ಆಫೀಸಿನ ಕೆಲಸ ಸುಗಮವಾಗಿ ಸಾಗುತ್ತಿತ್ತು. ಅಲ್ಲದಿದ್ದರೆ ಎಲ್ಲರ ನಗು ಹರಟೆ ಅಲ್ಲಿ ತುಂಬಿರುತ್ತಿತ್ತು. ಮೈ ತುಂಬ ಸೆರಗು ಹೊದ್ದುಕೊಂಡ ಕೃತ್ತಿಕಾ ನಡುಗುತ್ತಲೇ ಚೇಂಬರ್ ಬಾಗಿಲು ದೂಡಿದಳು.

"ಮೆ ಐ ಕಮಿನ್ ಸರ್."

ಫೈಲ್‌ನಲ್ಲಿ ಮುಳುಗಿದ್ದ ರಾಹುಲ್ ತಲೆ ಎತ್ತಿದ. ಕೆಲಸದ ಒತ್ತಡದಲ್ಲಿ ಅವನಿಗೆ ಅವಳನ್ನು ಬರಲು ಹೇಳಿದ್ದೇ ಮರೆತುಹೋಗಿತ್ತು.

"ಎಸ್, ವಾಟ್ಸ್ ದ ಮ್ಯಾಟರ್?"

ಫೈಲಿನಿಂದ ತಲೆ ಎತ್ತದೆ ಕೇಳಿದ.

ಕೃತ್ತಿಕಾಳಿಗೆ ಭೂಮಿ ಬಾಯ್ದೆರೆದು ನುಂಗಬಾರದೇ ಎನಿಸಿತು. ಬರಲು ಹೇಳಿ ಏನೆಂದು ಕೇಳುವುದು ದೊಡ್ಡ ಮನುಷ್ಯರ ಲಕ್ಷಣವೇನೋ ಎಂದುಕೊಂಡಳು. ಅವಮಾನದಿಂದ ಮುಖ ಕೆಂಪಾಯಿತು. ಗಾಬರಿ, ಜೊತೆಗೆ ಮಾತನಾಡಿದರೆ ಹೇಗೋ ಏನೋ ಎಂಬ ಭಯದಿಂದ ಮಾತುಗಳು ಹೊರ ಬಾರದೆ ಗಂಟಲಿನಲ್ಲೇ ಸಿಕ್ಕಿಕೊಂಡವು.

"ಅದು... ಅದು..."

ಮುಂದೆ ಹೇಳಲಾಗದೆ ತೊದಲಿದಳು.

"ಅದು ಅದು ಏನ್ರೀ? ರಜೆ ಬೇಕಿದ್ರೆ, ಲೋನ್ ಬೇಕಿದ್ರೆ ಕೇಶವಯ್ಯನನ್ನು ಹೋಗಿ ಕಾಣಿ. ಅದು ಬಿಟ್ಟು ಸಣ್ಣಪುಟ್ಟ ವಿಷಯಕ್ಕೆಲ್ಲ ಇಲ್ಲಿಗೇ ಬಂದು ತಲೆ ತಿಂತೀರಲ್ಲ. ಕೆಲಸಕ್ಕೆ ಬಾರದ ಮಾತನಾಡುತ್ತ ಕೂರಲು ನನ್ನ ಬಳಿ ಸಮಯವಿಲ್ಲ. ಯೂ ಕ್ಯಾನ್ ಗೋ ನೌ."

ಮುಖಕ್ಕೆ ಅಪ್ಪಳಿಸಿದಂತಾಯಿತು. ಉಕ್ಕಿ ಬಂದ ಕಣ್ಣೀರನ್ನು ಪ್ರಯತ್ನಪೂರ್ವಕವಾಗಿ ತಡೆ ಹಿಡಿಯುತ್ತ ತನ್ನ ಸೀಟಿಗೆ ಬಂದು ಕುಳಿತುಕೊಂಡಳು. ಟೈಪ್‌ರೈಟರ್ ಮೇಲೆ ತಲೆ ಇಟ್ಟು

ಹಾಗೇ ಒರಗಿದಳು. ಕಣ್ಣೀರು ಅಲ್ಲಿಟ್ಟಿದ್ದ ಲೆಟರನ್ನು ತೋಯಿಸಿತು. ಲೆಕ್ಕ ಬರೆಯುವುದರಲ್ಲಿ ತಲ್ಲೀನಳಾಗಿದ್ದ ಅದಿತಿ ಮೊದಲು ಇತ್ತ ಗಮನ ಹರಿಸಲಿಲ್ಲ. ಐದು ನಿಮಿಷಗಳಾದರೂ ಕೃತ್ತಿಕಾ ತಲೆ ಮೇಲೆತ್ತದ್ದರಿಂದ ಗಾಬರಿಯಾಗಿ ಮೆಲ್ಲಗೆ ಕರೆದಳು.

"ಕೃತ್ತಿಕಾ."

"ಊಂ." ತಲೆ ಎತ್ತಲಿಲ್ಲ.

"ಅಳ್ತಾ ಇದ್ದೀಯಾ, ಯಾಕೆ ಬಾಸ್ ಏನಾದರೂ ಅಂದರಾ?"

ಕೃತ್ತಿಕಾ ಉತ್ತರ ನೀಡುವ ಗೋಜಿಗೆ ಹೋಗಲಿಲ್ಲ.

"ಹುಶ್, ಈಗ ನೀನು ಅಳುತ್ತ ಕುಳಿತುಕೊಂಡರೆ ಎಲ್ಲರೂ ನಿನ್ನನ್ನೇ ಗಮನಿಸುತ್ತಾರೆ. ಆಮೇಲೆ ಒಂದಕ್ಕೆರಡು ಕತೆ ಹಬ್ಬಿಸುತ್ತಾರಷ್ಟೆ. ಏನಾಯಿತೆಂದು ಹೇಳಿದರೆ ಏನಾದರೂ ಮಾಡಬಹುದು. ಅದು ಬಿಟ್ಟು ಎಳೇ ಮಗು ತರಹ ಅಳುತ್ತ ಕುಳಿತುಕೊಂಡರೆ ನಾನೇನು ಮಾಡಲಿ."

ಅದಿತಿ ಹೇಳಿದಾಗ ಕೃತ್ತಿಕಾ ತಲೆ ಎತ್ತಿದಳು. ಇಷ್ಟೊತ್ತಿಗೆ ಅವಳ ಅಳು ಹತೋಟಿಗೆ ಬಂದಿತ್ತು.

"ದೊಡ್ಡ ಮನುಷ್ಯರು ಅಪಮಾನ ಮಾಡಲೆಂದೇ ಕೆಲವೊಮ್ಮೆ ಅಪಾಯಿಂಟ್ ಮಾಡಿಕೊಳ್ಳುತ್ತಾರೇನೋ?"

"ಯಾರ ವಿಷಯ ನೀನು ಹೇಳ್ತಾ ಇರುವುದು?"

"ಇನ್ಯಾರ ವಿಷಯ ಹೇಳಲಿ, ಇಲ್ಲಿಯ ದೊಡ್ಡ ಮನುಷ್ಯರು ಯಾರ್ಧೇಳು?'"

"ಬಾಸ್ ಬಗ್ಗೆ ಹೇಳ್ತಾ ಇದ್ದೀಯಾ?"

ಕೃತ್ತಿಕಾ ಮಾತನಾಡಲಿಲ್ಲ.

"ನಾನು ನೀನು ಕೆಲಸಕ್ಕೆ ಬಂದ ದಿನವೇ ಹೇಳಲಿಲ್ಲವೆ, ತುಂಬ ಒರಟು ಮನುಷ್ಯ, ಜೊತೆಗೆ ಮೂಡಿ ಬೇರೇಂತ. ಸಣ್ಣ ಸಣ್ಣ ವಿಷಯಗಳಿಗೆಲ್ಲ ತಲೆಕೆಡಿಸಿಕೊಳ್ಳುತ್ತ ಕುಳಿತುಕೊಂಡರೆ ಇಲ್ಲಿ ಸರ್ವೈವ್ ಆಗುವುದು ಕಷ್ಟ. ಅವರ ಕೈಕೆಳಗೆ ಕೆಲಸ ಮಾಡ್ತಿರುವಾಗ ಅವರ ಈ ವರ್ತನೆಗಳನ್ನೆಲ್ಲ ಸಹಿಸಿಕೊಳ್ಳಬೇಕಾಗುತ್ತದೆ. ಲೆಟರ್ ಏನಾದರೂ ತಪ್ಪಾಗಿ ಟೈಪ್ ಮಾಡಿದೆಯೆಂದು ಅದಕ್ಕೇನಾದರೂ ಬಯ್ದರಾ?"

"ಬಯ್ದಿದ್ದರೆ ನನಗೇನೂ ಅನ್ನಿಸುತ್ತಿರಲಿಲ್ಲ, ತಿದ್ದಿಕೊಳ್ಳುತ್ತಿದ್ದೆ. ಏನೋ ಕೆಲಸವಿದೆಯೆಂದು ಬರಲು ಹೇಳಿ, ಗೊತ್ತೇ ಇಲ್ಲದವರಂತೆ ನಾಟಕ ಆಡಿ, ಹೋಗಲು ಹೇಳಿದರು. ನಾನೇನೋ ಅರ್ಜೆಂಟ್ ಡಿಕ್ಟೇಶನ್ ಇದೆ ಎಂದುಕೊಂಡು ಹೋದರೆ ಸಾಲ ಕೇಳಲು ಹೋದವರನ್ನು ಅಟ್ಟುವಂತೆ ಅಟ್ಟಿಬಿಟ್ಟರು."

"ಅಯ್ಯೋ ಇಷ್ಟೇನಾ?"

ಅದಿತಿ ಜೋರಾಗಿ ನಕ್ಕಳು.

"ನೀನು ತುಂಬ ಸೆನ್ಸಿಟಿವ್ ಅನ್ನುತ್ತೆ."

"ಸೆನ್ಸಿಟಿವ್ ಅಂತ ಅಲ್ಲ, ಉದ್ದೇಶಪೂರ್ವಕವಾಗಿ ಅವಮಾನ ಮಾಡಿದಾಗ ಸ್ವಾಭಿಮಾನ ಇರೋ ಯಾರಿಗೇ ಆಗಲಿ ನೋವಾಗುತ್ತಿದೆ. ಬಹುಶಾ ಅವರಿಗೆ ಇದರಿಂದ ಮನರಂಜನೆ

ಸಿಗುತ್ತೋ ಏನೋ ಯಾರಿಗೆ ಗೊತ್ತು. ನನಗಂತೂ ಕೆಲಸ ಬಿಟ್ಟು ಹೋಗಿಬಿಡಲಾ ಎಂದು ಕುದಿಯುತ್ತಿದೆ.''

"ಕೆಲಸ ಬಿಟ್ಟು ಎಲ್ಲಿಗೆ ಹೋಗುತ್ತೀಯಾ?''

ಕೃತ್ತಿಕಾ ನಿರುತ್ತರಳಾದಳು.

"ಇಂತಾ ಕಡೆ ಕೆಲಸಕ್ಕೆ ಬಂದ ಮೇಲೆ ಸಣ್ಣಪುಟ್ಟ ಘಟನೆಗಳಿಗೆ ತಲೆ ಕೆಡಿಸಿಕೊಳ್ಳಬಾರದು. ಬಂದ ಆರು ತಿಂಗಳಿಗೇ ನೀನು ಸುಸ್ತಾದರೆ ಮುಂದೆ ಹೇಗೆ? ಬಹುಶಾ ಬಾಸ್ ಯಾವುದೋ ಮೂಡಿನಲ್ಲಿದ್ದರು ಅನ್ಸುತ್ತೆ ಗೊತ್ತಾಗಿಲ್ಲ. ಮೂಡಿ, ಜೊತೆಗೆ ಸ್ವಲ್ಪ ಮರೆಗುಳಿ ಬೇರೆ. ಮೊದಲು ಹೀಗಿರಲಿಲ್ಲ ಇತ್ತೀಚೆಗೆ ಅವರು ಹೀಗಾದದ್ದು ಎಂದು ಇಲ್ಲಿ ಮೊದಲಿನಿಂದಲೂ ಕೆಲಸ ಮಾಡುವವರು ಹೇಳ್ತಾರೆ. ಬಹುಶಾ ಅವರಿಗೆ ಅವರದೇ ಕಾರಣಗಳಿರುತ್ತವೆ. ಇಂತಹ ಕಡೆ ಕೆಲಸ ಮಾಡುವಾಗ ನಾವು ಇನ್ನೊಬ್ಬರ ಕೈ ಕೆಳಗೆ ಕೆಲಸ ಮಾಡ್ತಿದ್ದೀವಿ ಅನ್ನುವುದನ್ನು ಸದಾ ನೆನಪಿಟ್ಟುಕೊಂಡರೆ ಸಾಕು. ಕಮಾನ್ ಚಿಯರ್ ಅಪ್.''

ಅದಿತಿ ಹೇಳಿದಾಗ ಕೃತ್ತಿಕಾಳಿಗೆ ಸ್ವಲ್ಪ ಸಮಾಧಾನವಾದಂತಾಯಿತು. ಎದ್ದು ಹೋಗಿ ಮುಖ ತೊಳೆದುಕೊಂಡು ಬಂದಳು. 'ಹೌದು ಅದಿತಿ ಹೇಳಿದ್ದು ಸರಿ. ಆತ ಬಾಸ್. ಹೇಗೆ ಬೇಕಾದರೂ ನಡೆದುಕೊಳ್ಳಲು ಅಧಿಕಾರವಿದೆ. ಆತನನ್ನು ಖಂಡಿಸಲು ನಾನ್ಯಾರು? ಅವನ ದಯಾಭಿಕ್ಷೆಯಲ್ಲೇ ನಾನಿರುವಾಗ ಸರಿ ತಪ್ಪುಗಳನ್ನು ಹೇಳುವ ಅಧಿಕಾರ ನನಗಿಲ್ಲ. ಈಗ ತಕ್ಷಣ ಕೆಲಸದಿಂದ ಆತ ತೆಗೆದುಹಾಕಬಲ್ಲ. ತಾನು ಹೋಗುವುದಾದರೂ ಎಲ್ಲಿಗೆ?' ಒಂದು ಕ್ಷಣ ಕೃತ್ತಿಕಾಳಿಗೆ ತನ್ನ ಮೇಲೆ ತನಗೇ ಸಿಟ್ಟು ಬಂತು. 'ಇದೆಲ್ಲ ತನ್ನ ಸ್ವಯಂಕೃತ ಅಪರಾಧವಲ್ಲವೆ? ಇಲ್ಲದಿದ್ದರೆ ತಾನಿಂದು ಕಾಣದ ಊರಿನಲ್ಲಿ ಯಾರ್ಯಾರದ್ದೋ ಮರ್ಜಿಯನ್ನು ಅನುಸರಿಸಿಕೊಂಡು ನಡೆಯಬೇಕಾದ ಪ್ರಸಂಗ ಬರುತ್ತಿರಲಿಲ್ಲ.' ಒಂದು ನಿಮಿಷ ಗತಜೀವನ ಕಣ್ಣ ಮುಂದೆ ಬಂದಂತಾಗಿ ಕೃತ್ತಿಕಾ ಬೆಚ್ಚಿಬಿದ್ದಳು. ಅದು ಪೂರ್ತಿ ಆವರಿಸುವ ಮೊದಲು ಸಲ್ಲದ ಯೋಚನೆಗಳನ್ನೆಲ್ಲ ಕೊಡವಿಕೊಳ್ಳಬೇಕೆಂದು ಆತುರದಿಂದ ಅರ್ಧ ಮಾಡಿಟ್ಟಿದ್ದ ಲೆಟರನ್ನು ಪೂರ್ತಿ ಮಾಡಲು ತೆಗೆದುಕೊಂಡಳು. ಅವಳು ಅತ್ತಿದ್ದಕ್ಕೆ ಸಾಕ್ಷಿಯಾಗಿ ಒಂದೆರಡು ಕಣ್ಣೀರ ಹನಿಗಳು ಅಲ್ಲಿ ತಮ್ಮ ಮುದ್ರೆಯನ್ನೊತ್ತಿದ್ದವು. ಮರೆತೇ ಹೋಗಿದ್ದ ಹಾಳು ಯೋಚನೆಗಳು ಇಂತಹ ಸಂದರ್ಭದಲ್ಲೇ ಒಂದು ಕಾಡುತ್ತವೆ ಎಂದು ಗೊಣಗಿಕೊಂಡಳು.

"ಕರೆದೆಯಾ ಕೃತ್ತಿಕಾ?''

ಅವಳ ಗೊಣಗಾಟ ಕೇಳಿ ಅದಿತಿ ಕೇಳಿದಾಗಲಷ್ಟೇ ಅವಳಿಗೆ ತಾನಿರುವುದು ಆಫೀಸು ಎಂದು ನೆನಪಾಗಿದ್ದು.

"ಇಲ್ಲವಲ್ಲ, ಈ ಲೆಟರ್‌ನಲ್ಲಿ ಯಾವುದೋ ಸ್ಪೆಲ್ಲಿಂಗ್ ತಪ್ಪಾದ ಹಾಗೆ ಕಾಣಿಸಿತು. ಜೋರಾಗಿ ಹೇಳಿದೆ ಅಷ್ಟೇ.''

"ಆಫೀಸ್ ಬಿಡೋ ಟೈಂ ಆಯ್ತು. ಅರ್ಜೆಂಟ್ ಟೈಪ್ ಮಾಡುವುದ್ಯಾವುದಾದ್ರು ಬೇಗ ಮಾಡಿಬಿಡು. ಒಂದ್ಸಲ ಮೂಡ್ ಕೆಡಿಸಿಕೊಂಡು ರಾತ್ರಿಯೆಲ್ಲ ನಿದ್ರೆ ಕೆಡಬೇಡ. ನಿನ್ನನ್ನು ಅರ್ಥ ಮಾಡಿಕೊಳ್ಳುವುದು ತುಂಬ ಕಷ್ಟ.'' ಅವಳ ಮಾತನ್ನು ನಂಬದಂತೆ ಕಂಡರೂ ಅದಿತಿ ಹೇಳಿದಳು.



ಉತ್ತರ ನೀಡದೆ ಕೃತ್ತಿಕಾ ಟೈಪ್‌ರೈಟರ್‌ನ ಕೀ ಬೋರ್ಡಿನ ಮೇಲೆ ಕೈಯಾಡಿಸತೊಡಗಿದಳು. ಒಂದೇ ಕ್ಷಣ ಅಷ್ಟೇ. ಎಲ್ಲವನ್ನು ಮರೆತು ತನ್ನ ಕೆಲಸದಲ್ಲಿ ತಲ್ಲೀನಳಾದಳು.

"ಮೇಡಂ."

ಚಂದ್ರಪ್ಪ ಪುನಾ ಬಂದು ಕರೆದ.

"ಬಾಸ್ ಕರೀತಾ ಇದ್ದಾರೆಂತ ಆಗಲೇ ನಿಮಗೆ ಹೇಳಿದನಲ್ಲ. ಯಾಕೆ ಹೋಗಲಿಲ್ಲವ? ಮತ್ತೆ ಕರೀಂತ ಹೇಳಿದ್ದಾರೆ."

ಕೃತ್ತಿಕಾ ಬೆಚ್ಚಿಬಿದ್ದಳು. ಒಂದು ಕ್ಷಣ ಏನು ಮಾಡುವುದೆಂದು ತೋಚದೆ ಅಸಹಾಯಕತೆಯಿಂದ ಗೆಳತಿಯತ್ತ ನೋಡಿದಳು. ಅದಿತಿ ಹೋಗೆಂದು ಸನ್ನೆ ಮಾಡಿದಾಗ ಪೇಪರ್, ಪೆನ್ನನ್ನು ಎತ್ತಿಕೊಂಡು ಈ ಬಾರಿ ಏನನ್ನಿಸಿಕೊಳ್ಳಬೇಕೋ ಎಂದುಕೊಳ್ಳುತ್ತಲೇ ಚೇಂಬರ್‌ಗೆ ಕಾಲಿರಿಸಿದಳು. ಯಾರೊಂದಿಗೋ ಫೋನ್‌ನಲ್ಲಿ ಮಾತನಾಡುತ್ತಿದ್ದ ರಾಹುಲ್‌ನ ಹುಬ್ಬುಗಳು ಮೇಲೇರಿದವು. ರಿಸೀವರ್‌ಗೆ ಕೈ ಅಡ್ಡ ಹಿಡಿದು ಕೇಳಿದ.

"ನೀವು... ನೀವು..."

ಈ ಬಾರಿ ಅವನೇ ತೊದಲಿದ ಹಾಗೆ ಕೃತ್ತಿಕಾಳಿಗೆ ಭಾಸವಾಯಿತು. ಮೈ ಚಳಿ ಬಿಟ್ಟು ಹೋಯಿತು.

"ಏನೋ ಅರ್ಜೆಂಟ್ ಕೆಲಸವಿದೆಯೆಂದು ನೀವು ಚಂದ್ರಪ್ಪನ ಹತ್ತಿರ ಬರಲು ಹೇಳಿದ್ದೀರಂತಲ್ಲ?"

"ಏಸಿ ಕುಳಿತುಕೊಳ್ಳಿ" ಎಂದು ಅವಳಿಗೆ ಕುರ್ಚಿಯತ್ತ ಕೈ ತೋರಿಸಿ ತನ್ನ ಮಾತನ್ನು ಮುಂದುವರಿಸಿದ. ಕೃತ್ತಿಕಾ ರಾಹುಲ್‌ನನ್ನೇ ವಾರೆನೋಟದಿಂದ ದಿಟ್ಟಿಸಿದಳು. ಮೊದಲ ಬಾರಿಗೇ ಯಾರನ್ನೇ ಆಗಲಿ ಆಕರ್ಷಿಸುವಂತಹ ರೂಪವೇನಲ್ಲ ಎಂದುಕೊಂಡಳು. ಕಳೆದ ಬಾರಿ ಅವಳಿಗೆ ಅವನನ್ನು ಸರಿಯಾಗಿ ನೋಡುವ ಅವಕಾಶ ಸಿಕ್ಕಿರಲಿಲ್ಲ. ಸಿಕ್ಕದ್ದರೂ ಅಳು, ಅವಮಾನದ ನಡುವೆ ಅದು ಅವಳಿಗೆ ಬೇಕಿರಲಿಲ್ಲ. ಕುಳಿತುಕೊಂಡಿದ್ದರಿಂದ ಎತ್ತರದ ಬಗ್ಗೆ ಅವಳಿಗೆ ಲೆಕ್ಕ ಹಾಕಲು ಸಾಧ್ಯವಿರಲಿಲ್ಲ. ಮುಖ ನೋಡಿದ ತಕ್ಷಣ ಈತ ಮಹಾ ಒರಟ ಎಂದು ಹೇಳಬಹುದು ಎಂದುಕೊಂಡಳು. ವಯಸ್ಸು 37–38 ದಾಟಿರಬೇಕು ಎಂದು ಅವನ ಅಲ್ಲಲ್ಲಿ ಉದುರಿಹೋದ ತಲಗೂದಲನ್ನು ನೋಡಿ ಅಂದಾಜು ಲೆಕ್ಕ ಹಾಕಿದಳು. ಸುಲಲಿತವಾಗಿ, ಇಂಗ್ಲಿಷ್‌ನಲ್ಲಿ ಸಂಭಾಷಿಸುತ್ತಿದ್ದನ್ನು ಕೇಳಿ ಅವನ ಧ್ವನಿಯನ್ನೇ ಆಲಿಸತೊಡಗಿದಳು.

"ಐಯಾಮ್ ಸಾರಿ."

ರಿಸೀವರನ್ನು ಯಥಾ ಸ್ಥಾನದಲ್ಲಿರಿಸಿ ರಾಹುಲ್ ಹೇಳಿದಾಗ ಕೃತ್ತಿಕಾಳಿಗೆ ಗಾಬರಿಯಾಯಿತು. ತನ್ನ ಯೋಚನೆಗಳಿಗೆ ನಗು ಬಂತು. ಒಂದು ಕ್ಷಣ ಅಷ್ಟೇ, ತಾನಿದ್ದ ಪರಿಸರದ ಅರಿವು ಮಾಡಿಕೊಂಡು ಬಿಗುವಾದಳು.

"ಏನೋ ಕೆಲಸವಿದೆಯೆಂದು ಬರಲು ಹೇಳಿದಿರಂತೆ?"

ಅವನ ಮಾತನ್ನು ಗಣನೆಗೆ ತೆಗೆದುಕೊಳ್ಳದೆ ಕೇಳಿದಳು.

"ರಜೆ, ಲೋನ್ ಎಂದು ಎಲ್ಲರೂ ನನ್ನ ಹತ್ತಿರಾನೇ ಬಂದು ತಲೆ ತಿಂತಾರೆ. ಹಾಗಾಗಿಯೇ ನಿಮ್ಮನ್ನು ಮಿಸ್ಟೇಕ್ ಮಾಡಿಕೊಂಡಿದ್ದು. ನೌ ಯೂ ಡೋಂಟ್ ಮಿಸ್ಟೇಕ್ ಮಿ."

ಅವನ ಮಾತಿಗೆ ಕೃತ್ತಿಕಾ ನಗಲಿಲ್ಲ. 'ತಪ್ಪಾಗಿ ತಿಳಿದುಕೊಳ್ಳಲು ನಾನ್ಯಾರು, ತಿಳಿದುಕೊಂಡು ನಾವೇನು ಮಾಡಬೇಕಾಗಿದೆ.' ಮನಸಿನಲ್ಲೇ ಅಂದುಕೊಂಡಳು.

"ಸರ್, ಬರಲು ಹೇಳಿದ ವಿಷಯ?"

ಆ ಪ್ರಸಂಗವನ್ನು ಅಲ್ಲಿಗೇ ಮುಕ್ತಾಯ ಮಾಡುವಂತೆ ಕೃತ್ತಿಕಾ ಪ್ರಶ್ನಿಸಿದಳು.

"ಹಾಂ, ಹೌದಲ್ವ?"

ರಾಹುಲ್ ತಡವರಿಸಿದ.

"ನಿನ್ನೆ ಸಂಜೆ ಚಂದ್ರಪ್ಪ ಇಂಪಾರ್ಟೆಂಟ್ ಲೆಟರ್ ಎಂದು ಟೈಪ್ ಮಾಡಲು ಕೊಟ್ಟಿರಬೇಕಲ್ವ, ಆಯಿತಾ?"

"ಕಾನ್‌ಫಿಡೆನ್ಸಿಯಲ್ ಆದ್ದರಿಂದ ಅದನ್ನು ಕಬೋರ್ಡ್ ಒಳಗಿಟ್ಟು ಲಾಕ್ ಮಾಡಿದ್ದೇನೆ. ತಗೊಂಡು ಬರಬೇಕಾ?"

"ಆಯ್ತು ತನ್ನಿ, ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಿತ್ತು."

ಕೃತ್ತಿಕಾ ಎದ್ದು ಹೊರ ಬಂದಳು. ಅದಿತಿ ಅವಳಿಗಾಗಿಯೇ ಕಾಯುತ್ತಿದ್ದಳು. ಗಂಭೀರಳಾಗಿ ಬಂದ ಕೃತ್ತಿಕಾಳನ್ನು ಕಂಡು ಕೇಳಿದಳು.

"ಅಂತಹ ಸೀರಿಯಸ್ ವಿಷಯವೇನಿಲ್ಲ ತಾನೇ? ಈ ಸಲವೂ ಬಯ್ದರಾ ಹೇಗೆ? ಸ್ವಲ್ಪ ಧೈರ್ಯ ತಂದುಕೊಂಡ ಹಾಗೆ ಕಾಣುತ್ತಿದ್ಯಲ್ಲ."

"ಅವರು ಈ ಬಾರಿ ಅಳಿಸಬೇಕೆಂದು ಕೊಂಡಿದ್ದರೂ, ಅಳಲು ನಾನು ತಯಾರಾಗಿರಲಿಲ್ಲ. ರಜೆ ಕೇಳಲು ಬಂದವಳೆಂದುಕೊಂಡರಂತೆ. ಅವರು ಹೇಗೆ ಬೇಕಾದರೂ ಅಂದುಕೊಳ್ಳಲು ಅಧಿಕಾರವಿದೆಯಲ್ಲ ಬಿಡು. ನಿನ್ನೆ ಅರ್ಜೆಂಟ್ ಲೆಟರ್ ಟೈಪ್ ಮಾಡಬೇಕೆಂದು ಹೇಳಿ ಕಳುಹಿಸಿದ್ದರು. ಅನಂತರ ಅವರೂ ಕೇಳಲಿಲ್ಲ. ನಾನು ಕೊಡಲಿಲ್ಲ. ಈಗ ಬೇಕಂತೆ" ಎನ್ನುತ್ತ ಕೀ ತೆಗೆದು ಅದನ್ನು ಕೈಗೆತ್ತಿಕೊಂಡಳು.

"ನಾನು ಬರೋದು ಸ್ವಲ್ಪ ತಡವಾಗುತ್ತೋ ಏನೋ, ಹೋಗಿಬಿಡಬೇಡ."

ರಾಹುಲ್‌ನ ಚೇಂಬರಿಗೆ ನಡೆದಳು. ರಾಹುಲ್ ಕಾಯುತ್ತಿದ್ದ. ಪೇಪರ್‌ಗಳನ್ನು ಅವನ ಮುಂದಿರಿಸಿದಳು.



ಕಾಗದ

ಕಾಗದ ಸಾಗಿಂದವನೇ
ನಿನಗೇಕೆ ಕಾಗದ
ಬಿಳಿ ಕಾಗದ ನಾ
ಇರುವಾಗ?
ಬರೆದು ಬಿಡು
ನೀ ಕಾ
ಮಸಿಯಿಂದ
ಬಾಳೆಲ್ಲ ಪ್ರೇಮ
ಕವಿತೆಯ.

— ಲಕ್ಷ್ಮಿ

"ಒಂದ್ನಿಮಿಷ, ಎಲ್ಲೆಲ್ಲಿ ಏನೇನು ಬದಲಾವಣೆ ಮಾಡಬೇಕೆಂದು ಹೇಳ್ತೀನಿ'' ಎನ್ನುತ್ತ ಪೇಪರ್ ಬಿಡಿಸಿದ. ಅಲ್ಲಲ್ಲಿ ಒದ್ದೆಯಾಗಿದ್ದನ್ನು ಕಂಡು ಆಶ್ಚರ್ಯವಾಯಿತು.

"ಇದೇನಿದು, ಕಾನ್‌ಫಿಡೆನ್ಷಿಯಲ್ ಎಂದರೆ ನೀರಲ್ಲಿ ಬೀಳಿಸಿದ್ದೀರಲ್ಲ! ಹೀಗೆ ಲೆಟರನ್ನು ಕಳುಹಿಸಿದರೆ ನಮಗೆ ವಾಪಾಸು ಕಳುಹಿಸುತ್ತಾರಷ್ಟೆ. ಕೆಲಸ ಮಾಡುವಾಗ ಗಮನವಿಟ್ಟು ಮಾಡಬೇಕು. ಯಾರ್ರೀ ನಿಮಗೆ ಕೆಲಸ ಕಲಿಸಿದ್ದು? ಲುಕ್ ಹೌ ಕ್ಯಾನ್ ಐ ಸೆಂಡ್ ದೀಸ್ ಪೇಪರ್ಸ್?'' ಎನ್ನುತ್ತ ಸಿಟ್ಟಿನಿಂದ ಪೇಪರನ್ನು ಅವಳ ಮುಂದೆ ಹರಡಿದ. ಕೃತ್ತಿಕಾಳ ಕಣ್ಣೀರು ಅದರ ಮೇಲೆ ಉದುರಿ ಈಗಿದ್ದ ಕಲೆಗಳ ಜೊತೆಗೆ ಇನ್ನಷ್ಟು ಕಲೆಗಳನ್ನು ಮೂಡಿಸಿತು. ರಾಹುಲ್ ಬೆರಗಾಗಿ ಒಂದ್ಸಲ ಅವಳತ್ತ ಇನ್ನೊಂದ್ಸಲ ಪೇಪರ್‌ಗಳತ್ತ ನೋಡಿದ. ನೀರಿನ ಕಲೆಗಳ ಕಾರಣ ಗೊತ್ತಾಯಿತೇನೋ ಒಂದ್ನಿಮಿಷ ಗಂಭೀರನಾದ.

"ಐಯಾಮ್ ಎಕ್ಸ್‌ಟ್ರೀಮ್ಲಿ ಸಾರಿ.''

ಕೃತ್ತಿಕಾ ಬಗ್ಗಿಸಿದ ತಲೆ ಎತ್ತಲಿಲ್ಲ. ಕಣ್ಣೀರು ನಿಂತರೂ ಮುಖದಲ್ಲಿನ ಕಣ್ಣೀರಿನ ಕಲೆ ಹಾಗೇ ಇತ್ತು.

"ನೀವು ತುಂಬ ಸೆಂಟಿಮೆಂಟಲ್ ಅನ್ಸುತ್ತೆ.''

ಕೃತ್ತಿಕಾಳ ಸ್ವಾಭಿಮಾನ ಗರಿಗೆದರಿತು.

"ಸೆಂಟಿಮೆಂಟಲ್ ಅಂದ್ರೇನು?''

ಮೊನಚಾಗಿ ಪ್ರಶ್ನಿಸಿದಳು.

"ಅವಮರ್ಯಾದೆ ಮಾಡಿದರೂ ಅಳಬಾರದು. ನಿಮ್ಮಂತಹ ದೊಡ್ಡ ಮನುಷ್ಯರು ಏನೇ ಅಂದ್ರು ಅನ್ನಿಸಿಕೊಳ್ಳಬೇಕು ಅಲ್ವೆ? ಅಷ್ಟೊಂದು ದಪ್ಪ ಚರ್ಮವನ್ನು ನಾನು ಬೆಳೆಸಿಕೊಂಡಿಲ್ಲ.''

ಆ ಕ್ಷಣಕ್ಕೆ ಅವಳಿಗೆ ಅವನು ತನ್ನ ಬಾಸ್, ತಾನವನ ಕೈಕೆಳಗೆ ಕೆಲಸ ಮಾಡುವವಳು ಎಂಬ ಅಂಶವೇ ಮರೆತು ಹೋಯಿತು. ರಾಹುಲ್‌ನ ನಡವಳಿಕೆಯಿಂದ ನೋವಾಗಿದೆಯೆಂಬ ಅಂಶ ಅವಳ ಪ್ರತಿಯೊಂದು ಮಾತಿನಲ್ಲೂ ಕಾಣುತ್ತಿತ್ತು. ಆತ ಅರ್ಧ ಮೆಚ್ಚುಗೆ ಅರ್ಧ ಅಭಿಮಾನದಿಂದ ನೋಡಿದ. ಕೃತ್ತಿಕಾ ಅದನ್ನು ಗುರುತಿಸುವ ಸ್ಥಿತಿಯಲ್ಲಿರಲಿಲ್ಲ. ಯಾಕೋ ಏನೋ ಅವಳಿಗೆ ಆ ಪರಿಸರ, ಸ್ಥಳ ಎಲ್ಲವನ್ನು ಬಿಟ್ಟು ದೂರ ಹೋಗಬೇಕು ಎನಿಸಿತು. ಯಾರೋ ಭದ್ರವಾಗಿ ಹಿಡಿದಿಟ್ಟುಕೊಂಡಂತೆ ಕುರ್ಚಿ ಬಿಟ್ಟು ಮೇಲೇಳಲಾಗಲಿಲ್ಲ. ಒಂದು ಕ್ಷಣ ಅಷ್ಟೇ. ತಕ್ಷಣ ತನ್ನನ್ನು ತಾನು ನಿಯಂತ್ರಿಸಿಕೊಂಡಳು. ಛೇ ತಾನೇಕೆ ಅಷ್ಟೊಂದು ಅಪ್‌ಸೆಟ್ ಆದೆ ಎನ್ನುತ್ತ ತಲೆ ಎತ್ತಿದಳು. ರಾಹುಲ್ ಅವಳನ್ನೇ ನೋಡುತ್ತಿದ್ದ. ಆ ನೋಟದಲ್ಲಿ ವ್ಯಂಗ್ಯವೋ, ತಿರಸ್ಕಾರವೋ ಅಥವಾ ಆಶ್ಚರ್ಯ ಏನಾದರೂ ಕಾಣಬಹುದೇನೋ ಎಂದು ಹುಡುಕಿದಳು. ತನ್ನನ್ನೇ ನೇರವಾಗಿ ದಿಟ್ಟಿಸುತ್ತಿದ್ದ ಅವನ ದೃಷ್ಟಿಯನ್ನು ಎದುರಿಸಲಾಗದೆ ತಲೆ ತಗ್ಗಿಸಿದಳು.

"ಸರ್, ಪುನಾ ಲೆಟರ್ ಡಿಕ್ಟೇಟ್ ಮಾಡ್ತಿರೋ ಅಥವಾ ಎಲ್ಲೆಲ್ಲಿ ಬದಲಾಯಿಸಿಬೇಕೂಂತ ಹೇಳ್ತಿರೋ. ಆಫೀಸ್ ಟೈಂ ಆಗ್ತಾ ಬಂತು.''

ಪುಸ್ತಕ ರೆಡಿ ಮಾಡಿಕೊಳ್ಳುತ್ತ ಕೇಳಿದಳು.

"ಆಂ!'' ತನ್ನದೇ ಲೋಕದಲ್ಲಿದ್ದ ರಾಹುಲ್ ಬೆಚ್ಚಿಬಿದ್ದ.

"ಅಂತಹ ಅರ್ಜೆಂಟ್ ಏನಿಲ್ಲ. ನಾಳೆ ನಾಡಿದ್ದು ಕಳುಹಿಸಿದರೂ ನಡೆಯುತ್ತೆ. ನಾಳೆ ನಾನು

ಬದಲಾಯಿಸಬೇಕಾದ ಕಡೆ ಗುರುತು ಮಾಡಿ ಇಟ್ಟಿದ್ದೇನೆ. ಬೆಳಿಗ್ಗೆ ಬಂದ ತಕ್ಷಣ ಟೈಪ್ ಮಾಡಿ ಕಳುಹಿಸಿ ಕೊಡಿ. ಟುಡೇ ಐಯಾಮ್ ಔಟ್ ಆಫ್ ಮೂಡ್. ಯೂ ಕ್ಯಾನ್ ಗೋ.''

ಅವನ ಸ್ವರ ಎಲ್ಲೋ ಆಳದಿಂದ ಬಂದಂತೆನಿಸಿತು. ಟೈಪ್ ಮಾಡಿದ ಪೇಪರನ್ನು ಅಲ್ಲೇ ಬಿಟ್ಟು ಪೆನ್, ಪುಸ್ತಕ ಎತ್ತಿಕೊಂಡು ಕೃತ್ತಿಕಾ ಮೇಲೆದ್ದಳು. ರಾಹುಲ್‌ನ ನೋಟ ತನ್ನ ಮೇಲೇ ಇರುವುದರ ಅರಿವಾಗಿ ಮುಜುಗರವಾಯಿತು. ಬಾಗಿಲವರೆಗೂ ಬಂದಳು. ಅನಂತರ ಏನೋ ಯೋಚಿಸಿ ಹಿಂದೆ ಬಂದಳು.

“ನಿಮ್ಮ ಮೂಡ್ ಅಪ್‌ಸೆಟ್ ಆಗಲಿಕ್ಕೆ ನಾನೇ ಕಾರಣಳಾಗಿದ್ದರೆ ಐಯಾಮ್ ವೆರಿ ಸಾರಿ ಸರ್.'' ಎಂದು ಹಿಂತಿರುಗಿ ನೋಡದೆ ಬಾಗಿಲನ್ನು ಮುಂದೆ ಮಾಡಿಕೊಂಡು ಚೇಂಬರನ್ನು ದಾಟಿದಳು.

* * * *

ರಾಹುಲ್ ಮತ್ತು ಕೃತ್ತಿಕಾ ನಡುವೆ ನಡೆದ ಶೀತಲ ಸಮರದನಂತರ ಅವರಿಬ್ಬರ ಭೇಟಿ ಹೆಚ್ಚಿಗೆ ನಡೆಯಲಿಲ್ಲ. ಆ ಘಟನೆ ನಡೆದ ಮಾರನೇ ದಿನ ಕೃತ್ತಿಕಾ ಡಿಸ್‌ಮಿಸ್ ಲೆಟರನ್ನು ನಿರೀಕ್ಷಿಸಿಕೊಂಡೇ ಆಫೀಸಿಗೆ ಬಂದಿದ್ದಳು. ಆದರೆ ಅಂತಹ ಘಟನೆ ಏನೂ ನಡೆಯಲಿಲ್ಲ. ರಾಹುಲ್ ಏನೂ ಆಗದವನಂತೆ ಸುಮ್ಮನಿದ್ದ. ಬೇಕಾದಾಗ ಆ ಚೇಂಬರಿಗೆ ಬರಲು ಹೇಳಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ಮಾತನಾಡುತ್ತಿದ್ದ. ತೀರ ಅಗತ್ಯಬಿದ್ದರೆ ಮಾತ್ರ ಕರೆಸುತ್ತಿದ್ದನೇ ಹೊರತು ಅಗತ್ಯವಿಲ್ಲದಾಗ ಚಂದ್ರಪ್ಪನ ಹತ್ತಿರ ಟೈಪ್ ಮಾಡಬೇಕಾದ ಪತ್ರಗಳನ್ನು ಕೊಟ್ಟು ಕಳುಹಿಸಿಬಿಡುತ್ತಿದ್ದ. ರಾಹುಲ್‌ನ ಮೇಲೆ ಜೋರು ಮಾಡಿದ ಪ್ರಸಂಗವನ್ನು ಅದಿತಿಗೆ ಹೇಳಿದಾಗ ಅದಿತಿ ಸಹ ಬೆಚ್ಚಿಬಿದ್ದಿದ್ದಳು.

“ಅಲ್ವೆ ನಿನಗೆ ಏನಾದ್ರೂ ತಲೆ ನೆಟ್ಟಗಿದೆಯಾ ಹೇಗೆ, ಬಂದು ಆಗಲೇ ಆರು ತಿಂಗಳಾಗಿಲ್ಲ, ಕೆಲಸ ಬಿಟ್ಟು ಬೇರೆ ಎಲ್ಲಿಗೆ ಹೋಗ್ತೀಯ? ಕೆಲಸ ಸಿಕ್ಕುವುದು ಅಷ್ಟೊಂದು ಸುಲಭ ಅಂದ್ಕೊಂಡ್ಯಾ? ನಾನು ಕಂಡ ಹಾಗೆ, ಕೇಳಿದ ಹಾಗೆ ಬಾಸ್ ಬಹಳ ಸಿಟ್ಟಿನವರು. ನಿನಗೆ ಆ ಕ್ಷಣವೇ ಡಿಸ್‌ಮಿಸ್ ಲೆಟರ್



ಇಷ್ಟಕರ ಎಂದು ನಿನಗೆ ಅಗತ್ಯವಿಲ್ಲದ ವಸ್ತುವನ್ನು ಕೊಳ್ಳಬೇಡ. —ಆಸ್ಕರ್ ವೈಲ್ಡ್

ಕನಿಕರದ ಅತಿರೇಕ ನಿರರ್ಥಕ ಅವಿವೇಕ. —ಎಸ್. ವಿ. ರಂಗಣ್ಣ

ಪುರುಷನಿಗೆ ಭೂಷಣವಿರುವುದು, ಆತನ ಸುಸಂಸ್ಕೃತವಾದ ವಾಣಿಯಲ್ಲಿಯೇ ಹೊರತು ಅಲಂಕಾರಗಳಲ್ಲಲ್ಲ. —ಭರ್ತೃಹರಿ

ನಮ್ಮ ಹಿಂದಿನ ಸುಖದ ದಿನಗಳನ್ನು ಕಷ್ಟದ ಕಾಲದಲ್ಲಿ ನೆನೆಯುವುದಕ್ಕಿಂತ ಬೇರೊಂದು ದುಃಖ ಇನ್ನಿಲ್ಲ. —ಡಾಂಟೆ

ಸಂಗ್ರಹ : ಶ್ರೀನಿವಾಸ ಕಾಕಾಳಗೇರಿ

ಕೊಡದಿದ್ದುದು ನಿನ್ನ ಪುಣ್ಯಾಂತ ತಿಳ್ಕೋ. ಸಮಸ್ಯೆಗಳೆಲ್ಲ ಬಗೆಹರಿದವು ಅನ್ನುವುದರಲ್ಲಿ ನೀನಾಗೇ ಹೊಸ ಹೊಸ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ತಿಯಲ್ಲ.''

ಅವಳಿಗೆ ಸ್ಪಷ್ಟೀಕರಣ ನೀಡುವ ಗೋಜಿಗೆ ಹೋಗಲಿಲ್ಲ ಕೃತ್ತಿಕಾ. ಆದರೂ ಒಳಗೊಳಗೆ ಅಳುಕು, ಭಯ ಇದ್ದೇ ಇತ್ತು. ರಾಹುಲ್ ಏನೂ ಆಗದವನಂತೆ ನಡೆದುಕೊಂಡಿದ್ದನ್ನು ನೋಡಿ ಆಶ್ಚರ್ಯವಾಗಿತ್ತು. ಬಹುಶಾ 'ಗೆಟ್‌ಔಟ್' ಎಂದು ಹೇಳಲು ಒಳ್ಳೆ ದಿನ, ಮುಹೂರ್ತಕ್ಕೆ ಕಾಯುತ್ತಿರಬೇಕು. ಅಲ್ಲಿಯವರೆಗೂ ನಾನೂ ಕಾಯ್ತೀನಿ ಎಂದುಕೊಂಡು ಅವಳೂ ಸುಮ್ಮನಾಗಿದ್ದಳು. ಅವನ ಹತ್ತಿರ ಸಿಕ್ಕಿಹಾಕಿಕೊಳ್ಳಬಾರದೆಂದು ಯಾವುದೇ ತಪ್ಪುಗಳಿಲ್ಲದಂತೆ, ಎಚ್ಚರಿಕೆಯಿಂದ ಟೈಪ್ ಮಾಡಿ, ಅವನ ಸಹಿಗೆ ಕಳುಹಿಸುವ ಮೊದಲು ಎರಡೆರಡು ಬಾರಿ ಚೆಕ್ ಮಾಡುತ್ತಿದ್ದಳು. ರಾಹುಲ್‌ನ ಸ್ವಭಾವವನ್ನು ಹಲವಾರು ವರ್ಷಗಳಿಂದ ಬಲ್ಲ ಅದಿತಿಗೂ ಆಶ್ಚರ್ಯವಾಗಿತ್ತು.

"ಏನೇ ಕೃತ್ತಿಕಾ, ಬಾಸ್ ಮೇಲೆ ಏನು ಮೋಡಿ ಮಾಡಿದ್ದಿ, ನೀನು ಅಷ್ಟೆಲ್ಲ ಅಂದ್ರೂ ಒಂದೂ ಮಾತನಾಡದೆ ಸುಮ್ಮನಿರುವುದನ್ನು ನೋಡಿ ನನಗೇನೋ ಆಶ್ಚರ್ಯ. ಎಲ್ಲಾದ್ರೂ ಹೋಗಿ ಮಾಟ, ಮಂತ್ರ, ಏನಾದ್ರೂ ಮಾಡಿಸಿಕೊಂಡು ಬಂದ್ಯಾ?'' ಛೇಡಿಸುವ ಧ್ವನಿಯಲ್ಲಿ ಕೇಳಿದ್ದಳು.

"ನನ್ನನ್ನು ಆಚೆ ಕಳುಹಿಸಲಿಕ್ಕೆ ಬಹುಶಾ ಒಳ್ಳೆಯ ದಿನಕ್ಕಾಗಿ ಆತ ಪಂಚಾಂಗ ನೋಡ್ತಾ ಇರಬೇಕು.'' ಕೃತ್ತಿಕಾ ನಗುತ್ತ ಉತ್ತರಿಸಿದ್ದಳು.

ಈಗೆರಡು ದಿನಗಳಿಂದ ರಾಹುಲ್ ಆಫೀಸಿಗೆ ಬಂದಿಲ್ಲದೆ ಇರುವುದನ್ನು ಕೃತ್ತಿಕಾ ಗಮನಿಸಿದ್ದಳು. ಚೇಂಬರಿನಲ್ಲಿ ಅವನಿದ್ದಾನೆ ಎಂದರೆ ಸಾಕು ಕೆಲಸಗಳು ಚಕಚಕ ಎಂದು ಸಾಗುತ್ತಿದ್ದವು. ಕೃತ್ತಿಕಾಳಿಗಂತೂ ಬಿಡುವಿಲ್ಲದಷ್ಟು ಕೆಲಸವಿರುತ್ತಿತ್ತು. ನಿಧಾನ ಎನ್ನುವ ಪದದ ಪರಿಚಯವೇ ಈ ವ್ಯಕ್ತಿಗಿಲ್ಲವೇನೋ ಎಂದು ಎಷ್ಟೋ ಬಾರಿ ಅಂದುಕೊಳ್ಳುತ್ತಿದ್ದಳು.

"ಅದಿತಿ.''

ಅದಿತಿ ಕೃತ್ತಿಕಾಳತ್ತ ತಿರುಗಿ ನೋಡಿದಳು.

"ಬಾಸ್ ಆಫೀಸಿಗೆ ಬರ್ತಾನೆ ಇಲ್ಲವೇ ಟೂರ್ ಏನಾದ್ರೂ ಹೋಗಿದ್ದಾರೆ? ಹೋಗೋದಾದ್ರೂ ಲೆಟರ್ಸ್‌ಗಳನ್ನೆಲ್ಲ ಟೈಪ್ ಮಾಡಿ ಪೋಸ್ಟ್ ಮಾಡಲು ಹೇಳಿ ಹೋಗ್ತಾ ಇದ್ರು. ಆಶ್ಚರ್ಯ, ಬಾಸ್ ಈಸ್ ಆನ್ ಲೀವ್.''

"ಯಾಕಮ್ಮ ಕೈಗಳಿಗೆ ಸ್ವಲ್ಪ ಬಿಡುವು ಸಿಗ್ತೂಂತ ಬೇಜಾರಾ? ಹಾಗಿದ್ರೆ ತಡಿ. ಅವರಿಗೆ ಫೋನ್ ಮಾಡಿ ನೀವು ಬರದಿರೋ ದಿನಗಳಲ್ಲಿ ನಿಮ್ಮ ಪಿ.ಎ.ಗೆ ಸಾಕಷ್ಟು ಕೆಲಸ ಕೊಟ್ಟು ಹೋಗ್ತೀಂತ ಹೇಳ್ತೀನಿ.''

"ನಾನೇನೋ ಹೇಳಿದ್ರೆ ನೀನೇನೋ ಅರ್ಥ ಮಾಡಿಕೊಂಡೆ. ಪರ್ಸನಲ್ ಅನ್ನೋ ಪೋಸ್ಟ್‌ಗಳೆಲ್ಲ ಹಾಗೇ ಉಳಿದುಕೊಂಡಿವೆ. ಕೊನೇಪಕ್ಷ ಅವುಗಳನ್ನಾದ್ರೂ ನೋಡಬೇಕಿತ್ತು. ಆಮೇಲೆ ಬಂದು ಒಂದೇ ಸಮನೆ ಕೆಲಸ ಹೇಳಿಬಿಡ್ತಾರೆ. ಮಾಡುವ ಹಾಗೂ ಇರುವುದಿಲ್ಲ, ಇಲ್ಲ ಅಂತ ಹೇಳೋ ಹಾಗೂ ಇಲ್ಲ. ಈ ವ್ಯಕ್ತಿ ಫ್ಯಾಕ್ಟರಿ, ಫೈನಾನ್ಸ್ ಅದು ಇದೂಂತ ಓಡಾಡುವುದು ಬಿಟ್ಟು ಮಿಲಿಟರಿ ಸೇರಿದ್ದಿದ್ದರೆ ಇಷ್ಟೊತ್ತಿಗೆ ಹೈಯೆಸ್ಟ್ ರ್‍ಯಾಂಕ್ ತಲುಪಿಬಿಡ್ತಾ ಇದ್ರು. ಬಾಸ್ ಅನ್ನೋ ಬದಲು ಮೇಜರ್ ಅಂದ್ರೆ ಅವರಿಗೆ ಸರಿಯಾಗಿ ಸೂಟ್ ಆಗುತ್ತೆ.''

ಬಹಳ ದಿನಗಳನಂತರ ಕೃತ್ತಿಕಾ ಮೈ ಚಳಿ ಬಿಟ್ಟು ನಗುತ್ತ ರಾಹುಲ್‌ನ ಬಗ್ಗೆ ಮಾತನಾಡಿದ್ದಳು.

"ಮೇಜರ್ ಸಾಹೇಬರು ನಿನಗೆ ತುಂಬ ದಿನಗಳಿಂದ ಏನೂ ಹೇಳಿಲ್ಲಾಂತ ಬಹಳ ಖುಶಿಯಾಗಿದ್ದೀಯ ಅಲ್ವ? ನಾನು ಕಂಡ ಹಾಗೆ ನೀನು ಅವರ ಆರನೇ ಪಿ.ಎ.ನೋ ಏಳನೇ ಪಿ.ಎ.ನೋ ಇರಬೇಕು. ನಾನ್ಯಾವಾಗ್ಲೂ ಅಂದ್ಕೋತಾ ಇದ್ದೆ. ಈ ವಿಷಯದಲ್ಲಿ ಗಿನ್ನಿಸ್ ರೆಕಾರ್ಡ್ ಮಾಡಿಬಿಡ್ತಾರೋ ಏನೋ ಅಂತ."

ಅದಿತಿಯ ಮಾತಿಗೆ ಕೃತ್ತಿಕಾ ಜೋರಾಗಿ ನಕ್ಕಳು.


"ಮೇಜರ್ ಸಾಹೇಬರು ನನ್ನನ್ನು ವೆಯಿಟಿಂಗ್ ಲಿಸ್ಟ್‌ನಲ್ಲಿ ಇಟ್ಟಿರಬಹುದು ಬಿಡು. ಅದಿರಲಿ, ಅವರು ಬಾರದೆ ಇರೋದಕ್ಕೆ ಕಾರಣ ಗೊತ್ತಾ? ಇನ್ನೊಂದೆರಡು ದಿನ ಹಾಯಾಗಿರಬಹುದು. ಅಬ್ಬಬ್ಬ ಅವರಿದ್ದುಬಿಟ್ಟರೆ ಆಫೀಸಿನಲ್ಲಿ ಒಳ್ಳೆ ಉಸಿರು ಕಟ್ಟೋ ವಾತಾವರಣ ಇರುತ್ತೆ."

"ಓಹ್ ನಿನಗೆ ಗೊತ್ತಿಲ್ಲ ಅಲ್ವ, ನಾಡಿದ್ದು ಬಾಸ್ ಮಗಳು ಮೇಘನಾಳ ಬರ್ತಡೇ ಅದಕ್ಕೆ ತಯಾರಿ ನಡೆಸ್ತಾ ಇದ್ದಾರೆ. ಒಬ್ಬೇ ಮಗಳು ಅಂದಮೇಲೆ ಕೇಳಬೇಕಾಗಿ ಗ್ರಾಂಡಾಗಿ ಮಾಡ್ತಾರೆ. ನಮಗೂ ಹೇಳ್ತಾರೆ. ಕೇಶವಯ್ಯ ಪ್ರೆಸೆಂಟೇಶನ್ ಕೊಡ್ಲಿಕ್ಕೆ, ಹಣ ಕಲೆಕ್ಟ್ ಮಾಡ್ಲಿಕ್ಕೆ ಬರ್ತಾರೆ. ಯಾಕೆ ನಿನ್ನ ಇನ್ನು ಕೇಳಿಲ್ವಾ? ನಾನಾಗ್ಲೆ ಐವತ್ತು ರೂಪಾಯಿ ಕೊಟ್ಟಾಯ್ತು?"

"ಶ್ರೀಮಂತರ ಶ್ರೀಮಂತಿಕೆ ಮೆರೆಸುವ ಸುಸಂದರ್ಭ ಅನ್ನು."

ಕೃತ್ತಿಕಾ ವ್ಯಂಗ್ಯವಾಗಿ ಹೇಳಿದಳು.

"ಹಾಗೆ ಹೇಳಬೇಡ ಕೃತ್ತಿಕಾ, ಬಾಸ್‌ಗೆ ಮಗಳೂಂದ್ರೆ ಪ್ರಾಣ. ನಾನೂ ನಾಲ್ಕೈದು ವರ್ಷದಿಂದ ಹೋಗ್ತಾ ಇದ್ದೀನಲ್ಲ. ಅಲ್ಲಿಗೆ ಹೋದಾಗ ಅವರು ತಮ್ಮ ದೊಡ್ಡಸ್ತಿಕೇನ ಎಂದೂ ಮೆರೆಸಿಲ್ಲ. ಎಲ್ಲರ ಜೊತೆ ಸಹಜವಾಗಿ ಬೆರೀತಾರೆ. ಅಷ್ಟು ಹೇಳಿಕೊಳ್ಳೋ ಶ್ರೀಮಂತರನ್ನು ನಾನವರ ಪಾರ್ಟೀಲಿ ನೋಡೇ ಇಲ್ಲಪ್ಪ. ಸುಮ್ನೆ ಇಲ್ಲದ್ದನ್ನು ಹೇಳಬಾರದು. ಅವರ ಮಗಳೂ ಅಷ್ಟೇ ಎಷ್ಟು ಮುದ್ದಾಗಿದ್ದಾಳೆ ಗೊತ್ತಾ? ಹೊರಗೆ ಅಷ್ಟೇ ಸಹಜವಾಗಿ ವರ್ತಿಸೋ ಅವರು ಇಲ್ಲಿ ಮಾತ್ರ ಹೀಗಾಡೋದು. ನನಗನ್ನುಸ್ತೆ ಅವರ ಬದುಕಿನಲ್ಲಿ ಏನೋ ಘಟನೆ ನಡೆದು ಹೋಗಿರಬೇಕೂಂತ. ದೊಡ್ಡವರ ವಿಷಯ



ಡಾಕ್ಟರ್‌ರೊಬ್ಬರ ಸಂದರ್ಶನದಲ್ಲಿ ಸಂದರ್ಶಕ ಡಾಕ್ಟರಿಗೆ ಕೇಳಿದ.

"ಡಾಕ್ಟರ್ ನಿಮ್ಮ ಕ್ಲಿನಿಕ್‌ನಲ್ಲಿ ಕೇವಲ ಮೂರು ಜನರಿಗೆ ನೋಡಲು 1 ಗಂಟೆ ವೇಳೆ ತೆಗೆದುಕೊಳ್ಳುತ್ತಿರೆಂದು ಎಲ್ಲ ಮಾತನಾಡುತ್ತಾರಲ್ಲ?"

ಅದಕ್ಕೆ ಡಾಕ್ಟರ್ ಹೇಳಿದರು "ಯಾಕೆಂದರೆ ಅವರಲ್ಲಿ ಇಬ್ಬರು ಲೇಡಿಸ್ ಪೇಶಂಟ್ ಆಗಿರುತ್ತಾರೆ."

— ಎಸ್. ಕೆ. ಅರುಣ್‌ಕುಮಾರ್

ಅದನ್ನೆಲ್ಲ ನಾವು ಕೇಳಲಿಕ್ಕಾಗುತ್ತದಾ?''

"ನೀನೇನು ಇದ್ದಕ್ಕಿದ್ದ ಹಾಗೆ ಅವರ ಪಾರ್ಟಿ ಸೇರಿಬಿಟ್ಟೆಯಲ್ಲ ಏನ್ ಸಮಾಚಾರ? ಶ್ರೀಮಂತರ ಪಾರ್ಟಿ ಶುರುವಾಗುವುದೇ ರಾತ್ರಿ ಹತ್ತರನಂತರ. ಅಷ್ಟೊತ್ತಿಗೆ ನೀವೆಲ್ಲ ಕಾಲಿಯಾಗಿ ಬಿಟ್ಟಿರ್ತಿರಲ್ಲ. ಅದನ್ನೆಲ್ಲ ಗಮನಿಸೋ ಅವಕಾಶ ನಿಮಗೆ ಸಿಕ್ಕಿಲ್ಲ ಅಷ್ಟೇ. ನನಗೆ ಮೊದಲಿನಿಂದಲೂ ಅಷ್ಟೇ, ಶ್ರೀಮಂತಿಕೆ, ಶ್ರೀಮಂತರು ಅಂದ್ರೆ ಅಲರ್ಜಿ. ನೀನು ಹೋಗಿ ಚೆನ್ನಾಗಿ ಊಟ ಮಾಡಿ ಹ್ಯಾಪಿ ಬರ್ತ್‌ಡೇ ಹೇಳಿ ಬಾ. ನಾನಂತೂ ಬರೋದಿಲ್ಲಪ್ಪ. ಹಾಂ, ಹಾಗಂತ ದುಡ್ಡು ಕೊಡದೆ ಇರೋದಿಲ್ಲ. ಶ್ರೀಮಂತರ ಮನಸಿನ ಆಳ ಕಂಡುಹಿಡಿಯುವುದು ಮಾತ್ರ ಅಸಾಧ್ಯ. ಎಲ್ಲದಕ್ಕಿಂತ ಹೆಚ್ಚಾಗಿ ಪಾರ್ಟಿಗಳಿಗೆ ಡ್ರೆಸ್ ಮಾಡ್ಕೊಂಡು ಶೋ ಗೊಂಬೆ ತರಹ ಹೋಗಿ ನಾಟಕೀಯವಾಗಿ ಮಾತನಾಡಿ ಬರುವುದು ನನ್ನಿಂದ ಸಾಧ್ಯವಿಲ್ಲ. ನಾನ್ಯಾವಾಗ್ಲೂ ನನಗೆ ಹೇಗೆ ಬೇಕೋ ಹಾಗೇ ಬದುಕುವವಳು.''

"ನೀನಿನ್ನು ಬಾಸ್ ಬಯ್ದುದ್ದನ್ನು ಮರೆತೇ ಇಲ್ಲ ಅನ್ಸುತ್ತೆ. ನೀನೂ ಬಂದು ನೋಡು ಆಗ ನಿನಗೇ ಗೊತ್ತಾಗುತ್ತೆ ನಿನ್ನ ಅಭಿಪ್ರಾಯ ತಪ್ಪೋ ಸರಿನೋ ಅಂತ. ಅಷ್ಟಕ್ಕೂ ಆ ಮಗು ಏನು ಮಾಡಿತ್ತು?''

"ಡೋಂಟ್ ಲಿಂಕ್ ಇಶ್ಯೂಸ್. ಅದಕ್ಕೂ ಇದಕ್ಕೂ ಖಂಡಿತ ಸಂಬಂಧವಿಲ್ಲ. ಹಾಗಂತ ನನಗೆ ಇಷ್ಟವಿಲ್ಲದ ಕಡೆ ಬರಲು ನನ್ನ ಮನಸ್ಸು ಒಪ್ಪುವುದಿಲ್ಲ. ನನಗೆ ಯಾರ್ದೇ ಮನೇಲಿ ಆಗಲಿ ಏನಾದ್ರು ತಿಂದಾಗ ಹಂಗಿನ ಭಾವನೆ ಬರುತ್ತದೆ. ಕೆಲಸ ಮಾಡ್ತೀನಿ, ಸಂಬಳ ಕೊಡ್ತಾರೆ. ಅಷ್ಟು ಸಾಕು. ಮಗು ಏನೂ ಮಾಡಿಲ್ಲ ಒಪ್ಕೊಳ್ತೀನಿ. ಹಾರ್ದಿಕೇನ ಬಂದು ಹೇಳ್ಲೆಬೇಕೂಂತ ಇಲ್ಲವಲ್ಲ, ಗ್ರೀಟಿಂಗ್ಸ್ ಕಳುಹಿಸ್ತೀನಿ. ಅಡ್ರೆಸ್ ಕೊಡ್ತಿಯಾ?''

"ಏನೋಪ್ಪ ನಿನ್ನಿಷ್ಟ ಬಲವಂತ ಮಾಡುವುದಿಲ್ಲ. ಒಂದೊಂದು ಸಲ ನೀನು ವಿಚಿತ್ರವಾಗಿ ಆಡ್ತೀಯ. ಬಾಸ್ ಆಡುವುದಕ್ಕೂ ನೀನು ಮಾಡುವುದಕ್ಕೂ ಸರಿಯಾಗಿದೆ.'' ಅದಿತಿ ರಾಗ ಎಳೆದಳು.

"ನನ್ನನ್ನು ನಾನೇ ಅರ್ಥ ಮಾಡಿಕೊಂಡಿಲ್ಲದಿರುವಾಗ ನೀನು ಹೇಗೆ ಅರ್ಥ ಮಾಡಿಕೊಳ್ಳಲು ಸಾಧ್ಯ. ಇರ್ಲಿ ಬಿಡು, ಮಾತು ಎಲ್ಲೆಲ್ಲಿಗೋ ಹೋಯಿತು. ನಿಜ ಹೇಳಬೇಕೂಂದ್ರೆ ಜನರ ಜೊತೆ ಬೆರೆಯುವುದೇ ಬೇಡ ಅನ್ಸುತ್ತೆ ನನಗೆ.''

"ಬಾಸ್‌ಗೆ ಹೇಳಿದ ಮಾತನ್ನೇ ನಿನಗೆ ತಿರುಗಿಸಬೇಕಾಗುತ್ತದೆ ಅಂತ ಕಾಣುತ್ತದೆ. ನೀನು ಒಂದೊಂದು ಸಲ ವಿಚಿತ್ರವಾಗಿ ಆಡೋದನ್ನು ನೋಡಿದಾಗ ನಿನ್ನ ಬದುಕಿನಲ್ಲಿ ಯಾವುದೋ ಅಸಹಜ ಘಟನೆ ನಡೆದು, ನಿನಗೆ ಸಮಾಜದ ಬಗ್ಗೆ ಗಂಡಸರ ಬಗ್ಗೆ ಸಾಫ್ಟ್ ಕಾರ್ನರ್ ಇಲ್ಲವೆನಿಸುತ್ತದೆ. ನಾನೂ ತುಂಬ ದಿನದಿಂದ ನಿನ್ನ ಗಮನಿಸ್ತಾನೇ ಇದ್ದೇನೆ. ನೀನು ಸ್ಯಾಡಿಸ್ಟೋ, ಸೆಂಟಿಮೆಂಟಲ್ಲೋ ಅಥವಾ ಪುರುಷ ದ್ವೇಷಿನೋ ನಿರ್ಧರಿಸಲಿಕ್ಕೆ ಆಗಿಲ್ಲ.''

"ನದಿ ಮೂಲ, ಋಷಿ ಮೂಲ ಹಾಗೂ ಹೆಣ್ಣಿನ ಮೂಲವನ್ನು ಹುಡುಕಬಾರದು ಅಂತಾರೆ, ನಿನಗೆ ಗೊತ್ತಾ ಅದಿತಿ?''

ಕೃತ್ತಿಕಾ ಪ್ರಶ್ನಿಸಿದಳು.

"ನದಿ ಮೂಲವನ್ನು ಹುಡುಕಿಕೊಂಡು ಹೋದಾಗ ಅದರ ಮೂಲ ಕಂಡಾಗ ನಮಗೆ

ಅದರ ಬಗ್ಗೆ ಇರೋ ಪವಿತ್ರ ಭಾವನೇನೇ ಹೊರಟು ಹೋಗಿಬಹುದು. ಋಷಿಯ ಹಿನ್ನಲೆ ಕೇಳಿದಾಗ ಅವರ ಬಗ್ಗೆ ಗೌರವವೇ ಇಲ್ಲವಾಗುತ್ತೆ. ಇನ್ನು ಹೆಣ್ಣಿನ ಮೂಲ ನೋಡಿದರೆ..." ಅದಿತಿಯ ಮುಖ ನೋಡಿದಳು.

"ನನ್ನ ಮನಸ್ಸು ಬಂದಾಗ ಹೇಳ್ತೀನಿ. ಅಲ್ಲಿಯವರೆಗೂ ನನ್ನ ಮನಸ್ಸು ಮುಚ್ಚಿದ ಪೆಟ್ಟಿಗೆ. ಅಂದಹಾಗೆ ನೀನು ಹೇಳಿದ ಹಾಗೆ ಯಾವ ದ್ವೇಷಿಯೂ ನಾನಲ್ಲ. ಕಮಾನ್, ನೀನ್ಯಾಕೆ ಇಷ್ಟು ಸೀರಿಯಸ್ಸಾಗಿ ನನ್ನ ಮುಖವನ್ನೇ ನೋಡ್ತಾ ಇದ್ದೀಯಾ?"

ಕೃತ್ತಿಕಾ ಕಿಲಕಿಲನೆ ನಕ್ಕಾಗ ಪೆಚ್ಚಾಗುವ ಸರದಿ ಅದಿತಿಯದಾಗಿತ್ತು.

"ನಿನ್ನ ಮನಸ್ಸಿನ ಪೆಟ್ಟಿಗೆ ಬೀಗ ತೆಗೆಯೋ ಮಹಾರಾಜನನ್ನು ಬೇಗ ಹುಡುಕಬೇಕು ಅನ್ನು."

"ಓಹ್ ಕೇಶವಯ್ಯ ಬರುತ್ತಿದ್ದಾರೆ. ದುಡ್ಡು ಕೊಡಲು ಮರೆತು ಹೋಗುತ್ತೆ" ಎನ್ನುತ್ತ ಕೃತ್ತಿಕಾ ಅವಳ ಮಾತಿಗೆ ಉತ್ತರ ನೀಡುವ ಗೋಜಿಗೆ ಹೋಗದೆ ಪರ್ಸ್ ತೆಗೆದಳು.

"ತಗೊಳ್ಳಿ ಕೇಶವಯ್ಯನವರೇ ನನ್ನ ಪಾಲಿನ ಹಣವನ್ನು."

ಅವರು ಕೇಳುವ ಮೊದಲೇ ಅವರ ಕೈಗಿತ್ತಳು.

ಕೇಶವಯ್ಯ ಹಣ ತೆಗೆದುಕೊಂಡು ಬ್ಯಾಗ್‌ನಿಂದ ಇನ್ವಿಟೇಶನ್‌ಗಳನ್ನು ಹೊರ ತೆಗೆದರು. ಒಂದನ್ನು ಅದಿತಿಗೂ ಇನ್ನೊಂದನ್ನು ಕೃತ್ತಿಕಾಳಿಗೂ ಕೊಟ್ಟರು.

"ಸಾಹೇಬ್ರು ಕೆಲಸದ ಒತ್ತಡದಿಂದ ಬರಲಾಗಲಿಲ್ಲ. ಅವರ ಪರವಾಗಿ ನಾನೇ ಕೊಡ್ತಾ ಇದ್ದೀನಿ. ನಾಡಿದ್ದು ಸಂಜೆ ಆರು ಗಂಟೆಗೆ ಖಂಡಿತ ಬರಬೇಕೂಂತ ಪ್ರತಿಯೊಬ್ಬರಿಗೂ ತಿಳಿಸಬೇಕೂಂತ ಹೇಳಿದ್ದಾರೆ. ಖಂಡಿತ ಬರಬೇಕು."

"ಸೊಗಸಾದ ಊಟ ಸಿಗುತ್ತೆ ಅಂದ್ರೆ ಬಿಡ್ತಾರ್ಯೇ ಕೇಶವಯ್ಯನವರೇ, ಖಂಡಿತ ಬರ್ತೀವಿ."

ಕೃತ್ತಿಕಾ ನಗುತ್ತ ಹೇಳಿದಾಗ ಅದಿತಿ ಅಚ್ಚರಿಯಿಂದ ಅವಳನ್ನೇ ದಿಟ್ಟಿಸಿದಳು.

"ಖಂಡಿತ ಬರ್ಬೇಕು, ಇಲ್ಲದಿದ್ರೆ ಸಾಹೇಬರು ಬೇಸರ ಮಾಡಿಕೊಳ್ತಾರೆ" ಎನ್ನುತ್ತ ಹೋದರು.

"ಡಬ್ಬಲ್ ರೋಲ್ ಒಳ್ಳೆ ಚೆನ್ನಾಗಿ ಮಾಡ್ತೀಯ ಕೃತ್ತಿಕಾ."

ಅದಿತಿ ಹೇಳಿದಳು.

'ರಾಗಸಂಗಮ'

ಲಾಟರಿ ಡ್ರಾ – ೧೪೪ರ ವಿಜೇತರು



ತಬಸೀನ ಇರ್ಫಾನಾ ಕೆ.

ನರ್ಕೆತ್‌ಪಾಡಿ

ಹಾಸನ.

"ಎಲ್ಲ ಮನುಷ್ಯರಲ್ಲೂ ಎರಡೆರಡು ಮುಖ ಇದ್ದೇ ಇರುತ್ತೆ. ಕೆಲವರು ತೋರಿಸಿಕೊಳ್ತಾರೆ. ಕೆಲವರು ನಾಟಕ ಆಡ್ತಾರೆ. ಎನಿವೇ, ನಾಳೆ ನೀನು ರಜಾ ತಾನೇ. ಫಂಕ್ಷನ್ ಅಟೆಂಡ್ ಮಾಡಿ ಹೇಗಿತ್ತೂಂತ ಹೇಳು. ಸೀ ಯೂ'' ಎನ್ನುತ್ತ ಬ್ಯಾಗ್ ತೆಗೆದುಕೊಂಡು ಮನೆಗೆ ಹೋಗಲು ಅನುವಾದಳು.

* * * * *

ನಿರೀಕ್ಷಿಸಿದಂತೆ ರಾಹುಲ್‌ನಿಂದ ಕರೆ ಬಂದಾಗ ಕೃತ್ತಿಕಾ ಅಧೀರಳಾಗಲಿಲ್ಲ. ಬಹುಶಾ ಬಯ್ಯಬಹುದು, ನನ್ನ ಕೈಕೆಳಗೆ ಕೆಲಸ ಮಾಡುವ ನಿನಗೆ ಎಷ್ಟು ಸೊಕ್ಕು ಎಂದೆಲ್ಲ ಹೇಳಬಹುದು ಎಂದುಕೊಳ್ಳುತ್ತಲೇ ಅವನ ಚೇಂಬರಿಗೆ ಕಾಲಿರಿಸಿದಳು. ಯಾಕೋ ಏನೋ ಅವನ ಮುಖ ನೋಡುವ ಧೈರ್ಯವಾಗಲಿಲ್ಲ. ಏನೋ ಅಳುಕು. ಯಾವುದೋ ಫೈಲ್ ಸ್ಟಡಿ ಮಾಡುತ್ತಿದ್ದ ರಾಹುಲ್ ಕುಳಿತುಕೊಳ್ಳುವಂತೆ ಸನ್ನೆ ಮಾಡಿ ಪತ್ರದ ಡಿಕ್ಟೇಶನ್ ಕೊಡತೊಡಗಿದ. ಕೃತ್ತಿಕಾಳಿಗೆ ಯೋಚಿಸಲೂ ಆಸ್ಪದವಿಲ್ಲದಂತೆ ಪೆನ್ನು ಓಡತೊಡಗಿತು. ಎಂದಿಗಿಂತ ಇವತ್ತು ಸ್ಪೀಡಾಗಿ ಹೇಳುತ್ತಿದ್ದಾನೆಯೇ ಅಥವಾ ನನ್ನ ಅನಿಸಿಕೆಯೋ ಎಂದು ಒಂದು ಕ್ಷಣ ಯೋಚಿಸಿದಳು. ಅರ್ಧ ಗಂಟೆಯ ಬಳಿಕ ಡಿಕ್ಟೇಶನ್ ಮುಗಿದಾಗ ಕೈ ಎಲ್ಲ ಜೋಮು ಹಿಡಿದ ಹಾಗಾಗಿತ್ತು.

"ಇಷ್ಟನ್ನು ಆದಷ್ಟು ಬೇಗ ಟೈಪ್ ಮಾಡಿ ಕಳುಹಿಸಿಕೊಡಿ.'' ಅವಳತ್ತ ನೋಡದೆ ಹೇಳಿದ.

"ಆಯ್ತು ಸರ್'' ಎಂದುಕೊಂಡು ಕೃತ್ತಿಕಾ ಮೇಲೆದ್ದಳು.

"ಒಂದ್ನಿಮಿಷ'' ಎನ್ನುತ್ತ ರಾಹುಲ್ ಮೇಜಿನ ಡ್ರಾ ಎಳೆದ. ಅದರಿಂದ ಕವರ್ ಒಂದನ್ನು ತೆಗೆದು ಕೃತ್ತಿಕಾಳ ಕೈಗಿತ್ತ. ಅಚ್ಚರಿಯಿಂದ ಅದರತ್ತ ಕಣ್ಣಾಡಿಸಿದ ಅವಳು ತೆರೆದು ನೋಡಿದಳು. ಮುಖ ಕೆಂಪಾಯಿತು. ಮೇಘನಾಳಿಗೆ ಅವಳೇ ಕಳುಹಿಸಿದ ಶುಭಾಶಯ ಪತ್ರ, ಜೊತೆಗೆ ಐವತ್ತು ರೂಪಾಯಿಯ ನೋಟು ಕೆಳಗುದುರಿತು.

"ಮಿಸ್ ಕೃತ್ತಿಕಾ.'' ರಾಹುಲ್ ಗಂಭೀರನಾಗಿ ಹೇಳಿದ.

"ಸ್ವಾಭಿಮಾನ ಅನ್ನುವುದು ನಿಮ್ಮೊಬ್ಬರಿಗೆ ಮಾತ್ರ ಇದೇಂತ ತಿಳಿದುಕೊಂಡಿದ್ರೆ ಅದು ತಪ್ಪು. ನಾನವತ್ತೇ ಹೇಳಿದೆ, ನಿಮ್ಮನ್ನು ನಾನು ಬೇಕಂತಲೇ ಅವಮರ್ಯಾದೆ ಮಾಡಲಿಲ್ಲಾಂತ. ಆದ್ರೂ ನೀವಿನ್ನೂ ನನ್ನ ತಪ್ಪಾಗೇ ತಿಳಿದುಕೊಂಡಿದ್ದೀರಿ. ಅಪರಿಚಿತರಿಂದ ಗ್ರೀಟಿಂಗ್ಸನ್ನಾಗಲಿ, ಪ್ರೆಸೆಂಟೇಶನನ್ನಾಗಲಿ ಸ್ವೀಕರಿಸುವ ಅಭ್ಯಾಸ ನನ್ನ ಮಗಳಿಗಿಲ್ಲ. ಮಗು ಏನು ಮಾಡಿತ್ತು? ನೀವೇ ಖುದ್ದಾಗಿ ಬಂದು ಹೇಳಬಹುದಿತ್ತು. ಈ ತರಹದ ಅವಮರ್ಯಾದೆ ನನಗೆ ಯಾರಿಂದಲೂ ಆಗಿರಲಿಲ್ಲ. ಸೇಡನ್ನು ಚೆನ್ನಾಗಿ ತೀರಿಸಿಕೊಂಡಿರಿ. ಹಾಂ, ಈ ವಿಷಯಾನಾ ಇಲ್ಲಿಗೇ ಬಿಟ್ಬು ಬಿಡಿ. ಮುಂದಿನ ವರ್ಷವೂ ಹುಟ್ಟಿದ ಹಬ್ಬ ಬರುತ್ತದಲ್ಲ.''

ರಪ್ಪೆಂದು ಕೆನ್ನೆಗೆ ಬಾರಿಸಿದ ಹಾಗಾಯಿತು. ಜೊತೆಗೆ ಸಂತೋಷವೂ ಆಯಿತು. ರಾಹುಲ್ ತಾನು ಬರದಿದ್ದನ್ನು ಗಮನಿಸಿದ್ದಾನಲ್ಲ ಎಂದು.

"ನೀವು ಬರಲಿಲ್ಲವೆಂದು ನಿಮ್ಮ ಬಗ್ಗೆ ಪರ್ಸನಲ್ ಇಂಟರೆಸ್ಟ್ ತೋರಿಸ್ತಾ ಇದ್ದೀನೀಂತ ಭಾವಿಸಬೇಡಿ. ವರ್ಷಕ್ಕೊಂದು ಸಾರಿ ನನ್ನ ಆಫೀಸಿನವರ ಜೊತೆ ಸೇರಿ ಬೆರೆಯಬೇಕೆಂಬ ಒಂದೇ ಒಂದು ಕಾರಣಕ್ಕಾಗಿ ನಾನು ಮಗಳ ಬರ್ತ್‌ಡೇ ನೆಪ ಹೇಳಿ ಎಲ್ಲರನ್ನು ಇನ್ವೈಟ್ ಮಾಡುವುದು. ನೀವು ಅದಕ್ಕೆ ಇನ್ನೇನಾದರೂ ಕಾರಣ ಹುಡುಕಿದ್ದರೆ ತಪ್ಪು ನನ್ನದಲ್ಲ.''



ಒಂದು ಕ್ಷಣದ ಹಿಂದೆ ಹಿಗ್ಗಿದ್ದ ಮನ ಸೂಜಿ ಚುಚ್ಚಿದ ಬೆಲೂನಿನಂತಾಯಿತು. ತಕ್ಷಣ ಸಾವರಿಸಿಕೊಂಡಳು.

"ಹಾಗಲ್ಲ ಸರ್... ಅದು..."

ತೊದಲಿದಳು. ಮಾತುಗಳೆಲ್ಲ ಗಂಟಲಿನಲ್ಲೇ ಸಿಕ್ಕಿಹಾಕಿಕೊಂಡ ಹಾಗಾಯಿತು.

"ಇಟ್ಸ್ ಓಕೆ. ನಿಮ್ಮಿಂದ ನಾನು ವಿವರಣೆಯನ್ನಾಗಲಿ ಅಥವಾ ತಪ್ಪೊಪ್ಪಿಗೆಯನ್ನಾಗಲಿ ಕೇಳಲೇ ಇಲ್ಲ. ಯೂ ಆರ್ ಲಿವಿಂಗ್ ಇನ್ ಎ ಡೆಮೊಕ್ರಾಟಿಕ್ ಕಂಟ್ರಿ. ನಿಮಗೆ ಬೇಕಾದ ಹಾಗೆ ನಡೆದುಕೊಳ್ಳುವ ಸ್ವಾತಂತ್ರ್ಯವಿದೆ. ಆದಕ್ಕೂ ಮಿಗಿಲಾಗಿ ನನ್ನ ಎಂಪ್ಲಾಯಿಸ್ ಮೇಲೆ ನನ್ನ ಅಭಿಪ್ರಾಯವನ್ನು ನಾನು ಹೇಗೆ ಹೇರಲು ಸಾಧ್ಯ. ಇಷ್ಟೆಲ್ಲ ಹೇಳಲು ಕಾರಣ ಐ ಫೆಲ್ಟ್ ಇಟ್ ವಾಸ್ ಇನ್‌ಸಲ್ಟ್ ಟು ಮೀ. ಲೀವ್ ಇಟ್."

ಕೃತ್ತಿಕಾಳಿಗೆ ಈಗ ಸ್ವಲ್ಪ ಧೈರ್ಯ ಬರತೊಡಗಿತ್ತು.

"ಉದ್ದೇಶಪೂರ್ವಕವಾಗಿ ನಾನು ಪಾರ್ಟಿಗೆ ಬರಲಿಲ್ಲವೆಂದು ನೀವು ತಿಳಿದುಕೊಂಡಿದ್ದರೆ ತಪ್ಪು ಸರ್. ನಾನು ಮೊದಲಿನಿಂದಲೂ ಅಷ್ಟೇ ಈ ಪಾರ್ಟಿ, ಜನರೆಂದರೆ ಅಲರ್ಜಿ. ಹೈ ಸೊಸೈಟಿ ಜನರ ಜೊತೆ ಸೇರುವುದು ನಮ್ಮಂತಹವರಿಗೆ ಸ್ವಲ್ಪ ಕಷ್ಟವೇ. ಅಲ್ಲ ಬಂದ್ರೂ ಅಷ್ಟೇ ಹೆಚ್ಚಿನವರ ಮಾತುಗಳು ಒಡವೆ, ಬಟ್ಟೆಗಳ ಸುತ್ತಾನೇ ಇರುತ್ತೆ. ಮತ್ತೆ ಬೇರೆಯವರಿಗೋಸ್ಕರ ತಾವು ತುಂಬ ಸೊಫೆಸ್ಟಿಕೇಟೆಡ್ ಎಂದು ತೋರಿಸುವ ನಟನೆ ನನಗಿಷ್ಟವಾಗಲ್ಲ. ಇದಲ್ಲಕ್ಕಿಂತ ಹೆಚ್ಚಾಗಿ ನನಗೆ ಜನರ ಮೇಲೆ ನಂಬಿಕೇನೇ ಹೊರಟು ಹೋಗಿದೆ. ಯಾರ ಜೊತೆ ಬೆರೆಯುವುದೇ ಬೇಡ ಅನಿಸುತ್ತದೆ."

"ನಿಮ್ಮ ಪರ್ಸನಲ್ ಕಾರಣಗಳು ಆಕ್ಸ್ಯೂಸ್ ಆಗಲಾರವು ಮಿಸ್ ಕೃತ್ತಿಕಾ. ಸಮಾಜದಲ್ಲಿ ವಾಸ ಮಾಡುತ್ತಿರುವಾಗ ಯೂ ಹ್ಯಾವ್ ಟು ಮಿಂಗಲ್ ವಿತ್ ಪೀಪಲ್. ಎಲ್ಲರನ್ನು ಒಂದೇ ಮಾನದಂಡದಿಂದ ಅಳೆಯುವುದು ಸರಿಯಲ್ಲ." ರಾಹುಲ್ ಚುಚ್ಚಿದ.

ಕೃತ್ತಿಕಾಳಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ಈ ಮನುಷ್ಯ ಯಾಕೆ ಅಷ್ಟು ಸಣ್ಣ ವಿಷಯವನ್ನು ದೊಡ್ಡದು ಮಾಡ್ತಾನೆ ಎನಿಸಿತು. ತಾನು ಬಂದರೆಷ್ಟು ಬಿಟ್ಟರೆಷ್ಟು, ಅದನ್ನೆಲ್ಲ ಕಟ್ಟಿಕೊಂಡು ಈತನಿಗೇನಾಗಬೇಕು? ವಿಚಿತ್ರ ಸ್ವಭಾವದವನು ಎನಿಸಿತು: ಯಾರೋ ಏನೋ ಅವಳಿಗೆ ಉಸಿರು ಕಟ್ಟಿಸುವ ಈ ವಾತಾವರಣದಿಂದ ಪಾರಾಗಿ ಹೋಗಬೇಕೆನಿಸಿತು. ಅವತ್ತು ಬೆಳಿಗ್ಗೆ ಬೆಳಗ್ಗೇನೇ ಮೂಡ್ ಆಫ್ ಆಗಿ ಹೋಯಿತಲ್ಲ ಎಂದು ಮಿಡುಕಿದಳು. ಏನಾದರೂ ಹೇಳಬೇಕೆಂದುಕೊಂಡು ರಾಹುಲ್‌ನ ಮುಖ ನೋಡಿದಳು. ಅವಳ ಮನಸಿನ ಭಾವನೆಗಳನ್ನು ಓದುತ್ತಿರುವನಂತೆ ಕಂಡ. ಹಾಗೆಯೇ ಒಂದು ಕ್ಷಣ ನಿಂತಿದ್ದು,

"ವೈಯಕ್ತಿಕ ಸ್ವಾತಂತ್ರ್ಯಕ್ಕೆ ಬೆಲೆ ಕೊಟ್ಟಿದ್ದಕ್ಕೆ ತುಂಬ ಥ್ಯಾಂಕ್ಸ್. ಈವನ್ ಐ ಡೋಂಟ್ ಹ್ಯಾವ್ ಎನಿ ರೈಟ್ಸ್ ಟು ಹರ್ಟ್ ಅದರ್ಸ್. ಸಾರಿ, ಎಕ್ಸ್‌ಟ್ರೀಮ್ಲೀ ಸಾರಿ" ಎನ್ನುತ್ತ ಗ್ರೀಟಿಂಗ್ಸ್ ಹಾಗೂ ದುಡ್ಡನ್ನು ಎತ್ತಿಕೊಂಡು ಹೊರಟುಹೋದಳು. ರಾಹುಲ್ ಮೀಸೆ ಮರೆಯಲ್ಲೇ ನಕ್ಕ.

* * * * *

ಈಗೊಂದು ಗಂಟೆಯಿಂದ ಕೃತ್ತಿಕಾ ಹಾಸಿಗೆಯಲ್ಲಿ ಹೊರಳಾಡುತ್ತಿದ್ದಳು. ಎಷ್ಟೇ ಯೋಚಿಸಿದರೂ ಏನು ಮಾಡುವುದೆಂದು ಹೊಳೆಯಲಿಲ್ಲ. ಬೇಡವೆಂದರೂ ಮನಸ್ಸು

ಹಿಂದಕ್ಕೋಡುತ್ತಿತ್ತು. ಇಷ್ಟು ದಿನ ಕಾಡದಿದ್ದ ಗತ ನೆನಪುಗಳು ಇದ್ದಕ್ಕಿದ್ದ ಹಾಗೆ ದುತ್ತೆಂದು ಅವಳ ಮುಂದೆ ನರ್ತಿಸತೊಡಗಿದ್ದವು. ಈ ಯೋಚನೆಗಳಿಂದ ಮುಕ್ತಿಯೇ ಇಲ್ಲವೆ? ತನ್ನನ್ನು ತಾನೇ ಪ್ರಶ್ನಿಸಿಕೊಂಡಳು. ಎಲ್ಲವನ್ನು ಮರೆಯಬೇಕೆಂದುಕೊಂಡು ಬಂದಿದ್ದಳು. ಮರೆಯುವುದರಲ್ಲಿ ಯಶಸ್ವಿಯಾಗಿದ್ದೇನೆಂದುಕೊಳ್ಳುವಷ್ಟರಲ್ಲಿ ಪುನಾ ಕಾಡುತ್ತಿದ್ದವು. ಮನುಷ್ಯನಿಗೆ ಒಂಟಿತನಕ್ಕಿಂತ ಮಿಗಿಲಾದ ಶಿಕ್ಷೆ ಇನ್ನೊಂದಿಲ್ಲ ಎಂದುಕೊಂಡಳು. ನನ್ನ ಬದುಕಿನ ಪುಟಗಳಿಂದ ಆ ಐದು ವರ್ಷಗಳನ್ನು ತೆಗೆದುಹಾಕುವ ಹಾಗಿದ್ದರೆ? ಬಹುಶಾ ಎಲ್ಲರ ಹಾಗೆ ನಾನೂ ಸಂಸಾರಿಯಾಗಿರಬಹುದಿತ್ತೇನೋ. ತನ್ನನ್ನು ಈ ಕೂಪಕ್ಕೆ ದೂಡಿದ ವ್ಯಕ್ತಿ ಈಗ ಏನು ಮಾಡುತ್ತಿರಬಹುದು? ತಲೆ ಸಿಡಿದು ಹೋಗುತ್ತಿರುವ ಹಾಗಾಯಿತು. ಈ ಸಲ್ಲದ ಯೋಚನೆಗಳಲ್ಲೇ ನನ್ನ ಬದುಕೆಲ್ಲ ಕಳೆದುಹೋಗಬಹುದೇನೋ ಎಂದುಕೊಂಡು ತಲೆ ಕೊಡವಿಕೊಂಡು ಮೇಲೆದ್ದಳು. ಅಡುಗೆ ಮನೆಗೆ ಹೋಗಿ ಕಾಫಿ ಮಾಡಿಕೊಂಡು ಕುಡಿದ ಮೇಲೆ ಸ್ವಲ್ಪ ಹಾಯೆನಿಸಿತು. ಕೈಯಲ್ಲಿದ್ದ ವಾಚಿನತ್ತ ನೋಡಿದಳು. ಇನ್ನೂ ನಾಲ್ಕು ಗಂಟೆ. ಈ ಶನಿವಾರ, ಭಾನುವಾರಗಳು ಬರುವುದು ನನ್ನನ್ನು ಕೊಲ್ಲುವುದಕ್ಕೆ ಎಂದುಕೊಳ್ಳುವಷ್ಟರಲ್ಲಿ ತಲೆಗೆ ಏನೋ ಹೊಳೆದಂತಾಯಿತು. ಎದ್ದು ತಲೆ ಬಾಚಿಕೊಂಡು ಸೀರೆ ಬದಲಾಯಿಸಿ, ಪರ್ಸ್ ಕೈಗೆತ್ತಿಕೊಂಡಳು. ಹೋಗುವ ಮೊದಲು ಅವಳ ದೃಷ್ಟಿ ಅಪ್ರಯತ್ನವಾಗಿ ಅಲ್ಲಿದ್ದ ಕನ್ನಡಿಯತ್ತ ಹರಿಯಿತು. ಮೂವತ್ತೊಂದು ವರ್ಷಗಳಲ್ಲವೇ. ನೆನಪು ಮಾಡಿಕೊಂಡಳು.

ಇನ್ಯಾರಾದ್ರೂ ಆಗಿದ್ದಿದ್ದರೆ ಇಷ್ಟೊತ್ತಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೇನೋ ಅಂದುಕೊಂಡಳು. ಇತ್ತೀಚೆಗಂತೂ ಮೇಕಪ್, ಉಡುಪಿನಲ್ಲಿ ಆಸಕ್ತಿಯನ್ನೇ ಕಳೆದುಕೊಂಡುಬಿಟ್ಟಿದ್ದಳು. ತುಂಬ ಸಿಂಪಲ್ ಎನಿಸಿತು. ತಾನುಟ್ಟಿದ್ದ ಕಾಟನ್ ಸೀರೆಯನ್ನು ಬಿಚ್ಚಿ ಎಷ್ಟೋ ದಿನಗಳಿಂದ ಹೊರಗೇ ತೆಗೆಯದಿದ್ದ ಕಪ್ಪುಬಣ್ಣದ ಜರೀ ಬುಟ್ಟಾಗಳಿದ್ದ ಷಿಫಾನ್ ಸೀರೆಯನ್ನು ಉಟ್ಟುಕೊಂಡಳು. ಮನಸು ಬೇಡವೆಂದರೂ ಕೈ ಅಪ್ರಯತ್ನವಾಗಿ ಅವಳ ಮೇಕಪ್ ಕಿಟ್‌ನತ್ತ ಹೋಯಿತು. ಎಲ್ಲ ಆದ ಅನಂತರ ಕನ್ನಡಿಯಲ್ಲಿ ನೋಡಿಕೊಂಡಳು. ಪ್ರತಿಬಿಂಬವನ್ನು ನೋಡಿ ಬೆಚ್ಚಿ ಬೀಳುವಂತಾಯಿತು. "ಯೂ ಆರ್ ಬ್ಯೂಟಿಫುಲ್" ಯಾರದ್ದೋ ಧ್ವನಿ ಗಾಳಿಯಲ್ಲಿ ತೇಲಿ ಬಂದಂತಾಗಿ ಬೆಚ್ಚಿಬಿದ್ದಳು. ಎಲ್ಲದರದಿಂದ ತಪ್ಪಿಸಿಕೊಂಡು ಆದಷ್ಟು ಬೇಗ ಹೋಗಬೇಕೆಂಬ ಆತುರದಲ್ಲಿ ಚಪ್ಪಲಿ ಮೆಟ್ಟಿಕೊಂಡು ಹೊರಬಂದಳು. ಎಷ್ಟೋ ದಿನಗಳನಂತರ



ದೇವರು

ಅವಿವಾಹಿತಳಾದ
ಅವಳು ದೇವರಲ್ಲಿ
ನಿತ್ಯ ಬೇಡುವಳು
'ದೇ–ವರ' ಎಂದು.

— ಕೃಷ್ಣಮೂರ್ತಿ ಬೊಂಗಾಳೆ

ಮನಪೂರ್ವಕವಾಗಿ ಅಲಂಕಾರ ಮಾಡಿಕೊಂಡಿದ್ದಳು. ದೂರದಲ್ಲಿ ಹೋಗುತ್ತಿದ್ದ ಆಟೋವನ್ನು ಕರೆದು ಅಡ್ರೆಸ್ ಹೇಳಿ ಹತ್ತಿ ಕುಳಿತುಕೊಂಡಳು. ಮನಸ್ಸಿನ ತುಂಬ ಅಳುಕು, ಏನೋ ಭಯ. ತಾನು ಮಾಡುತ್ತಿರುವುದು ಸರಿಯೋ ತಪ್ಪು ಯೋಚಿಸುತ್ತ ಕುಳಿತುಕೊಂಡಿದ್ದವಳಿಗೆ ಆಟೋ ನಿಂತಾಗಲೇ ಎಚ್ಚರವಾಗಿದ್ದು. ಹಣ ಕೊಟ್ಟು ಕೆಳಗಿಳಿದು ಪರ್ಸ್‌ನಿಂದ ಅಡ್ರೆಸ್ ತೆಗೆದು ಒಮ್ಮೆ ನೋಡಿದಳು. ಸರಿಯಾಗಿತ್ತು. ಮನೆಯತ್ತ ಒಮ್ಮೆ ದೃಷ್ಟಿ ಹರಿಸಿದಳು. 'ಪ್ರಹರ್ಷ' ಗೇಟಿನ ಬಳಿಯ ಪಲಕ ಎದ್ದು ಕಾಣುತ್ತಿತ್ತು. ಎರಡಂತಸ್ತಿನ ದೊಡ್ಡದಾದ, ಭವ್ಯ ಮನೆ. ಫ್ಯಾಕ್ಟರಿಗಳ ಮಾಲೀಕ ಎಂದ ಮೇಲೆ ಮನೆ ಜೋರಾಗಿರಬೇಕೆಂದು ತಿಳಿದಿದ್ದ ಕೃತ್ತಿಕಾಳಿಗೆ ಆಶ್ಚರ್ಯವೇನೂ ಆಗಲಿಲ್ಲ. ಮನೆಯ ಮುಂದಿನ ಹೂವಿನ ತೋಟ ನೋಡುತ್ತ ನಿಂತಿದ್ದವಳನ್ನು ಗೂರ್ಖಾನ ಧ್ವನಿ ಎಚ್ಚರಿಸಿತು.

"ಯಾರು ಬೇಕಿತ್ತು."

"ಅದು... ಸಾಹೇಬರು ಮನೇಲಿದ್ದಾರ?"

ಗೂರ್ಖ ಅವಳತ್ತ ಒಮ್ಮೆ ಅಚ್ಚರಿಯಿಂದ ನೋಡಿದ.

ಬಹುಶಾ ಯಾರೋ ಡೊನೇಶನ್ ಕೇಳಲು ಬಂದಿರಬೇಕು ಎಂದುಕೊಂಡನೇನೋ?

"ಅರೇ ಕೃತ್ತಿಕಾ."

ಪರಿಚಿತ ಧ್ವನಿಗೆ ಕೃತ್ತಿಕಾ ಅತ್ತ ತಿರುಗಿದಳು. ರಾಹುಲ್ ನಿಂತಿದ್ದ. ಸದ್ಯ ಎಂದು ಕೃತ್ತಿಕಾ ನಿರಾಳವಾಗಿ ಉಸಿರಾಡಿದಳು. ಸಾಹೇಬರಿಗೆ ಬೇಕಾದವರು ಎಂದು ಗೊತ್ತಾದ ತಕ್ಷಣ ಘೂರ್ಖನ ಚರ್ಯೆಯೇ ಬದಲಾಯಿಸಿ ಹೋಯಿತು, ಸೆಲ್ಯೂಟ್ ಹೊಡೆದು ಬಾಗಿಲು ತೆರೆದ.

"ಬನ್ನಿ ಬನ್ನಿ."

ರಾಹುಲ್ ಸ್ವಾಗತಿಸಿದ.

ಒಂದು ಕ್ಷಣ ಕೃತ್ತಿಕಾ ಅಲ್ಲೇ ನಿಂತಳು. ತಾನು ಹೀಗೆ ಬಂದದ್ದು ಸರಿಯಾಯಿತೇ, ರಾಹುಲ್ ಏನು ತಿಳಿದುಕೊಂಡನೋ ಏನೋ. ಮನಸ್ಸು ಹುಚ್ಚೆದ್ದು ಕುಣಿಯಿತು ಎಂದು ತಾನು ಅದು ಹೇಳಿದ ಹಾಗೆ ಕೇಳುವುದೇ, ಹಿಂತಿರುಗಿ ಹೋಗಿಬಿಡಲೇ? ಎಂದು ಒಂದು ಕ್ಷಣ ಯೋಚಿಸಿದಳು. ಅನಂತರ ತನ್ನ ಯೋಚನೆಗೆ ತನಗೆ ನಗು ಬಂದಿತು. ಹಾಗೆ ಮಾಡಿದರೆ ರಾಹುಲ್‌ನ ಮುಖ ಹೇಗಾಗಬಹುದು?

"ಅರೇ ಯಾಕೆ ಅಲ್ಲೇ ನಿಂತುಬಿಟ್ರಿ, ಬನ್ನಿ ಬನ್ನಿ."

ಕೃತ್ತಿಕಾ ಅವನನ್ನು ಹಿಂಬಾಲಿಸಿದಳು.

"ರಂಗಪ್ಪ ರಂಗಪ್ಪ."

ರಾಹುಲ್ ಜೋರಾಗಿ ಕರೆದ.

ಡ್ರೈವರ್ ರಂಗಪ್ಪ ಬಂದು ಅವನ ಮುಂದೆ ವಿನೀತ ಭಾವದಿಂದ ನಿಂತ.

"ಹೋಗಿ ಪಿಂಕೀನಾ ಸ್ಕೂಲಿಂದ ಕರೆದುಕೊಂಡು ಬಾ." ಕಾರಿನ ಕೀಯನ್ನು ಅವನಿಗಿತ್ತ.

"ಬನ್ನಿ" ಎನ್ನುತ್ತ ಕೃತ್ತಿಕಾಳನ್ನು ಒಳಗೆ ಕರೆದೊಯ್ದ. ಮನೆಯ ಅಂದಚಂದಕ್ಕೆ ಬೆರಗಾದಳು. ಈ ಮನೆಯ ಒಂದೊಂದು ಫರ್ನೀಚರ್ ಬೆಲೆ ನನ್ನ ವರ್ಷದ ಸಂಬಳವಾಗಬಹುದು ಎಂದು ಲೆಕ್ಕ ಹಾಕಿದಳು. ಬೆಲೆ ಬಾಳುವ ಪೀಠೋಪಕರಣಗಳು, ಅದಕ್ಕೆ ಮ್ಯಾಚ್ ಆಗುವಂತಹ

ಕುಶನ್‌ಗಳು, ಇಂಪೋರ್ಟೆಡ್ ಬಟ್ಟೆಯ ಪರದೆಗಳು, ಶೋಕೇಸಿನಲ್ಲಿ ಜೋಡಿಸಿದ ಹಿತ್ತಾಳೆಯ ಅಲಂಕಾರಿಕ ವಸ್ತುಗಳು ಕೃತ್ತಿಕಾಳಿಗೆ, ಇವನ್ನು ನೋಡಿ ತಲೆ ತಿರುಗಿದಂತಾಯಿತು. ಇಂತಹುದನ್ನು ಅವಳು ಕೇವಲ ಸಿನಿಮಾದಲ್ಲಿ ಮಾತ್ರ ನೋಡಿದ್ದಳು.

"ಪಿಂಕಿಯನ್ನು ಸ್ಕೂಲಿನಿಂದ ಕರೆದುಕೊಂಡು ಬರಬೇಕೆಂದು ಹೊರಟಿದ್ದೆ. ಅಪರೂಪಕ್ಕೆ ಮನೇಲಿದ್ದೆ.''

ಕಣ್ಣರಳಿಸಿ ಮನೆಯ ಅಂದಚೆಂದವನ್ನು ವೀಕ್ಷಿಸುತ್ತಿದ್ದ ಕೃತ್ತಿಕಾಳನ್ನು ರಾಹುಲ್‌ನ ಧ್ವನಿ ಈ ಲೋಕಕ್ಕೆ ಎಳೆದು ತಂದಿತು.

ನಾನು ಬಂದಿದ್ದರಿಂದ ತೊಂದರೆಯಾಯಿತೇನೋ ಕೃತ್ತಿಕಾ ಚಡಪಡಿಸಿದಳು.

"ಹೇಗಿದ್ದರೂ ಡ್ರೈವರ್ ಹೋಗಿದ್ದಾನೆ. ಕರೆದುಕೊಂಡು ಬರ್ತಾನೆ ಇನ್ನೈದು ನಿಮಿಷದಲ್ಲಿ ಬರ್ತಾಳೆ.''

ಅವಳ ಚಡಪಡಿಕೆಯನ್ನು ಅರ್ಥ ಮಾಡಿಕೊಂಡವನಂತೆ ರಾಹುಲ್ ಹೇಳಿದ. ಒಂದು ಕ್ಷಣ ಅವನ ದೃಷ್ಟಿ ತನ್ನ ಮೇಲೆ ಹರಿದಾಡಿದಾಗ ಕೃತ್ತಿಕಾಳಿಗೆ ಮುಜುಗರವಾಯಿತು. ಇಬ್ಬರ ಮಧ್ಯೆ ಮೌನ ಆವರಿಸಿತು. ಛೇ ಯಾರಾದರೂ ಒಂದು ಮೌನವನ್ನು ಮುರಿಯಬಾರದೇ ಕೃತ್ತಿಕಾ ಹಾರೈಸಿದಳು. ರಾಹುಲ್‌ನೊಡನೆ ಏನು ಮಾತನಾಡುವುದೆಂದು ಹೊಳೆಯಲಿಲ್ಲ. ಯಾತಕ್ಕೆ ಬಂದದ್ದು ಎಂದು ಕೇಳಿದರೆ ಏನು ಹೇಳುವುದು? ನಿಜ ಹೇಳಿದರೆ ಅಪಾರ್ಥ ಮಾಡಿಕೊಂಡರೆ? ಇಕ್ಕಟ್ಟಿನಿಂದ ಪಾರಾಗಲು ಟೀಪಾಯ್ ಮೇಲಿದ್ದ ಪತ್ರಿಕೆಯೊಂದನ್ನು ತೆಗೆದುಕೊಂಡು ಓದುತ್ತಿರುವವಳಂತೆ ನಟಿಸಿದಳು.

"ಡ್ಯಾಡಿ.''

ಧ್ವನಿ ಕೇಳಿ ಬಂದಾಗ ಬಾಗಿಲಿನತ್ತ ದೃಷ್ಟಿ ಹರಿಸಿದಳು. ನಾಲ್ಕು ವರ್ಷದ ಹೆಣ್ಣು ಮಗುವೊಂದು ನಿಂತಿತ್ತು. ಒಮ್ಮೆ ನೋಡಿದರೆ ಇನ್ನೊಮ್ಮೆ ನೋಡಬೇಕೆನಿಸುವಷ್ಟು ಮುದ್ದಾಗಿದ್ದ ಮಗುವನ್ನು ನೋಡಿ ಮಗಳೆಂದು ಕೃತ್ತಿಕಾ ಊಹಿಸಿದಳು. ರಾಹುಲ್‌ನ ಹೋಲಿಕೆಯಂತೂ ಇಲ್ಲ. ಎಲ್ಲ ತಾಯಿಯಂತಿರಬೇಕು. ಮಗುವೇ



ಸಮಯ ಮತ್ತು ಪರಿಸರಗಳೇ ಮನುಷ್ಯನನ್ನು ಸಬಲ ಮತ್ತು ನಿರ್ಬಲನನ್ನಾಗಿ ಮಾಡುತ್ತವೆ. —ಕಾರ್ಲೈಲ್

ಉನ್ನತ ಎಂಬುದು ಸುಲಭ ಸಾಧ್ಯವಲ್ಲ, ಉನ್ನತ ಸಾಧನೆಗೆ ಶಾಶ್ವತ ಶ್ರಮ ಅಗತ್ಯ. —ಡಾ. ಜಾನ್ಸನ್

ವ್ಯಾಪಾರಕ್ಕೆ ಹೋದಾಗ ನಿನ್ನ ಕಣ್ಣನ್ನು ಉಪಯೋಗಿಸು, ಕಿವಿಗಳನ್ನಲ್ಲ. —ಅನಾಮಿಕ

ಕಾಲಗತಿಯು ಚೆನ್ನಾಗಿದ್ದರೆ ಹುತ್ತದಲ್ಲಿಯ ಹಾವು ಕೂಡ ಹೂಮಾಲೆಯಾಗುತ್ತದೆ. —ಸುಭಾಷಿತ

ಸಂಗ್ರಹ : ಎಸ್. ಆಶಾ

ಇಷ್ಟು ಮುದ್ದಾಗಿರುವಾಗ ತಾಯಿ ಇನ್ನೆಷ್ಟು ಸುಂದರಿಯಾಗಿರಬೇಡ. ರಾಹುಲ್‌ನ ಹೆಂಡತಿಯನ್ನು ನೋಡಲು ಕೃತ್ತಿಕಾಳ ಮನ ಕಾತರಿಸಿತು.

"ನನ್ನ ಮಗಳು ಮೇಘನಾ. ನಾವೆಲ್ಲ ಪ್ರೀತಿಯಿಂದ ಪಿಂಕೀಂತ ಕರೀತೀವಿ. ಪಿಂಕಿ ಆಂಟಿಗೆ ನಮಸ್ತೆ ಹೇಳು."

ಮಗು ಮುದ್ದಾಗಿ ತನ್ನೆರಡು ಕೈಯನ್ನು ಜೋಡಿಸಿ 'ನಮಸ್ತೆ' ಎಂದಾಗ ಅದರ ಮುಗ್ಧತೆಗೆ ಮಾರು ಹೋದ ಕೃತ್ತಿಕಾ ತನಗರಿವಿಲ್ಲದಂತೆ ಅದನ್ನು ಎತ್ತಿಕೊಂಡು, ತೊಡೆ ಮೇಲೆ ಕೂರಿಸಿಕೊಂಡು ಹೂ ಮುತ್ತನಿತ್ತಳು.

"ಎಷ್ಟನೇ ಕ್ಲಾಸ್ ಪುಟ್ಟಿ ನೀನು?"

"ಮೂರನೇ ಕ್ಲಾಸ್."

ಮೇಘಾನಳ ಉತ್ತರಕ್ಕೆ ಕೃತ್ತಿಕಾ ಆಶ್ಚರ್ಯದಿಂದ ರಾಹುಲ್‌ನ ಮುಖ ನೋಡಿದಳು.

"ಅವಳಿಗೆ ಬೇಗ ದೊಡ್ಡವಳಾಗಿ ಬಿಡಬೇಕಂತೆ. ಯಾರೋ ಅವಳಿಗೆ ಬೇಗ ಬೇಗ ಪಾಸ್ ಮಾಡಿಕೊಂಡು ಹೋದರೆ ದೊಡ್ಡವಳಾಗುತ್ತೀ ಅಂದರಂತೆ. ಅದಕ್ಕೆ ಎಲ್.ಕೆ.ಜಿ. ಅನ್ನುತ್ತಿದ್ದವಳು ಈಗ ಮೂರನೇ ಕ್ಲಾಸ್ ಅನ್ನುತ್ತಾಳೆ. ನಾಳೆ ಕೇಳಿದರೆ ಆರನೇ ಕ್ಲಾಸ್ ಅಂದ್ರೂ ಅಂದಾಳು. ಅವರಜ್ಜಿಗಂತೂ ಮೊಮ್ಮಗಳು ಹೇಳಿದ್ದೇ ಸರಿ. ನಮ್ಮನೇಲಿ ನಿಜವಾದ ಬಾಸ್ ಇವಳೇ."

ರಾಹುಲ್ ನಕ್ಕು ಹೇಳಿದ.

ಅಷ್ಟರಲ್ಲಿ ಆಳು ಕಾಫಿ, ತಿಂಡಿಯಿದ್ದ ಟ್ರೇಯನ್ನು ತಂದು ಕೃತ್ತಿಕಾಳ ಮುಂದಿಟ್ಟ ಕೃತ್ತಿಕಾಳಿಗೆ ಸಂಕೋಚವಾಯಿತು.

"ಪಿಂಕಿ ನೀನು ಕೈಕಾಲು ತೊಳೆದು, ಬಟ್ಟೆ ಬದಲಾಯಿಸು ಹೋಗು. ಬಾಯಮ್ಮ." ಮಗಳಿಗೆ ಹೇಳಿ ಕೆಲಸದಾಳು ಬಾಯಮ್ಮನನ್ನು ಕೂಗಿದ.

"ಡ್ಯಾಡೀ ನೀನೂ ಬಾ." ಮೇಘನಾ ತಂದೆಯ ಕೈ ಹಿಡಿದು ಎಳೆದಳು.

"ನಾನು ಮನೇಲಿದ್ರೆ ಹೀಗೇನೆ. ಎಲ್ಲದಕ್ಕೂ ನಾನೇ ಬೇಕು. ಒಂದ್ನಿಮಿಷ ಬಂದ್ಬಿಟ್ಟೆ. ಕಾಫಿ ತಣ್ಣಗಾಗುತ್ತೆ ತೆಗೆದುಕೊಳ್ಳಿ." ಉಪಚರಿಸಿದ.

"ಆಂಟಿ ನಾನು ಬರುವವರೆಗೂ ನೀವು ಹೋಗಬಾರದು."

ಕೃತ್ತಿಕಾಳಿಗೆ ಆಜ್ಞಾಪಿಸಿ ತಂದೆಯ ಹಿಂದೆ ಒಳಗೆ ಹೋದಳು. ಮಗುವಿನ ಮುಗ್ಧ ಅಲೆಗೆ ಕೃತ್ತಿಕಾ ಮರುಳಾದಳು. ಮೇಘನಾ ಪುನಾ ಬರುವುದರೊಳಗೆ ಕೃತ್ತಿಕಾಳ ಕಾಫಿ, ತಿಂಡಿ ಎರಡೂ ಖಾಲಿಯಾಗಿತ್ತು. ರಾಹುಲ್‌ನ ಹೆಂಡತಿ ಬಗ್ಗೆ ಯೋಚಿಸುತ್ತಲೇ ಕೃತ್ತಿಕಾ ಕುಳಿತಿದ್ದಳು. ಶ್ರೀಮಂತರ ಮನೆ ಹೆಣ್ಣು. ಮನೇಲಿದ್ದಾಳೋ ಇಲ್ಲವೋ ಅಥವಾ ಯಾವುದಾದರೂ ಕ್ಲಬ್‌ಗೆ ಹೋಗಿರಬೇಕು. ಇಲ್ಲದಿದ್ದರೆ ಮಗಳು ಬಂದ ತಕ್ಷಣವಾದರೂ ಬರಬೇಕಿತ್ತು ಅಥವಾ ನನ್ನಂತಹವಳನ್ನು ಏನು ಮಾತನಾಡಿಸುವುದು ಎಂದು ಹೊರಗೆ ಬಂದಿಲ್ಲವೇನೋ. ರಾಹುಲ್ ತುಂಬ ಅದೃಷ್ಟವಂತ ಎಂದು ಅವಳ ಮನಸ್ಸು ಒಪ್ಪಿಕೊಂಡಿತು.

"ಒಬ್ಬರೇ ಕುಳಿತುಕೊಂಡು ಬೋರಾಯಿತೇನೋ, ಬನ್ನಿ ನಮ್ಮ ತಾಯಿಯ ಪರಿಚಯ ಮಾಡಿ ಕೊಡ್ತೀನಿ." ರಾಹುಲ್ ಹೇಳಿದ.

"ಹಾಗೇನಿಲ್ಲ, ಮ್ಯಾಗಜಿನ್ಸ್ ನೋಡ್ತಾ ಇದ್ದೆ." ಕೃತ್ತಿಕಾ ರಾಹುಲ್‌ನನ್ನು ಹಿಂಬಾಲಿಸಿದಳು.

"ಡ್ಯಾಡೀ ನಾನೂ..." ಮೇಘನಾ ರಾಗ ಎಳೆದಳು.

"ನನ್ನ ಮುದ್ದು ರಾಜಕುಮಾರಿನ ಬಿಟ್ಟು ಹೋದವರುಂಟೆ, ಆದರೆ ಅಲ್ಲಿ ಅಜ್ಜಿಗೆ ತೊಂದರೆ ಮಾಡಬಾರದು. ಅಜ್ಜಿಗೆ ಏಟು ಆಗಿದೇಂತ ಗೊತ್ತು ತಾನೇ?"

"ದೂರಾನೇ ಕೂತಿರ್ತೀನಿ. ಅಜ್ಜಿನ ಕಥೆ ಹೇಳೂಂತ ಕೇಳೋದಿಲ್ಲ. ಈ ಆಂಟಿ ಕೈ ಹಿಡಿದುಕೊಂಡೇ ಇರಲಾ?"

ಮುಗ್ಧವಾಗಿ ಕೇಳಿದಾಗ ರಾಹುಲ್ ಮಗಳನ್ನು ಎತ್ತಿಕೊಂಡ. ಮಹಡಿ ಮೇಲೆ ರೂಮೊಂದರ ಮುಂದೆ ನಿಂತು ಬಾಗಿಲನ್ನು ತಳ್ಳಿ ತನ್ನ ಹಿಂದೆ ಬರುವಂತೆ ಕೃತ್ತಿಕಾಳಿಗೆ ಸಂಜ್ಞೆ ಮಾಡಿದ.

ಸುಮಾರು ಎಪ್ಪತ್ತರ ಪ್ರಾಯದ ವೃದ್ಧೆಯೊಬ್ಬರು ಮಲಗಿದ್ದರು. ಬಾಗಿಲು ತಳ್ಳಿದ ಶಬ್ದಕ್ಕೆ ಎಚ್ಚರವಾಗಿ 'ಯಾರು' ಎಂದು ಕೇಳಿದರು.

"ನಾನಮ್ಮ."

"ಬಾಪ್ಪ."

ಕ್ಷೀಣವಾಗಿ ಹೇಳುತ್ತ ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದರು.

"ಬೇಡಮ್ಮ ಎದ್ದೇಳಬೇಡ. ನನ್ನ ಆಫೀಸಿನವರು ಬಂದಿದ್ದರು. ನಿನ್ನ ಪರಿಚಯ ಮಾಡಿಸೋಣಾಂತ ಬಂದೆ. ಔಷಧಿ, ಮಾತ್ರೆ ಎಲ್ಲ ಸರಿಯಾಗಿ ತಗೋತಾ ಇದ್ದೀಯಾ ತಾನೇ?"

ಮೇಘನಾಳನ್ನು ಕೆಳಗಿಳಿಸಿ ತಾಯಿ ಮೇಲೇಳಲು ಬಿಡದೆ ಹಾಗೆ ಅಲ್ಲೇ ದಿಂಬೊಂದನ್ನು ತಲೆಗೆ ಆಧಾರವಾಗಿ ಕೊಟ್ಟ.

"ವಯಸ್ಸಾದ ಮೇಲೆ ಯಾವ ಔಷಧಿ ಮಾತ್ರೆಯಪ್ಪ. ದೇವರು ಒಂದ್ಸಲ ಕರೆಸಿ ಕೊಂಡ್ರೆ ಸಾಕಾಗಿದೆ. ಅವನಿಗಿನ್ನೂ ಕರುಣೆ ಬಂದಿಲ್ಲ."

ವ್ಯಥೆಯಿಂದ ನುಡಿದ ಅವರನ್ನೇ ಕೃತ್ತಿಕಾ ನೋಡಿದಳು. ನೋಡಿದ ತಕ್ಷಣ ಗೌರವ ಹುಟ್ಟಿಸುವಂತಹ ವ್ಯಕ್ತಿತ್ವ. ಒಂದಾನೊಂದು ಕಾಲದಲ್ಲಿ ಸುಂದರಿಯಾಗಿದ್ದರೆಂದು ಧಾರಾಳವಾಗಿ ಹೇಳಬಹುದಿತ್ತು.

"ಅಮ್ಮ ಇವರು ಕೃತ್ತಿಕಾಂತ. ನನ್ನ



ಗುಂಡ : ನಿಮ್ಮ ಬಳಿ ನಿಕ್ಕರ್ ಸಿಗುತ್ತವೆಯೋ?

ಸೇಲ್ಸ್‌ಗರ್ಲ್ : ಇದೆ ಸಾರ್

ಎಂದು ಉತ್ತರಿಸಿದ ಅವಳು ಅಲ್ಲಿ ಇಲ್ಲಿ ಹುಡುಕಿ ಗೊಬ್ಬರದಂತೆ ಬಿದ್ದಿದ್ದ ಬಟ್ಟೆಯ ರಾಶಿಯಲ್ಲಿನ ಕೆಲ ಪ್ಯಾಂಟುಗಳನ್ನು ತಂದು ಗುಂಡನಿಗೆ ತೋರಿಸಿದಳು.

ಗುಂಡ : ಕೋಪದಿಂದ ಮೇಡಂ ನಾ ಕೇಳಿದ್ದು ನಿಕ್ಕರ್ ಪ್ಯಾಂಟಲ್ಲ ಎಂದು ಬಹಳ ಸಿಡಿಮಿಡಿಗೊಂಡ.

ಸೇಲ್ಸ್‌ಗರ್ಲ್ : ಒಮ್ಮೆ ನೀರಿಗೆ ಹಾಕಿ ಸಾರ್ ನಿಕ್ಕರ್ ಯಾಕೆ, ಅಂಡರ್‌ವೇರ್ ಆಗುತ್ತದೆ.

— ಡಿ. ಚಂದ್ರಕುಮಾರ್

ಆಫೀಸಿನಲ್ಲಿ ಸ್ಟೆನೋ ಆಗಿದ್ದಾರೆ.'' ತಾಯಿಗೆ ಪರಿಚಯಿಸಿದ.

"ಬಾಮ್ಮ ಕೂತ್ಕೊ.''

ಹಾಸಿಗೆಯ ಪಕ್ಕದಲ್ಲಿದ್ದ ಕುರ್ಚಿಯತ್ತ ಕೈ ತೋರಿಸಿದರು. ಕೃತ್ತಿಕಾ ಅದರ ಮೇಲೆ ಕೂರದೆ ಅವರ ಪಕ್ಕದಲ್ಲಿ ಕುಳಿತುಕೊಂಡು ಅವರ ಕೈ ಹಿಡಿದುಕೊಂಡಳು. ಇದ್ದಕ್ಕಿದ್ದ ಹಾಗೆ ಅವಳ ತಾಯಿಯ ನೆನಪಾಯಿತು.

"ನಾನು ನೋಡೇ ಇಲ್ಲವಲ್ಲ. ಹೊಸಬಳೇನಮ್ಮ, ಅವತ್ತು ಪಾಪು ಬರ್ತ್‌ಡೇಗೂ ಬಂದ ಹಾಗೆ ನೆನಪಿಲ್ಲವಲ್ಲ.''

ಆಕೆ ಹೇಳಿದಾಗ ಕೃತ್ತಿಕಾಳಿಗೆ ಗಂಟಲಲ್ಲಿ ಏನೋ ಸಿಕ್ಕಿಹಾಕಿಕೊಂಡ ಹಾಗಾಯಿತು. ಅವಳು ಉತ್ತರ ಹೇಳಬೇಕೆನ್ನುವಷ್ಟರಲ್ಲಿ ರಾಹುಲ್‌ನೇ ಅವಳ ನೆರವಿಗೆ ಬಂದ.

"ಬಂದು ನಾಲ್ಕೈದು ತಿಂಗಳಾಯಿತಷ್ಟೇ. ಪಾರ್ಟಿ ದಿನ ಅವರ ಆರೋಗ್ಯ ಸರಿ ಇರಲಿಲ್ಲವಂತೆ ಬಂದಿರಲಿಲ್ಲ.''

ಅಷ್ಟರಲ್ಲಿ ಆಳು ಬಂದು ರಾಹುಲ್‌ಗೆ ಫೋನ್ ಬಂದಿರುವುದಾಗಿ ಹೇಳಿದ.

"ಮಾತಾಡ್ತ ಇರಿ, ಬಂದ್ಬಿಟ್ಟೆ'' ಎನ್ನುತ್ತ ಹೊರಗೆ ಹೋದ.

ತಂದೆಯ ಮಾತನ್ನು ಮೀರದೆ ತುಟಿ ಪಿಟಕೆನ್ನದೆ ದೂರ ನಿಂತುಕೊಂಡು ಪಿಳಿ ಪಿಳಿ ಕಣ್ಣು ಬಿಡುತ್ತ ತನ್ನನ್ನು, ಅಜ್ಜಿಯನ್ನು ನೋಡುತ್ತಿದ್ದ ಮೇಘಾನಾಳನ್ನು ಕಂಡು ಕೃತ್ತಿಕಾಳಿಗೆ ನಗು ಬಂತು. ಹತ್ತಿರ ಬರುವಂತೆ ಸನ್ನೆ ಮಾಡಿದಳು. ಅಷ್ಟು ಕರೆದದ್ದೇ ಸಾಕೆಂದು ಓಡಿ ಬಂದು ಕೃತ್ತಿಕಾಳ ತೊಡೆ ಮೇಲೆ ಕುಳಿತುಕೊಂಡಳು.

"ಏನೋಮ್ಮ, ಈ ಮಗುವಿಗಾಗಿ ಬದುಕಿರಬೇಕು ಅಷ್ಟೇ. ಅವನೋ ಹಟಮಾರಿ. ಹೇಳಿದ ಮಾತು ಒಂಚೂರೂ ಕೇಳುವುದಿಲ್ಲ. ಮೊದಲಿನಿಂದ ಒಬ್ಬನೇ ಮಗಾಂತ ಮುದ್ದು ಮಾಡಿದ್ದೇ ತಪ್ಪಾಯಿತು. ಇವನ ಯೋಚನೇಲಿ ಅರ್ಧವಾಗಿಬಿಟ್ಟೆ ನಾನು ತಾನೇ ಇನ್ನೆಷ್ಟು ದಿನ ಬದುಕಿರ್ತೀನಿ. ನೀನೇ ಹೇಳಮ್ಮ, ಇವತ್ತೋ, ನಾಳೆನೋ. ಇದೇನು ವಾಸಿಯಾಗೋ ಕಾಯಿಲೆ ಏನಲ್ಲ. ಇದ್ದೊಬ್ಬ ಮಗನ ಬಾಳು ಹೀಗಾಯಿತಲ್ಲ ಅಂತ ಯೋಚನೆ ಮಾಡಿ ಮಾಡಿ ಸಾಕಾಗಿ ಹೋಗಿದೆ. ಈ ಮಗು ಏನು ಕರ್ಮ ಮಾಡಿತ್ತೋ ಕಾಣೆ. ಅಪ್ಪ, ಅಮ್ಮ ಇದ್ರೂ ಇಲ್ಲದ್ದಂಗೆ ಇದೆ.''

ತುಂಬ ದಿನಗಳನಂತರ ತಮ್ಮ ಮನಸ್ಸಿನ ನೋವನ್ನೆಲ್ಲ ಹೊರ ಹಾಕುತ್ತಿದ್ದರು. ಕೃತ್ತಿಕಾಳಿಗೆ ಅವರ ಕಣ್ಣಲ್ಲಿ ನೀರು ಕಂಡು ವ್ಯಥೆಯೆನಿಸಿತು. ಬಹುಶಾ ತನಗೆ ವಿಷಯ ಗೊತ್ತಿದೆ ಎಂದು ತಿಳಿದುಕೊಂಡು ಎಲ್ಲ ಹೇಳ್ತಾ ಇದ್ದಾರೆ ಎಂದು ಊಹಿಸಿದಳು. ಆದರೆ ವಿಷಯವೇನೆಂದು ಅವಳಿಗೆ ಅರ್ಥವಾಗಲಿಲ್ಲ. ದೊಡ್ಡವರ ವಿಷಯ ತನಗ್ಯಾಕೆ ಎಂದು ಸುಮ್ಮನಾದಳು. ಬಹಳ ದಿನಗಳನಂತರ ಮಾತಿಗೆ ಜನ ಸಿಕ್ಕಿದ್ದಕ್ಕೋ ಏನೋ ರಾಹುಲ್‌ನ ತಾಯಿಯ ಮಾತು ಅಡೆತಡೆಯಿಲ್ಲದೆ ಸಾಗಿತ್ತು. ತಮ್ಮ ಕಾಯಿಲೆ ವಿಷಯ, ಮಲಗಿದಲ್ಲೇ ಇರಬೇಕಾದ ಸ್ಥಿತಿ, ರಾಹುಲ್‌ನ ಕೋಪ, ಮೊಮ್ಮಗಳ ತುಂಟಾಟ ಎಲ್ಲ ಹೇಳಿದರು. ಕೃತ್ತಿಕಾಳೂ ತನ್ನಲ್ಲಿದ್ದ ತಾಳ್ಮೆಯನ್ನೆಲ್ಲ ಒಟ್ಟುಗೂಡಿಸಿಕೊಂಡು ಕೇಳಿದಳು. ಅವರ ಮನೋಸ್ಥಿತಿ ಅವಳಿಗರ್ಥವಾಗಿತ್ತು. ಮೇಘನಾ ಮೌನವಾಗಿ ಅಜ್ಜಿಯ ಮಾತನ್ನೇ ಕೇಳುತ್ತ ಕುಳಿತಿದ್ದಳು. ಅಷ್ಟರಲ್ಲಿ ರಾಹುಲ್

ಬಂದ.

"ಅಮ್ಮ ನಿನಗೆ ಎಷ್ಟೋ ಸಾರಿ ಹೇಳಿದ್ದೇನೆ. ಆ ಮಗು ಎದುರಿಗೆ ಏನೇನೋ ಮಾತನಾಡಬೇಡಾಂತ. ಆದ್ರೆ ನೀನು ಕೇಳುವುದಿಲ್ಲ. ಗೊತ್ತಿಲ್ಲದ ಮಗು ತಲೆಗೆ ನಾವ್ಯಾಕೆ ಏನೇನೋ ತುಂಬಬೇಕು?'' ತಾಯಿ ಮೇಲೆ ರೇಗಿದ.

"ನೋಡಮ್ಮ ಹೇಗೆ ರೇಗ್ತಾನೇ, ಇವನಿಗೇನು ಹೊರಗೆ ಹೋಗ್ತಾನೆ. ಹೇಗೋ ಮರೆತ ಹಾಗೆ ಇರ್ತಾನೆ. ಸದಾ ಹಾಸಿಗೇಲಿ ಬಿದ್ದಿರೋ ನಾನು ಯೋಚನೆ ಮಾಡದೆ ಇನ್ನೇನು ಮಾಡಲಿ ನೀನೇ ಹೇಳಮ್ಮ. ಈ ಮುದುಕಿ ಹತ್ತಿರ ಮಾತಾಡೋಕೆ ಯಾರು ತಾನೇ ಬರ್ತಾರೆ?''

ತಾಯಿಯ ಅಳುವ ಧ್ವನಿ ಕೇಳಿ ರಾಹುಲ್ ಮೆತ್ತಗಾದ.

"ಅದಕ್ಕಲ್ಲಮ್ಮ ನಾನು ಹೇಳಿದ್ದು, ಆಯಾಸ ಮಾಡ್ಕೋಬೇಡೀಂತ ಡಾಕ್ಟರ್ ಹೇಳಿಲ್ವ? ನೀನೂ ಇಲ್ಲಸಲ್ಲದ ಯೋಚನೇನ ತಲೆಗೆ ಅಂಟಿಸಿಕೊಂಡು ಕೊರಗ್ತೀಯ. ಆಗೋದನ್ನ ಯಾರಾದ್ರೂ ತಪ್ಪಿಸಲಿಕ್ಕೆ ಸಾಧ್ಯವ? ಪಿಂಕಿ ಮುಖ ನೋಡು ಹೇಗೆ ಸಪ್ಪಗಾಯಿತು.''

ವಿಷಯ ಎತ್ತತ್ತಲೋ ಹೋಗುತ್ತ ಇರುವುದು ಕೃತ್ತಿಕಾಳಿಗೆ ಅರಿವಾಯಿತು. ಗಡಿಯಾರದತ್ತ ನೋಡಿದಳು.

"ಸರ್ ನನಗಿನ್ನು ಲೇಟಾಗುತ್ತೆ, ನಾನಿನ್ನು ಬರ್ತೀನಿ. ಅಮ್ಮ ಬರ್ತೀನಿ'' ಎನ್ನುತ್ತ ಮೇಲೆದ್ದಳು.

"ನನ್ನ ಪುರಾಣ ಕೇಳಿ ಬೇಜಾರಾಯಿತೇನೋ, ಆಗಾಗ ಬರ್ತಾ ಇರಮ್ಮ. ನಮ್ಮ ಮನಸಿನ ದುಃಖವನ್ನು ಇನ್ನೊಬ್ಬರ ಜೊತೆ ಹಂಚಿಕೊಂಡಾಗಲೇ ಸ್ವಲ್ಪ ನೆಮ್ಮದಿ ಸಿಗುವುದು. ಆದರೆ ಇದೆಲ್ಲ ಗಂಡಸರಿಗೆ ಹೇಗೆ ಅರ್ಥವಾಗಬೇಕು.'' ಆಕೆ ನಿಟ್ಟುಸಿರು ಬಿಟ್ಟರು.

"ಖಂಡಿತ ಬರ್ತಾ ಇರ್ತೀನಿ. ನೀವೇನೂ ಯೋಚನೆ ಮಾಡಬೇಡಿ. ಮೊದಲು ನಿಮ್ಮ ಆರೋಗ್ಯದ ಕಡೆ ಗಮನ ಕೊಡಿ. ನೀವು ಎದ್ದು ಓಡಾಡುವ ಹಾಗಾದ್ರೆ ಎಷ್ಟೋ ಸಮಸ್ಯೆ ಬಗೆಹರಿದ ಹಾಗೆ. ಹಾಗಾಗಬೇಕಾದ್ರೆ ಇಲ್ಲಸಲ್ಲದ ಯೋಚನೇನ ನಿಮ್ಮ ತಲೆಯಿಂದ ಕಿತ್ತು ಹಾಕಬೇಕು. ಮನುಷ್ಯನಿಗೆ ಅರ್ಧ ಕಾಯಿಲೆ ಬರುವುದು ಚಿಂತೆಯಿಂದಲೇ'' ಎನ್ನುತ್ತ ಅವರಿಗೆ ಬೆಡ್‌ಶೀಟನ್ನು ಹೊದಿಸಿ ಕಾಲಿಗೆ ನಮಸ್ಕರಿಸಿದಳು. ಈ ಕ್ಷಣ ಯಾವ ಯೋಚನೆ ತನ್ನನ್ನು ಆ ರೀತಿ ಮಾಡುವಂತೆ ಪ್ರೇರೇಪಿಸಿತೋ ಅವಳಿಗೇ ಅರ್ಥವಾಗಲಿಲ್ಲ.

'ರಾಗಸಂಗಮ'

ಲಾಟರಿ ಡ್ರಾ – ೧೪೪ರ ವಿಜೇತರು



ರಾಧಾ ಭೀಮಾಜಿ ನರಗುಂದಕರ್
ವಿಶ್ವೇಶ್ವರಯ್ಯನಗರ
ಬೆಳಗಾವಿ.

"ದೇವರು ಒಳ್ಳೇದು ಮಾಡಲಮ್ಮ. ಅಂದ ಹಾಗೆ ನಿನ್ನ ಹೆಸರೇನೆಂದೆ?''

"ಕೃತ್ತಿಕಾ.''

ಮೇಘನಾಳನ್ನು ಎತ್ತಿಕೊಂಡು ಹೊರಬಂದಳು. ರಾಹುಲ್‌ನಾಗಲೇ ಕೆಳಗಿಳಿದು ಹೋಗಿದ್ದ.

"ಆಂಟಿ, ಆಂಟಿ.''

ಮೇಘನಾ ತನ್ನೆರಡು ಕೈಗಳಿಂದ ಕೃತ್ತಿಕಾಳ ಗದ್ದ ಹಿಡಿದು ಕರೆದಳು.

"ಮತ್ತೆ ಮತ್ತೆ ನಂಗೆ ಮಮ್ಮಿ ಇಲ್ವಾ, ಅಜ್ಜಿ ಕೇಳಿದ್ರೆ ದೂರದಲ್ಲಿ ಇದ್ದಾರೇಂತ ಹೇಳ್ತಾರೆ. ಡ್ಯಾಡಿನ ಕೇಳಿದ್ರೆ ಬಯ್ತಾರೆ. ನಮ್ಮ ಕ್ಲಾಸಿನಲ್ಲಿ ಎಲ್ಲರಿಗೂ ಮಮ್ಮಿ ಇದ್ದಾರೆ. ನನಗೆ ಮಾತ್ರ ಯಾಕಿಲ್ಲ ಆಂಟಿ? ನೀವು ನಮ್ಮ ಮಮ್ಮಿನ ನೋಡಿದ್ದೀರಾ?''

ಒಂದು ಕ್ಷಣ ಕೃತ್ತಿಕಾಳಿಗೆ ಸಂಕಟವಾಯಿತು. ವಿಷಯವೇ ಗೊತ್ತಿಲ್ಲದ ತಾನು ಈ ಮಗುವನ್ನು ಹೇಗೆ ಸಮಾಧಾನ ಮಾಡಬಲ್ಲೆ? ಅವರಮ್ಮ ಬದುಕಿದ್ದಾಳೋ ಸತ್ತಿದ್ದಾಳೋ ತನಗೆ ಗೊತ್ತಿಲ್ಲ.

"ಆಂಟಿ, ಮಮ್ಮಿ ವಿಷಯ ಕೇಳಿದೇಂತ ನಿಮಗೂ ಕೋಪ ಬಂತಾ? ಸಾರಿ ಆಂಟಿ ಇನ್ನೇಲೆ ಕೇಳುವುದಿಲ್ಲ.'' ಯೋಚಿಸುತ್ತಿದ್ದವಳು ಮೇಘನಾಳ ಮಾತಿಗೆ ಬೆಚ್ಚಿಬಿದ್ದಳು.

"ನೀನು ಜಾಣೆಯೋ ಕೋಣೆಯೋ?''

ಅವಳನ್ನು ಬಾಚಿ ತಬ್ಬಿಕೊಂಡು ಮುತ್ತಿಡುತ್ತ ಕೇಳಿದಳು.

"ಜಾಣೆ.''

"ಡ್ಯಾಡಿನ ಕಂಡ್ರೆ ನಿಂಗೆ ಇಷ್ಟ ತಾನೇ?''

"ತುಂಬ ಇಷ್ಟ.'' ಮೇಘನಾ ಮುದ್ದಾಗಿ ಉಲಿದಳು.

"ಹಾಗಿದ್ದ ಮೇಲೆ ಮಮ್ಮಿ ಬಗ್ಗೆ ಕೇಳಿ ಡ್ಯಾಡಿ ಮನಸ್ಸಿಗೆ ಬೇಜಾರು ಮಾಡಬಾರದು. ಚೆನ್ನಾಗಿ ಓದಿದರೆ ಬೇಗ ಎತ್ತರವಾಗಿ ಬೆಳೀತಿಯ. ಎಲ್ಲರಿಗಿಂತ ದೊಡ್ಡವಳಾಗ್ತೀಯ ಪ್ರಾಮಿಸ್.''

"ಪ್ರಾಮಿಸ್.''

ಅಷ್ಟರಲ್ಲಿ ಅವಳ ಕಣ್ಣಿಗೆ ರಾಹುಲ್ ಬಿದ್ದ. ಅವಳ ಮಾತು ಕೇಳಿಸಿಕೊಂಡಿದ್ದಾನೆಂಬುದರಲ್ಲಿ ಸಂಶಯವಿರಲಿಲ್ಲ. ಮುಖ ಗಂಭೀರವಾಗಿತ್ತು. ಮೇಘನಾಳನ್ನು ಕೆಳಗಿಳಿಸಿದಳು. ಅನಂತರ ಪರ್ಸ್‌ನಿಂದ ಪ್ಯಾಕೆಟ್ ಒಂದನ್ನು ತೆಗೆದು ಮೇಘನಾಳ ಕೈಗಿತ್ತಳು.

"ಅವತ್ತು ನಿನ್ನ ಬರ್ತಡೇ ದಿವಸ ನಾನು ಊರಿನಲ್ಲಿರಲಿಲ್ಲ, ಬರಲಾಗಲಿಲ್ಲ.'' ರಾಹುಲ್‌ನ ಕಣ್ಣು ತಪ್ಪಿಸುತ್ತ ಹೇಳಿದಳು.

"ಥ್ಯಾಂಕ್ಯೂ ಆಂಟಿ.''

ಮೇಘನಾ ಎರಡೂ ಕೈ ಚಾಚಿ ಆ ಪ್ಯಾಕೆಟನ್ನು ಹಿಡಿದುಕೊಂಡಳು.

"ಡ್ಯಾಡಿ ಡ್ಯಾಡಿ ಈ ಪ್ಯಾಕೆಟ್‌ನ ಬಿಚ್ಚಿ ನೋಡಲಾ?'' ಕುತೂಹಲ ತಡೆಯಲಾರದೆ ತಂದೆಯನ್ನು ಕೇಳಿದಳು.

"ಹೂಂ.'' ರಾಹುಲ್ ಅನ್ಯಮನಸ್ಕನಾಗಿ ಉತ್ತರಿಸಿದ.

ಮೇಘನಾ ಪ್ಯಾಕೆಟ್ ಬಿಚ್ಚಿದಳು.

“ಓಹ್ ಡ್ಯಾಡಿ, ಬಾರ್ಬಿ ಡಾಲ್ ಎಷ್ಟು ಚೆನ್ನಾಗಿದೆ.” ಗೊಂಬೆಗೆ ಮುತ್ತಿಟ್ಟಳು.

“ಸರ್, ನಾನಿನ್ನು ಬರ್ತೀನಿ.”

“ಒಂದ್ನಿಮಿಷ ಡ್ರೈವರ್ ನಿಮ್ಮನ್ನು ಬಿಟ್ಟು ಕೊಡ್ತಾನೆ. ಥ್ಯಾಂಕ್ ಎ ಲಾಟ್ ಫಾರ್ ಯುವರ್ ಅರೈವಲ್ ಅಂಡ್ ಪ್ರಸೆಂಟೇಶನ್.”

“ಆಂಟಿ ಆಂಟಿ ನಂಗೆ ಮನೇಲಿ ಬೇಜಾರಾಗುತ್ತೆ. ಬರ್ತಾ ಇರ್ತೀರ? ಡ್ಯಾಡಿ ಮನೇಲಿ ಇರೋದಿಲ್ಲ. ಅಜ್ಜಿಗೆ ಅಬು ಆಗಿದೆ. ಬಾಯಮ್ಮ ಹೇಳಿದ ಕಥೆಗಳನ್ನೇ ಹೇಳ್ತಾಳೆ.” ಕೆನ್ನೆಯುಬ್ಬಿಸಿ ಕೇಳಿದಾಗ ಕೃತ್ತಿಕಾಳಿಗೆ 'ಇಲ್ಲವೆನ್ನಲಾಗಲಿಲ್ಲ.

“ಖಂಡಿತ ಬರ್ತೀನಿ.”

ಆಶ್ವಾಸನೆಯಿತ್ತಳು.

* * * * *

ರಾಹುಲ್‌ನ ಮನೆಗೆ ಹೋಗಿ ಬಂದ ವಿಷಯವನ್ನು ಅದಿತಿಗೆ ಹೇಳುವುದೋ ಬೇಡವೋ ಕೃತ್ತಿಕಾ ತೊಳಲಾಡಿದಳು. ಅನಂತರ ಸದ್ಯಕ್ಕಂತೂ ಹೇಳುವುದು ಬೇಡ ಎಂದು ಸುಮ್ಮನಾದಳು. ಕೃತ್ತಿಕಾ ಮನೆಗೆ ಹೋಗಿಬಂದ ನಂತರ ರಾಹುಲ್‌ನನ್ನು ಆಫೀಸಿನಲ್ಲಿ ಭೇಟಿ ಮಾಡಿದರೂ ಅವಳು ಮನೆಗೆ ಬಂದೇ ಇಲ್ಲವೇನೋ ಎಂಬಂತೆ ವ್ಯವಹರಿಸಿದ್ದ. ಕೃತ್ತಿಕಾಳೂ ಆ ವಿಷಯವನ್ನು ಅಲ್ಲಿಗೇ ಮರೆತುಬಿಟ್ಟಳು. ಒಂದೆರಡು ಬಾರಿ ಮೇಘನಾಳ ಮುದ್ದು ಮುಖ ತೇಲಿ ಬಂದರೂ ದೊಡ್ಡವರ ಸಹವಾಸ ನನಗ್ಯಾಕೆ ಎಂದುಕೊಂಡು ಸುಮ್ಮನಾದಳು. ಜಗತ್ತಿನಲ್ಲಿ ಹಣ ಒಂದಿದ್ದರೆ ಸಾಕು ಎಲ್ಲವನ್ನು ಕೊಂಡುಕೊಳ್ಳಬಹುದು ಎಂದು ಯೋಚಿಸಿನಳು. 'ಅಷ್ಟಕ್ಕೂ ರಾಹುಲ್ ಏನು ನನ್ನನ್ನು ಬರಲು ಹೇಳಲಿಲ್ಲವಲ್ಲ. ನನ್ನ ಕೆಲಸ ಎಷ್ಟೋ ಅಷ್ಟು ನೋಡಿಕೊಂಡು ಹೋದರೆ ಸಾಕು. ಇಲ್ಲದ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡು ನಾನ್ಯಾಕೆ ಜನರ ನಾಲಿಗೆಗೆ ಆಹಾರವಾಗಲಿ, ಈಗ ತಾನೇ ಬದುಕನ್ನು ಹೊಸದಾಗಿ ಪ್ರಾರಂಭಿಸಿದ್ದೇನೆ.' ಅವಳ ಯೋಚನೆಗಳಿಗೆ ಅವಳಿಗೇ ನಗು ಬಂತು. ಆದರೂ ಅವಳಲ್ಲಿ ಒಂದು ಕುತೂಹಲ ಮಾತ್ರ ಹಾಗೆ ಉಳಿದು ಹೋಗಿತ್ತು. ರಾಹುಲ್‌ನ ಹೆಂಡತಿಯ ವಿಷಯ ಕೇಳಬೇಕೆಂದುಕೊಂಡು ಅದಿತಿಯತ್ತ ಒಂದೆರಡು ಬಾರಿ ಪ್ರಯತ್ನಿಸಿದ್ದಳು. ಅನಂತರ ಆಫೀಸಿನಲ್ಲಿ ಯಾರಾದರೂ ಕೇಳಿಸಿಕೊಂಡು ರಾಹುಲ್‌ನಿಗೆ



ಬಯಕೆ

ಗೆಳತಿ
ನನ್ನ ಬಯಕೆಯ
ಬಳ್ಳಿಗಳು
ಬಾಡುವ ಮುನ್ನ
ಅಮೃತಧಾರೆ
ಹೊತ್ತು ಬಾ.

— ಕಣಕೂರು ಕೆಂಪರಾಜ್

ಹೇಳಿದರೆ ಎಂಬ ಭಯದಿಂದ ಸುಮ್ಮನಾಗಿದ್ದಳು. ಅದಕ್ಕೂ ಸಮಯ ಒದಗಿ ಬಂತು. ರಾಹುಲ್ ಒಂದು ವಾರದ ಮಟ್ಟಿಗೆ ಫಾರಿನ್ ಟೂರ್ ಎಂದು ಹೊರಟು ಹೋಗಿದ್ದ. ಎರಡು ದಿನಗಳಿಂದಲೂ ಅದಿತಿ ಅಣ್ಣನ ಮಗನ ಬರ್ತ್‌ಡೇಗೆ ಬಟ್ಟೆ ತೆಗೆಯಲು ಜೊತೆಗೆ ಬರುವಂತೆ ಕೃತ್ತಿಕಾಳನ್ನು ಬಲವಂತ ಮಾಡುತ್ತಿದ್ದಳು. ಇವತ್ತು ಮಧ್ಯಾಹ್ನ ಪರ್ಮಿಶನ್ ಹಾಕಿ ಹೋಗೋಣವೆಂದು ಬೆಳಗ್ಗೆ ಆಫೀಸಿಗೆ ಬಂದಾಗಲೇ ಕೃತ್ತಿಕಾಳಿಗೆ ಸೂಚನೆ ಕೊಟ್ಟಿದ್ದಳು. ಗೆಳತಿಯ ಮನಸ್ಸು ನೋಯಿಸಲಾರದೆ ಒಪ್ಪಿಕೊಂಡಿದ್ದಳು. ಗಂಟೆ ಒಂದು ಹೊಡೆಯುವುದನ್ನೇ ಕಾಯುತ್ತಿದ್ದ ಅದಿತಿ ಅವಳ ಟೇಬಲಿನ ಬಳಿ ಬಂದಳು.

"ನಾನು ಇಬ್ಬರಿಗೂ ಪರ್ಮಿಶನ್ ತೆಗೆದುಕೊಂಡಿದ್ದೇನೆ. ರಾಗ ಎಳೀಬೇಡ ಎದ್ದೇಳು."

ಕೃತ್ತಿಕಾ ಏಳಲೇಬೇಕಾಯಿತು. ಅದಿತಿಗೇನೋ ಪ್ರೀತಿಸುವ ತಂದೆ ತಾಯಿ, ಅಣ್ಣ ತಮ್ಮಂದಿರಿದ್ದಾರೆ. ಬೇಗ ಮನೆಗೆ ಹೋದರೆ ಸಾಕು ಅವಳಿಗೆ. ಆದರೆ ತನಗೆ? ದಿನಾ ತನ್ನನ್ನು ಸ್ವಾಗತಿಸುವುದು ಮುಚ್ಚಿದ ಬಾಗಿಲು. ಕೃತ್ತಿಕಾ ನಿಟ್ಟುಸಿರು ಬಿಟ್ಟಳು. ಬಹುಶಾ ಎಲ್ಲದಕ್ಕೂ ಕೇಳಿಕೊಂಡಿರಬೇಕು ಯಾರ್‍ಯಾರಿಗೆ ಎಷ್ಟೆಷ್ಟು ಲಭ್ಯವೋ ಅಷ್ಟೇ ಎಂದುಕೊಳ್ಳುತ್ತ ಅದಿತಿಯನ್ನು ಹಿಂಬಾಲಿಸಿದಳು. ನಾಲ್ಕಾರು ಅಂಗಡಿ ಸುತ್ತಿದನಂತರ ಅದಿತಿ ಎರಡು ಜೊತೆ ರೆಡಿಮೇಡ್ ಬಟ್ಟೆಗಳನ್ನು ತೆಗೆದುಕೊಂಡಳು. ಕೃತ್ತಿಕಾಳ ಮನಸ್ಸು ಇಷ್ಟು ಬೇಗ ಮನೆಗೆ ಹೋಗಿ ಮಾಡುವುದೇಕೆಂದು ಆಗಲೇ ಯೋಚಿಸುತ್ತಿತ್ತು.

"ಕೃತ್ತಿಕಾ ಇಲ್ಲಿ ಎಲ್ಲಾದರೂ ಯಾವುದಾದರೂ ಹೋಟೇಲಿಗೆ ಹೋಗಿ ತಿಂಡಿ ತಿಂದು ಹೋಗೋಣವಾ?"

ಅದಿತಿ ಕೇಳಿದಾಗ ಮಧ್ಯಾಹ್ನ ಬರೀ ತಿಳಿಸಾರು ತಿಂದಿದ್ದ ಕೃತ್ತಿಕಾ ಬೇಡ ಎನ್ನಲಿಲ್ಲ. ಸುತ್ತಾಡಿದ್ದೂ ಜೊತೆಗೆ ಸೇರಿ ಅವಳ ಹೊಟ್ಟೆ ತಾಳ ಹಾಕುತ್ತಿತ್ತು. ಇಬ್ಬರೂ ಹೋಟೆಲ್‌ಗೆ ಹೋಗಿ ಫ್ಯಾಮಿಲಿ ರೂಂನಲ್ಲಿ ಕುಳಿತುಕೊಂಡರು. ಅದಿತಿ ತಿಂಡಿಗೆ ಆರ್ಡರ್ ಮಾಡಿದಳು.

"ಅದಿತಿ, ಅವತ್ತಿನಿಂದ ನಿನ್ನ ಕೇಳಬೇಕು ಕೇಳಬೇಕು ಎಂದುಕೊಂಡರೂ ಕೇಳಲಾಗದೆ ಸುಮ್ಮನಾದೆ."

ಅಲ್ಲಿಗೇ ನಿಲ್ಲಿಸಿದಾಗ ಅದಿತಿ ಏನೆಂಬಂತೆ ಹುಬ್ಬೇರಿಸಿದಳು.

"ಅದೇ ಬಾಸ್, ನಮ್ಮ ಬಾಸ್ ರಾಹುಲ್ ಫ್ಯಾಮಿಲಿ ಬಗ್ಗೆ ನಿನಗೇನಾದ್ರೂ ಗೊತ್ತಾ? ಅವರು ಸಾಂಸಾರಿಕ ವಿಷಯದಲ್ಲಿ ಅಷ್ಟೊಂದು ಸುಖಿಯಲ್ಲ ಅನ್ಸುತ್ತೆ. ಇಷ್ಟು ದಿನವಾದರೂ ಒಂದಿನವಾದ್ರೂ ಅವರ ಮಿಸೆಸ್ ಬಗ್ಗೆ ಯಾರೂ ಮಾತನಾಡಿದ್ದು ಕೇಳಿಲ್ಲ. ಆಕೆಯಾಗಲಿ ಎಲ್ಲೂ ಅವರ ಜೊತೆ ಬಂದದ್ದನ್ನು ನಾನು ನೋಡಿಲ್ಲ." ಪೀಠಿಕೆ ಹಾಕಿದಳು.

"ಓಹ್ ಅದಾ?"

ಅದಿತಿ ರಾಗ ಎಳೆದಾಗ ಕೃತ್ತಿಕಾ ಮೈಯೆಲ್ಲ ಕಿವಿಯಾಗಿರಿಸಿಕೊಂಡಳು.

"ತುಂಬ ಹಳೇ ವಿಷಯ, ಎಲ್ಲರಿಗೂ ಗೊತ್ತಿರೋ ವಿಷಯ, ನಿನಗೂ ಗೊತ್ತಿರಬೇಕು ಅಂದುಕೊಂಡೆ. ಹೆಂಡತಿ ಇದ್ದರಲ್ಲವೆ ಜೊತೇಲಿ ಕರೆದುಕೊಂಡು ಬರುವುದು. ಪಾಪ ನಮ್ಮ ಬಾಸ್ ಎಷ್ಟು ಒಳ್ಳೆಯವರು, ಅವರಿಗೆ ಹೀಗಾಗಬಾರದಿತ್ತು."

ಸುತ್ತು ಬಳಸಿ ಅದಿತಿ ಮಾತನಾಡಿದಾಗ ಈ ಪುಣ್ಯಾತ್ಮಗಿತ್ತಿಗೆ ವಿಷಯ ಹೇಳಲು

ಎಷ್ಟೊತ್ತು ಬೇಕಪ್ಪ ಎಂದು ಕೃತ್ತಿಕಾ ಮನದಲ್ಲೇ ಚಡಪಡಿಸಿದಳು.

"ಅಂದ್ರೆ ಅಂದ್ರೆ ಆಕೆ ತೀರಿ ಹೋದರಾ?''

"ಅಯ್ಯೋ ಹಾಗಾಗಿದ್ದರಾದ್ರೂ ಚೆನ್ನಾಗಿರ್‍ತಾ ಇತ್ತೇನೋ.'' ಅದಿತಿ ಸ್ವರ ತಗ್ಗಿಸಿದಳು.

"ಅವರು ಬಾಸನ್ನು ಮದುವೆಯಾಗೋ ಮುಂಚೆನೇ ಯಾರನ್ನೋ ಪ್ರೀತಿಸಿದ್ದರಂತೆ. ತಂದೆ ತಾಯಿ ಬಲವಂತಕ್ಕೆ ಇವರನ್ನು ಮದುವೆಯಾಗಿದ್ದರಂತೆ. ತುಂಬ ಶ್ರೀಮಂತರ ಮನೆ ಹೆಣ್ಣು ಅಂದಮೇಲೆ ಕೇಳ್ಬೇಕಾ? ಆಮೇಲೂ ಅವರ ಸಂಬಂಧ ಬೆಳೆದು ಮೇಘನಾ ಹುಟ್ಟಿದ ಮೇಲೆ ಇಬ್ಬರ ನಡುವೆ ಮಾತುಕತೆನೇ ನಿಂತು ಹೋಯಿತು ಅಂತ ಹೇಳ್ತಾರೆ. ಬಾಸ್ ಬುದ್ಧಿ ಹೇಳಿದರೂ ಕೇಳದ ಆಕೆ ಬದುಕಿನಲ್ಲಿ ಅವನೊಬ್ಬನಿಗೆ ಮಾತ್ರ ತನ್ನ ಮನಸ್ಸಿನಲ್ಲಿ ಜಾಗ ಎಂದಾಗ ಬಲವಂತದ ಬದುಕಿನಿಂದ ಪ್ರಯೋಜನ ವಿಲ್ಲವೆಂದು ಇಬ್ಬರೂ ಪರಸ್ಪರ ಒಪ್ಪಿಗೆಯಿಂದ ಡೈವೋರ್ಸ್ ತೆಗೆದುಕೊಂಡಿದ್ದಾರೆ. ಇದೆಲ್ಲ ನಡೆದು ಆಗಲೇ ಮೂರು ವರ್ಷವಾಯಿತು. ಮಗು ಮಾತ್ರ ನಿನ್ನ ವಶಕ್ಕೆ ಕೊಡುವುದಿಲ್ಲ ಎಂದು ತಾವೇ ಬೆಳೆಸುತ್ತಿದ್ದಾರೆ.

"ಈಗಾಕೆ ಎಲ್ಲಿದ್ದಾರೆ?''

"ನನಗೂ ಸರಿಯಾಗಿ ಗೊತ್ತಿಲ್ಲ. ಕೆಲವರು ಆಕೆ ಹಿಂದಿನ ಪ್ರೇಮಿನೇ ಮದುವೆಯಾಗಿ ಅಮೆರಿಕದಲ್ಲಿ ಸೆಟ್ಲ್ ಆಗಿದ್ದಾರೆ ಅಂತಾರೆ. ಆತ ಕೂಡ ಒಳ್ಳೆ ದೊಡ್ಡ ಕೆಲಸದಲ್ಲೇ ಇದ್ದಾನಂತೆ. ಒಂದೆರಡು ಬಾರಿ ಮಗಳನ್ನು ನೋಡಬೇಕೆಂದು ಆಕೆ ಬಂದರೂ ಬಾಸ್ ಮಗೂಗೆ ಏನೂ ಗೊತ್ತಿಲ್ಲ, ಅದು ಹಾಗೇ ಬೆಳೆಯಲಿ ಎಂದುಬಿಟ್ಟರಂತೆ. ಆಮೇಲೆ ಅವರ ತಾಯಿನೇ ಮಗೂನ ನೋಡ್ಕೋತಾ ಇದ್ದಿದ್ದು. ಪಾಪ ಮಗನ ಜೀವನ ಹೀಗಾಯಿತಲ್ಲ ಎಂಬ ಯೋಚನೆ ಯಲ್ಲಿ ಇತ್ತೀಚೆಗೆ ಹಾಸಿಗೆ ಹಿಡಿದುಬಿಟ್ಟಿದ್ದಾರೆ. ಆ ಮಗೂನ ನೋಡಿದರಂತೂ ಪಾಪ ಅನ್ಸುತ್ತೆ. ಏನಿದ್ದರೇನು ಮನಸ್ಸಿಗೆ ನೆಮ್ಮದಿ, ಶಾಂತಿ ಮುಖ್ಯ ಅಲ್ವ?''

ಕೃತ್ತಿಕಾಳ ಇನ್ನೊಂದು ಪ್ರಶ್ನೆಗೆ ಉತ್ತರ ಬೇಕಿತ್ತು.

"ನೀನು ಅವರ ಹೆಂಡತಿಯನ್ನು ನೋಡಿದ್ಯಾ?'' ಕಂಡೂ ಕಾಣದ ಕುತೂಹಲ



ಮನುಷ್ಯನು ಎಷ್ಟರಮಟ್ಟಿಗೆ ಇತರರ ಒಳ್ಳೆಯದಕ್ಕೆ ದುಡಿಯುತ್ತಾನೆಯೋ ಅಷ್ಟರಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.

ನಾಗರೀಕತೆ ಅಂದರೆ ತಾಳ್ಮೆ ಸಹಿಷ್ಣುತೆಗಳ ತವರು. ಹಿಂಸೆಗಳ ಸಮುದ್ರವಲ್ಲ.

—ಮಹಾತ್ಮಾ ಗಾಂಧೀಜಿ

ನಿನ್ನಲ್ಲಿ ಸಾಸಿವೆ ಕಾಳಿನಷ್ಟು ಆತ್ಮ ವಿಶ್ವಾಸವಿದ್ದರೆ ಸಾಕು; ನಿನಗೆ ಯಾವ ಕೆಲಸವೂ ಕಷ್ಟ ಅಲ್ಲ. —ಏಸು ಕ್ರಿಸ್ತ

ಒಬ್ಬ ಮನುಷ್ಯನ ಯೋಗ್ಯತೆಯನ್ನು ಪರೀಕ್ಷಿಸಬೇಕಾದರೆ ಅವನಿಗೆ ಅಧಿಕಾರ ಕೊಟ್ಟು ನೋಡಬೇಕು. —ಲಿಂಕನ್

ಸಂಗ್ರಹ : ಶಂಕರಗೌಡ ವ್ಹಿ. ಪಾಟೀಲ

ಅವಳ ಪ್ರಶ್ನೆಯಲ್ಲಿ ಹೆಚ್ಚಾಗಿತ್ತು.

"ಅವರ ಮದುವೆಗೆ ಸ್ವಾಪ್ ಪೂರ್ತಿ ಹೋಗಿದ್ದೆವಲ್ಲ. ಒಳ್ಳೆ ರತಿ, ರತಿ ಇದ್ದ ಹಾಗಿದ್ರು. ಅವರಿಬ್ಬರ ಜೋಡಿ ನೋಡಿ ಹೊಟ್ಟೆಕಿಚ್ಚು ಪಟ್ಟವರೆಷ್ಟೋ ಜನ. ಹನಿಮೂನಿಗೆ ಸ್ವಿಟ್ಜರ್‌ಲ್ಯಾಂಡ್‌ಗೆ ಹೋಗಿದ್ರು. ಅವರು ಚೆನ್ನಾಗಿದ್ದದ್ದು ಅದೊಂದೇ ತಿಂಗಳು ಅನ್ಸುತ್ತೆ. ಈಗಲೂ ಆಗಾಗ್ಗೆ ಮಗಳ ಬಗ್ಗೆ ವಿಚಾರಿಸಿಕೊಳ್ಳಲು ಅಲ್ಲಿಂದ ಫೋನ್ ಮಾಡ್ತಾರಂತೆ. ಶ್ರೀಮಂತರ ವ್ಯವಹಾರವೇ ಅರ್ಥವಾಗುವುದಿಲ್ಲ.

"ಆ ಓಹ್." ಕೃತ್ತಿಕಾ ಉದ್ಗರಿಸಿದಳು.

"ಅದಕ್ಕೆ ಅವತ್ತು ಪಾಪ ಅದು..." ಏನೋ ಹೇಳುವವಳಿದ್ದಳು. ತಕ್ಷಣ ನಾಲಿಗೆ ಕಚ್ಚಿಕೊಂಡಳು. "ಏನು ಅವತ್ತು, ಯಾವತ್ತು, ಯಾರು?"

ಅದಿತಿ ತಿಂಡಿ ತಟ್ಟೆಯನ್ನು ಅವಳ ಮುಂದೆ ತಳ್ಳುತ್ತ ಕೇಳಿದಳು.

ಇನ್ನೊಂದು ಕ್ಷಣದಲ್ಲಿ ತಾನೆಂತಹ ತಪ್ಪು ಮಾಡಿ ಬಿಡುತ್ತಿದ್ದೇನೆಂದು ಕೃತ್ತಿಕಾಳಿಗೆ ಅರಿವಾಯಿತು. ಅವಳಿಗರಿವಿಲ್ಲದಂತೆ ತಾನಂದು ರಾಹುಲ್‌ನ ಮನೆಗೆ ಹೋದ ವಿಷಯ, ಮೇಘನಾಳ ವಿಷಯ ಹೇಳುವವಳಿದ್ದಳು.

"ಏನಿಲ್ಲ, ಅವತ್ತು ನನ್ನ ಮೇಲೆ ಸಿಟ್ಟು ಮಾಡಿಕೊಂಡರಲ್ಲ ಆ ವಿಷಯ ಹೇಳಿದ್ದು. ಅದಕ್ಕೆ ಅವರು ತುಂಬ ಮೂಡಿ ಅನ್ಸುತ್ತೆ. ಏನೇ ಆಗಲಿ ಪಾಪ ಅವರಿಗೆ ಹೀಗಾಗಬಾರದಿತ್ತಲ್ಲ? ಹೊರಗೆ ತೋರಿಸಿಕೊಳ್ಳದಿದ್ದರೂ ಮನಸ್ಸಿನಲ್ಲೇ ತುಂಬ ಕೊರಗುತ್ತಾರೆ ಅನ್ನಿಸುತ್ತದೆ. ಅಂದಹಾಗೆ ಅವರ್‍ಯಾಕೆ ಪುನಾ ಮದುವೆ ಮಾಡಿಕೊಳ್ಳಲಿಲ್ಲ."

"ಅಯ್ಯೋ ಶ್ರೀಮಂತರಿಗೇನು ಹೆಣ್ಣುಗಳಿಗೆ ಬರವೆ, ಬೇಕಾದಷ್ಟು ಕಡೆಯಿಂದ ಒಳ್ಳೊಳ್ಳೆ ಸಂಬಂಧಗಳೇ ಬಂದರೂ ಮದುವೆ ಅನ್ನೋದು ನನ್ನ ಬಾಳಿನಲ್ಲಿ ಮುಗಿದು ಹೋದ ಅಧ್ಯಾಯ ಎಂದು ಕಡಾಖಂಡಿತವಾಗಿ ನಿರಾಕರಿಸಿಬಿಟ್ಟರಂತೆ. ಅವರ ತಾಯಿ ಎಷ್ಟೆಷ್ಟೋ ಪ್ರಯತ್ನ ಪಟ್ಟರೂ ಇವರು ಒಪ್ಪಲೇ ಇಲ್ಲ. ಆ ಯೋಚನೆ ಬೇರೆ ಅವರಿಗೆ. ಮಗ ಯಾರನ್ನು ಒಪ್ಪಿದರೂ ಸಾಕು ಅವರಿಗೆ. ಆ ಮಗೂ ಮುಖನಾದ್ರೂ ನೋಡು ಅಂದ್ರಂತೆ. ಅದಕ್ಕೆ ಬಂದವಳು ಅದಕ್ಕೆ ತಾಯಿ ಆಗ್ತಾಳೇಂತ ಏನು ಗ್ಯಾರಂಟೀಂತ ಕೇಳಿ ತಾಯಿಯ ಬಾಯಿ ಮುಚ್ಚಿಸಿದರಂತೆ. ಅದಕ್ಕೇ ಮಗನ ಮೇಲೆ ಸಿಟ್ಟು"

"ದೋಸೆ ಆರಿ ಹೋಗ್ತಿದೆ ತಗೋ. ಮಾತಿನ ಮಧ್ಯದಲ್ಲಿ ಟೈಂ ಹೋಗಿದ್ದೇ ಗೊತ್ತಾಗಲಿಲ್ಲ." ಕೃತ್ತಿಕಾ ಹೇಳಿದಳು.

"ಬಾಸ್‌ಗೂ ಅಷ್ಟೇ, ಹೀಗಾದ ಮೇಲೆ ಹೆಂಗಸನ್ನು ಕಂಡ್ರೆ ಅಷ್ಟಕ್ಕಷ್ಟೇ. ಮೊದಮೊದಲು ಇದ್ದ ಅವರ ಪಿ.ಎ. ಎಲ್ಲ ಗಂಡಸರೇ. ಒಂದಿಬ್ಬರು ಹಣ ತಿಂದು ಮೋಸ ಮಾಡಿದ ಮೇಲೆ ಹೆಂಗಸರನ್ನು ಅಪಾಯಿಂಟ್ ಮಾಡಿಕೊಳ್ಳಲು ಶುರು ಮಾಡಿದರು. ಹೆಸರಿಗೆ ಪಿ.ಎ. ಅಷ್ಟೇ. ಎಲ್ಲ ಚೇಂಬರಿನಿಂದಲೇ ಹೀಗೀಗೆ ಮಾಡಬೇಕೆಂದು ಹೇಳಿ ಕಳುಹಿಸ್ತಾ ಇದ್ದರು. ಸ್ವಲ್ಪ ತಪ್ಪಾದರೂ ಸಾಕು ಎಲ್ಲರ ಎದುರು ಮುಖ ಮೂತಿ ನೋಡದೆ ಬಯ್ದು ಬಿಡ್ತಾ ಇದ್ರು. ಹೀಗಾಗೇ ನಿನಗಿಂತ ಹಿಂದೆ ಇದ್ದ ಶೋಭ ಡಿಸೋಜಾ ಬಿಟ್ಟು ಹೋಗಿದ್ದು ಅಂತ ಹೇಳ್ತಾರೆ. ಅವಳೂ ಅಷ್ಟೇ ಬಿಡು ಬಾಸನ್ನು ಏನೋ ತಿಳಿದುಕೊಂಡುಬಿಟ್ಟಳು. ಹೆಂಡತಿಯಿಲ್ಲ ಮೆಚ್ಚಿಸಿ

ಬಲೆಗೆ ಹಾಕಿಕೊಳ್ಳಬಹುದೂಂತ ತಿಳಿದಳೋ ಏನೋ. ನನಗಂತೂ ಅವಳ ವರ್ತನೆ ಹಿಡಿಸ್ತಾನೇ ಇಲ್ಲ. ಬಾಸ್ ಮೈ ಮೇಲೇ ಬಿದ್ದು ಹೋಗುತ್ತಿದ್ದಳು. ಅದನೆಲ್ಲ ನೋಡಿ ಈ ಸಾರಿ ಯಾರಾದ್ರೂ ಗಂಡಸನ್ನೇ ತೆಗೆದುಕೊಳ್ತಾರೆ ಅಂದುಕೊಂಡಿದ್ದೆ. ನಿನ್ನ ಕೆಲಸಕ್ಕೆ ತೆಗೆದುಕೊಂಡಿದ್ದು ಮಾತ್ರ ಎಲ್ಲರಿಗೂ ಆಶ್ಚರ್ಯವೇ.''

"ಒಬ್ಬರು ಹಾಗೆ ಮಾಡಿದರೂಂತ ಇಡೀ ಹೆಂಗಸರ ಕುಲವನ್ನೇ ದ್ವೇಷಿಸುವುದು ತಪ್ಪು. ಗಂಡಸರೇನು ತಪ್ಪು ಮಾಡುವುದೇ ಇಲ್ಲವೆ? ಅದು ಅವರವರ ವೈಯಕ್ತಿಕ ಅನುಭವದ ಮೇಲೆ ನಿರ್ಧಾರವಾಗುತ್ತದೆ.''

ಕೃತ್ತಿಕಾ ಹೇಳಿದಾಗ ಅದಿತಿ ಸರಿಯೆಂದು ತಲೆ ಅಲ್ಲಾಡಿಸಿದಳು.

"ನಿನಗೆ ಈಗ ಬಸ್ ಇರಬೇಕಲ್ಲವೆ, ಏನು ಮಾಡ್ತೀಯಾ? ಒಬ್ಬಳೇ ಬೇಸರ ಅನ್ನೋದಾದ್ರೆ ನಮ್ಮನೆಗೆ ಬಾ. ಸಂಜೆ ಹೋದರಾಯಿತು.''

ಬಿಲ್ಲನ್ನು ಕೊಡುತ್ತ ಅದಿತಿ ಹೇಳಿದಳು.

ಒಬ್ಬಳೇ ಬೇಸರವಾಗುತ್ತಿದೆ ಎಂದು ಗೊತ್ತಿದ್ದರೂ ಕೃತ್ತಿಕಾಳಿಗೆ ಇವತ್ತು ಅದಿತಿಯ ಮನೆಗೆ ಹೋಗುವ ಮನಸ್ಸಿರಲಿಲ್ಲ. ಎಲ್ಲೂ ಬೇಡ ಒಂದು ಸಲ ಮನೆಗೆ ಹೋಗಿ ಮಲಗಿಕೊಂಡರೆ ಸಾಕೆನಿಸಿತ್ತು.

"ಇವತ್ತು ಬೇಡ. ಇನ್ನೊಂದು ದಿನ ಬರ್ತೀನಿ'' ಎಂದಾಗ ಅದಿತಿಯೂ ಬಲವಂತ ಮಾಡಲಿಲ್ಲ.

"ಓಕೆ ಸೀ ಯೂ ಟುಮಾರೋ'' ಎನ್ನುತ್ತ ಎದುರಿಗೆ ಬರುತ್ತಿದ್ದ ಆಟೋ ನಿಲ್ಲಿಸಿ ಹತ್ತಿದಳು. ಕೃತ್ತಿಕಾ ಗೆಳತಿಗೆ ಕೈ ಬೀಸಿದಳು. ಅಲ್ಲಿಂದ ಅವಳ ಮನೆ ಹೇಳಿಕೊಳ್ಳುವಂತಹ ದೂರವೇನಿರಲಿಲ್ಲ. ಆಟೋದಲ್ಲಿ ಹೋದರೆ ಮಿನಿಮಮ್ ಚಾರ್ಜಾಗುತ್ತಿತ್ತು. ಹೋಗಿ ಮಾಡುವುದಾದರೂ ಏನು? ನಡೆದುಕೊಂಡು ನಿಧಾನವಾಗಿ ಹೋದರಾಯಿತೆಂದುಕೊಂಡು ಹೆಜ್ಜೆ ಹಾಕಿದಳು. ಮನಸ್ಸು ಏನನ್ನೋ ಯೋಚಿಸುತ್ತಿತ್ತು. ಕಾರೊಂದು ಒಂದೇ ಸಮನೆ ಹಾರ್ನ್ ಬಾರಿಸಿದಾಗ ಅವಳ ಯೋಚನಾ ತಂತು ತುಂಡಾಗಿ ಬೆಚ್ಚಿದಳು.

"ಆಂಟೀ.''

ಕಾರಿನಿಂದ ಧ್ವನಿ ಬಂದಾಗ ಪರಿಚಿತ



ಪರೀಕ್ಷೆಯ ಪ್ರಶ್ನೆ ಪತ್ರಿಕೆ. ಅದರಲ್ಲೊಂದು ಪ್ರಶ್ನೆ "ನೀವು ಮೆಚ್ಚಿದ ವ್ಯಕ್ತಿಗೆ ಯಾವುದಾದರೊಂದು ವಿಷಯದ ಬಗ್ಗೆ ಪತ್ರ ಬರೆಯಿರಿ.''

ವಿದ್ಯಾರ್ಥಿನಿ ಶುಭ ತಲೆಕೆರೆದುಕೊಳ್ಳುತ್ತ ಉತ್ತರ ಪತ್ರಿಕೆಯಲ್ಲಿ ಹೀಗೆ ಬರೆದಳು "ನಾನು ಮೆಚ್ಚಿದ ವ್ಯಕ್ತಿ ರಾಘವೇಂದ್ರ. ಅವನಿಗೆ ಪತ್ರ ಬರೆದರೆ ನಮ್ಮಪ್ಪ ನನ್ನನ್ನು ಸುಮ್ಮನೆ ಬಿಡುವುದಿಲ್ಲ. ಆದ್ದರಿಂದ ಅವನಿಗೆ ನಾನು ಯಾವ ವಿಷಯದ ಬಗ್ಗೆಯೂ ಬರೆಯಲಾರೆ.''

— ಬಿಲ್ಲಾಡಿ ಸತೀಶ್‌ಕುಮಾರ್

ಎನಿಸಿ ಅತ್ತ ನೋಡಿದಳು. ಅಷ್ಟರಲ್ಲಿ ಮೇಘನಾ ಕಾರಿನಿಂದ ತಲೆ ಹೊರಗೆ ಹಾಕಿದಳು.

"ಆಂಟಿ ನೀವು ಬರೇ ಸುಳ್ಳು ಹೇಳಿದಿರಿ.'' ಕೃತ್ತಿಕಾ ತಲೆ ಬುಡ ಅರ್ಥವಾಗದೆ ಪಿಳಿ ಪಿಳಿ ಕಣ್ಣುಬಿಟ್ಟಳು.

"ಅವತ್ತು ಮತ್ತೆ ಬರ್‍ತೀನಿಂತ ಹೇಳಿ ಹೋದವರು ಬರಲೇ ಇಲ್ಲ. ದೊಡ್ಡವರು ಸುಳ್ಳು ಹೇಳಬಾರದು ಅಲ್ವಾ?''

ಮಗುವಿನ ಮುಗ್ಧತೆಗೆ ಹಾಗೂ ಅದರ ಜ್ಞಾಪಕ ಶಕ್ತಿಗೆ ಕೃತ್ತಿಕಾ ಬೆರಗಾದಳು. ಏನು ಉತ್ತರ ಹೇಳುವುದೆಂದು ಹೊಳೆಯಲಿಲ್ಲ. ಸುಳ್ಳು ಹೇಳಲು ಮನಸ್ಸು ಒಪ್ಪಲಿಲ್ಲ.

"ಈಗ ಬರ್‍ತೀರಾ ಆಂಟಿ. ಡ್ಯಾಡಿ ನಂಗೆ ಇನ್ನಷ್ಟು ಗೊಂಬೆಗಳನ್ನು ತಂದು ಕೊಟ್ಟಿದ್ದಾರೆ. ತೋರಿಸ್ತೀನಿ.''

ಮೇಘನಾ ಗೋಗರೆದಾಗ ಕೃತ್ತಿಕಾ ಗಲಿಬಿಲಿಗೊಳಗಾದಳು. ರಾಹುಲ್‌ನ ವೈವಾಹಿಕ ಜೀವನದ ಬಗ್ಗೆ ತಿಳಿದು ಬಂದಾಗಿನಿಂದ ಯಾಕೋ ಏನೋ ಅಲ್ಲಿಗೆ ಹೋಗಿ ಸಿಕ್ಕಿಕೊಳ್ಳುವುದು ಬೇಡ ಎನಿಸಿತ್ತು. ಶ್ರೀಮಂತರ ಸಹವಾಸ ಯಾರಿಗೆ ಬೇಕು ಎಂದು ಹೋಗುವ ಯೋಚನೆಯನ್ನೇ ತಳ್ಳಿಹಾಕಿ ಬಿಟ್ಟಿದ್ದಳು.


"ಯಾಕೆ ಆಂಟಿ, ನನ್ನ ಮೇಲೆ ಕೋಪ ಮಾಡ್ಕೊಂಡಿದ್ದೀರಾ?''

"ಛೇ ಛೇ, ನಿನ್ನಂತಹ ಜಾಣಮರಿ ಮೇಲೆ ಕೋಪ ಮಾಡ್ಕೊಂಡವರುಂಟೆ? ಇವತ್ತು ಬೇಡ. ಇನ್ಯಾವತ್ತಾದ್ರೂ ಬರ್‍ತೀನಿ.'' ಸಮಾಧಾನ ಮಾಡಲೆತ್ನಿಸಿದಳು. ಜೊತೆಗೆ ನುಣುಚಿಕೊಳ್ಳುವ ಪ್ರಯತ್ನವೂ ಇತ್ತು.

"ಊಹೂಂ ಇವತ್ತು ನೀವು ಬರಲೇಬೇಕು. ನೀವು ಬಾರದಿದ್ರೆ ನಾನೇ ನಿಮ್ಮ ಮನೆಗೆ ಬರ್‍ತೀನಿ. ಅಜ್ಜಿ ನಿನ್ನೆಯೆಲ್ಲ ಅಳ್ತಾ ಇದ್ರು.''

ಕಾರಿನ ಬಾಗಿಲು ತೆಗೆದು ಅವಳ ಸೀರೆ ಸೆರಗು ಹಿಡಿದು ಜಗ್ಗುತ್ತ ಕೇಳಿದಾಗ ಕೃತ್ತಿಕಾ ಹೂಂ ಅನ್ನಲೇಬೇಕಾಯಿತು. ಮೇಘನಾಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಕೃತ್ತಿಕಾ ಕಾರು ಹತ್ತಿದಳು. ಆದರೂ ಒಂದು ಕ್ಷಣ ಮಗುವಿನ ಮಾತು ಕೇಳಿ ತಾನು ಹೀಗೆ ಬರಬಾರದಿತ್ತೇನೋ ಎನಿಸದಿರಲಿಲ್ಲ.

ಮನೆಯೊಳಗೆ ಕಾಲಿಟ್ಟಾಗ ಮನೆಯೊಡೆಯ, ಒಡತಿ ಇಲ್ಲದ ಕೊರತೆ ಎದ್ದು ಕಾಣುತ್ತಿತ್ತು. ಬಹುಶಾ ರಾಹುಲ್ ಇದ್ದಿದ್ದರೆ ಆಳುಗಳು ಅವನಿಗಾದರೂ ಹೆದರುತ್ತಿದ್ದರೋ ಏನೋ. ಈಗಂತೂ ಅವರಿಗೆ ಯಾರ ಭಯವೂ ಇದ್ದಂತಿರಲಿಲ್ಲ. ಅಲ್ಲಲ್ಲಿ ಹರಡಿದ ಪೇಪರ್‌ಗಳು, ದೂಳು ತುಂಬಿದ ಟೀಪಾಯ್ ಕೆಲಸಗಾರರ ನಿರ್ಲಕ್ಷ್ಯತೆಯನ್ನು ತೋರಿಸುತ್ತಿದ್ದವು. ಮನೆಯನ್ನೇ ಹೀಗಿಟ್ಟಿರಬೇಕಾದರೆ ಏನನ್ನೂ ಅರಿಯದ ಮೇಘನಾಳನ್ನು, ರಾಹುಲ್‌ನ ತಾಯಿಯನ್ನು ಹೇಗೆ ನೋಡಿಕೊಳ್ಳಬಹುದೆಂದು ಊಹಿಸಿದ ಕೃತ್ತಿಕಾ ಅವರಿಗಾಗಿ ಮಿಡುಕಿದಳು. ಮೇಘನಾಳಿಗೆ ತಾನೇ ಕೈಕಾಲು ತೊಳೆದು ಬಟ್ಟೆ ಬದಲಿಸಿದಳು. ಬಾಯಮ್ಮ ತಂದಿಟ್ಟ ಹಾಲನ್ನು ಎತ್ತಿಕೊಂಡು ನೋಡಿದಳು. ನೀರು ಹಾಲು, ಅದಕ್ಕೆ ಹಾರ್ಲಿಕ್ಸ್ ಆಗಲಿ, ಬೋರ್ನವಿಟಾ ಆಗಲಿ ಬೆರೆಸಿರಲಿಲ್ಲ. ತಂದೆಯ ಹಣ ಅನುಭವಿಸೋ ಹಕ್ಕೂ ಸಹ ಈ ಮಗುವಿಗಿಲ್ಲವಾಯಿತು ಎಂದುಕೊಂಡು ಬಾಯಮ್ಮನನ್ನು ಕರೆದಳು.



"ಇದೇನು ಹಾಲೋ ನೀರೋ? ಮಗುವಿಗೆ ಗಟ್ಟಿ ಹಾಲು ಕೊಡಲು ಹೇಳಬೇಕಾ?''

ಬಾಯಮ್ಮ ಬೆದರಿದವಳೇ ಒಳಗೆ ಹೋಗಿ ಬೇರೆ ಹಾಲನ್ನು ಬಿಸಿ ಮಾಡಿಕೊಂಡು ತಂದಳು. ಆದಿನ ಬಂದಿದ್ದು, ರಾಹುಲ್ ಅವಳನ್ನು ಕಾರಿನಲ್ಲೇ ಕಳುಹಿಸಿ ಕೊಟ್ಟದ್ದನ್ನು ನೋಡಿ ರಾಹುಲ್‌ನ ನೆಂಟರೇ ಇರಬೇಕೆಂದು ಭಾವಿಸಿದ್ದಳು. ಸಾಮಾನ್ಯವಾಗಿ ಆಫೀಸಿನವರು ಬಂದರೆ ರಾಹುಲ್ ಅವರ್ಯಾರನ್ನೂ ತಾಯಿಯ ರೂಮಿಗೆ ಕರೆದುಕೊಂಡು ಹೋಗುತ್ತಿರಲೂ ಇಲ್ಲ, ಕಾರಿನಲ್ಲಿ ಕಳುಹಿಸುತ್ತಿರಲೂ ಇಲ್ಲ. ಅಲ್ಲದೆ ಮೇಘನಾಳ ಬರ್ತ್‌ಡೇ ಪಾರ್ಟಿ ದಿನ ಅವಳು ಬಂದಿಲ್ಲದಿದ್ದರಿಂದ ಆಫೀಸಿನವಳೆಂದು ತಿಳಿದುಕೊಂಡಿರಲಿಲ್ಲ.

"ನಾನೇನಾದ್ರೂ ಕೇಳಿದ್ರೆ, ಅತ್ರೆ ಬಾಯಮ್ಮ ಗುಮ್ಮನಿಗೆ ಹಿಡಿದು ಕೊಡ್ತೀನೀಂತ ಹೆದರಿಸುತ್ತಾಳೆ. ಗಲಾಟೆ ಮಾಡಬಾರದಂತೆ, ಏನನ್ನೂ ಕೇಳಬಾರದಂತೆ ಆಂಟಿ.''

ಬಾಯಮ್ಮನ ಮುಖ ಬಿಳುಚಿಕೊಂಡಿತು.

"ಇವರ್ಯಾರು ಗೊತ್ತಾ, ಆಂಟಿ ನಮ್ಮ ಆಂಟಿ. ದಿನಾ ಸಂಜೆ ನಮ್ಮನೆಗೆ ಬರ್ತಾರೆ ಗೊತ್ತಾಯಿತಾ? ನನ್ನ ಬಿಟ್ಟು ಡ್ರೈವರ್ ಜೊತೆ ಇನ್ಮೇಲಿಂದ ನೀನು ಮಾತಾಡೋ ಹಾಗಿಲ್ಲ.''

ಕೃತ್ತಿಕಾ ತನ್ನ ಎದುರಿಗಿದ್ದಾಳೆಂಬ ಧೈರ್ಯ. ಜೊತೆಗೆ ಅವಳ ಮಾತಿಗೆ ಬಾಯಮ್ಮ ಬೆಲೆ ಕೊಟ್ಟಾಗ ಹೆಮ್ಮೆ ಮೂಡಿತ್ತು.

ಬಾಯಮ್ಮ ತಗ್ಗಿಸಿದ ತಲೆ ಎತ್ತಲಿಲ್ಲ.

"ಸಾಹೇಬರು ಇಲ್ಲ ಅಂದ ತಕ್ಷಣ ನಿಮ್ಮ ಮನಸ್ಸಿಗೆ ಬಂದ ಹಾಗೆ ನಡ್ಕೋಬಹುದು ಅಂತ ಅರ್ಥನಾ. ಈ ವಿಷಯ ಅವರಿಗೆ ಹೇಳಿದರ ಏನಾಗುತ್ತೆ ಗೊತ್ತಾ?''

ಬೇಡ ಎಂದರೂ ಕಾಠಿಣ್ಯತೆ ಅವಳ ಧ್ವನಿಯಲ್ಲಿ ಮೂಡಿತ್ತು.

"ಇಲ್ಲ ಅಮ್ಮಾವ್ರೆ, ಇನ್ಮೇಲಿಂದ ಹೀಗೆ ಮಾಡುವುದಿಲ್ಲ. ಸಾಹೇಬ್ರಿಗೆ ಮಾತ್ರ ಹೇಳಬೇಡಿ.''

ಅಂಗಲಾಚಿದ ಬಾಯಮ್ಮನಿಗೆ ಉತ್ತರ ಕೊಡುವ ಗೋಜಿಗೇ ಹೋಗಲಿಲ್ಲ.

"ನಡೀ ಮೇಘನಾ ಅಜ್ಜೀನ ಮಾತನಾಡಿಸಿಕೊಂಡು ಬರೋಣ.'' ಅವಳ ಕೈ ಹಿಡಿದುಕೊಂಡು ಮಹಡಿ ಮೆಟ್ಟಿಲು ಹತ್ತಿದಳು. ಮೆಲ್ಲಗೆ ಅವರ ರೂಮಿನ ಬಾಗಿಲು ತಳ್ಳಿದಳು. ಆ ದಿನಕ್ಕಿಂತ ಇವತ್ತು ಇನ್ನೂ ಇಳಿದು ಹೋದ ಹಾಗೆ ಕಾಣಿಸಿತು. ರೂಮಿನ ತುಂಬ ಎಲ್ಲೆಂದರಲ್ಲಿ ಔಷಧಿ ಸೀಸೆಗಳು, ಮಾತ್ರೆಗಳ ಕವರ್‌ಗಳು ಬಿದ್ದಿದ್ದವು. ಕಸ ಗುಡಿಸಿ ಎಷ್ಟು ದಿನಗಳಾಗಿದೆಯೋ ಎಂದುಕೊಂಡಳು. ಕೃತ್ತಿಕಾಳನ್ನು ಕಂಡು ಅವರ ಕಣ್ಣಲ್ಲಿ ನೀರಾಡಿತು. ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದರು. ಓಡಿ ಬಂದ ಕೃತ್ತಿಕಾ ಅವರನ್ನು ಏಳಲು ಬಿಡಲಿಲ್ಲ.

"ಏಳಬೇಡಿ ಅಮ್ಮ ಮಲಗಿಕೊಳ್ಳಿ. ಹೇಗಿದ್ದೀರಾ?''

"ಇದ್ದೀನಿ ನೋಡಮ್ಮ ಭೂಮಿಗೆ ಭಾರವಾಗಿ.'' ಬಿಕ್ಕುತ್ತ ನುಡಿದರು. "ನನ್ನಂತಹ ಪಾಪಿಗಳಿಗೆ ಸಾವು ಬರುವುದಿಲ್ಲ.''

"ಛೇ ಛೇ ಅಳಬಾರದು. ನೀವೇ ಅತ್ತರೆ ಮೇಘನಾಳ ಗತಿ ಏನು?''

"ಅದೊಂದೇ ಕೊಂಡಿ ನನ್ನ ಬದುಕಿನ ಜೊತೆ ಎಳೆದಾಡ್ತಿರೋದು. ಇವನು ನೋಡು, ಟೂರ್ ಅಂತ ಹೋಗಿಬಿಟ್ಟ. ಮನೆಯ ಅವ್ಯವಸ್ಥ ನೋಡಿದ್ಯಾ ಹೇಗಾಗಿದೇಂತ. ಅವನಿದ್ದಾಗ

ಇಲಿಗಳಂತೆ ಇದ್ದ ಆಳುಗಳು ಇವತ್ತು ಹುಲಿಗಳಾಗಿ ಬಿಟ್ಟಿದ್ದಾರೆ. ಹತ್ತು ಸಲ ಕರೆದರೆ ಒಂದ್ಸಲ ಬರ್ತಾರೆ. ಎದ್ದು ಓಡಾಡೋ ಹಾಗೂ ಇಲ್ಲ. ವಾಯುವಿನಿಂದ ಎರಡು ಮಂಡಿಗಳೂ ಹಿಡಿದುಕೊಂಡು ಬಿಟ್ಟಿದೆ. ಅವರುಗಳೇ ಈಗ ಮನೆಗೆ ಯಜಮಾನರು. ನಿನ್ನೆ ರಾತ್ರಿ ಮಂಡಿ ನೋವು ಜಾಸ್ತಿಯಾಗಿ ಬಿಸಿ ನೀರಿನ ಶಾಖ ಕೊಡುವವರು ಇಲ್ಲ. ನನ್ನನ್ನೇ ಹೀಗೆ ನೋಡಿಕೊಳ್ಳುವ ಇವರು ಇನ್ನು ಈ ಮಗುವನ್ನು ಹೇಗೆ ನೋಡಿಕೊಳ್ಳಬಹುದು ನೀನೇ ಹೇಳು. ಮನೇಲಿ ಒಂದು ಹೆಣ್ಣೊಂತ ದಿಕ್ಕಿದ್ದಿದ್ದರೆ ಹೀಗೆಲ್ಲ ಆಗ್ತಿತ್ತಾ? ನಮಗೂ, ಅನಾಥರಿಗೂ ವ್ಯತ್ಯಾಸವೇ ಇಲ್ಲ.'' ರಾಹುಲ್‌ನ ತಾಯಿ ನೊಂದು ನುಡಿದರು.

"ನೀವು ಮೊದಲು ಯೋಚನೆ ಮಾಡುವುದನ್ನು ನಿಲ್ಲಿಸಿ ಎಲ್ಲ ಸರಿ ಹೋಗುತ್ತದೆ.''

"ಏನು ಸರಿ ಹೋಗುತ್ತದೋ ಏನೋ, ನೀನಾದ್ರೂ ಬರ್ತೀಯೇನೋ ಅಂದ್ಕೊಂಡೆ ನೀನೂ ಬರಲಿಲ್ಲ. ನಿನ್ನ ನೋಡಿದರೆ ನನಗೂ ನಿನ್ನಂತಹ ಮಗಳಾದ್ರೂ ಇದ್ದಿದ್ದರೆ ಅನ್ಸುತ್ತೆ. ಒಬ್ಬ ಮಗನನ್ನು ಹೆತ್ತು ನನ್ನ ಪಾಡು ಹೀಗಾಯ್ತು.''

"ನಾನು ನಿಮ್ಮ ಮಗಳ ಸಮಾನಾನೇ'' ಎನ್ನುತ್ತ ಕೆಲಸದವರನ್ನು ಕರೆದಳು. ಅವರಿಗೆ ತಕ್ಷಣವೇ ರೂಮು ಕ್ಲೀನ್ ಮಾಡಲು ಹೇಳಿ ಹಾಸಿಗೆಯ ಬೆಡ್‌ಶೀಟ್, ದಿಂಬಿನ ಕವರ್‌ಗಳನ್ನು ಬದಲಾಯಿಸಲು ಹೇಳಿದಳು. ಅಡುಗೆ ಮನೆಯಿಂದ ತಾನೇ ಬಿಸಿನೀರನ್ನು ತಂದು ರಾಹುಲ್‌ನ ತಾಯಿ ಸುಂದರಮ್ಮನವರ ಕಾಲಿಗೆ ಶಾಖ ಕೊಡತೊಡಗಿದಳು.

"ಬೇಡಮ್ಮ ಇದೆಲ್ಲ ಯಾಕೆ, ಕೆಲಸದವರಿಗೆ ಹೇಳಿದರೆ ಮಾಡ್ತಾರೆ.'' ಆಕೆ ಪ್ರತಿಭಟಿಸಿದರು.

"ಮಗಳ ಸಮಾನಾಂತ ಹೇಳಿದಿರಿ. ಮಗಳ ಮಾತು ಕೇಳುವುದಿಲ್ಲವ?''

ಮಾತನಾಡಲಾಗದೆ ಆಕೆ ಕೃತ್ತಿಕಾಳ ಕೈ ಹಿಡಿದು ಅದುಮಿದರು. ಮೇಘನಾ ಕೃತ್ತಿಕಾಳ ಕೆಲಸಗಳನ್ನೆಲ್ಲ ಆಶ್ಚರ್ಯದಿಂದ ನೋಡುತ್ತಿದ್ದಳು. ಬಿಸಿ ನೀರಿನ ಶಾಖ ಕೊಟ್ಟನಂತರ ಅಲ್ಲೇ ಇದ್ದ ತೈಲವನ್ನು ಕಾಲಿಗೆ ತಿಕ್ಕಿದಳು. ನೋವು ಕಡಿಮೆಯಾಗಲು ಮಾತ್ರೆ ಕೊಟ್ಟು ಹೇಳಿದಳು,

"ಅಮ್ಮ ನೀವೀಗ ಸ್ವಸ್ಥವಾಗಿ ಮಲಗಿ. ಅಂದಹಾಗೆ ಸರ್ ಫೋನ್ ನಂಬರ್ ಏನಾದ್ರೂ ಕೊಟ್ಟಿದ್ದಾರ, ಅವರಿಗೆ ತಿಳಿಸಬೇಕಾ?''

"ನಾನು ಎಲ್ಲಿ ಇರ್ತೀನಿ ಅಂತ ನನಗೆ ಸರಿಯಾಗಿ ಗೊತ್ತಿಲ್ಲ ನಾನೇ ಫೋನ್ ಮಾಡ್ತೀನಿಂತ ಹೇಳಿದ. ನಿನ್ನೆ ರಾತ್ರಿ ಮಾಡಿದ್ದ ಅಂತ ಕಾಣುತ್ತೆ ಫೋನ್ ರಿಂಗಾಗುತ್ತಲೇ

'ರಾಗಸಂಗಮ'

ಲಾಟರಿ ಡ್ರಾ – ೧೪೪ರ ವಿಜೇತರು



ಸ್ಮಿತಾ ಗುಪ್ತ
ಹಾವೇರಿ
ಧಾರವಾಡ ಜಿಲ್ಲೆ.

ಇತ್ತು. ಎಲ್ಲರೂ ನಿದ್ರೆ ಹೊಡೀತಾ ಇದ್ರು. ಕೂಗಿದ್ರೂ ಎಚ್ಚರವಿಲ್ಲ. ನಾನು ಎದ್ದು ಹೋಗುವಷ್ಟರಲ್ಲಿ ನಿಂತು ಹೋಯಿತು. ಗಂಡಸಿಗೆ ಮನೆ ಒಳಗಿನ ವ್ಯವಹಾರಗಳೆಲ್ಲ ಹೇಗೆ ಗೊತ್ತಾಗುತ್ತಮ್ಮ? ಎಲ್ಲದಕ್ಕೂ ಆಳುಗಳನ್ನೇ ನಂಬಿಬಿಡ್ತಾನೆ. ಅವರು ಹೇಳಿದ್ದೆ ಅವರು ಮಾಡಿದ್ದೇ ಕಾರುಬಾರು. ಎಷ್ಟು ಚೆನ್ನಾಗಿ ನೋಡ್ಕೊತಾರೆಂತ ಕಣ್ಣಾರೆ ಕಂಡೆಯಲ್ಲಮ್ಮ. ಅವರುಗಳಿಗೂ ಅಷ್ಟೇ ಏನಾಗಬೇಕು. ಸಂಬಳ ಬಂದರಾಯಿತು.''

"ಯೋಚಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ನೀವು ಆರೋಗ್ಯವಾಗಿ ಓಡಾಡುವ ಹಾಗೆ ಆದರೆ ಉಳಿದದ್ದನೆಲ್ಲ ನೋಡಿಕೊಳ್ಳಬಹುದು'' ಎನ್ನುತ್ತ ಕತ್ತಿನವರೆಗೂ ರಗ್ಗು ಹೊದಿಸಿದಳು.

"ಕೃತ್ತಿಕಾ ನಾಳೇನೂ ಬರ್ತೀಯಾಮ್ಮ?'' ಕೈ ಹಿಡಿದು ಸುಂದರಮ್ಮ ಕೇಳಿದರು.

ಅವರ ಮುಖದಲ್ಲಿನ ಬೇಡಿಕೆ, ದೀನತೆಯನ್ನು ನೋಡಿ ಕೃತ್ತಿಕಾಳಿಗೆ ಒಂದು ಕ್ಷಣ ಗಲಿಬಿಲಿಯುಂಟಾಯಿತು. ಮೇಘನಾ ಆತುರದಿಂದ ಅವಳೆಲ್ಲಿ ಇಲ್ಲ ಎಂದು ಹೇಳಿಬಿಡುವವಳೋ ಎಂದು ಕೃತ್ತಿಕಾಳ ಮುಖವನ್ನೇ ನೋಡುತ್ತಿದ್ದಳು. ಯಾಕೋ ಏನೋ ಕೃತ್ತಿಕಾಳಿಗೆ ಇಲ್ಲವೆನ್ನಲಾಗಲಿಲ್ಲ. ಹೂಂ ಎಂದು ತಲೆ ಅಲ್ಲಾಡಿಸಿದಳು. ಸುಂದರಮ್ಮ ತೃಪ್ತಿಯಿಂದ ಪಕ್ಕಕ್ಕೆ ಹೊರಳಿದರು. ಕೃತ್ತಿಕಾ ಮೇಘನಾಳ ಕೈ ಹಿಡಿದುಕೊಂಡು ಹೊರ ಬಂದಳು.

"ಆಂಟಿ ಆಂಟಿ ನೀವು ಇವತ್ತು ಇಲ್ಲೇ ಇರಿ. ರಾತ್ರಿ ನನಗೊಬ್ಬಳಿಗೆ ಮಲಗಲು ಒಂದೊಂದ್ಸಲ ಭಯವಾಗುತ್ತೆ. ಬಾಯಮ್ಮ ಬರೀ ರಾಕ್ಷಸರು, ದೆವ್ವದ ಕಥೆಗಳನ್ನು ಹೇಳಿ, ನೀನು ಬೇಗ ನಿದ್ರೆ ಮಾಡದಿದ್ದರೆ ರಾಕ್ಷಸಿ ಬಂದು ಎತ್ಕೊಂಡು ಹೊರಟು ಹೋಗ್ತಾಳೇಂತ ಹೇಳ್ತಾಳೆ. ಹೌದಾ ಆಂಟಿ?''

"ರಾಕ್ಷಸನೂ ಇಲ್ಲ ದೆವ್ವವೂ ಇಲ್ಲ. ಬಾಯಮ್ಮ ಬರೇ ಸುಳ್ಳು ಹೇಳ್ತಾಳೆ. ನೀನು ಅವಳ ಮಾತು ನಂಬಬೇಡ. ನನಗೀಗ ಲೇಟ್ ಆಯ್ತು ಮನೆಗೆ ಹೋಗಿ ನಾಳೆ ಸಂಜೆ ಬರ್ತೀನಿ ಆಯ್ತಾ?''

ಮೇಘನಾಳ ಕೆನ್ನೆ ತಟ್ಟಿದಳು. ಮೇಘನಾಳ ಮುಖ ಸಣ್ಣಗಾಯಿತು. ಅವಳ ಆಸರೆ ಬಿಡಲಾರೆ ಎಂಬಂತೆ ಅವಳ ಕೈಯನ್ನು ಭದ್ರವಾಗಿ ಹಿಡಿದುಕೊಂಡಳು.

"ನೀವು ಹೋದ ಮೇಲೆ ಬಾಯಮ್ಮ ನನ್ನ ಗದರಿಸ್ತಾಳೆ. ಡ್ಯಾಡಿಗೆ ಹೇಳ್ತೀನಿ ಅಂದ್ರೆ ನಿನ್ನ ರಾಕ್ಷಸ ಬಂದು ಎತ್ಕೊಂಡು ಹೊರಟು ಹೋಗ್ತಾನೆ ಅಂತಾಳೆ.'' ಕೃತ್ತಿಕಾಳ ಕಿವಿಯಲ್ಲಿ ಪಿಸುಗುಟ್ಟಿದಳು.

ಅಷ್ಟರಲ್ಲಿ ಆಫೀಸ್ ರೂಂನಲ್ಲಿದ್ದ ಫೋನ್ ಟ್ರಿನ್‌ಗುಟ್ಟಿತು. ಕೃತ್ತಿಕಾಳ ಮುಂದೆ ಹೋಗಿ ಎತ್ತುವ ಧೈರ್ಯ ಯಾರೂ ತೋರಿಸಲಿಲ್ಲ.

"ಆಂಟಿ, ಡ್ಯಾಡಿ ಫೋನ್ ಇರಬೇಕು ನೀವೇ ಮಾತನಾಡಿ.''

ಮೇಘನಾ ಹೇಳಿದಾಗ ಕೃತ್ತಿಕಾ ವಿಧಿ ಇಲ್ಲದೆ ಫೋನ್ ಎತ್ತಿದಳು.

"ಹಲೋ.''

"ಹಲೋ ಯಾರು ಮಾತಾಡ್ತಿರುವುದು?'' ಅತ್ತಲಿಂದ ಕೇಳಿ ಬಂತು.

"ನಿಮಗೆ ಯಾರು ಬೇಕಿತ್ತು?'' ಕೃತ್ತಿಕಾ ಪ್ರಶ್ನಿಸಿದಳು.

“ನಾನು ರಾಹುಲ್ ಮಾತಾಡ್ತಿರೋದು. ಯಾರು ಬಾಯಮ್ಮನೇ ಮಾತಾಡ್ತಿರೋದು. ಅಮ್ಮ ಹೇಗಿದ್ದಾಳೆ, ಮೇಘನಾ ಚೆನ್ನಾಗಿದ್ದಾಳೆ? ನಿನ್ನೆ ರಾತ್ರಿ ಫೋನ್ ಮಾಡಿದರೆ ಯಾಕೆ ಯಾರೂ ಎತ್ತಲಿಲ್ಲ?''

ಒರಟಾಗಿ ರಾಹುಲ್ ಪ್ರಶ್ನಿಸಿದಾಗ ಕೃತ್ತಿಕಾ ತಬ್ಬಿಬ್ಬಾದಳು.

“ಹಲೋ ಯಾಕೆ ಮಾತಾಡ್ತಾನೇ ಇಲ್ಲ, ನಂಬರ್ ಸರಿಯಾಗಿದೆ ತಾನೇ?''

“ಗುಡ್ ಇವಿನಿಂಗ್ ಸರ್. ನಾನು ಕೃತ್ತಿಕಾ ಮಾತಾಡ್ತಿರುವುದು.'' ಕೃತ್ತಿಕಾ ಮೆಲ್ಲಗೆ ಹೇಳಿದಳು.

“ಮೈಗಾಡ್, ಮೊದಲೇ ಹೇಳಬಾರದಿತ್ತ?''

“ಹೇಳಲು ನೀವು ಅವಕಾಶ ಕೊಟ್ಟರೆ ತಾನೇ?'' ಮನಸ್ಸಿನಲ್ಲೇ ಬಯ್ದುಕೊಂಡಳು.

“ಮೇಘನಾ ಬಲವಂತ ಮಾಡಿ ಕರೆಮುಕೊಂಡು ಬಂದಳು. ಸರ್ ಅಮ್ಮನ ಆರೋಗ್ಯ ಬೇರೆ ಸರಿ ಇಲ್ಲ. ಆಳುಗಳ ಮೇಲೆ ಮನೆ ಬಿಟ್ಟು ತಿಂಗಳುಗಟ್ಟಲೆ ಹೋದರೆ ಸರಿಯಾಗಿ ನೋಡಿಕೊಳ್ತಾರ ಸರ್? ಆಫ್ಟರ್ ಆಲ್ ದೆ ಆರ್ ಪೆಯಿಡ್ ಸರ್ವೆಂಟ್ಸ್.''

ಹೇಳುವುದನ್ನೇನೋ ಹೇಳಿಬಿಟ್ಟಳು. ಅನಂತರ ಆ ರೀತಿ ಹೇಳಲು ತನಗೇನು ಅಧಿಕಾರವಿತ್ತು ಎಂದುಕೊಂಡು ತುಟಿ ಕಚ್ಚಿದಳು.

“ಅಮ್ಮ ಈಗ ಆರೋಗ್ಯವಾಗಿದ್ದಾಳೆ ತಾನೇ. ಡಾಕ್ಟರ್ ಬಂದಿದ್ದರಾ?''

“ನೀವೇನೂ ವರಿ ಮಾಡಬೇಡಿ ಸರ್, ನಿದ್ರೆ ಮಾಡ್ತಾ ಇದ್ದಾರೆ.''


“ಮೇಘನಾ ಹೇಗಿದ್ದಾಳೆ?''

“ಇಲ್ಲೇ ಇದ್ದಾಳೆ ಸರ್. ಅವಳ ಜೊತೆ ಮಾತನಾಡಿ.''

ಮೇಘನಾಳನ್ನು ಕರೆದು ರಿಸೀವರನ್ನು ಅವಳಿಗೆ ಕೊಟ್ಟಳು.

ತಂದೆ ಮಗಳ ಮಧ್ಯೆ ಮಾತು ಸಾಗಿತು. ಮೇಘನಾ ತಂದೆ ಜೊತೆ ಮುದ್ದು ಮುದ್ದಾಗಿ ಮಾತನಾಡುತ್ತಿದ್ದಳು. ಅಷ್ಟರಲ್ಲಿ ತನ್ನ ಹೆಸರು ಕೇಳಿ ಬಂದದ್ದರಿಂದ ಅವಳ ಗಮನ ಅವರಿಬ್ಬರ ಮಾತಿನತ್ತ ಹೋಯಿತು.

“ಡ್ಯಾಡಿ ಡ್ಯಾಡಿ ನಂಗೆ ಇಲ್ಲಿ ಒಬ್ಬಳೇ ಇರಲು ತುಂಬ ಬೋರಾಗುತ್ತೆ. ಕೃತ್ತಿಕಾ ಆಂಟಿ ತುಂಬ ಒಳ್ಳೆಯವರು. ಅವರಿಗೆ ಇವತ್ತು ಇಲ್ಲೇ ಇರುವಂತೆ ಹೇಳಿ ಡ್ಯಾಡಿ. ಅಜ್ಜಿಗೆ



ಅಂತರ

ಅಂದು ನನ್ನವಳಿಗೆ
ಚೆನ್ನಾ ಎಂದರೆ ಮುಖದ
ತುಂಬ ನಾಚಿಕೆಯ
ಕೆಂಪಿನ ಕರೆ
ಇಂದು ಚೆನ್ನಾ ಎಂದರೆ
ಮುಖ ಸಿಡುಕಿ ತುಟಿ
ರೇಖೆಗಳು ಓರೆ ಕೋರೆ.

— ಕುಡಿನೋಟ ಕೃಷ್ಣಮೂರ್ತಿ

ಕಾಲಿಗೆ ಔಷಧಿ ಹಾಕಿ ಮಲಗಿಸಿದ್ದಾರೆ. ಅಜ್ಜಿಗೂ ಅಷ್ಟೇ ಈ ಆಂಟೀನ ಕಂಡ್ರೆ ತುಂಬ ಇಷ್ಟ. ನಾಳೇನೂ ಬಾಂತ ಹೇಳಿದ್ದಾರೆ. ಪ್ಲೀಸ್ ಡ್ಯಾಡಿ ನೀವೇ ಹೇಳಿ.'' ಕೃತ್ತಿಕಾಳತ್ತ ತಿರುಗಿದಳು.

"ಆಂಟಿ ಡ್ಯಾಡಿ ನಿಮ್ಮ ಜೊತೆ ಮಾತನಾಡಬೇಕಂತೆ'' ಎನ್ನುತ್ತ ಕರೆದಳು.

"ಕೃತ್ತಿಕಾ?''

"ಹೌದು.''

"ನಿನ್ನಿಂದ ನನಗೊಂದು ಹೆಲ್ಪ್ ಆಗಬೇಕಲ್ಲ.''

"ಹೇಳಿ ಸರ್ ಖಂಡಿತ ಮಾಡ್ತೀನಿ.'' ಆಶ್ವಾಸನೆಯಿತ್ತಳು.

"ನಾನು ಬರುವುದು ಇನ್ನೊಂದು ವಾರ ತಡವಾಗಬಹುದು. ನೀನು ದಯವಿಟ್ಟು ಮನೇಲಿ ಇದ್ದು ಅಮ್ಮನ್ನ, ಮೇಘನಾಳನ್ನು ಸ್ವಲ್ಪ ನೋಡಿಕೊಳ್ತೀಯ? ನನ್ನ ಆರೋಗ್ಯ ಬೇರೆ ಸರಿ ಇಲ್ಲ. ಅಲ್ದೆ ಯಾವುದೋ ಸಮಸ್ಯೇಲಿ ಸಿಕ್ಕಿ ಹಾಕಿಕೊಂಡುಬಿಟ್ಟಿದ್ದೀನಿ. ಅದನ್ನೆಲ್ಲ ಸರಿಪಡಿಸದೆ ನಾನು ಬರಲು ಆಗುವುದಿಲ್ಲ. ಆಫೀಸಿಗೆ ರಜೆ ಕಳುಹಿಸಿಬಿಡು. ಇಲ್ಲದಿದ್ದರೆ ಚಿಂತೆಯಿಲ್ಲ. ನಾನು ಬಂದನಂತರ ನೋಡಿಕೊಳ್ತೀನಿ. ಇಲ್ಲ ಅನ್ನಬೇಡ. ಸದ್ಯಕ್ಕೆ ನಿನ್ನ ಹೊರತು ಬೇರ್‍ಯಾರನ್ನೂ ನಾನು ನಂಬುವ ಹಾಗಿಲ್ಲ, ಪ್ಲೀಸ್.''

ಫ್ಯಾಕ್ಟರಿಗಳ ಮಾಲೀಕ, ಅಜಾನುಬಾಹು ರಾಹುಲ್ ಕೇಳಿದಾಗ ಕೃತ್ತಿಕಾ ಗೊಂದಲದಲ್ಲಿ ಸಿಕ್ಕಿ ಬಿದ್ದಳು. ಜೊತೆಗೆ ರಾಹುಲ್ ಬಹುವಚನದಿಂದ ಏಕವಚನಕ್ಕೆ ಇಳಿದದ್ದನ್ನು ಅವನ ಮಾತಿನ ಮಧ್ಯೆ ಗಮನಿಸಿದ್ದಳು. ತಾನ್ಯಾಕೆ ಇದರಲ್ಲಿ ಸಿಕ್ಕಿ ಹಾಕಿಕೊಳ್ಳಬೇಕು? ಮನಸ್ಸು ಒಂದು ಕ್ಷಣ ಹಿಂಜರಿಯಿತು.

"ಕೃತ್ತಿಕಾ ಏನು ಯೋಚನೆ ಮಾಡ್ತ ಇದ್ದೀಯ? ಆಗುವುದಿಲ್ಲವೆಂದು ಮಾತ್ರ ಹೇಳಬೇಡ. ನನ್ನ ಮಗಳು ಸರ್ಟಿಫೈಡ್ ಮಾಡಿದ ಮೇಲೆ ಎರಡನೆ ಮಾತೇ ಇಲ್ಲ.''

"ಆಯ್ತು ಸರ್, ರಜೆ ಹಾಕಿ ಇಲ್ಲೇ ಇರ್ತೀನಿ.''

"ಅಬ್ಬಾ ಐಯಾಮ್ ವೆರಿ ಮಚ್ ರಿಲೀಫ್ಡ್. ಥ್ಯಾಂಕ್ಸ್ ಎಲಾಟ್ ಕೃತ್ತಿಕಾ. ಬಿಡುವಾದಾಗ ಪುನಾ ಫೋನ್ ಮಾಡ್ತೀನಿ. ಖಂಡಿತ ಇರ್ತೀಯ ತಾನೇ?''


"ಶ್ಯೂರ್.'' ಫೋನ್ ಡಿಸ್‌ಕನೆಕ್ಟಾಯಿತು.

ಕೃತ್ತಿಕಾ ಸೋಫಾ ಮೇಲೆ ಕುಕ್ಕರಿಸಿದಳು. ಚಪ್ಪಾಳೆ ತಟ್ಟುತ್ತ ಓಡಿ ಬಂದ ಮೇಘನಾ ಅವಳ ತೊಡೆಯ ಮೇಲೆ ಕುಳಿತುಕೊಂಡಳು. ಯಾಕೋ ಏನೋ ಕೃತ್ತಿಕಾಳಿಗೆ ತಾನು ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡ ಹಾಗಾಯಿತು. ಮೇಘನಾಳ ಮಾತಿಗೆ ಮರುಳಾಗಿ ತಾನು ಬರಬಾರದಿತ್ತು ಎಂದುಕೊಂಡು ಮಿಡುಕಿದಳು. ಆದರೆ ಕಾಲ ಮಿಂಚಿ ಹೋಗಿತ್ತು. ಬೇರೆ ಯಾರದೋ ಸಂಸಾರದ ಜವಾಬ್ದಾರಿ ತನಗೇಕೆ, ಹೋಗಿಬಿಡಲೇ? ನಾನು ಎಲ್ಲರ ಹಾಗೆ ರಾಹುಲ್‌ನ ಬಳಿ ಸಂಬಳಕ್ಕೆ ಕೆಲಸ ಮಾಡುವವಳು. ಬಾಣಲೆಯಿಂದ ಬೆಂಕಿಗೆ ಬಿದ್ದನೇ? ಏನು ಮಾಡುವುದೆಂದು ತೋಚಲಿಲ್ಲ. ಅಷ್ಟರಲ್ಲಿ ಕೆನ್ನೆ ಬಳಿ ಮೃದುವಾಗಿ ಏನೋ ಸೋಕಿದಂತಾಯಿತು. ತನ್ನ ಯೋಚನೆಗಳಿಂದ 'ಹೂಂ' ಎಂದಳು.

"ಐ ಲವ್ ಯೂ ಆಂಟಿ.''

ಮೇಘನಾ ಅವಳ ಕೆನ್ನೆಗೆ ಮುತ್ತಿಟ್ಟಾಗ ಅವಳ ನಿರ್ಧಾರವೆಲ್ಲ ಗಾಳಿ ಪಾಲಾಯಿತು.

ರಜೆ ಹಾಕುವುದೋ ಬಿಡುವುದೋ ತಿಳಿಯದೆ ಕೃತ್ತಿಕಾ ತೊಳಲಾಡಿದಳು. ರಜೆ ಹಾಕಿದರೆ ಕಾರಣ ಎಲ್ಲರಿಗೂ ಹೇಳಬೇಕಾಗುತ್ತಿದೆ. ಏನೆಂದು ಹೇಳುವುದು. ಬಾಸ್ ತನ್ನನ್ನು ಇಲ್ಲಿರುವಂತೆ ಹೇಳಿದ್ದಾರೆ ಅಂದರೆ ನಂಬುತ್ತಾರೆಯೇ? ಅವರಿಲ್ಲದ ಸಮಯ ನೋಡಿಕೊಂಡು ಮನೇಲಿ ಅಧಿಕಾರ ಸ್ಥಾಪಿಸಿದ್ದಾಳೆಂದು ಹೇಳಬಹುದು. ತಾನಾದರೂ ರಾಹುಲ್ ಕೇಳಿಕೊಂಡ ತಕ್ಷಣ ಹೂಂ ಎಂದು ಯಾಕೆ ಹೇಳಿದೆ. ಅವನನ್ನು ಕಂಡರೆ ತನಗೆ ಕರುಣೆಯೇ, ಅನುಕಂಪವೇ ಅಥವಾ ಗೌರವವೇ? ಯಾವುದೂ ಅಲ್ಲವೆಂದು ಮನ ಹೇಳಿತು. ಗಂಡಸರ ಬಗ್ಗೆ ತನ್ನಲ್ಲಿ ಭಾವನೆಗಳೇ ಇಲ್ಲದಿರುವಾಗ ಪ್ರೀತಿ, ಪ್ರೇಮದ ಶಬ್ದಗಳು ದೂರವೇ. ಬಹುಶಾ ರಾಹುಲ್‌ನ ಹಂಗಿನಲ್ಲಿ ಇರುವ ಕಾರಣವಿರಬೇಕು. ತನ್ನ ಮನಸ್ಸಿಗೆ ತಾನೇ ಸಮಾಧಾನ ಹೇಳಿಕೊಂಡರೂ ಏನೋ ಹೇಳಿಕೊಳ್ಳಲಾಗದ ಚಡಪಡಿಕೆ. ತಲೆ ಗೊಂದಲಗಳ ಆಗರವಾಗಿತ್ತು. ಅದಿತಿಗೆ ಫೋನ್ ಮಾಡಿ ವಿಷಯ ತಿಳಿಸಲೇ ಎಂದುಕೊಂಡು ಮೇಲೆದ್ದಳು. ತಾನು ರಾಹುಲ್‌ನ ಮನೆಗೆ ಬಂದು ಭೇಟಿ ಮಾಡಿದ ವಿಷಯ ಅವಳಿಗೆ ಹೇಳದೆ ಇದ್ದದ್ದು ನೆನಪಾಯಿತು. ಈಗ ಹೇಳಿದರೆ ಸಿಕ್ಕಿ ಹಾಕಿಕೊಳ್ಳುವುದು ಖಂಡಿತ. ಇನ್ನು ನನ್ನ ಮಾತನ್ನಂತೂ ಅವಳು ನಂಬುವುದಿಲ್ಲ. ಒಳಗೆ ಏನೋ ಇರಬೇಕೆಂದು ಊಹಿಸುತ್ತಾಳೆ. ಹಾಗೆ ಹುಶಾರಿಲ್ಲವೆಂದು ತಿಳಿಸಿ ಒಂದು ವಾರ ಬರಲಾಗುವುದಿಲ್ಲವೆಂದು ಹೇಳಿ ಬಿಡುವುದು ಸರಿ ಎಂದುಕೊಂಡು ಅದಿತಿಗೆ ಫೋನ್ ಮಾಡಿ ತನ್ನ ಆರೋಗ್ಯ ಸರಿ ಇಲ್ಲದ ಕಾರಣ ಒಂದು ವಾರ ತಾನು ಆಫೀಸಿಗೆ ಬರುವುದಿಲ್ಲವೆಂದು ತಿಳಿಸಿದಳು. ಇದಕ್ಕಿದ್ದ ಹಾಗೆ ಆರೋಗ್ಯ ತಪ್ಪಲು ಕಾರಣವೇನೆಂದು ಕೇಳಿದ ಅದಿತಿಗೆ ಹಾರಿಕೆ ಉತ್ತರ ಕೊಟ್ಟು ಸುಮ್ಮನಾಗಿರಿಸಿದಳು. ಒಂದು ಸುಳ್ಳು ಮುಚ್ಚಲು ಇನ್ನೊಂದು, ಅದನ್ನು ನಿಜ ಎನಿಸಲು ಇನ್ನೊಂದು, ಅದನ್ನು ನಿಜ ಎನಿಸಲು ಇನ್ನೊಂದು. ಸದ್ಯ ರಾಹುಲ್ ಒಂದು ಸಲ ಬಂದುಬಿಟ್ಟರೆ ಸಾಕು ಎಂದುಕೊಂಡಳು. ಅವನ ಋಣದಲ್ಲಿ ತಾನೇಕೆ ಬೀಳಬೇಕು ಎಂದುಕೊಂಡು ಇಡೀ ಮನೆಯ ಜವಾಬ್ದಾರಿ ತೆಗೆದುಕೊಂಡಳು. ಕೃತ್ತಿಕಾಳ ಕೈವಾಡದಲ್ಲಿ ಪ್ರಹರ್ಷಕ್ಕೊಂದು ಹೊಸ ಕಳೆ ಬಂತು. ಸುಂದರಮ್ಮನವರ ಜವಾಬ್ದಾರಿಯನ್ನು ಆಳುಗಳ ಕೈಗೆ ಕೊಡದೆ ತಾನೇ ನೋಡಿಕೊಳ್ಳತೊಡಗಿದಳು. ಬಾಗಿಲ ಪರದೆಗಳು, ಕುಶನ್‌ಗಳು ತಮ್ಮ ದೂಳು ಕಳೆದುಕೊಂಡು ಮಿನುಗತೊಡಗಿದವು. ಟೀಪಾಯ್ ಮೇಲಿನ ಹೂದಾನಿಗಳಲ್ಲಿಯ



ನಿಮ್ಮ ಸುಖ ದುಃಖಗಳು ನಿಮ್ಮ ವರ್ತನೆಯನ್ನು ಅವಲಂಬಿಸಿರುತ್ತವೆ.
—ಪುರಂದರದಾಸ

ತನ್ನ ಆಸೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ನೀಚನಾದವನು ಎಂಥ ತಿರಸ್ಕಾರವನ್ನಾದರೂ ಸಹಿಸುತ್ತಾನೆ. —ಸುಭಾಷಿತ

ಅನುಭವವಾಗುತ್ತಿದ್ದಂತೆ ಧೈರ್ಯ ತಾನೇ ತಾನಾಗಿ ಬರುತ್ತದೆ. —ಸರ್ವಜೀವಿ

ಸಂಗ್ರಹ : ಎಂ. ಖಾಜಾಸಾಬ್

ಗುಲಾಬಿಗಳು ಇನ್ನಷ್ಟು ಶೋಭೆ ನೀಡಿದವು. ಆಳುಕಾಳುಗಳು ತಮ್ಮ ತಮ್ಮಲ್ಲೇ ಗುಸಪಿಸ ನಡೆಸಿದರೂ, ಅವಳಿಗೆ ಎದುರು ಹೇಳುವ ಧೈರ್ಯ ಇಲ್ಲದೆ ಅವಳ ಅಪ್ಪಣೆಯನ್ನು ಪಾಲಿಸ ತೊಡಗಿದ್ದರು. ತನ್ನ ಮಿತಿಯೊಳಗೆ ಎಲ್ಲರಿಂದಲೂ ಮೆಲ್ಲಗೆ ಕೆಲಸ ತೆಗೆಸುತ್ತಿದ್ದಳು. ರಾಹುಲ್‌ನ ರೂಮಿನ ಹೊರತಾಗಿ ಉಳಿದೆಲ್ಲ ರೂಮುಗಳು ಹೊಸ ಕಳೆ ಪಡೆದುಕೊಂಡವು. ಒಂದೆರಡು ಬಾರಿ ಅವನ ರೂಮನ್ನು ಕ್ಲೀನ್ ಮಾಡಲೇ ಎಂದುಕೊಂಡಳು. ಆದರೆ ಅವನ ಉರಿ ಮುಖ, ನೋಟದ ನೆನಪಾಗಿ ಬೇಡ ಎಂದು ಸುಮ್ಮನಾಗಿಬಿಟ್ಟಳು. ದಿನಕ್ಕೆರಡು ಬಾರಿ ರಾಹುಲ್‌ನ ಫ್ಯಾಮಿಲಿ ಡಾಕ್ಟರ್ ಬಂದು ಸುಂದರಮ್ಮನವರನ್ನು ನೋಡಿಕೊಂಡು ಹೋಗುತ್ತಿದ್ದರು. ಮೇಘನಾಳ ಹರ್ಷಕ್ಕಂತು ಪಾರವೇ ಇರಲಿಲ್ಲ. ಕೃತ್ತಿಕಾಳ ಕೈ ಹಿಡಿದುಕೊಂಡು ತಾನು ಅಪ್ಪಣೆ ಕೊಡುತ್ತ ಓಡಾಡುವುದೇ ಅವಳಿಗೆ ಸಂಭ್ರಮವಾಗಿಬಿಟ್ಟಿತ್ತು. ಕೃತ್ತಿಕಾಳ ಸಾನಿಧ್ಯದ ಪ್ರಭಾವವೋ, ಔಷಧದ ಪ್ರಭಾವವೋ ಸುಂದರಮ್ಮನವರು ಸ್ವಲ್ಪ ಎದ್ದು ಓಡಾಡುವಂತಾದರು. ಆಳುಗಳಿಗಂತೂ ಆಶ್ಚರ್ಯ. 'ಈ ಯಮ್ಮ ಅಜ್ಜಿ, ಮೊಮ್ಮಗಳ ಮೇಲೆ ಅದೇನು ಜಾದೂ ಮಾಡಿಬಿಟ್ಟಿದ್ದಾಳೋ' ಎಂದುಕೊಂಡು ಪಿಸುಗುಟ್ಟಿಕೊಂಡರೂ ಅವಳ ಕಾರ್ಯಕ್ಷಮತೆಯನ್ನು ಮೆಚ್ಚಿಕೊಳ್ಳದೆ ಇರಲಿಲ್ಲ. ಅಂತೂ ಪ್ರಹರ್ಷ ಹರ್ಷದಿಂದ ಬೆಳಗತೊಡಗಿತ್ತು. ಸಂಜೆಯಾದರೆ ಸಾಕು ಸಮಯ ತಿಳಿಯುವುದೇ ಕಷ್ಟವಾಗಿದ್ದ ಕೃತ್ತಿಕಾಳಿಗೆ ಈಗ ಸಮಯವೇ ಸಾಲದೇನೋ ಎನಿಸುತ್ತಿತ್ತು. ಕಳೆದ ಎರಡು ಮೂರು ದಿನಗಳಂತೂ ಕೆಲಸದ ಒತ್ತಡದಿಂದ ನಿಮಿಷಗಳಂತೆ ಕಳೆದು ಹೋಗಿದ್ದವು. ಮತ್ತೆ ಫೋನ್ ಮಾಡುತ್ತೇನೆಂದು ಹೇಳಿದ್ದ ರಾಹುಲ್ ಫೋನ್ ಮಾಡಿರಲೇ ಇಲ್ಲ.

"ನೋಡಿದೆಯಾಮ್ಮ ಅವನನ್ನು. ಅವನು ಹೀಗೆ ವಾರಗಟ್ಟಲೆ ಹೊರಗೆ ಹೋದಾಗ ನನಗೇನಾದರೂ ಆದರೆ ಈ ಮಗು ಗತಿ ಏನು? ನನಗಾದ್ರೂ ಪ್ರಾಯ ಬರುತ್ತಾ? ಎಲ್ಲೋ ಹೋದ ಜನ್ಮದಲ್ಲಿ ನೀನು ನನ್ನ ತಾಯಿಯಾಗಿದ್ದೆಂತ ಕಾಣುತ್ತೆ. ಈ ಕಾಲದಲ್ಲಿ ಯಾರಮ್ಮ ಇಷ್ಟು ಚೆನ್ನಾಗಿ ನೋಡಿಕೊಳ್ತಾರೆ? ನೀನು ಹೋದ ಮೇಲೆ ಎಲ್ಲ ಯಥಾ ಸ್ಥಿತಿಗೆ ಬರುತ್ತೆ." ಬೇಸರಪಟ್ಟುಕೊಂಡು ಹೇಳಿದರು.

"ಮೊಮ್ಮಗಳ ಮದುವೆ ನೋಡುವುದು ಬಿಟ್ಟು ಸಾಯುವ ಮಾತೇಕೆ ಆಡುತ್ತೀರಿ ಅಮ್ಮ?" ಕೃತ್ತಿಕಾ ಹಾಸ್ಯ ಮಾಡಿದಳು. "ಈ ಸಲ ಸರ್ ಬಂದರೆ ಬಿಡಬೇಡಿ. ಹೇಗಾದರೂ ಮಾಡಿ ಅವರನ್ನು ಮದುವೆಗೆ ಒಪ್ಪಿಸಿಬಿಡಿ.ಅನಂತರ ಎಲ್ಲ ಸರಿಹೋಗುತ್ತೆ."

"ಆ ಕೆಲಸ ಅಷ್ಟೊಂದು ಸುಲಭವಾಗಿದ್ದಿದ್ದರೆ ನಾನ್ಯಾಕಮ್ಮ ಹೀಗೆ ಒದ್ದಾಡಬೇಕಾಗಿತ್ತು. ಇಡೀ ಜಗತ್ತಿನಲ್ಲಿ ನನ್ನ ಮಗನಿಗೆ ಆ ಹೆಣ್ಣೇ ಕಾದಿರಬೇಕಾಗಿತ್ತ? ಅವಳೋ ಇಷ್ಟಪಟ್ಟವನೊಡನೆ ಸೇರಿಕೊಂಡು ಸುಖವಾಗಿದ್ದಾಳೆ. ನನ್ನ ಮಗನ ಬಾಳನ್ನು ಮಾತ್ರ ನರಕ ಮಾಡಿಬಿಟ್ಟಳು. ಕರ್ಪೂರದ ಗೊಂಬೆಯಂತಹ ಮಗುವನ್ನು ಬಿಟ್ಟು ಹೋಗಲಿಕ್ಕೆ ಮನಸ್ಸಾದರೂ ಹೇಗೆ ಬಂತು? ಮಗಳಿಗಿಂತ ಹೆಚ್ಚಾಗಿ ನೋಡಿಕೊಂಡೆ. ರಾಹುಲ್‌ನ ನೆರಳು ಬಿದ್ರೆ ಆಗ್ತಾ ಇರಲಿಲ್ಲ. ಹೊರಟು ಹೋಗ್ತೀನೀಂತ ಗೊತ್ತಾದ ಮೇಲಂತೂ ಮಗು ಕಡೆ ಗಮನ ಕೊಡುವುದನ್ನೇ ಬಿಟ್ಟು ಬಿಟ್ಟಳು. ಪ್ರಪಂಚದಲ್ಲಿ ಎಂತೆಂತಾ ಮೋಸಗಾರರು ಇರ್ತಾರೆ ನೋಡಮ್ಮ."

ಸೆರಗನ್ನು ತೆಗೆದು ಕಣ್ಣಿಗೆ ಒತ್ತಿಕೊಂಡರು. ಕೃತ್ತಿಕಾಳಿಗೆ ಈಗ ವಿಷಯ ಗೊತ್ತಿದ್ದರಿಂದ


ತಾಯಿ ಕರುಳ ಸಂಕಟ ಸಹಜವಾದದ್ದು ಎಂದುಕೊಂಡಳು. ಎಷ್ಟೇ ಆಗಲಿ ಹಿಂದಿನ ಕಾಲದ ಸಂಪ್ರದಾಯಸ್ಥ ಹೆಣ್ಣು. ಬಹುಶಾ ಅವರಿಗೆ ಇದೆಲ್ಲ ಅಸಹಜ ಎನಿಸುವುದು ಸರಿಯೇ. ರಾಹುಲ್‌ನ ವಿಶಾಲ ಮನೋಭಾವ ಅವಳಿಗೆ ಖುಶಿಯಾಯಿತು.

"ಹಿಂದೆ ನಡೆದದ್ದು ನಡೆದುಹೋಯಿತು. ಅದನ್ನೇ ನೆನಪಿಸಿಕೊಂಡು ಕೊರಗುತ್ತ ಕುಳಿತುಕೊಂಡರೆ ಸರಿ ಹೋಗುತ್ತ? ಪದೇ ಪದೇ ಇದೇ ವಿಷಯವನ್ನು ಮಗು ಎದುರಿಗೆ ಮಾತಾಡ್ತಿದ್ರೆ ಅವಳ ಮನಸ್ಸಿಗೂ ಘಾಸಿಯಾಗುತ್ತೆ. ಈಗ ಏನೂ ತಿಳುವಳಿಕೆಯಿಲ್ಲ. ತಿಳುವಳಿಕೆ ಬಂದ ಮೇಲೆ ಕೊರಗಿದರೆ ಕಷ್ಟವಾಗುತ್ತದೆ. ಮರೆತು ಹೋದ, ಕಳೆದು ಹೋದ ವಿಷಯವನ್ನು ಹಾಗೆ ಬಿಟ್ಟರೆ ನಿಮಗೂ ಒಳ್ಳೆಯದು, ಮಗು ದೃಷ್ಟೀಲೂ ಒಳ್ಳೆಯದು.'' ಕೃತ್ತಿಕಾ ನಿಧಾನವಾಗಿ ಹೇಳಿದಳು.

"ಕರುಳ ಸಂಕಟ ಏನೇನೋ ಮಾತಾಡಿಸುತ್ತೆ. ನಾನು ಸಂಕಟಪಡುವುದು ಅದಕ್ಕಲ್ಲ. ನನ್ನ ಮಗ ನೂರಾರು ಹೆಣ್ಣುಗಳನ್ನು ನೋಡಿ ಬೇಡ ಎಂದು ಇವಳನ್ನು ಮೆಚ್ಚಿ ಮದುವೆಯಾಗಿದ್ದ. ಕೇಡಿಗೆ ದೇವರು ಅವಳಿಗೆ ಆ ರೂಪ ಕೊಟ್ಟಿದ್ದನೋ ಏನೋ? ಬೇರೆ ಜಾತಿಯವನು ಅಂತ ತಂದೆ ತಾಯಿ ಅವನಿಗೆ ಕೊಡದೆ, ವಿಷಯ ಮುಚ್ಚಿಟ್ಟು ಮದುವೆ ಮಾಡಿದರು. ಮದುವೆ ಆದ ಮೇಲಾದ್ರೂ ಸರಿಯಾಗಿದ್ದಿದ್ದರೆ ಈ ವಿಷಯ ಅಲ್ಲಿಗೇ ಮರೆತೇ ಹೋಗುತ್ತಿತ್ತು. ಗಂಡನ ಬಳಿ ಎಲ್ಲ ಹೇಳಿಕೊಂಡು ತಾನು ಅವನನ್ನು ಬಿಟ್ಟಿರಲಾಗುವುದಿಲ್ಲ ಅಂತ ಹೇಳಿದ ಮೇಲೇನೇ ರಾಹುಲ್ ಅವನ ಅಡ್ರೆಸ್ ಪತ್ತೆ ಮಾಡಿ, ಡೈವೋರ್ಸಿಗೆ ಹಾಕಿದ್ದು. ಹೆರಿಗೆ ಆಗುವವರೆಗೂ ಪುಣ್ಯಾತ್ಮಗಿತ್ತಿ ಹೇಗಿದ್ಲೋ ಕಾಣೆ. ಮಗಳು ಹೀಗೆ ಮಾಡಿದಳಲ್ಲ ಅಂತ ಅವಳ ತಂದೆ ತಾಯಿ ಸೇರಿಸಲೇ ಇಲ್ಲ. ಡೈವೋರ್ಸ್ ಸಿಕ್ಕಿದ ಮೇಲೆ ರಾಹುಲನೇ ಇವಳ ಪರವಾಗಿ ಸಾಕ್ಷಿ ಸೈನ್ ಹಾಕಿ ರಿಜಿಸ್ಟರ್ ಮದುವೆ ಮಾಡಿಸಿದ. ಮಗೂನ ಮಾತ್ರ ಕೊಡೋದಿಲ್ಲಾಂತ ಮೊದಲೇ ಹೇಳಿಬಿಟ್ಟಿದ್ದ. ಅವಳಿಗೂ ಬೇಕಿರಲಿಲ್ಲ.''

"ಈಗ ಎಲ್ಲಿದ್ದಾರೆ, ಆಮೇಲೆ ಬರಲೇ ಇಲ್ವ? ಮಗೂ ಬಗ್ಗೆ ಆಗಾಗ್ಗೆ ವಿಚಾರಿಸಿಕೊಳ್ತಾ ಇರ್‍ತಾರ?'' ಕುತೂಹಲ ತಡೆಯಲಾರದೆ ಕೇಳಿದಳು.

"ಇಬ್ಬರೂ ಅಮೆರಿಕದಲ್ಲಿದ್ದಾರೇಂತ



ಗುರು : 'ಬೆಲೆ ಏರಿಕೆ' ಈ ಪದದ ವಿರುದ್ಧ ಪದವನ್ನು ಹೇಳು.

ಶಿಷ್ಯ : ಇದಕ್ಕೆ ವಿರುದ್ಧ ಪದವಿಲ್ಲ, ಸಾರ್.

ಗುರು : ಏಕೆ ಇಲ್ಲ?

ಶಿಷ್ಯ : ಏಕೆಂದರೆ ಬೆಲೆಗಳು ಮೇಲಕ್ಕೆ ಏರುತ್ತವೆಯೇ ಹೊರತು ಇಳಿಯುವುದೇ ಇಲ್ಲವಲ್ಲ.

— ಎ. ಕೆ. ಪಟ್ಟಾಭಿ

ಕೇಳಿದೆ. ಒಂದೆರಡು ಸಲ ಮೇಘನಾಳ ನೋಡಬೇಕೂಂತ ಬಂದಿದ್ಲು. ನಾನಂತೂ ಅವಳ ಮುಖದರ್ಶನ ಮಾಡುವುದಿಲ್ಲ. ಇಲ್ಲಿಗೆ ಕಾಲಿಡುವುದೇ ಬೇಡಾಂತ ಹೇಳಿಬಿಟ್ಟೆ ರಾಹುಲನೇ ಮಗಳನ್ನು ಅವರಿದ್ದ ಹೋಟೆಲಿಗೆ ಕರೆದುಕೊಂಡು ಹೋಗಿದ್ದ. ಫೋನ್ ಮಾಡ್ತಿರ್ತಾಳೇಂತ ಕಾಣುತ್ತೆ. ನನಗಂತೂ ಇಬ್ಬರನ್ನೂ ಅರ್ಥ ಮಾಡಿಕೊಳ್ಳಲಿಕ್ಕೆ ಆಗಿಲ್ಲ. ಇವನೂ ಅಮೆರಿಕಕ್ಕೆ ಹೋಗ್ತಾ ಇರ್ತಾನಲ್ಲ ಮಾತನಾಡಿಸಬಹುದು. ಒಂದೆರಡು ಸಲ ನನಗೆ ಹೇಳಲು ಬಂದ. ಅವಳ ವಿಷಯ ಎತ್ತಬೇಡಾಂದೆ. ಅವತ್ತಿನಿಂದ ಹೇಳುವುದಿಲ್ಲ. ಕಳೆದ ವಾರ ಸಹ ಫೋನ್ ಬಂದ ಹಾಗಿತ್ತು. ತುಂಬ ಹೊತ್ತು ಮಾತಾಡ್ತ ಇದ್ದ. ಮಧ್ಯೆ ಮಗಳ ಹೆಸರೂ ಹೇಳ್ತಾ ಇದ್ರು. ಇಂಗ್ಲಿಷ್ ನನಗೆಲ್ಲಿ ಬರುತ್ತೆ?''

"ಅವರದು ಫೋಟೋ ಇಲ್ವ?''

"ಪಾಪ, ಮದುವೆಯಾದ ಹೊಸತರಲ್ಲಿ ರೂಮಿನ ತುಂಬ ಅವಳದ್ದೇ ಫೋಟೋಗಳನ್ನು ನೇತು ಹಾಕಿಕೊಂಡಿದ್ದ. ಅವನಿಗಂತೂ ಹೆಂಡತೀನ ಎಲ್ಲಿ ಇಟ್ಟರೂ ಸಾಲದು. ನಡೆದರೆ ಎಲ್ಲಿ ಸವೆದುಹೋಗ್ತಾಳೋ ಅನ್ನೋ ಹಾಗೆ ನೋಡ್ಕೋತಾ ಇದ್ದ. ಇಂತಹ ಗಂಡನನ್ನು ಬಿಟ್ಟು ಹೋಗಲು ಮನಸ್ಸಾದ್ರು ಹೇಗೆ ಬಂತೋ ಕಾಣೆ. ಡೈವೋರ್ಸ್ ಆದ ಮೇಲೆ ಫೋಟೋಗಳನ್ನೆಲ್ಲ ತೆಗೆದು ಬೀರುವಿನಲ್ಲಿಟ್ಟು ಬೀಗ ಹಾಕಿಬಿಟ್ಟ ರಾತ್ರಿ ಎಷ್ಟೋ ಸಲ ಆ ಫೋಟೋಗಳನ್ನು ನೋಡ್ತಾ ಕುಳಿತುಬಿಡುತ್ತಿದ್ದ. ಅವನಾಗುವ ಹೊತ್ತಿಗೆ ಇಂತಹ ಪೆಟ್ಟನ್ನು ತೆಗೆದುಕೊಂಡ. ಹೀಗಾದ ಮೇಲೆ ಮಹಾ ಮುಂಗೋಪಿಯಾಗಿಬಿಟ್ಟ. ಮಾತು ಮಾತಿಗೂ ರೇಗ್ತಾನೆ. ಮಗು ಏನಾದ್ರೂ ಇಲ್ದೆ ಹೋಗಿದ್ದಿದ್ದರೆ ಸತ್ತೇ ಹೋಗ್ತಾ ಇದ್ದನೋ ಏನೋ. ಸದ್ಯ ಅದೊಂದು ಉಪಕಾರ ಮಾಡಿದಳು.'' ಕಹಿಯಾಗಿ ನುಡಿದರು.

"ತುಂಬ ಇಷ್ಟ ಪಡ್ತಾ ಇದ್ರು ಅಂತ ಕಾಣುತ್ತೆ.''

"ಇಷ್ಟಾನಾ, ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸ್ತಾ ಇದ್ದ. ಹೋಗುವಾಗ ಅವಳ ಸೀರೆ, ಬಟ್ಟೆ ಒಡವೆ ಎಲ್ಲವನ್ನು ತಾನೇ ತೆಗೆದುಕೊಂಡು ಹೋಗಿ ಕೊಟ್ಟು ಬಂದ. ಅದಿದ್ರೆ ಅವಳ ನೆನಪು ಜಾಸ್ತಿ ಆಗುತ್ತೆ, ಅವಳ ವಸ್ತುಗಳು ಯಾವುವೂ ನನ್ನ ಕಣ್ಣಿಗೆ ಬೀಳುವುದು ಬೇಡಾಂತ ಹೇಳಿಬಿಟ್ಟ. ಇಷ್ಟು ಚಿಕ್ಕ ವಯಸ್ಸಿಗೆ ಸನ್ಯಾಸಿಯ ತರಹ ಇರುವುದನ್ನು ಅಭ್ಯಾಸ ಮಾಡಿಕೊಂಡು ಬಿಟ್ಟ. ಅವಳನ್ನು ಮೀರಿಸೋ ಹೆಣ್ಣು ತಂದು ನಿನಗೆ ಮದುವೆ ಮಾಡ್ತೀನಿ ಅಂದೆ. ಒಬ್ಬಳು ಈಗ ಕೊಟ್ಟಿರೋ ಪೆಟ್ಟೇ ಸಾಕಾಗಿದೆ,ಆ ವಿಷಯ ಎತ್ತಲೇ ಬೇಡಾಂದ.''

ಕೃತ್ತಿಕಾಳ ದೃಷ್ಟೀಲಿ ರಾಹುಲ್ ಹಿಮಾಲಯದಷ್ಟು ಎತ್ತರ ಏರಿ ಬಿಟ್ಟಿದ್ದ. ಇಷ್ಟೊಂದು ಪ್ರೀತಿಸೋ ಗಂಡನನ್ನು ಬಿಟ್ಟು ಹೋಗಬೇಕಾದರೆ ಆಕೆ ಅವನನ್ನು ಇನ್ನೆಷ್ಟು ಪ್ರೀತಿಸಿದ್ಲು? ಪಾಪ ಆಕೆಗೆ ಗೊತ್ತಿಲ್ಲಾಂತ ಕಾಣುತ್ತೆ, ನಾವು ಸುಖಿಯಾಗಿರುವುದು ನಾವು ಪ್ರೀತಿಸುವವರ ಹತ್ತಿರ ಅಲ್ಲ, ನಮ್ಮನ್ನು ಯಾರು ಪ್ರೀತಿಸುತ್ತಾರೋ ಅವರ ಹತ್ತಿರಾಂತ. ಅದನ್ನಾಕೆ ತಿಳಿದುಕೊಂಡಿದ್ದಿದ್ದರೆ ಪ್ರಾಯಶಃ ಇಂತಹ ಸಾಹಸ ಮಾಡುತ್ತಿರಲಿಲ್ಲವೇನೋ? ಇಷ್ಟೆಲ್ಲ ಅಗ್ನಿಪರ್ವತವನ್ನು ಮನಸ್ಸಿನೊಳಗಿಟ್ಟುಕೊಂಡು ಕುದಿಯುತ್ತಿರುವ ರಾಹುಲ್‌ನ ಬಗ್ಗೆ ಕನಿಕರವೆನಿಸಿತು. ಹಾಗೆ ಅವಳು ಮಾಡಿದ ತಪ್ಪಿಗೆ ಇಡೀ ಹೆಣ್ಣು ಕುಲವನ್ನೇ ದ್ವೇಷಿಸುವ ಅವನ ಸ್ವಭಾವ ಸಹ ಅರ್ಥವಿಲ್ಲದ್ದು ಎನಿಸಿತು. ಅದನ್ನು ಸುಂದರಮ್ಮನವರ ಎದುರು ಹೇಳಿ ಅವರ ಮನಸ್ಸನ್ನು

ಮತ್ತಷ್ಟು ನೋಯಿಸುವ ಇಚ್ಛೆಯಾಗಲಿಲ್ಲ.

"ಕಾಲ ಬಂದರೆ ಎಲ್ಲ ತಾನಾಗೇ ಸರಿ ಹೋಗುತ್ತದೆ. ಒಳ್ಳೆಯವರಿಗೆ ಕೆಟ್ಟದು ಆಗಲು ಖಂಡಿತ ಸಾಧ್ಯವಿಲ್ಲ.''

ಅವರಿಗೆ ಸಾಂತ್ವನ ಹೇಳಿದಳು.

"ಏನೋಮ್ಮ ನಿನ್ನ ಬಾಯ ಹರಕೆ ನಿಜವಾದರೆ ಸಾಕು.''

ಸುಂದರಮ್ಮನವರು ಒಂದೆರಡು ಬಾರಿ ಕೃತ್ತಿಕಾಳ ತಂದೆ ತಾಯಿಯ ಬಗ್ಗೆ ಮಾತಿನ ಮಧ್ಯೆ ವಿಚಾರಿಸಲು ಪ್ರಯತ್ನಿಸಿದಾಗ ಕೃತ್ತಿಕಾ ಅವರು ಈಗ ಬದುಕಿಲ್ಲವೆಂಬ ವಿಷಯ ಬಿಟ್ಟು ಇನ್ನೇನನ್ನೂ ಹೇಳಿರಲಿಲ್ಲ. ಅವರೂ ಅಷ್ಟೇ ಪುನಃ ಕೆದಕಿ ಕೇಳಲು ಹೋಗಿರಲಿಲ್ಲ. ಅನುಕಂಪ ತೋರಿಸಿ ಸುಮ್ಮನಾಗಿದ್ದರು. ಅವರಿಗೆ ಮೇಘನಾಳಿಗೆ ಕೃತ್ತಿಕಾ ಅನಿವಾರ್ಯವಾಗಿಬಿಟ್ಟಿದ್ದಳು. ಬೆಳಗ್ಗೆ ಎದ್ದು ಮನೆಯ ಮೇಲ್ವಿಚಾರಣೆ ನೋಡಿಕೊಳ್ಳುವುದರಿಂದ ಹಿಡಿದು, ಮೇಘನಾಳ ಜವಾಬ್ದಾರಿ, ಸುಂದರಮ್ಮನವರ ಆರೋಗ್ಯದ ಜವಾಬ್ದಾರಿ ಎಲ್ಲವನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತಿದ್ದಳು. ಈಗ ಒಂದು ವಾರದಿಂದ ಅಂತೂ ಸುಂದರಮ್ಮನವರಿಗೆ ಕೃತ್ತಿಕಾ ತಮ್ಮ ಮನೆಯವಳೇ ಅನ್ನುವಷ್ಟರ ಮಟ್ಟಿಗೆ ಆಗಿ ಹೋಗಿದ್ದಳು. ಮೇಘನಾಳಿಗಂತೂ ಬಂದ ತಕ್ಷಣ ಕೃತ್ತಿಕಾ ಕಾಣಬೇಕು. ಬಟ್ಟೆ ಬದಲಿಸುವುದರಿಂದ ಹಿಡಿದು ಊಟ ತಿಂಡಿ, ಅವಳ ಹೋಂವರ್ಕ್ ಎಲ್ಲ ಕೃತ್ತಿಕಾಳೇ ಮಾಡಬೇಕು. ಆದರೂ ಎಷ್ಟೋ ಬಾರಿ ಕೃತ್ತಿಕಾ ಯೋಚಿಸುತ್ತಿದ್ದಳು. ಇವರ ಬದುಕಿನಲ್ಲಿ ನನ್ನ ಪಾತ್ರವೇನು? ರಾಹುಲ್ ಬಂದ ತಕ್ಷಣ ನಾನ್ಯಾರೋ, ಇವರ್‍ಯಾರೋ, ಯಾರನ್ನೂ ಅತಿಯಾಗಿ ಹಚ್ಚಿಕೊಳ್ಳಬಾರದು ಎಂದು ಕೊಂಡರೂ ಸುಂದರಮ್ಮ ಬಾಯ್ತುಂಬ 'ಕೃತ್ತಿಕಾ' ಎಂದು ಕರೆದಾಗ ಮೇಘನಾ 'ಆಂಟಿ' ಎಂದು ಸೆರಗು ಹಿಡಿದುಕೊಂಡಾಗ ತನ್ನನ್ನು ತಾನೇ ಮರೆತು ಬಿಡುತ್ತಿದ್ದಳು. ಎಲ್ಲಕ್ಕಿಂತ ರಾಹುಲ್ ತನ್ನ ಮೇಲೆ ವಹಿಸಿದ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಬೇಕೆಂಬ ಕಾತುರ ಕಾಣುತ್ತಿತ್ತು.

ಬಿಡುವಾದಾಗ ಫೋನ್ ಮಾಡುತ್ತೇನೆಂದ ರಾಹುಲ್ ಅನಂತರ ಫೋನ್ ಮಾಡಿರಲೇ ಇಲ್ಲ. ದಿನಕಳೆದಂತೆ ಕೃತ್ತಿಕಾಳೂ ಚಡಪಡಿಸುತ್ತಿದ್ದಳು. ಈ ಪುಣ್ಯಾತ್ಮನಿಗೆ ಮನೆ ಕಡೆ ಗಮನವೇ ಇಲ್ಲವೇನೋ? ತಾಯಿ, ಮಗಳನ್ನು ಮೂರನೆಯವರ ಜವಾಬ್ದಾರೀಲಿ ಬಿಟ್ಟು ಎಷ್ಟು

'ರಾಗಸಂಗಮ'

ಲಾಟರಿ ಡ್ರಾ - ೧೪೪ರ ವಿಜೇತರು



ಬಿ. ಹಂಸವೇಣಿ
ಮಾಗಡಿ ರಸ್ತೆ
ಬೆಂಗಳೂರು.

ಹಾಯಾಗಿದ್ದಾನೆ. ಬಂದರೆ ತಾನು ಮನೆಗಾದರೂ ಹೋಗಬಹುದು. ಇಷ್ಟು ದೀರ್ಘ ರಜೆಯನ್ನು ಬಂದಾಗಿನಿಂದ ತಾನೆಂದೂ ಹಾಕಿರಲಿಲ್ಲ. ಒಳ್ಳೆ ಸಿಕ್ಕಿಹಾಕಿಕೊಂಡೆನಲ್ಲ. ಅವಳ ಯೋಚನಾ ತಂತುಗಳು ಎತ್ತೆತ್ತಲೋ ಸಾಗುತ್ತಿದ್ದವು. ಇಪತ್ತೊಂದು ದಿನ ನೋಡುವುದು. ಬಾರದಿದ್ದರೆ ಸುಂದರಮ್ಮನವರಿಗೆ ಹೇಳಿ ಹೋಗಿಬಿಡುವುದು. ಏನಾದರೂ ಮಾಡಿಕೊಳ್ಳಲಿ ಎಂದು ಸುಂದರಮ್ಮನವರಿಗೆ ಔಷಧಿ ಕೊಡಬೇಕೆಂಬುದು ನೆನಪಾಗಿ ಮೇಲೆದ್ದಳು. ಅಷ್ಟರಲ್ಲಿ ನಿದ್ರೆ ಮುಗಿಸಿದ್ದ ಅವರೇ ಕೆಳಗಿಳಿದು ಬರುತ್ತಿದ್ದರು. ಹೊರಗೆ ಟ್ಯಾಕ್ಸಿಯ ಸದ್ದಾಯಿತು. ಯಾರಪ್ಪ ಎಂದುಕೊಂಡು ಅವರು ಹೊರಗೆ ಬಂದರು. ಕೃತ್ತಿಕಾಳೂ ಅವರ ಜೊತೆ ಬಂದಳು. ರಾಹುಲ್ ಟ್ಯಾಕ್ಸಿಯಿಂದ ಇಳಿಯುತ್ತಿದ್ದ. ಒಂದೇ ವಾರದಲ್ಲಿ ಸಾಕಷ್ಟು ಬದಲಾಯಿಸಿಬಿಟ್ಟಿದ್ದ. ತುಂಬ ಸೊರಗಿಹೋದಂತೆ ಕಾಣಿಸಿತು. ಕೆದರಿದ ತಲೆ ಕೂದಲು, ಅವನ ಅಸ್ತವ್ಯಸ್ತವಾಗಿದ್ದ ಬಟ್ಟೆ ನೋಡಿ ಕೃತ್ತಿಕಾಳಿಗೆ ಪಾಪ ಎನಿಸಿತು. ಜೊತೆಗೆ ಪುಣ್ಯಾತ್ಮ ಬಂದನಲ್ಲ ಎಂದು ಬಿಡುಗಡೆಯ ಉಸಿರು ಹಾಕಿದಳು. ಟ್ಯಾಕ್ಸಿಯ ಹಣ ಕೊಟ್ಟು ಲಗ್ಗೇಜನ್ನು ಆಳಿಗೆ ತರಲು ಹೇಳಿ ಒಳಗೆ ಬಂದ. ಬಾಗಿಲ ಬಳಿ ನಿಂತಿದ್ದ ತಾಯಿಯನ್ನು ನೋಡಿ ಆಶ್ಚರ್ಯ, ಸಂಭ್ರಮ ಎರಡೂ ಆಯಿತು.

"ಅಮ್ಮಾ ಇದೇನು ನೀನು ಇಲ್ಲಿ."

ಬಿಟ್ಟ ಬಾಯಿ ಬಿಟ್ಟ ಹಾಗೆ ನೋಡುತ್ತಿದ್ದ ಮಗನನ್ನು ಕಂಡು ಸುಂದರಮ್ಮ ನಸು ನಕ್ಕರು.

"ನನ್ನದಿರಲಿ ನೀನ್ಯಾಕೆ ಇಷ್ಟು ಬಡವಾಗಿ ಬಿಟ್ಟಿದ್ದಿಯ? ಊಟ ತಿಂಡಿ ಸರಿಯಾಗಿ ಮಾಡ್ತಾ ಇದ್ದಿಯೋ ಇಲ್ವೋ?" ಅಕ್ಕರೆಯಿಂದ ಮಗನನ್ನು ಗದರಿದರು.

"ಮೇಘನಾ ಹೇಗಿದ್ದಾಳೆ. ಸ್ಕೂಲಿಂದ ಇನ್ನೂ ಬಂದಿಲ್ವ?"

ಒಳಗಡಿಯಿಟ್ಟ ಮೊದಲ ನೋಟದಲ್ಲೇ ಮನೆಯಲ್ಲಿನ ಬದಲಾವಣೆಯನ್ನು ಗಮನಿಸಿದ.

"ನಾನು ನಮ್ಮ ಮನೆಗೇ ಬಂದಿದ್ದೀನಿ ತಾನೇ, ಮರೆತು ಬೇರೆ ಯಾರದಾದ್ರೂ ಮನೆಗೆ ಹೋಗಿಲ್ಲವಲ್ಲ?" ನಗುತ್ತ ಕೃತ್ತಿಕಾಳನ್ನೇ ನೋಡಿದ.

ಕೃತ್ತಿಕಾ ಆಗಲೇ ಒಳಗೆ ಹೋಗಿದ್ದಳು. ಬಾಯಮ್ಮ ತಂದಿಟ್ಟ ಕಾಫಿಯನ್ನು ಹೀರುತ್ತ ಸೋಫಾ ಮೇಲೆ ಕುಳಿತುಕೊಂಡ. ಸುಂದರಮ್ಮನವರು ಮಗನ ಪಕ್ಕದಲ್ಲೇ ಕುಳಿತುಕೊಂಡರು. ಅವರಿಗೆ ಮಗನ ಹತ್ತಿರ ಹೇಳಲು ಬೇಕಾದಷ್ಟು ವಿಷಯಗಳಿದ್ದವು. ಮಗ ಆಯಾಸಗೊಂಡಿದ್ದಾನೆಂಬುದು ಅವರ ಗಮನಕ್ಕೆ ಬಂದಿರಲಿಲ್ಲ. ಅಷ್ಟರಲ್ಲಿ ಕೃತ್ತಿಕಾ ತನ್ನ ಬ್ಯಾಗಿನೊಂದಿಗೆ ಹೊರಬಂದಳು. ಸುಂದರಮ್ಮ, ರಾಹುಲ್ ಆಶ್ಚರ್ಯದಿಂದ ಅವಳತ್ತ ನೋಡಿದರು.

"ಸರ್ ನೀವು ನನಗೆ ವಹಿಸಿದ ಜವಾಬ್ದಾರೀನ ಸರಿಯಾಗಿ ನಿರ್ವಹಿಸಿದೆನೋ ಇಲ್ಲವೋ ಗೊತ್ತಿಲ್ಲ. ನೀವು ಬರಲೀಂತ ಕಾಯ್ತಿದ್ದೆ. ನಾನಿನ್ನು ಮನೆಗೆ ಹೋಗ್ತೀನಿ."

"ಇದೇನಮ್ಮ ಹೀಗೆ, ಇದ್ದಕ್ಕಿದ್ದ ಹಾಗೆ ಹೊರಟು ಬಿಟ್ಟೆ. ಮೇಘನಾ ಬಂದ್ರೆ ಗಲಾಟೆ ಮಾಡ್ತಾಳೆ."

ಸುಂದರಮ್ಮನವರ ಧ್ವನಿಯಲ್ಲಿ ಅಸಹಾಯಕತೆ ಮೂಡಿತ್ತು. ಬಹುಶಾ ಇಷ್ಟು ಬೇಗ ಅವಳು ಹೊರಟು ಬಿಡುತ್ತಾಳೆಂದು ಅವರು ಊಹಿಸಿರಲಿಲ್ಲ.

"ನಾನಾಗಲೇ ಬಂದು ಒಂದು ವಾರವಾಯಿತು ಅನ್ನೋದನ್ನ ಮರೆತು ಬಿಟ್ರಾ?

ಮೇಘನಾ ಬಂದ್ರೆ ಹೋಗಲು ಬಿಡುವುದಿಲ್ಲ. ಅವಳು ಬಂದ ಮೇಲೆ ನೀವೇ ಹೇಳಿಬಿಡಿ. ಹುಶಾರಾಗಿದ್ದೇನೆಂದುಕೊಂಡು ಮಾತ್ರ, ಔಷಧಿ ತೆಗೆದುಕೊಳ್ಳುವುದನ್ನು ನಿಲ್ಲಿಸಿ ಬಿಟ್ಟೀರಾ ಆಮೇಲೆ.''

ಸುಂದರಮ್ಮ ಏನೂ ಹೇಳಲು ತೋಚದೆ ರಾಹುಲ್‌ನತ್ತ ನೋಡಿದರು.

"ಕೃತ್ತಿಕಾ ಸ್ವಲ್ಪ ಹೊತ್ತು ತಡೆದರೆ ಕಾರ್ ಕಳುಹಿಸಿಕೊಡ್ತೀನಿ.''

"ಬೇಡ ಸರ್, ನಡೆದೇ ಹೋಗ್ತಿನಿ. ನಿಮಗೆ ಬಂದ ಪೋಸ್ಟನ್ನೆಲ್ಲ ನಿಮ್ಮ ರೂಮಿನ ಡ್ರಾಯರ್‌ನಲ್ಲಿರಿಸಿದ್ದೇನೆ. ಬರ್ತೀನಿ ಅಮ್ಮ'' ಎನ್ನುತ್ತ ಇನ್ನೊಂದು ಕ್ಷಣ ಅಲ್ಲಿ ನಿಂತರೆ ಇನ್ನೆಲ್ಲಿ ಬಲವಂತ ಮಾಡುತ್ತಾರೋ ಎಂದುಕೊಂಡು ಬೇಗ ಬೇಗ ಹೊರ ಬಂದಳು. ಏನೋ ದೊಡ್ಡ ಜವಾಬ್ದಾರಿ ಕಳೆದುಕೊಂಡವಳ ತರಹ ತಲೆ ಹಗುರವಾಗಿತ್ತು.

ರಾಹುಲ್‌ನಿಗೂ ಶಾಕ್ ಆದ ಹಾಗಾಗಿತ್ತು. ಅವನು ಏನನ್ನಾದರೂ ಹೇಳುವ ಮೊದಲೇ ಕೃತ್ತಿಕಾ ಹೊರಗೆ ಹೋಗಿಯಾಗಿತ್ತು. ತಾಯಿ, ಮಗ ಇಬ್ಬರೂ ಬೆಪ್ಪಾಗಿ ಒಬ್ಬರನ್ನೊಬ್ಬರು ನೋಡತೊಡಗಿದರು. ಥ್ಯಾಂಕ್ಸನ್ನಾದರೂ ಹೇಳಬೇಕೆಂದುಕೊಂಡು ಹೊರಬಂದ. ಅಷ್ಟರಲ್ಲಿ ಕೃತ್ತಿಕಾ ಆಟೋ ಹತ್ತಿ ಕುಳಿತಿದ್ದು ಕಾಣಿಸಿತು.

* * *

ಮಾರನೇ ದಿವಸ ಆಫೀಸಿಗೆ ಬಂದ ಕೃತ್ತಿಕಾ ಇದ್ದಕ್ಕಿದ್ದ ಹಾಗೆ ವಾತಾವರಣ ಬದಲಾಯಿಸಿರುವುದನ್ನು ಗಮನಿಸಿದಳು. ಅವಳು ಮುಗುಳ್ನಕ್ಕರೂ ಯಾರು ಅವಳತ್ತ ತಿರುಗಿ ನೋಡುವ ಪ್ರಯತ್ನವನ್ನು ಮಾಡಲಿಲ್ಲ. ಬದಲಾಗಿ ತಮ್ಮಲ್ಲೇ ಗುಸಪಿಸ ಮಾತನಾಡಿಕೊಂಡು ಕೃತ್ತಿಕಾಳತ್ತ ನೋಡಿಕೊಂಡು ನಕ್ಕರು. ಒಂದೆರಡು ಕೀಳು ಅಭಿರುಚಿಯ ಮಾತುಗಳು ಅವಳ ಕಿವಿಗೆ ಬಿದ್ದರೂ ತನ್ನನ್ನೇ ಉದ್ದೇಶಿಸಿ ಹೇಳಿದ್ದೆಂದು ಗೊತ್ತಿಲ್ಲದ ಕಾರಣ ಅವರನ್ನು ನಿರ್ಲಕ್ಷಿಸಿ ತನ್ನ ಸೀಟಿನಲ್ಲಿ ಹೋಗಿ ಕುಳಿತುಕೊಂಡಳು. ಅದಿತಿಯಾದರೂ ಬಂದಿದ್ದರೆ ಎಂದುಕೊಂಡು ಅವಳ ಕುರ್ಚಿಯತ್ತ ನೋಡಿದಳು, ಖಾಲಿಯಾಗಿತ್ತು. ಅವಳ ಕಬೋರ್ಡಿನ ಕೀಯನ್ನು ಕೇಶವಯ್ಯನವರ ಬಳಿ ಕೊಟ್ಟು ಹೋಗಿದ್ದರಿಂದ ಅದನ್ನು ತೆಗೆದುಕೊಂಡು ಬರಲು ಹೇಳಲು



ಬಡತನ

ಹಸಿದ ಮಗು
ಹಾಲುಣಲು
ಜಗ್ಗಿತ್ತು ಮೊಲೆಯ
ದಿಕ್ಕೆಟ್ಟ ಹಡೆದವ್ವ
ತನ್ನೊಳಗೊಂಡು
ಇಕ್ಕಿದ್ದಳು
ವಿಷವ
ಪಾಪ
ಹಾಲಿಲ್ಲ ಮೊಲೆಯಾಗ.

— ಬಾಗೂರು ರಮೇಶ್

ಅಟೆಂಡರ್ ಚಂದ್ರಪ್ಪನನ್ನು ಕರೆದಳು. ಮೂಲೆಯಲ್ಲಿ ಮೀಟಿಂಗ್ ನಡೆಸುತ್ತಿದ್ದ ಚಂದ್ರಪ್ಪ ಅವಳ ಕರೆ ಕೇಳಿದರೂ ಕೇಳಿಸದವನಂತೆ ನಟಿಸಿದ. ಹಿಂದೆಲ್ಲ ಅವಳನ್ನು ಹಾಸ್ಯ ಮಾಡಲು ಅವನು ಎರಡೂ ಕಿವಿ ಮುಚ್ಚಿಕೊಂಡು ಕಿವುಡನಂತೆ ನಟಿಸಿ ನಂತರ ಬರುತ್ತಿದ್ದರಿಂದ ಕೃತ್ತಿಕಾ ಹಾಗೆ ಮಾಡುತ್ತಿರಬೇಕೆಂದುಕೊಂಡು ಒಂದು ನಿಮಿಷ ಕಾದಳು. ಆವಳಿಗೆ ಬೆನ್ನು ಮಾಡಿ ಮಾತನಾಡುತ್ತಿದ್ದ ಚಂದ್ರಪ್ಪ ಇತ್ತ ತಿರುಗುವ ಪ್ರಯತ್ನವನ್ನೇ ಮಾಡಲಿಲ್ಲ. ಬೇಕೆಂದೇ ಹೇಗೆ ಮಾಡುತ್ತಿದ್ದಾನೆಂದು ಅವಳಿಗೆ ಅರಿವಾಯಿತು. ಬೇರೆಯ ಸಮಯದಲ್ಲಾಗಿದ್ದರೆ ಸುಮ್ಮನಾಗಿ ಬಿಡುತ್ತಿದ್ದಳು. ಅರ್ಜೆಂಟ್ ಅವಳಿಗೆ ಖಾಲಿ ಪೇಪರ್ ಮತ್ತು ಕಾರ್ಬನ್ ಪೇಪರ್‌ಗಳು ಬೇಕಾಗಿದ್ದರಿಂದ ಅವನನ್ನು ಕರೆಯಲೇ ಬೇಕಾಗಿತ್ತು.

"ಚಂದ್ರಪ್ಪ ಚಂದ್ರಪ್ಪ." ಈ ಬಾರಿ ಸ್ವಲ್ಪ ಧ್ವನಿ ಎತ್ತರಿಸಿಯೇ ಕೂಗಿದಳು.

"ಏನು ಹಾಗೆ ಕೂಗುತ್ತೀರಾ, ನನಗೆ ಕಿವಿ ಕೇಳುತ್ತೆ" ಎಂದು ಗೊಣಗುತ್ತ ಬಂದಾಗ ಕೃತ್ತಿಕಾ ಅವಾಕ್ಕಾಗಿ ಅವನನ್ನೇ ನೋಡಿದಳು. ತಿಂಗಳ ಕೊನೆಯಲ್ಲಿ ಎಷ್ಟೋ ಬಾರಿ ಹಣವಿಲ್ಲವೆಂದು ಗೋಗರೆದಾಗ ಸಾಲ ಕೊಟ್ಟಿದ್ದಳು. ಐದು, ಹತ್ತು ರೂಪಾಯಿ, ಬೆಳಗಾದರೆ ಅದನ್ನವಳು ಕೇಳುತ್ತಲೂ ಇರಲಿಲ್ಲ. ಅವನೂ ತಾನಾಗೇ ಕೊಡುತ್ತಿರಲಿಲ್ಲ. ಬೇರೆಯವರ ತರಾ ಅವಳೆಂದೂ ಅವನನ್ನು ತನಗಿಂತ ಕೆಳಮಟ್ಟದಲ್ಲಿಯವನೆಂದು ಪರಿಗಣಿಸಿಯೇ ಇರಲಿಲ್ಲ. ಕಳೆದ ತಿಂಗಳು ಅವನ ಹೆಂಡತಿಗೆ ಆಪರೇಶನ್ ಆದಾಗ ಆಫೀಸಿನಿಂದ ಹೋಗಿ ಅವಳನ್ನು ನೋಡಿಕೊಂಡು ಬಂದವಳು ಅವಳೊಬ್ಬಳೇ. ಈಗ ಅವನ ವರ್ತನೆಯಿಂದ ಅವಳಿಗೆ ಆಶ್ಚರ್ಯವಾಯಿತು.

"ಏನ್ ಬೇಗ ಹೇಳಿ. ನನಗೆ ಬೇರೆ ಕೆಲಸವಿದೆ. ನಿಮ್ಮೊಬ್ಬರದೇ ಕೆಲಸ ಮಾಡ್ತ ನಿಂತ್ಕೊಳ್ಳಲಿಕ್ಕ ನಂಗೆ ಟೈಂ ಇಲ್ಲ."

ಕೃತ್ತಿಕಾ ಸಣ್ಣಗೆ ಕಂಪಿಸಿದಳು. ಅನಂತರ ತನ್ನನ್ನು ತಾನು ಸಾವರಿಸಿಕೊಂಡಳು. ಇಂತಾ ಕ್ರಿಮಿಗಳಿಗೆ ತಾನೇಕೆ ಬೆಲೆ ಕೊಡಬೇಕು?

"ಕೇಶವಯ್ಯನವರ ಹತ್ತಿರ ನನ್ನ ಕಬೋರ್ಡ್ ಕೀ ತೆಗೆದುಕೊಂಡು ಬಾ." ಆಜ್ಞಾಪಿಸಿದಳು.

ಒಲ್ಲದ ಮನಸಿನಿಂದ ಹೋದ ಚಂದ್ರಪ್ಪ ಕೀ ತಂದು ಕೊಟ್ಟ.

"ದೊಡ್ಡವರ ಸಾವಾಸ ಮಾಡಿದ ತಕ್ಷಣ ತಮ್ಮನ್ನೇ ಏನೋ ತಿಳಿದುಕೊಂಡು ಬಿಡ್ತಾರೆ. ಆರ್ಡರ್ ಮಾಡುವುದು ನೋಡಿದರೆ ನ್ಯಾಯ, ನೀತಿ ಎಲ್ಲ ಇವರೇ ಕೊಂಡುಕೊಂಡವರ ಹಾಗೇನೇ. ಇವರ ಬೇಳೆಕಾಳು ನಂಗೊತ್ತಿಲ್ಲವಾ."

ಅವಳಿಗೆ ಕೇಳುವಂತೆ ಗೊಣಗಿಕೊಂಡು ಹೋದ. ಅರೇ, ಒಂದು ವಾರದಲ್ಲಿ ಏನೋ ಬದಲಾವಣೆಗಳಾಗಿದೆ. ಕೃತ್ತಿಕಾ ಆಶ್ಚರ್ಯಪಟ್ಟಳು. ಆದರೆ ಅವಳಿಗೆ ಸಹೋದ್ಯೋಗಿಗಳು ಮುಖ ತಿರುಗಿಸುವಂತಾ ತಪ್ಪೇನನ್ನು ತಾನು ಮಾಡಿದ್ದೇನೆಂದು ಅರ್ಥವಾಗಲಿಲ್ಲ. ಒಂದು ಕ್ಷಣ ಏನನ್ನೋ ಯೋಚಿಸಿಕೊಂಡು ಮನ ನಡುಗಿತು. ಅನಂತರ ಇರಲಾರದು ಎಂದುಕೊಂಡು ಸಮಾಧಾನ ತಂದುಕೊಂಡಳು. ಅಷ್ಟರಲ್ಲಿ ಅದಿತಿ ಬರುತ್ತಿರುವುದು ಕಾಣಿಸಿತು. ಮಾಮೂಲಿಯಂತಾಗಿದ್ದರೆ ಅದಿತಿ ಇವಳನ್ನು ಕಂಡ ತಕ್ಷಣ ಬರುತ್ತಿದ್ದಳು. ಆದರೆ ಇಂದು ಕೃತ್ತಿಕಾಳನ್ನು ಕಂಡರೂ ಕಾಣದವಳ ಹಾಗೆ ಇತರರು ಇದ್ದ ಕಡೆ ಹೋದಳು. ಕೃತ್ತಿಕಾಳಿಗೆ ಅದಿತಿ

ಕೆನ್ನೆಗೆ ಬಾರಿಸಿದ್ದರೂ ಇಷ್ಟು ನೋವಾಗುತ್ತಿರಲಿಲ್ಲ. ತನ್ನ ಪಾಡಿಗೆ ತಾನು ಟೈಪ್‌ರೈಟರ್‌ಗೆ ಪೇಪರ್ ಜೋಡಿಸಿದಳು. ಅಷ್ಟರಲ್ಲಿ ಇತರರೊಡನೆ ಮಾತುಕತೆ ಮುಗಿಸಿದ ಅದಿತಿ ತನ್ನ ಟೇಬಲ್ಲಿಗೆ ಬಂದಳು. ಬಹುಶಾ ಕೃತ್ತಿಕಾಳೇ ಮಾತನಾಡಿಸಲಿ ಎಂದುಕೊಂಡಳೋ ಏನೋ ಫೈಲ್ ಹಿಡಿದುಕೊಂಡು ಕುಳಿತುಕೊಂಡಳು. ಕೃತ್ತಿಕಾಳಿಗೆ ಯಾಕೋ ಏನೋ ಯಾರೊಡನೆ ಮಾತೇ ಬೇಡ ಎನಿಸಿತು. ಲಂಚ್ ಅವರ್‌ನಲ್ಲಿ ಕಾರಣ ಮಾತ್ರ ಕೇಳಿ ತಿಳಿದುಕೊಳ್ಳಬೇಕು ಎಂದು ನಿರ್ಧರಿಸಿದಳು. ರಾಹುಲ್ ಆಫೀಸಿಗೆ ಬರಲೇ ಇಲ್ಲ. ಬಹುಶಾ ಪ್ರಯಾಣದ ಆಯಾಸವಿರಬೇಕು ಎಂದುಕೊಂಡಳು. ಬಾರದಿದ್ದುದೇ ಒಳ್ಳೆಯದಾಯಿತು. ಇಲ್ಲದಿದ್ದರೆ ಕೆಲಸ ಸರಿಯಾಗಿರ್ತಾ ಇತ್ತು. ಈ ಮೂಡಿನಲ್ಲಿ ತಾನು ಕೆಲಸ ಮಾಡಿದ ಹಾಗೇನೇ. ಲೆಟರ್‌ಗಳನ್ನು ತಪ್ಪು ತಪ್ಪಾಗಿ ಟೈಪ್ ಮಾಡಿ ಇನ್ನು ಅವರಿಂದ ಬಯ್ಯಿಸಿಕೊಳ್ಳುವುದು ತಪ್ಪಿತು. ಈಗಾಗಿರುವ ಅವಮರ್ಯಾದೆಯೇ ಸಾಕಾಗಿದೆ. ಅದನ್ನು ತಾನು ತಡೆದುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ತನಗೆ ತಾನೇ ಸಮಾಧಾನ ಹೇಳಿಕೊಂಡಳು. ತುಂಬ ಯೋಚಿಸಿದ್ದಕ್ಕೋ ಏನೋ ತಲೆ ಬೇರೆ ಸಣ್ಣಗೆ ನೋವು ಕಿತ್ತಿತ್ತು. ಸಮಯ ಯಾಕೋ ಸರಿಯುವುದೇ ಇಲ್ಲ ಎನಿಸಿತು. ಕೆಲಸ ಮಾಡಲು ಗಮನವೇ ಇಲ್ಲವಾಗಿತ್ತು. ನಿಮಿಷಕ್ಕೊಮ್ಮೆ ಕಣ್ಣು ಅಪ್ರಯತ್ನವಾಗಿ ವಾಚಿನತ್ತ ಸರಿಯುತ್ತಿತ್ತು. ಅಂತು ಇಂತೂ ಒಂದೂವರೆಯಾದಾಗ ಬದುಕಿದೆ ಎಂದುಕೊಂಡಳು. ದಿನವೂ ಮಾತನಾಡುತ್ತ ಊಟ ಮಾಡಿ ಅನಂತರ ಕ್ಯಾಂಟೀನ್‌ಗೆ ಹೋಗುವುದು ಕೃತ್ತಿಕಾ ಕೆಲಸಕ್ಕೆ ಸೇರಿದಾಗಿನಿಂದ ನಡೆದು ಬಂದಿತ್ತು. ಬಹುಶಾ ಊಟಕ್ಕಾದ್ರೂ ತನ್ನನ್ನು ಕರೆಯಬಹುದೆಂದು ನಿರೀಕ್ಷಿಸಿದ ಕೃತ್ತಿಕಾಳಿಗೆ ಅಲ್ಲೂ ನಿರಾಸೆ ಕಾದಿತ್ತು. ಅವಳ ಪರಿವೆಯೇ ಇಲ್ಲದಂತೆ ಅದಿತಿ ತನ್ನ ಪಾಡಿಗೆ ತನ್ನ ಕ್ಯಾರಿಯರ್ ಬಿಚ್ಚಿದಳು. ಕೃತ್ತಿಕಾ ಸುತ್ತಮುತ್ತಲಿನ ಟೇಬಲ್ ನೋಡಿದಳು. ಎಲ್ಲವೂ ಖಾಲಿಯಾಗಿತ್ತು. ಅವರಿದ್ದ ಸೆಕ್ಷನ್‌ನಲ್ಲಿ ಹೆಂಗಸರು ಇಬ್ಬರೇ ಆಗಿದ್ದರಿಂದ ಅದಿತಿಗೆ ಕೃತ್ತಿಕಾಳನ್ನು ಬಿಟ್ಟರೆ ಬೇರೆ ಜೊತೆಯಿರಲಿಲ್ಲ. ವಿಷಯ ಪ್ರಸ್ತಾಪಿಸಲು ಇದೇ ತಕ್ಕ ಸಮಯವೆಂದು ಕೃತ್ತಿಕಾ ಭಾವಿಸಿದಳು. ಹಸಿವು ಮುಚ್ಚಿಹೋಗಿತ್ತು.



ಮೃತ್ಯು ಮುಖವಾದಾಗ ಜ್ಞಾನಿ ನಗುತ್ತಾನೆ. ಅಜ್ಞಾನಿ ಅಳುತ್ತಾನೆ.
—ಪರಮಹಂಸ

ಮಹಾತ್ಮರ ಮರಣ ಮಾನವೀಯ ಕಲ್ಯಾಣಕ್ಕಾಗಿಯೇ ಉಂಟಾಗುತ್ತದೆ.
—ಲಾಂಗ್‌ಫೆಲೋ

ದೇಹಗಳು ಹಲವಾರು. ಆದರೆ ಹೃದಯವು ಮಾತ್ರ ಒಂದೇ.
—ಶೇಕ್ಸ್‌ಪಿಯರ್

ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ. —ದ. ರಾ. ಬೇಂದ್ರೆ

ದೃಷ್ಟಿಯಂತೆ ಸೃಷ್ಟಿ. —ಗಾದೆ

ಸಂಗ್ರಹ : ಶಂಕರಗೌಡ ಪ್ಯ. ಪಾಟೀಲ

"ಅದಿತಿ."

ಅದಿತಿ ತನ್ನ ಪಾಡಿಗೆ ತಾನು ತಿನ್ನುವುದರಲ್ಲಿ ಮಗ್ನಳಾಗಿದ್ದಳು. ಕೃತ್ತಿಕಾಳ ಸಹನೆಯ ಕಟ್ಟೆಯೊಡೆಯಿತು. ತನ್ನ ಟೇಬಲಿನಿಂದ ಎದ್ದು ಬಂದವಳೇ ಅದಿತಿಯ ಪಕ್ಕ ನಿಂತಳು.

"ಅದಿತಿ, ಎಲ್ಲರೂ ಯಾಕೆ ಹೀಗೆ ಆಡ್ತಾ ಇದ್ದೀರಾ, ನಾನೇನು ಮಾಡಿದೆ ಎಂದು? ಬೇರೆಯವರ ವಿಷಯ ಬಿಡು ನಿನಗೇನಾಗಿದೆ? ಎಲ್ಲರೂ ಹೀಗೆ ಮುಖ ತಿರುಗಿಸುವಂತಹ ತಪ್ಪನ್ನೇನು ಮಾಡಿದ್ದೇನೆ. ಪ್ಲೀಸ್ ಅದಿತಿ ಹೇಳಲೇಬೇಕು."

"ಅಯ್ಯೋ ನೀನೀಗ ತುಂಬ ದೊಡ್ಡ ಮನುಷ್ಯಳಾಗಿ ಬಿಟ್ಟದ್ದಿ. ದೊಡ್ಡವರ ಉಸಾಬರಿ ನನಗ್ಯಾಕೆ ಎಂದು ಸುಮ್ಮನಾದೆ ಅಷ್ಟೇ."

ಮಾತು ತೇಲಿಸಲು ನೋಡಿದರೂ ಕೃತ್ತಿಕಾ ಬಿಡಲಿಲ್ಲ.

"ಈ ರೀತಿ ಒಗಟಿನಲ್ಲಿ ಮಾತನಾಡಿ ನನ್ನನ್ನು ಕೊಲ್ಲಬೇಡ ಅದಿತಿ. ಬದುಕಿನಲ್ಲಿ ಎಂತೆಂತಹ ನೋವನ್ನು ಎದುರಿಸಿ ಅನುಭವವಿರುವ ನಾನು ಈಗ ನೊಂದು ಕೊರಗುವ ಸ್ಟೇಜ್ ದಾಟಿ ಬಿಟ್ಟದ್ದೇನೆ. ನಾನ್ಯಾವ ದೊಡ್ಡ ಮನುಷ್ಯರ ಸಹವಾಸ ಮಾಡಲು ಹೋಗಿದ್ದೆ? ನಾನು ನಿನ್ನೇನೂ ನಿನ್ನ ಗೆಳತಿ, ಇವತ್ತೂ ನಿನ್ನ ಗೆಳತಿನೇ. ನನ್ನಿಂದ ಏನಾದ್ರೂ ತಪ್ಪಾಗಿದ್ರೆ ಹೇಳು ತಿದ್ಕೋತೀನಿ. ನಿನ್ನ ಬಿಟ್ರೆ ನನಗೆ ಆಪ್ತರು ಅಂತ ಹೇಳಿಕೊಳ್ಳುವವರು ಯಾರೂ ಇಲ್ಲ."

ಕೊನೆಯ ಮಾತು ಹೇಳುವಾಗ ಅವಳ ಧ್ವನಿ ಗದ್ಗದಿತವಾಯಿತು.

"ನಿನಗೆ ನಾನು ಫ್ರೆಂಡೂಂತ ನಾನು ಹೇಳ್ಕೋಬೇಕಷ್ಟೇ. ನೀನು ಆ ರೀತಿ ಎಲ್ಲಿ ತಿಳ್ಕೊಂಡಿದ್ದಿಯಾ? ತಿಳ್ಕೊಂಡಿದ್ದಿದ್ದರೆ ವಿಷಯ ಎಲ್ಲ ಹೀಗೆ ಮುಚ್ಚಿಡ್ತಾ ಇರಲಿಲ್ಲ."

ಕೃತ್ತಿಕಾಳ ಎದೆ ಒಂದು ಕ್ಷಣ ದಸಕ್ಕೆಂದಿತು. ಅಪ್ಪಿತಪ್ಪಿ ಎಲ್ಲಾದರೂ... ಹಾಗೇನಾದರೂ ಆದರೆ ತನ್ನ ಬದುಕು ಮುಗಿದ ಹಾಗೇನೆ. ಹೊಸ ಬದುಕನ್ನು ಪ್ರಾರಂಭಿಸಬೇಕೆನ್ನುವ ತನ್ನ ಪ್ರಯತ್ನ ಮಣ್ಣು ಹಿಡಿದ ಹಾಸಿಗೆ. ಬಹುಶಾ ಇವಳಿಗೆ ಯಾರು ಹೇಳಿರಬಹುದು? ಅಯ್ಯೋ ನನ್ನ ಗತವೇ? ನನ್ನನ್ನು ಬದುಕಲು ನೀನು ಖಂಡಿತಾ ಬಿಡುವುದಿಲ್ಲ. ಏನು ಉತ್ತರ ಹೇಳುವುದು. ಒಂದು ನಿಮಿಷ ಒದ್ದಾಡಿದಳು, ಅನಂತರ ಅಲ್ಪ ಸ್ವಲ್ಪ ಧೈರ್ಯ ತಂದುಕೊಂಡು ಕೇಳಿದಳು.

"ಯಾ.. ಯಾವ ವಿಷಯ ಮುಚ್ಚಿಟ್ಟದ್ದೇನೆ ಎಂದು?" ತನ್ನ ಊಹೆ ಸುಳ್ಳಾಗಲಿ ಎಂದು ಪ್ರಾರ್ಥಿಸುತ್ತ ನಿಂತಳು.

"ಅವತ್ತು ಬಾಸ್ ಮನೆಗೆ ಹೋಗಿದ್ಯಂತೆ. ನನ್ನ ಹತ್ತಿರ ಏನೂ ಗೊತ್ತಿಲ್ಲದವಳ ತರಹ ನಾಟಕ ಆಡಿದಿಯೆಲ್ಲ." ಸದ್ಯ ಎಂದು ಬಿಡುಗಡೆಯ ಉಸಿರು ಬಿಟ್ಟಳು.

"ಅಯ್ಯೋ, ಇಷ್ಟೇ ತಾನೇ, ಬಾಸ್ ಸಿಟ್ಟು ಮಾಡಿಕೊಂಡು ಅವತ್ತು ನಾನು ಕಳುಹಿಸಿದ ಗ್ರೀಟಿಂಗ್ಸ್ ಹಾಗೂ ನಾನು ಕೊಟ್ಟ 50 ರೂಪಾಯಿ ವಾಪಾಸು ಮಾಡಿದ್ರು ಅಂತ ನಿಂಗೆ ಹೇಳಲಿಲ್ಲವೆ?"

"ವಾಪಾಸು ಮಾಡಿದ್ದು ಹೇಳಿದ್ದೇ ಹೊರತು ಅವರ ಮನೆಗೆ ಹೋದ ವಿಷಯ ಹೇಳಿರಲಿಲ್ಲ." ಅವಳ ಮಾತನ್ನು ಅದಿತಿ ಅರ್ಧದಲ್ಲೇ ತುಂಡರಿಸಿದಳು.



"ಹೌದು ಹೋಗಿದ್ದೆ ನಿಜ. ಆದ್ರೆ ಯಾವುದೇ ದುರುದ್ದೇಶದಿಂದ ಅಂತೂ ಹೋಗಿರಲಿಲ್ಲ. ಹಾಗೆಂದು ಅವರು ನನಗೇನು ಸ್ಪೆಶಲ್ ಇನ್ವಿಟೇಶನ್ನೇನೂ ಕೊಟ್ಟಿರಲಿಲ್ಲ. ಮಗು ನಿನಗೇನು ಮಾಡಿತ್ತು ಅಂದರು. ಅದಕ್ಕೋಸ್ಕರ ಹೋಗಿದ್ದೆ ಅಷ್ಟೇ. ಆದ್ರೆ ಅದ್ಯಾವ ಮಹಾ ತಪ್ಪೂಂತ ಎಲ್ಲರೂ ಹೀಗೆ ಆಡ್ತಾ ಇದ್ದಾರೆ? ಆ ವಿಷಯಕ್ಕೆ ಯಾಕೆ ಅಷ್ಟೊಂದು ಮಹತ್ವ ಕೊಡಬೇಕೆಂದು ಕೊಂಡು ನಿನಗೆ ಹೇಳಲಿಲ್ಲ."

"ಆ ವಿಷಯ ಬಿಡು. ಈಗೊಂದು ವಾರದಿಂದ ನೀನು ಬಾಸ್ ಮನೇಲೇ ಇದ್ದೆಯಂತೆ. ರಜೆ ಹಾಕಿದ ಕಾರಣ ನನಗೂ ಹೇಳಲಿಲ್ಲ. ಏನು ನಿನಗೆ ಬಾಸ್ ಅಷ್ಟೊಂದು ಪರಿಚಯವೇ?"

"ಈ ವಿಷಯವನ್ನು ನಿನಗ್ಯಾರು ಹೇಳಿದರು?"

ಕೃತ್ತಿಕಾಳಿಗೆ ಎಲ್ಲರ ವರ್ತನೆಗೆ ಕಾರಣ ಫ್ಲಾಷ್ ಆಯಿತು. ಬಹುಶಾ ಇದೊಂದು ಮಾಮೂಲಿ ವಿಷಯ ಎಂದು ಅವಳು ಅಂದುಕೊಂಡರೂ ಉಳಿದವರು ಅಂದುಕೊಂಡಿರಲಿಲ್ಲ. ಅಬ್ಬಾ ಗೋಡೆಗಳಿಗೂ ಕಣ್ಣಿದೆ ಎಂದು ಕಾಣುತ್ತದೆ, ಈ ವಿಷಯವನ್ನು ಯಾರು ಹೇಳಿರಬಹುದು ಎಂದುಕೊಂಡು ಆಶ್ಚರ್ಯಪಟ್ಟಳು. ರಾಹುಲ್ ಕೇಳಿದ್ದು ಆಕಸ್ಮಿಕ. ಆ ದಿನ ಕೃತ್ತಿಕಾ ಹೋಗಿದ್ದೇ ಆಕಸ್ಮಿಕ. ಅವಳ ಮನದಲ್ಲಿ ಬೇರಾವ ಭಾವನೆಗಳೂ ಇಲ್ಲದ್ದರಿಂದ ಅವಳು ಹೀಗಾಗಬಹುದೆಂದು ಯೋಚಿಸಲೇ ಇರಲಿಲ್ಲ. ಯೋಚಿಸಿದ್ದಿದ್ದರೆ ಬಹುಶಾ ರಾಹುಲ್‌ನ ಕೋರಿಕೆಯನ್ನು ತಳ್ಳಿ ಹಾಕಿ ತಲೆ ಕೆಡಿಸಿಕೊಳ್ಳಬೇಕು ಎಂದುಕೊಂಡಳು.

"ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಯಾರಿಗೂ ಗೊತ್ತಾಗುವುದಿಲ್ಲ ಎಂದುಕೊಂಡೆಯಾ? ಇಡೀ ಆಫೀಸಿಗೆ ಗೊತ್ತಾಗಿ ಬಿಟ್ಟಿದೆ. ಡ್ರೈವರ್ ದಿನಾ ಪೋಸ್ಟ್ ತೆಗೆದುಕೊಂಡು ಹೋಗಲು ಬರ್ತಾ ಇದ್ದನಲ್ಲ. ಅವನೇ ಹೇಳಿದ. ನಾನಂತೂ ನಂಬೇ ಇರಲಿಲ್ಲಪ್ಪ. ನೀನು ರಜೆ ಹಾಕಿದ ಮೇಲೆ ನಿನ್ನ ಮನೆಗೆ ಹೋಗಿದ್ದೆ, ಬೀಗ ಹಾಕಿತ್ತು. ಓನರ್ ಅವರು ಇನ್ನೊಂದು ವಾರ ಬರುವುದಿಲ್ಲವೆಂದು ಹೇಳಿದಾಗ ನಂಬಲೇಬೇಕಾಯಿತು. ಪರವಾಗಿಲ್ಲ ಕೃತ್ತಿಕಾ, ಒಳ್ಳೆ ವ್ಯಕ್ತಿಯನ್ನೇ ನೋಡಿ ಬಲೆಗೆ ಹಾಕಿಕೊಂಡಿದ್ದಿಯ. ನಿನ್ನ ಮುಖ ನೋಡಿದ್ರೆ, ನೀನಾಡುತ್ತಿದ್ದ ಮಾತು ಕೇಳ್ತಾ ಇದ್ರೆ ನೀನೇನೋ ಪುರುಷ ದ್ವೇಷಿ ಇರಬೇಕು ಅಂದ್ಕೊಂಡಿದ್ದೆ. ಆರು ತಿಂಗಳಲ್ಲೇ ಒಳ್ಳೆ ಇಂಪ್ರೂವ್‌ಮೆಂಟ್."

ಅದಿತಿ ಚುಚ್ಚಿದಾಗ ಕೃತ್ತಿಕಾ ಅಲ್ಲೇ ಕುಸಿದಳು. ಓಹ್ ತಾನೇಕೆ ಸಿಕ್ಕಿಹಾಕಿಕೊಂಡೆ? ತನ್ನ ಬದುಕಿನಲ್ಲಿ ಈಗಿರುವ ಕಪ್ಪು ಚುಕ್ಕಿಯೇ ಇನ್ನೂ ಅಳಿಸಿಲ್ಲದೆ ಹೋಗಿರುವಾಗ ಪುನಾ ಜನರ ಬಾಯಿಗೆ ವಸ್ತುವಾದೆನಲ್ಲ. ಇದ್ದಕ್ಕಿದ್ದ ಹಾಗೆ ಅವಳಿಗೆ ರಾಹುಲ್‌ನ ಮೇಲೆ ಸಿಟ್ಟು ಬಂದಿತು. ನನ್ನನ್ನು ಈ ನಿಂದನೆಗೆ ಗುರಿಯಾಗಿಸಿದವನು ಅವನೇ ತಾನೇ? ತಾನು ಮಾತ್ರ ಯಾವುದೇ ತೊಂದರೆ ಇಲ್ಲದೆ ಹಾಯಾಗಿದ್ದಾನೆ. ಒಂದು ಕ್ಷಣ ಅಷ್ಟೇ. ಮತ್ತೆ ತಪ್ಪು ತನ್ನದೇ ಇರುವಾಗ ಅವನ್ನನ್ಯಾಕೆ ದೂರಲಿ? ಬೇಡ. ನನ್ನ ಕೈಲಾಗೋಲ್ಲ ಅಂದಿದ್ದರೆ ಅಥವಾ ಆ ದಿನ ತಾನು ಮೇಘನಾ ಕರೆದಳೆಂದು ಹೋಗದಿದ್ದರೆ ಇಷ್ಟೆಲ್ಲ ಘಟನೆಗಳು ನಡೆಯುತ್ತಲೇ ಇರುತ್ತಿರಲಿಲ್ಲ. ಬಹುಶಾ ಬದುಕಿನಲ್ಲಿ ತಾನು ಪಾಠ ಕಲಿಯುವುದೇ ಇಲ್ಲವೇನೋ ಎಂದುಕೊಂಡಳು.

"ಪ್ಲೀಸ್ ಅದಿತಿ, ನನ್ನ ಮಾತು ನಂಬು. ಅವತ್ತು..."

ಅವಳು ನಂಬುವುದಿಲ್ಲವೆಂದು ಗೊತ್ತಿದ್ದರೂ ಗೆಳತಿಯನ್ನು ಗೋಗರೆದಳು.

"ನನ್ನನ್ನೊಬ್ಬಳನ್ನು ನಿನ್ನ ಮಾತಿನಿಂದ ನಂಬಿಸಬಹುದು. ಉಳಿದವರ ಬಗ್ಗೆ ಏನು ಹೇಳ್ತಿಯಾ? ಅವರಿಗೆ ಬಾಸ್ ಮನೆಗೆ ಹೋಗಿದ್ದೇ ಸುಳ್ಳು ಅಂತ ಹೇಳ್ತೀಯಾ? ರಜೆ ಹಾಕಿಯೇ ಇಲ್ಲಾಂತ ಹೇಳ್ತಿಯಾ? ಅಥವಾ ಬಾಸೇ ನನಗೆ ಹೇಳಿ ಹೋಗಿದ್ದರು ಅಂತ ಹೇಳ್ತಿಯಾ? ಆ ರೀತಿ ಹೇಳಿ ಹೋಗಲು ಅವರಿಗೆ ಇನ್ಯಾರು ಇರಲಿಲ್ಲವೆ, ನೀನೇ ಆಗಬೇಕಿತ್ತಾ? ಇಷ್ಟು ದಿನ ಯಾರಿಗೂ ಹೇಳಿ ಹೋಗದಿದ್ದವರು ನಿನಗೆ ಮಾತ್ರ ಹೇಳಿದ್ದರು ಅಂದರೆ ನಂಬಲು ಕುರಿಗಳು ಅಂದುಕೊಂಡೆಯಾ? ಅದೂ ಅವರು ಫಾರಿನ್‌ಗೆ ಹೋಗಿ ಎರಡು ಮೂರು ದಿನವಾದ ಮೇಲೆ ನೀನು ರಜ ಹಾಕಿದ್ದು. ಅಂತೂ ಪ್ಲಾನ್ ಚೆನ್ನಾಗಿಯೇ ಹಾಕಿದ್ದಿ. ಮದುವೆ ಬೇಡ ಅಂದಿದ್ದು ಇದಕ್ಕೇ ಇರಬೇಕಲ್ವ? ಮದುವೆಯಾಗಿ ಬಿಟ್ಟರೆ ಈ ಸ್ವಾತಂತ್ರ್ಯ ಇರುವುದಿಲ್ಲವಲ್ಲ."

ಕೃತ್ತಿಕಾ ನಿರುತ್ತರಳಾದಳು. ಅದಿತಿಯ ಮಾತುಗಳು ಬಾಣದಂತೆ ಚುಚ್ಚುತ್ತಿದ್ದವು. ತಾನು ಏನೇ ಹೇಳಿದರೂ ಅವಳು ನಂಬುವ ಸ್ಥಿತಿಯಲ್ಲಿಲ್ಲವೆಂದು ಗೊತ್ತಾಯಿತು. ಅವಳೇ ನಂಬದಿದ್ದಾಗ ಉಳಿದವರು ಕೇಳುತ್ತಾರೆಯೇ. ಇಲಿ ಹೋದರೆ ಹುಲಿ ಹೋಯ್ತು ಅನ್ನುವ ಈ ಜನಕ್ಕೆ ಇಷ್ಟು ವಿಷಯ ಸಿಕ್ಕಿರುವಾಗ ಬಿಟ್ಟಾರೆಯೇ?

"ಅದಿತಿ." ಉಕ್ಕಿ ಬರುತ್ತಿದ್ದ ಕಣ್ಣೀರನ್ನು ತಡೆಯುತ್ತ ಕೃತ್ತಿಕಾ ಹೇಳಿದಳು.

"ನೀನು ನನ್ನ ಬಗ್ಗೆ ಹೇಳಿದ್ದು ಸುಳ್ಳೂಂತಲೂ ಹೇಳುವುದಿಲ್ಲ, ನಿಜಾಂತಲೂ ಹೇಳುವುದಿಲ್ಲ. ನಡೆದದ್ದು ಇಷ್ಟು. ಅದು ನೀನಾಗೇ ಕೇಳಿದ್ದಕ್ಕೆ ಹೇಳ್ತಾ ಇದ್ದೀನಿ. ಅವತ್ತು ನಿನ್ನ ಅಣ್ಣನ ಮಗನಿಗೆ ಬರ್ತ್‌ಡೇ ಬಟ್ಟೆ ತೆಗೆದುಕೊಂಡ ಬಳಿಕ ನೀನು ಆಟೋ ಹತ್ತಿ ಹೋದೆ ಅಲ್ಲವೆ? ನಾನು ಬೇಜಾರಾಗಿ ನಡೆದುಕೊಂಡು ಹೋಗ್ತಾ ಇದ್ದೆ. ಮೇಘನಾ ಕಾರಿನಲ್ಲಿ ಹೋಗುತ್ತಿದ್ದವಳು ಕಂಡು ಎಷ್ಟೇ ಹೇಳಿದರೂ ಕೇಳದೆ ಬಲವಂತ ಮಾಡಿ ಮನೆಗೆ ಕರೆದುಕೊಂಡು ಹೋದಳು. ದಾರೀಲಿ ಯಾಕೆ ಸುಮ್ಮನೆ ವಾದ ವಿವಾದ ಎಂದುಕೊಂಡು ಹೋದೆ. ಸಂಜೆ ಬರಬೇಕು ಅನ್ನುವಷ್ಟರಲ್ಲಿ ಸರ್ ಫೋನ್ ಬಂತು. ಅವರ ತಾಯಿಗೆ ತುಂಬ ಹುಷಾರಿಲ್ಲವೆಂದು ಹೇಳಿದಾಗ ಯಾವುದೋ ತೊಂದರೇಲಿ ಸಿಕ್ಕಿಹಾಕಿಕೊಂಡು ಬಿಟ್ಟಿದ್ದೇನೆ. ಮನೆ ಕಡೆ ಸ್ವಲ್ಪ ನೋಡಿಕೊಳ್ತೀಯಾ ಎಂದು ಕೇಳಿದಾಗ ನನಗೆ ಇಲ್ಲವೆನ್ನಲಾಗಲಿಲ್ಲ. ಮಾನವೀಯತೆ ದೃಷ್ಟಿಯಿಂದ ಒಪ್ಪಿಕೊಂಡೆನೇ ಹೊರತು ಅವರ ಆಸ್ತಿಗಾಗಲಿ, ದುಡ್ಡಿಗಾಗಲಿ ನಾನು ಆಸೆ ಪಡಲಿಲ್ಲ. ಅವರು ಆ ರೀತಿ ಫೋನ್ ಮಾಡಿದ್ದಕ್ಕೂ ನಾನಲ್ಲೇ ಇದ್ದದ್ದು ಆಕಸ್ಮಿಕವೇ ಹೊರತು ಮೊದಲೇ ಮಾಡಿದ



ಹೆಂಡತಿ : ರೀ ಇವತ್ತು ಕೆಲ್ಸದವ್ಳಿಗೆ ಮೈ ಸರಿ ಇಲ್ಲಾಂತೆ, ರಜೆ ಬೇಕೆಂದು ಕೇಳ್ಲಿಕ್ಕೆ ಬಂದಿದ್ದಾಳೆ ಅವ್ಳಿಗೆ ಏನ್ ಹೇಳ್ಲಿ?

ಗಂಡ : ಸರಿ, ಆದ್ರೆ ನನ್ಗೆ ಮಾಮೂಲಿನ ಮುತ್ತು ಕೊಟ್ಟೋಗೋಕ್ಕೆ ಹೇಳು.

— ಶೇಕರ ಸಾಲ್ಯಾನ್

ಪ್ಲಾನ್ ಅಲ್ಲ. ಹಾಂ, ನನಗೇ ಇರಲು ಹೇಳಿದ ಕಾರಣ ಇದ್ದೇ ಇರಬೇಕು ಅಷ್ಟೇ.'' ಒಂದು ಉಸಿರಿನಲ್ಲಿ ಹೇಳಿದ್ದರಿಂದ ಏದುಸಿರು ಬಂತು.

"ಒಳ್ಳೆ ಚೆನ್ನಾಗಿ ಕಥೆ ಕಟ್ತೀಯ ಕೃತ್ತಿಕಾ. ಬುದ್ಧಿವಂತಿಕೇನ ನಿನ್ನ ನೋಡಿ ಕಲೀಬೇಕು. ಪುಣ್ಯ ಮಾಡಿದ್ದೆ ಬಿಡು. ಇಷ್ಟೆಲ್ಲ ಹೇಳೋ ನೀನು ಮನೆ ಜವಾಬ್ದಾರಿನೂ ತೆಗೆದುಕೊಂಡಿದ್ದೇಂತ ಹೇಳಲೇ ಇಲ್ಲ. ಅವರ ತಾಯಿ, ಮೇಘನಾಳಂತೂ ನಿನ್ನ ಬಿಟ್ಟು ಒಂದು ನಿಮಿಷ ಸಹ ಇತಾ ಇರಲಿಲ್ಲವಂತೆ?''

"ಇನ್ನೊಬ್ಬರ ಹಂಗಿನಲ್ಲಿ ಬೀಳುವುದು ನನಗ್ಯಾವತ್ತೂ ಇಷ್ಟವಿಲ್ಲವಾದ್ದರಿಂದ ಸುಮ್ಮನ ಕುಳಿತುಕೊಂಡು ಏನು ಮಾಡಬೇಕೆಂದು ಅದನ್ನೆಲ್ಲ ನೋಡಿಕೊಂಡೆ. ಸುಂದರಮ್ಮನವರಾಗಲಿ. ಮೇಘನಾಳಾಗಲಿ ನನ್ನನ್ನು ಹಚ್ಚಿಕೊಂಡಿದ್ದರೆ ನನ್ನ ತಪ್ಪಲ್ಲ. ನಾನು ಮಾಡಬೇಕಾದ ಕರ್ತವ್ಯವನ್ನು ಪ್ರೀತಿಯಿಂದ ಪ್ರತಿಪಲಾಪೇಕ್ಷೆ ಇಲ್ಲದೆ ಮಾಡಿದೆ. ಬಾಸ್‌ನ ವೈಯಕ್ತಿಕ ವಿಷಯದಲ್ಲಿ ನಾನ್ಯಾವ ಆಸಕ್ತಿ ಇಟ್ಟುಕೊಂಡು ಮಾಡಲಿಲ್ಲ. ಹಾಗಿದ್ದರೆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಅಲ್ಲೇ ಇರ್ತಾ ಇದ್ದೆ.'' ಅವಳ ಧ್ವನಿ ಈ ಬಾರಿ ಒರಟಾಗಿತ್ತು.

"ಅಯ್ಯೋ. ಇನ್ನೊಬ್ಬರ ವಿಷಯ ನನಗ್ಯಾಕೆ, ರಾಜೀನಾಮೆ ನೀನು ಯಾವಾಗ ಬೇಕಾದರೂ ಕೊಡಬಹುದು. ಅದು ನಿನ್ನ ಇಷ್ಟ. ನಿನ್ನ ಸ್ವಂತ ವಿಷಯ. ಏನೋ ನನ್ನ ಗೆಳತಿಯಾಗಿದ್ದೆ ಎಂದುಕೊಂಡು ಒಂದೆರಡು ವಿಷಯ ಹೇಳಿದೆ ಅಷ್ಟೇ. ನೀನೇ ಎಲ್ಲ ಗುಟ್ಟು ಗುಮಾನಿ ಮಾಡಿದಾಗ ನನಗೇನು ಹೇಳು. ಒಂದು ಮಾತು ತಿಳ್ಕೋ ಬಾಸ್‌ನ ಬದುಕಿನಲ್ಲಿ ಎಂತೆಂತಹವರೋ ಬಂದು ಹೋದರು ಏನೇನೋ ಮಾಡಿದರು. ಯಾರಿಗೂ ಬಗ್ಗಲಿಲ್ಲ. ಶ್ರೀಮಂತರು ಮಾಡಿದ್ದೇ ಸರಿ. ನಿನ್ನ ಬಗ್ಗೆ ಇಷ್ಟೆಲ್ಲ ಮಾತಾಡೋ ಜನ ನೋಡೋಣ ಅವರ ಬಗ್ಗೆ ಕೇವಲವಾಗಿ ಒಂದೇ ಒಂದು ಮಾತಾಡಲಿ. ಇರ್ಲಿ ಬಿಡು, ರಿಸೈನ್ ಮಾಡಿದರೂ ನಿನ್ನ ಜೀವನಕ್ಕೇನೂ ತೊಂದರೆಯಾಗಲ್ಲ ಬಿಡು, ಒಳ್ಳೆ ಚಾನ್ಸ್.''

ಗೂಡಾರ್ಥದಲ್ಲಿ ಮಾತನಾಡುತ್ತ ಕಾಲಿಯಾಗಿದ್ದ ಕ್ಯಾರಿಯರನ್ನು ಎತ್ತಿಕೊಂಡು ತೊಳೆಯಲು ಹೋದಳು. ಕೃತ್ತಿಕಾ ಚಳಿ ಬಂದವಳಂತೆ ಗಡಗಡ ನಡುಗಿದಳು. ತಾನೆಲ್ಲೋ ತಾವರೆ ಕೊಳದಲ್ಲಿ ಸಿಕ್ಕಿ ಹಾಕಿಕೊಂಡಂತೆನಿಸಿತು. ತನ್ನ ಟೇಬಲಿಗೆ ಬಂದು ಅಲ್ಲಿದ್ದ ಪೇಪರನ್ನು ಎತ್ತಿಕೊಂಡು ಸರಸರನೇ ಗೀಚಿದಳು. ಅನಂತರ ರಾಹುಲ್‌ನ ಚೇಂಬರಿಗೆ ಹೋಗಿ ಅವನ ಮೇಜಿನ ಮೇಲಿಟ್ಟಳು. ಅವಳ ಮನಸ್ಸು, ಶರೀರ ಎರಡೂ ಅವಳ ಅಧೀನದಲ್ಲಿರಲಿಲ್ಲ. ಕುಡಿದವರ ತರಾ ತೂರಾಡುತ್ತಿದ್ದಳು. ಹೊರ ಬಂದು ತನ್ನ ಪರ್ಸನೆತ್ತಿಕೊಂಡು ಆಫೀಸಿನ ಹೊರ ಬಾಗಿಲು ದಾಟಿದಳು. ಕ್ಯಾರಿಯರ್ ತೊಳೆದು ಬಂದ ಅದಿತಿ ಕೃತ್ತಿಕಾಳನ್ನು ಕಾಣದೆ ಆಶ್ಚರ್ಯಪಟ್ಟರೂ ಹುಡುಕುವ ತೊಂದರೆ ತೆಗೆದುಕೊಳ್ಳಲಿಲ್ಲ.

* * * * *

"ಟರ್ ಟರ್ ಟರ್.''

ಯಾರೋ ಜೋರಾಗಿ ಬಾಗಿಲು ಬಡಿಯುತ್ತಿರುವ ಸದ್ದಿಗೆ ಕೃತ್ತಿಕಾಳಿಗೆ ಎಚ್ಚರವಾಯಿತು. ಅನಂತರ ಕನಸೋ ಏನೋ ಎಂದುಕೊಂಡು ಹಾಗೆ ಕಣ್ಮುಚ್ಚಿಕೊಂಡಳು. ಮೈ ಕೈಯಲ್ಲಿ ಅಸಾಧ್ಯ ನೋವು, ತಲೆ ಭಾರ. ಮಾನಸಿಕ ಉದ್ವೇಗದಿಂದ ಜ್ವರ ಬೇರೆ ಕಾಡುತ್ತಿತ್ತು. ಆಫೀಸಿನಿಂದ ಹೇಗೆ

ಬಂದು ಮನೆ ಸೇರಿಕೊಂಡಳೋ ಅವಳಿಗೇ ಗೊತ್ತಿಲ್ಲ. ಬಟ್ಟೆ ಸಹ ಬದಲಿಸದೆ ಹಾಗೇ ಹಾಸಿಗೆಯ ಮೇಲ ಬಿದ್ದುಕೊಂಡಿದ್ದಳು. ಅದಷ್ಟೇ ಅವಳಿಗೆ ಜ್ಞಾಪಕವಿದ್ದದ್ದು. ಅದಿತಿಯ ಮಾತುಗಳು ಭರ್ಜಿಯ ತರಹ ಇರಿಯುತ್ತಿದ್ದವು. ಮಾತ್ರೆ ನುಂಗಬೇಕೆಂದುಕೊಂಡರೂ ತಾನು ಮಾಡಿದ ತಪ್ಪಿಗೆ ನರಳಲೇಬೇಕೆಂದುಕೊಂಡು ಹಾಗೇ ಇದ್ದಳು.

ಪುನಾ ಸದ್ದಾಯಿತು. ಕೈಗಡಿಯಾರದತ್ತ ನೋಡಿಕೊಂಡಳು. ಐದು ತೋರಿಸುತ್ತಿತ್ತು. ಬಹುಶಾ ಓನರ್ ಮನೆಯವರೇನು ಎಂದುಕೊಂಡು ಎದ್ದಳು. ಶಕ್ತಿಯೆಲ್ಲ ಸೋರಿ ಹೋದಂತಾಗಿ ತೂರಾಡುವಂತಾಗಿತ್ತು. ಹೊಟ್ಟೆಗಿಲ್ಲದ್ದರಿಂದ, ಅದಕ್ಕಿಂತ ಹೆಚ್ಚಾಗಿ ಮಾನಸಿಕ ಕ್ಷೋಭೆ ಅವಳನ್ನು ಹಿಂಡಿ ಹಾಕಿದ್ದವು. ತೂರಾಡುತ್ತಲೇ ಎದ್ದು ಬಂದು ಬಾಗಿಲು ತೆರೆದಳು. ಎದುರಿಗಿದ್ದ ವ್ಯಕ್ತಿ ಅಸ್ಪಷ್ಟವಾಗಿ ಕಾಣಿಸಿದಂತಾಯಿತು. ಕಣ್ಣುಜ್ಜಿಕೊಂಡು ನೋಡಿದಳು. ರಾಹುಲ್ ನಿಂತಿದ್ದ. ಮೈ ಎಲ್ಲ ನಖಶಿಖಾಂತ ಉರಿಯ ಹತ್ತಿದರೂ ತನ್ನನ್ನು ನಿಯಂತ್ರಿಸಿಕೊಂಡಳು. ಅವಳೇ ಮಾತನಾಡಬೇಕೆನ್ನುವಷ್ಟರಲ್ಲಿ ಅವನೇ ಕೇಳಿದ.

"ಒಳಗೆ ಬರಬಹುದೇ?''

"ಆಂ ಊಂ.''

ಕೃತ್ತಿಕಾ ತೊದಲಿದಳು. ಅನಂತರ ತಲೆಯಲ್ಲಾಡಿಸಿ ಒಳಗೆ ಬಂದಳು. ರಾಹುಲ್ ಅವಳ ಹಿಂದೆ ಬಂದ. ಅವನಿಗೆ ಕುರ್ಚಿಯತ್ತ ಕೈ ತೋರಿಸಿ ಮುಖ ತೊಳೆಯಲು ಕೃತ್ತಿಕಾ ಒಳಗೆ ಹೋದಳು. ಹೊಟ್ಟೆ ಚುರುಗುಡುತ್ತಿದ್ದರೂ ಏನನ್ನೂ ತಿನ್ನುವ ಮನಸ್ಸಾಗಲಿಲ್ಲ. ಮುಖಕ್ಕೆ ತಣ್ಣೀರೆರಚಿಕೊಂಡಾಗ ಸ್ವಲ್ಪ ಹಾಯೆನಿಸಿತು. ಅಲ್ಲೇ ಇದ್ದ ಕನ್ನಡಿಯಲ್ಲಿ ಮುಖ ನೋಡಿಕೊಂಡಳು. ಕಣ್ಣುಗಳು ಆಳಕ್ಕೆ ಇಳಿದು ಹೋಗಿ ಎಷ್ಟೋ ದಿನಗಳಿಂದ ಕಾಯಿಲೆ ಬಿದ್ದವಳಂತೆ ಕಾಣುತ್ತಿದ್ದಳು. ಅಡುಗೆ ಮನೆಗೆ ಬಂದು ಕಾಫಿ ಬಿಸಿಗಿಟ್ಟಳು. ರಾಹುಲ್ ಬರುತ್ತಾನೆಂದು ಅವಳು ಊಹಿಸಿರಲೂ ಇಲ್ಲ. ಆ ಕ್ಷಣಕ್ಕೆ ಅವಳ ಮನಸ್ಸು ಹೇಳಿದ ಹಾಗೆ ನಡೆದುಕೊಂಡಿದ್ದಳು. ಯಾಕೋ ಏನೋ ಅವಳಿಗೆ ಅವನ ಬರವು ಇಷ್ಟವಾಗಲಿಲ್ಲ. ಕೆಲವಾರು ತಿಂಗಳುಗಳಾದರೂ ತನಗೆ ಅನ್ನ ನೀಡಿದ್ದಾನೆ. ಅಲ್ಲದೆ ಮನೆಗೆ ಬಂದ ಅತಿಥಿಗೆ ಅಮರ್ಯಾದೆ ಮಾಡಬಾರದು ಎಂದುಕೊಂಡು ಕಾಫಿಯನ್ನು ಎರಡು ಲೋಟಗಳಿಗೆ ಬಗ್ಗಿಸಿ ಟ್ರೇನಲ್ಲಿಟ್ಟು ಕೊಂಡು ಹೊರಬಂದಳು. ರಾಹುಲ್ ಏನನ್ನೋ

'ರಾಗಸಂಗಮ'

ಲಾಟರಿ ಡ್ರಾ – ೧೪೩ರ ವಿಜೇತರು



ಹಚ್. ಬಿ. ವಾಣಿ ಜಯರಾಮ್
ಹಾರಗದ್ದೆ
ಬೆಂಗಳೂರು ಜಿಲ್ಲೆ.

ಯೋಚಿಸುತ್ತ ಕುಳಿತುಕೊಂಡಿದ್ದ.

"ಸರ್."

ಕಾಫಿ ಬಟ್ಟಲನ್ನು ಅವನ ಮುಂದೆ ಹಿಡಿದಳು. ರಾಹುಲ್ ಎತ್ತಿ ಕೃತ್ತಿಕಾಳ ಮುಖವನ್ನೇ ದಿಟ್ಟಿಸಿದ. ನೋವಿನ ಹೊರತು ಬೇರಾವ ಭಾವನೆಗಳು ಅವನಿಗೆ ಕಂಡು ಬರಲಿಲ್ಲ.

"ಇದ್ದಕ್ಕಿದ್ದ ಹಾಗೆ ರಾಜೀನಾಮೆ ಬರೆದು ಕೊಟ್ಟಿದ್ದರ ಕಾರಣ ಕೇಳಬಹುದೇ?" ಮಿದುವಾಗಿಯೇ ಕೇಳಿದ.

"ಅದು ನನ್ನ ಪರ್ಸನಲ್ ಮ್ಯಾಟರ್. ಆದ್ದರಿಂದ ಕಾರಣ ಕೊಡಲೇಬೇಕೆಂದು ನಾನು ಭಾವಿಸಿಲ್ಲ."

"ಇರಬಹುದು, ಆದರೆ ನೀನು ನನ್ನ ಎಂಪ್ಲಾಯ್ ಆದ್ದರಿಂದ ಅದರ ಬಗ್ಗೆ ಕೇಳೋ ಹಕ್ಕು ನನಗಿದೆ ಎಂದುಕೊಳ್ಳುತ್ತೇನೆ. ನನ್ನಿಂದ ಏನಾದರೂ ತಪ್ಪಾಯಿತಾ?"

"ತಪ್ಪು ಆಗಿದ್ದು ನನ್ನಿಂದಲೇ. ಆದ್ದರಿಂದ ಅದಕ್ಕೆ ಶಿಕ್ಷೆ ಅನುಭವಿಸ್ತಾ ಇದ್ದೇನೆ. ಇಟ್ ವಿಲ್ ಬಿ ಬೆಟರ್ ಇಫ್ ಯೂ ಲೀವ್ ಮಿ ಅಲೋನ್. ನನ್ನ ಮಾತು ಒರಟಾಗಿದ್ರೆ ಐಯಾಮ್ ಹೆಲ್ಪ್‌ಲೆಸ್. ಈಗ ನೀವು ನನ್ನ ಬಾಸ್ ಅಲ್ಲ ನಾನು ನಿಮ್ಮ ಎಂಪ್ಲಾಯೂ ಅಲ್ಲ."

"ಓಹೋ ಹಾಗೋ!" ರಾಹುಲ್ ಜೇಬಿನಿಂದ ಪತ್ರವೊಂದನ್ನು ತೆಗೆದ:

"ನೋಡು ಕೃತ್ತಿಕಾ. ಇದು ನಿನ್ನ ರಾಜೀನಾಮೆ ಪತ್ರ. ಹರಿದು ಹಾಕ್ತೀನಿ. ಅದೂ ನಿನ್ನ ಕಣ್ಣೆದುರಿಗೇನೇ. ಈಗ ಏನು ಹೇಳ್ತೀಯಾ?" ಎನ್ನುತ್ತ ಪತ್ರವನ್ನು ಪರಪರನೆ ಹರಿದು ಹಾಕಿದ.

"ನೀವು ಹರಿದು ಹಾಕಿದಾಕ್ಷಣ ನಾನು ಪುನಾ ಕೆಲಸಕ್ಕೆ ಬರ್ತೀನಿಂತ ನೀವು ತಿಳಿದುಕೊಂಡಿದ್ರೆ ತಪ್ಪು."

"ನೀನು ಪುನಾ ಕೆಲಸಕ್ಕೆ ಬಾಂತ ನಾನು ಹೇಳ್ತಾ ಇಲ್ಲ. ನಾನು ಕೇಳ್ತಾ ಇರುವುದು ನಿನ್ನ ದಿಢೀರ್ ರಾಜೀನಾಮೆಗೆ ಕಾರಣ ಮಾತ್ರ, ನೆನಪಿರಲಿ."

"ಕಾರಣ ಕಟ್ಕೊಂಡು ಏನ್ಮಾಡ್ತೀರಾ, ಈಗಾಗಲೇ ನನಗೆ ಆಗಿರೋ ಅವಮರ್ಯಾದೆ ಸಾಲದ? ತಪ್ಪು ಹೆಣ್ಣಿನದೇ ಇರಲಿ, ಗಂಡಿನದೇ ಇರಲಿ ಶಿಕ್ಷೆ ಮಾತ್ರ ಹೆಣ್ಣಿಗೆ ತಾನೇ? ನೀವು ನಿಮ್ಮ ಮನೆಯಲ್ಲಿ ಇರಲು ಕೇಳಿಕೊಂಡಾಗ ನಾನು ಒಪ್ಪಿಕೊಂಡಿದ್ದು ಕೇವಲ ಮಾನವೀಯತೆಯ ದೃಷ್ಟಿಯಿಂದಾಗಿ ಹೊರತು ನಿಮ್ಮ ಆಸ್ತಿ ಮೇಲಿನ ಆಸೆಯಿಂದಾಗಲಿ ಅಥವಾ ನಿಮ್ಮ ಮೇಲಿನ ಆಸೆಯಿಂದಾಗಲಿ ಅಲ್ಲ. ನಿಮಗೂ ಅಷ್ಟೇ ಅವಮರ್ಯಾದೆ ಮಾಡಲು ಇನ್ಯಾರೂ ಸಿಗಲಿಲ್ಲವೆಂದು ನನ್ನನ್ನು ಆಯ್ದುಕೊಂಡಿರಾ? ಅವರು ಹೇಳುವುದು ಸರಿ. ಪ್ರತಿ ಸಲವೂ ಯಾರಿಗಾದರೂ ಹೇಳಿ ಹೋಗ್ತಾ ಇದ್ದೀರಾ? ಮನೆ ಜವಾಬ್ದಾರಿತನ ವಹಿಸಿ ಕೊಡುತ್ತಿದ್ದೀರಾ? ಅಷ್ಟು ಜನರ ಮಧ್ಯೆ ನನ್ನನ್ನೇ ಆಯ್ಕೆ ಏಕೆ ಮಾಡಿಕೊಂಡಿರಿ? ಯಾರೂ ಇಲ್ಲ ಇವಳನ್ನು ಆಟ ಆಡಿಸಬಹುದು ಎಂದು ತಾನೇ? ಶ್ರೀಮಂತರು ನೀವು, ಹೇಗಾದರೂ ತಪ್ಪಿಸಿಕೊಂಡುಬಿಡುತ್ತಿರಿ. ನಿಮ್ಮ ಎದುರಿಗೆ ಹೇಳುವ ಧೈರ್ಯ ಯಾರಿಗಿದೆ ಹೇಳಿ. ನೋವು, ಅವಮಾನ, ನಿಂದನೆ ಎಲ್ಲ ನಮ್ಮಂತಹವರ ಪಾಲಿಗೆ ತಾನೇ?"

"ಒಂದ್ನಿಮಿಷ ಕೃತ್ತಿಕಾ, ಸ್ವಲ್ಪ ತಾಳು. ಇಷ್ಟೊಂದು ಆಪಾದನೆಗಳನ್ನು ಹೊರಿಸುವ ಮೊದಲು ನನಗೂ ಮಾತನಾಡಲು ಸ್ವಲ್ಪ ಅವಕಾಶ ಕೊಡು. ನಡೆದದ್ದೇನೆಂದು ಹೇಳುತ್ತೇನೆ.

ಅನಂತರ ತಪ್ಪು ಯಾರದು ಎಂದು ನೀನೇ ನಿರ್ಧರಿಸುವಿಯಂತೆ. ದುಡುಕಿ ಆತುರದ ನಿರ್ಧಾರ ತೆಗೆದುಕೊಳ್ಳಬಾರದು.'' ರಾಹುಲ್ ಬೇಡಿಕೆಯ ದನಿಯಲ್ಲಿ ಕೇಳಿದ.

"ನೀವೇನು ಹೇಳುತ್ತೀರಾ ಎಂದು ನನಗೆ ಚೆನ್ನಾಗಿ ಗೊತ್ತಿದೆ ಬಿಡಿ. ಜಗತ್ತಿನಲ್ಲಿ ಯಾವ ಗಂಡಸೂ ತಾನು ಮಾಡಿದ ತಪ್ಪನ್ನು ತಪ್ಪು ಎಂದು ಹೇಳುವುದಿಲ್ಲ. ಹೀಗಾಗುತ್ತೆ ಅಂತ ಗೊತ್ತಿದ್ದರೆ ನಿನಗೆ ಹೇಳುತ್ತಲೇ ಇರಲಿಲ್ಲ, ಸಾರಿ, ಐಯಾಮ್ ಸಾರಿ ಎಂದು ತಾನೇ? ಎರಡಕ್ಷರದ ಆ ಪದ ನನಗಾದ ಅವಮರ್ಯಾದೆಯನ್ನೆಲ್ಲ ಅಳಿಸದು. ಎಲ್ಲರೂ ನನ್ನತ್ತ ಬೆರಳು ಮಾಡಿ ತೋರಿಸುತ್ತಿದ್ದಾರೆ. ಬೇಕೆಂದೇ ನಾನು ನಿಮ್ಮ ಮನೆಗೆ ಬಂದೆನೆಂದು ಹೇಳಿಕೊಂಡು ನಗುತ್ತಿದ್ದಾರೆ. ಬಹುಶಾ ನೀವು ಹೇಳಿದಾಗ ಒಪ್ಪಿಕೊಳ್ಳುವ ಮೊದಲು ಒಂದೇ ಒಂದು ಕ್ಷಣ ನಾನು ನಾನ್ಯಾರು, ನನ್ನ ಸ್ಥಾನಮಾನವೇನು ಎಂದು ಯೋಚಿಸಿದ್ದರೂ ಸಾಕಿತ್ತು. ಇವತ್ತು ಈ ಪರಿಸ್ಥಿತಿ ಬರುತ್ತಿರಲಿಲ್ಲ. ನಿಮಗೆ ಸಾಕಷ್ಟು ಸಂತೋಷವಾಗಿರಬೇಕಲ್ಲವ? ಅದನ್ನು ತೋರಿಸಿ ಹೋಗೋಣ ಎಂದು ಬಂದಿರಾ?''

ತನ್ನ ನೋವು ಸಂಕಟವನ್ನೆಲ್ಲ ಹೊರ ಹಾಕುವವಳಂತ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಮಧ್ಯಾಹ್ನದಿಂದ ಹೆಪ್ಪುಗಟ್ಟಿದ್ದ ದುಃಖವೆಲ್ಲ ಕರಗಿ ನೀರಾಗಹತ್ತಿತ್ತು. ಅವಳ ಉದ್ವೇಗ, ಆವೇಶ ಎರಡೂ ಕಮ್ಮಿಯಾಗಲೆಂದು ರಾಹುಲ್ ಸ್ವಲ್ಪ ಹೊತ್ತು ಸುಮ್ಮನಿದ್ದ. ಸ್ವಲ್ಪ ಹೊತ್ತಾದ ನಂತರ ಕೃತ್ತಿಕಾಳಿಗೆ ಮೈ ಮೇಲೆ ಅರಿವು ಬಂದಂತಾಯಿತು. ತಾನು ಹುಚ್ಚಿಯ ಹಾಗೆ ಆಡಿದ್ದಕ್ಕೆ ನಾಚಿಕೆಯೂ ಆಯಿತು. ರಾಹುಲ್‌ದೇನು ತಪ್ಪು ಎಂದುಕೊಂಡು ತಲೆ ತಗ್ಗಿಸಿಕೊಂಡೇ "ಸಾರಿ'' ಎಂದಳು.

"ನಿನ್ನನ್ನು ಅವಮರ್ಯಾದೆ ಮಾಡಬೇಕೆಂದಾಗಲಿ, ಅಳಿಸಬೇಕೆಂದಾಗಲಿ ನಾನಿಲ್ಲಿಗೆ ಬರಲಿಲ್ಲ. ಹಾಗೆ ಮಾಡಬೇಕೆಂದಿದ್ದರೆ ಆಫೀಸಿನಲ್ಲೇ ಯಾವತ್ತೋ ಮಾಡಬಹುದಿತ್ತು. ನಿನ್ನ ರಾಜೀನಾಮೆ ಪತ್ರ ಕಂಡ ತಕ್ಷಣ ನಾನಿಲ್ಲಿಗೆ ಬರುವ ಅಗತ್ಯವೇನಿತ್ತು? ನಾನು ವ್ಯಕ್ತಿಗಳನ್ನು ಗೌರವಿಸುತ್ತೇನೆ. ಅದಕ್ಕಿಂತ ಹೆಚ್ಚಾಗಿ ಅವರ ಭಾವನೆಗಳಿಗೆ ಬೆಲೆ ಕೊಡುತ್ತೇನೆ. ಪ್ರಯಾಣದ ಆಯಾಸ ಎಂದುಕೊಂಡು ಬೆಳಿಗ್ಗೆ ನಾನು ಆಫೀಸಿಗೆ ಬರಲಿಲ್ಲ. ನಿನ್ನ ಲೆಟರ್ ಕಂಡ ತಕ್ಷಣ ಇಲ್ಲಿಗೇ ಬಂದೆ. ಏನೋ ನಡೆದಿರಬೇಕೆಂದು ಊಹಿಸದಷ್ಟು ದಡ್ಡನಲ್ಲ ನಾನು. ನಿನ್ನೆ ನಿನಗೆ



ಕೃಷ್ಣ

ಕೃಷ್ಣಾ
ದ್ರೌಪತಿಯ ವಸ್ತ್ರಾಪರಣದಲಿ
ಸೀರೆ ದಯಪಾಲಿಸಿ
ದೇವರಾದ ನೀನು
ಗೋಪಿಕೆಯರ
ಸೀರೆಗಳನ್ನು ಕದ್ದು
ಕಳ್ಳನಾಗಿರಲಿಲ್ಲವೆ?

— ಬಾಗೂರ್ ರಮೇಶ್

ಥ್ಯಾಂಕ್ಸ್ ಹೇಳಬೇಕೆನ್ನುವಷ್ಟರಲ್ಲಿ ನೀನು ಹೊರಟುಬಿಟ್ಟೆ. ಬಹುಶಾ ಬೇರೆ ಯಾರಿಗಾದರೂ ನಿನಗೆ ವಹಿಸಿದ ಜವಾಬ್ದಾರೀನ ವಹಿಸಿದ್ದಿದ್ದರೆ ಎಷ್ಟು ಸಲಿಗೆ ತೆಗೆದುಕೊಳ್ಳುತ್ತಿದ್ದರೋ ಏನೋ. ಅಮ್ಮನಿಗಂತೂ ನಿನ್ನನ್ನು ಹೊಗಳಲು ಮಾತುಗಳೇ ಸಾಲದೇನೋ? ಮೇಘನಾಳಂತೂ ನಿನ್ನೆಯಿಂದ ನಿನ್ನನ್ನು ಎಷ್ಟು ಸಲ ಕೇಳಿದ್ದಾಳೋ ಏನೋ? ಎಷ್ಟೋ ವರ್ಷಗಳನಂತರ ನನ್ನ ಮನಸ್ಸಿಗೆ ಕೆಲ ಕಾಲ ನೆಮ್ಮದಿ ನೀಡಿದ್ದಕ್ಕೆ ಥ್ಯಾಂಕ್ಸ್ ಹೇಳೋಣವೆಂದುಕೊಂಡು ಬಂದೆ. ಯಾವ ಔಷಧಿ ಮಾತ್ರೆಗೂ ಜಗ್ಗದ ಅಮ್ಮನ ಕಾಯಿಲೇನ ಒಂದು ವಾರದಲ್ಲಿ ಓಡಿಸಿ ಬಿಟ್ಟಿದ್ದೀಯ. ಇಷ್ಟು ಮಾಡಿದ ನಿನಗೆ ಥ್ಯಾಂಕ್ಸ್ ಹೇಳದಿದ್ದರೆ ನನ್ನಂತಹ ಕೃತಘ್ನ ಇನ್ನೊಬ್ಬನಿರಲಾರ.''

ಅವನ ಧ್ವನಿಯಲ್ಲಿನ ನೋವು, ಪ್ರಾಮಾಣಿಕತೆಯ ಅರಿವಾದೊಡನೆ ಕೃತ್ತಿಕಾ ಮೆತ್ತಗಾದಳು.

"ಸಾರಿ ಸರ್.'' ಕೇಳಿಸಿಯೂ ಕೇಳಿಸದ ಸ್ವರದಲ್ಲಿ ಹೇಳಿದಳು.

"ಅವತ್ತು ನಾನು ಇಲ್ಲಿಂದ ಹೊರಟಿದ್ದು ಸಹ ಅರ್ಜೆಂಟ್ ಬರಬೇಕು ಎಂದು ಸಂಘರ್ಷಳಿಂದ ಫೋನ್ ಬಂದ ಮೇಲೆ.''

ಕೃತ್ತಿಕಾ ಅರ್ಥವಾಗದೆ ಅವನ ಮುಖ ನೋಡಿದಳು.

"ಓಹ್ ಸಾರಿ. ಸಂಘರ್ಷ ಯಾರೆಂದು ನಿನಗೆ ಗೊತ್ತಿಲ್ಲ ಅಲ್ವ? ಮೇಘನಾಳ ತಾಯಿ.''

ಸ್ವಲ್ಪ ಹೊತ್ತು ನಿಲ್ಲಿಸಿದ.

"ಅವಳ ಗಂಡ ಸಾವನ್‌ಗೆ ಕ್ಯಾನ್ಸರ್ ಆಪರೇಶನ್ ಆಗಿ ಎರಡು ತಿಂಗಳಾಗಿತ್ತು. ಆರೋಗ್ಯವಾಗಿಯೇ ಇದ್ದ ಅವನನ್ನು ಒಂದು ವಾರದ ಕೆಳಗೆ ಉಸಿರಾಟದ ತೊಂದರೆಯಿಂದಾಗಿ ಆಸ್ಪತ್ರೆಗೆ ಅಡ್ಮಿಟ್ ಮಾಡಿದಾಗ ಅಲ್ಲಿ ಕ್ಯಾನ್ಸರ್ ಎರಡೂ ಶ್ವಾಸಕೋಶಗಳಿಗೆ ಹರಡಿದ್ದು ಪತ್ತೆಯಾಯಿತಂತೆ. ಅಡ್ವಾನ್ಸ್ ಸ್ಟೇಜ್. ಪುನಾ ಆಪರೇಶನ್‌ನಿಂದ ಪ್ರಯೋಜನವಾಗುವುದಿಲ್ಲ, ಹೆಚ್ಚೆಂದರೆ ಇನ್ನೊಂದು ವಾರ ಎಂದು ಹೇಳಿದಾಗ ಸಂಘರ್ಷ ನನಗೆ ಫೋನ್ ಮಾಡಿದಳು. ಪಾಪ ಅವಳಿಗೆ ತಾನೇ ಯಾರಿದ್ದಾರೆ? ತಪ್ಪು ಮಾಡಿರಬಹುದು. ಆದರೆ ದ್ವೇಷ ಸಾಧಿಸಲು ನಾವು ಈ ಭೂಮಿಯಲ್ಲಿ ಎಷ್ಟು ವರ್ಷ ಬದುಕಿರ್ತೀವಿ ಹೇಳು. ಅವನೇ ನನ್ನನ್ನು ಕರೆಸಲು ಹೇಳಿದ್ದನಂತೆ. ಅವಳ ತಂದೆ ತಾಯಿ ಅವಳೊಡನೆ ಸಂಪರ್ಕ ಕಳೆದುಕೊಂಡು ಯಾವುದೋ ಕಾಲವಾಗಿತ್ತು. ಪುಟ್ಟ ಮಗುವನ್ನು ಕಟ್ಟಿಕೊಂಡು ಅಲ್ಲಿ ಒಬ್ಬಳೇ ಏನು ಮಾಡುತ್ತಾಳೆಂದು ಹೋದೆ. ಹೋಗುವ ಮೊದಲು ಸಾವನ್ ತೀರಿಕೊಂಡಿದ್ದ. ಸಾಯುವ ಮೊದಲು ನನ್ನನ್ನು ನೋಡಬೇಕೆಂದು ತುಂಬ ಹಂಬಲಿಸಿದನಂತೆ. ಸಂಘರ್ಷಳಿಗೆ ಸಮಾಧಾನ ಮಾಡಿ, ಅವಳಿಗೊಂದು ವ್ಯವಸ್ಥೆ ಮಾಡಿ ಬರುವುದರಲ್ಲಿ ಒಂದು ವಾರವಾಯಿತು. ಅಲ್ಲಿಗೆ ಹೋದನಂತರವೇ ನನಗೆ ಎಲ್ಲ ವಿಷಯಗಳು ಗೊತ್ತಾಗಿದ್ದು. ಹೀಗಾಗಿ ತಕ್ಷಣ ಬರಲಾಗಲಿಲ್ಲ. ಅವತ್ತು ಫೋನ್ ಮಾಡಿದಾಗ ಅದೃಷ್ಟಕ್ಕೆ ನೀನು ಸಿಕ್ಕಿದೆ. ಇಷ್ಟು ಹೇಳಿದನಂತರವೂ ನೀನು ನನ್ನ ಮಾತನ್ನು ನಂಬದಿದ್ದರೆ...''

"ಇಲ್ಲ ಸರ್, ಖಂಡಿತ ನಂಬ್ತೀನಿ.''

ಅವನ ಧ್ವನಿಯಲ್ಲಿನ ಪ್ರಾಮಾಣಿಕತೆಯನ್ನು ಗುರುತಿಸಿದ ಕೃತ್ತಿಕಾ ತಕ್ಷಣ ಹೇಳಿದಳು. ಅವರ ದೃಷ್ಟಿಯಲ್ಲಿ ಅವನಾಗಲೇ ಹಿಮಾಲಯದಷ್ಟು ಎತ್ತರ ಏರಿದ್ದ. ಅನಾವಶ್ಯಕವಾಗಿ ಅವನ ಮನಸ್ಸು ನೋಯಿಸಿದನಲ್ಲ ಎಂದು ಕೊರಗಿದಳು. ಅವನು ಅನುಭವಿಸಿದ ನೋವಿನ ಮುಂದೆ

ತಾನು ಕೇಳಿದ ಮಾತುಗಳು ಏನೇನೂ ಅಲ್ಲ ಎನಿಸಿತು.

"ಸರ್, ಆಕೆ ಬೇರೆಯವರನ್ನು ಪ್ರೀತಿಸ್ತಾ ಇದ್ದಾರೆಂತ ಗೊತ್ತಾದಾಗ ನಿಮ್ಮ ಮನಸ್ಸಿಗೆ ನೋವಾಗಲಿಲ್ಲವೆ?''

"ಒಂದಾನೊಂದು ಕಾಲದಲ್ಲಿ ನಾನು ಅವಳನ್ನು ತುಂಬ ಇಷ್ಟ ಪಟ್ಟಿದ್ದೆ. ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದ್ದೆ. ಆದರೆ ಅವಳ ಪ್ರೀತಿ ಎಲ್ಲ ಇನ್ನೊಬ್ಬನಿಗೆ ಮೀಸಲು ಅಂತ ಗೊತ್ತಾದಾಗ ನೋವಾಯಿತು. ನೋವಾಗದೆ ಇರಲು ನಾನೇನು ದೇವತೆಯೇ ಅಥವಾ ದೆವ್ವವೆ? ಇನ್ನೊಂದು ಕ್ಷಣಕ್ಕೆ ಅಂದುಕೊಂಡೆ, ಪ್ರೀತಿಸುವುದು ಅವಳ ಹಕ್ಕು ಅದನ್ನು ತಡೆಯಲು ನಾನ್ಯಾರು? ಬಹುಶಾ ಆ ವ್ಯಕ್ತಿ ನನಗಿಂತ ಮಿಗಿಲಾಗಿ ಅವಳನ್ನು ಪ್ರೀತಿಸಿರಬೇಕು. ಮದುವೆಯಾದ ನಂತರವೂ ಪ್ರೀತಿಸುವ ಗಂಡನಿದ್ದರೂ ಸೆಳೆಯಬೇಕಾದರೆ ಆ ಪ್ರೀತಿ ನನಗಿಂತ ಹೆಚ್ಚಿನದೇ ಇರಬೇಕೆಂದು ನಿರ್ಧರಿಸಿದೆ. ನನ್ನ ನಿರ್ಧಾರಕ್ಕೆ ತಕ್ಕಂತೆ ಅವಳೂ ನಡೆದುಕೊಳ್ಳುತ್ತಿದ್ದಳು. ಬಹುಶಾ ನನ್ನಲ್ಲಿ ಹೇಗೆ ಹೇಳುವುದು ಎಂದುಕೊಂಡು ಮನಸ್ಸಿನಲ್ಲೇ ಕೊರಗುತ್ತಿದ್ದಳು. ಪ್ರೀತಿಯನ್ನು ಬಲವಂತವಾಗಿ ಪಡೆಯಬಾರದು ಎಂದುಕೊಂಡು ಒಂದು ದಿನ ನಾನವಳನ್ನು ಇಬ್ಬರಲ್ಲಿ ನೀನು ಯಾರನ್ನು ಪ್ರೀತಿಸುವುದು ಎಂದು ಕೇಳಿದಾಗ ಹಿಂದೆ ಮುಂದೆ ಯೋಚಿಸದೆ 'ಸಾವನ್' ಎಂದಳು. ಅವಳ ಧೈರ್ಯ, ಇಬ್ಬರ ಪ್ರಾಮಾಣಿಕ ಪ್ರೀತೀನ ಮೆಚ್ಕೊಂಡೆ ಇಷ್ಟರಲ್ಲಾಗಲೇ ಮೇಘನಾಳಿಗೆ ಬಸಿರಿಯಾಗಿದ್ದಳು. ಸಾವನ್ ನೊಡನೆ ಮಾತನಾಡಿ ಮಗು ಹುಟ್ಟುವವರೆಗೂ ಸುಮ್ಮನೆ ಇದ್ದು ಅನಂತರ ಡೈವೋರ್ಸ್‌ಗೆ ಹಾಕೋಣ ಎಂದು ಹೇಳಿದೆ. ನನ್ನ ನೆನಪಿನ ತುಣುಕೂ ಅವಳಿಗೆ ಬೇಡವಾಗಿತ್ತೇನೋ. ಮಗು ನನಗೇ ಬೇಕೆಂದಾಗ ಒಪ್ಪಿಕೊಂಡಳು. ಮುಂದೆ ನಡೆದದ್ದೆಲ್ಲ ನಿನಗೇ ಗೊತ್ತಿದೆಯಲ್ಲ.''

"ಸರ್, ನೀವು ನಿಜವಾಗಿ ಮನುಷ್ಯರಲ್ಲ ದೇವರು.'' ಕೃತ್ತಿಕಾ ಹೃದಯ ತುಂಬಿ ನುಡಿದಳು.

"ಈ ಮಾತನ್ನು ಕೇಳಿ ಕೇಳಿ ನನಗೆ ಬೇಸರವಾಗಿಬಿಟ್ಟಿದೆ.'' ರಾಹುಲ್ ನಕ್ಕು ನುಡಿದ.

"ಸಾವನ್ ಜೊತೆ ನಡೆದ ಮದುವೆಗೆ



ಸಾಕು ಎಂಬುದು ಸಾವು; ಬೇಕು ಎಂಬುದು ಬದುಕು. —ಶಂ. ಬಾ. ಜೋಶಿ

ಮನುಷ್ಯನು ಪರಿಸ್ಥಿತಿಯ ಗುಲಾಮನೂ ಅಲ್ಲ; ದೇವರ ಆಟದ ವಸ್ತುವೂ ಅಲ್ಲ.
—ಎಸ್. ರಾಧಾಕೃಷ್ಣನ್

ಸತ್ಯವನ್ನು ಹೇಳತಕ್ಕದ್ದು, ಪ್ರಿಯವನ್ನು ಹೇಳತಕ್ಕದ್ದು. ಪ್ರಿಯವಲ್ಲದ ಸತ್ಯವನ್ನು, ಸತ್ಯವಲ್ಲದ ಪ್ರಿಯವನ್ನು ಹೇಳಬಾರದು.
—ಸುಭಾಷಿತ

ಜೂಜು ದುರಾಸೆಯ ಮಗು; ತೊಂದರೆಯ ತಂದೆ. —ವಾಶಿಂಗ್ಟನ್

ಸಂಗ್ರಹ : ಹ.ಗೋ.ಶಿ.

ಸಂಘರ್ಷಳಿಗೆ ನಾನು ಸಾಕ್ಷಿಯಾಗಿ ಸೈನ್ ಮಾಡಿದಾಗ ಎಲ್ಲರೂ ಇದೇ ಮಾತು ಹೇಳಿದರು. ಎಲ್ಲರೂ ಅಷ್ಟೊಂದು ಹೊಗಳುವಷ್ಟು ನಾನು ಅರ್ಹನಲ್ಲ. ಒಮ್ಮೊಮ್ಮೆ ಬದುಕಿನಲ್ಲಿ ಏನೇನೋ ನಡೆಯುತ್ತೆ. ಏನು ಮಾಡ್ಲಿಕ್ಕೂ ಆಗುವುದಿಲ್ಲ. ನಾವಿಬ್ಬರು ಜೊತೇಲಿದ್ದಿದ್ದರೆ, ಇಬ್ಬರೂ ಖಂಡಿತ ಸುಖವಾಗಿರ್ತಿರಲಿಲ್ಲ. ಅದಕ್ಕೆ ಅವಳಾದರೂ ಸುಖಿಯಾಗಿರಲಿ ಎಂದುಕೊಂಡು ಹೀಗೆ ಮಾಡಿದೆ. ಕೊನೆಗೂ ಅವಳ ಲೈಫ್ ಟ್ರಾಜೆಡಿ ಆಯಿತು. ಜನರಿಗೆ ಗೊತ್ತಾದರೆ ಅವಳು ಮಾಡಿದ್ದಕ್ಕೆ ತಕ್ಕ ಶಾಸ್ತಿಯಾಯಿತು ಅಂತಾರೆ. ಸಾವು ನೋವೆಲ್ಲ ನಮ್ಮ ಕೈಲಿದೆಯೇ? ಐ ಪಿಟಿ ಹರ್. ಅವಳಲ್ಲಿ ನಾನು ಮೆಚ್ಚಿಕೊಂಡಿದ್ದು ಅವಳ ಧೈರ್ಯ, ಪ್ರಾಮಾಣಿಕತೆಯನ್ನು. ನನಗೆ ಹೇಳದೆ ಅವಳು ಮನಸ್ಸಿನಲ್ಲೇ ಸಾವನ್‌ನನ್ನು ಆರಾಧಿಸುತ್ತ ನನ್ನ ಹತ್ತಿರ ನಾಟಕ ಆಡಿಕೊಂಡಿದ್ದಿದ್ದರೆ ನಾನವಳನ್ನು ಯಾವತ್ತೂ ಕ್ಷಮಿಸ್ತಾ ಇರಲಿಲ್ಲ. ಇವತ್ತಿಗೂ ಅವಳು ನನಗೆ ಉತ್ತಮ ಗೆಳತಿ.''

"ಸರ್ ಆಕೆ ಆಮೇಲೆ ಮಗು ಬಗ್ಗೆ....'' ರಾಹುಲ್‌ನ ಕತೆ ಕೇಳುತ್ತಿದ್ದ ಕೃತ್ತಿಕಾ ಕೇಳಿದಳು.

"ಅವಳೇನೋ ನೋಡಬೇಕೆಂದುಕೊಂಡು ಬಹಳ ಸಲ ಕೇಳಿದಳು. ಆದರೆ ನಾನು ಬೇಡ ಎಂದೆ. ಮೇಘನಾ ತನಗೆ ತಾಯಿ ಇಲ್ಲ ಎಂದು ತಿಳಿದುಕೊಂಡಿದ್ದಾಳೆ. ಅರಿಯದ ಮಗುವಿಗೆ ಆಸೆ ಹುಟ್ಟಿಸಿ ಅದರ ಮನಸ್ಸಿಗ್ಯಾಕೆ ನೋವುಂಟು ಮಾಡಬೇಕು. ತನ್ನ ತಾಯಿ ಹೀಗೆ ಮಾಡಿದಳಲ್ಲ ಎಂದು ಅವಳು ಬೆಳೆದನಂತರ ಸಂಘರ್ಷಳ ಬಗ್ಗೆ ಕೀಳು ಭಾವನೆ ತಳೆಯುವುದು ನನಗಿಷ್ಟವಿರಲಿಲ್ಲ. ಹೇಗೂ ತಾಯಿ ಇದ್ದೂ ತಬ್ಬಲಿ, ಹಾಗೇ ತಿಳಿಯಲಿ ಎಂದೆ. ಆಗಾಗ ಫೋಟೋಗಳನ್ನು ಮಾತ್ರ ಕಳುಹಿಸಿ ಕೊಡ್ತಾ ಇದ್ದೆ. ಮೇಘನಾ ತನ್ನ ತಾಯಿ ಸತ್ತೇ ಹೋಗಿದ್ದಾಳೆಂದು ತಿಳಿದುಕೊಂಡಿದ್ದಾಳೆ.''

ರಾಹುಲ್‌ನ ಕತೆ ಕೇಳುತ್ತ ಕೃತ್ತಿಕಾಳಿಗೆ ಈಗ ಧೈರ್ಯ ಬರತೊಡಗಿತ್ತು. ಅವನು ತನ್ನ ಬಾಸ್ ಎಂಬುದೂ ಮರೆತಳು.

"ನೀವ್ಯಾಕೆ ಅನಂತರ ಮದುವೆ ಮಾಡಿಕೊಳ್ಳಲಿಲ್ಲ. ತಾಯಿಗಾಗಿಯಾದರೂ ಅಥವಾ ಆ ಮಗುವಿಗಾಗಿಯಾದರೂ ನೀವು ಮದುವೆ ಮಾಡಿಕೊಳ್ಳಬಹುದಿತ್ತು.''

"ಒಂದು ಮದುವೆಯ ಅನುಭವವೇ ಭೀಕರ ಸ್ವಪ್ನವಾಗಿರುವಾಗ ಇನ್ನೊಂದು ಮದುವೆ ಬಗ್ಗೆ ಯೋಚಿಸಲೂ ನನಗೆ ಭಯವಾಗುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಯಾರೂ ನನ್ನ ಹೃದಯದ ಬಾಗಿಲನ್ನು ತಟ್ಟಲಿಲ್ಲ. ಬರುವವಳು ನನಗೆ ಹೆಂಡತಿಯಷ್ಟೇ ಅಲ್ಲ. ನನ್ನ ಮಗುವಿಗೂ ತಾಯಾಗಬೇಕು ಎನ್ನುವುದು ನನ್ನಿಷ್ಟ. ಬಂದವರಲ್ಲಿ ಹೆಚ್ಚಿನವರು ನನ್ನ ಆಸ್ತಿ, ಅಂತಸ್ತಿಗೆ ಆಸೆ ಪಟ್ಟು ಬಂದಿದ್ದವರೇ ಹೊರತು ನನ್ನ ನೋವನ್ನು ಅರ್ಥಮಾಡಿಕೊಳ್ಳುವುದು ಅವರಿಗೆ ಬೇಡವಾಗಿತ್ತು.'' ರಾಹುಲ್ ವ್ಯಥೆಯಿಂದ ಹೇಳಿದ.

"ನಿಮಗೊಂದು ಹಾನೆಸ್ಟ್ ಸಜೆಶನ್ ಕೊಟ್ಟರೆ ಬೇಡ ಎನ್ನುವುದಿಲ್ಲ ತಾನೇ?''

ಏನೆಂಬಂತೆ ಅವಳತ್ತ ನೋಡಿದ.

"ನೀವು ಆಕೇನ ತುಂಬ ಪ್ರೀತಿಸಿದ್ದಿರಿ ಅಂತ ಹೇಳಿದಿರಲ್ಲವೆ, ಈಗ ನೀವೇ ಯಾಕೆ ಅವರನ್ನು ಮದುವೆಯಾಗಬಾರದು? ಮೇಘನಾಳಿಗೂ ನಿಜವಾದ ತಾಯಿ ಸಿಕ್ಕಿದ ಹಾಗಾಗುತ್ತದೆ. ನಿಮ್ಮ ಬದುಕೂ ನೆಲೆಯಾಗುತ್ತದೆ, ಆಕೆಗೂ ಆಸರೆಯಾದ ಹಾಗಾಗುತ್ತದೆ. ನೀವು ಹೇಳಿದ ಹಾಗೆ ಬಂದವರು ನಿಮಗೆ ಹೆಂಡತಿಯಾಗುತ್ತಾಳೆಯೇ ಹೊರತು ಮೇಘನಾಳಿಗೆ

ತಾಯಿಯಾಗಲಾರಳು.''

"ನಿನ್ನ ಸಲಹೆಗೆ ಥ್ಯಾಂಕ್ಸ್. ಒಂದಾನೊಂದು ಕಾಲದಲ್ಲಿ ನಾನವಳನ್ನು ಪ್ರೀತಿಸಿದ್ದು ನಿಜ. ಅದರ ಅದರರ್ಥ ಈಗಲೂ ಪ್ರೀತಿಸುತ್ತೇನೆ ಎಂದಲ್ಲ. ಈಗ ಅವಳು ನನಗೆ ಬರೇ ಗೆಳತಿ ಅಷ್ಟೇ. ಅವಳ ಬಗ್ಗೆ ನನ್ನಲ್ಲಿ ಅನುಕಂಪದ ಹೊರತು ಬೇರಾವುದೇ ಭಾವನೆಗಳಿಲ್ಲ. ಹಾಗೆ ಅವಳು ನನಗೆ ಬೇಕೇ ಬೇಕು ಎಂದಿದ್ದರೆ ಬಲವಂತವಾಗಿಯಾದರೂ ಅವಳ ಮೇಲೆ ನನ್ನ ಅಧಿಕಾರ ಸ್ಥಾಪಿಸುತ್ತಿದ್ದೆ. ಬಿಟ್ಟುಕೊಡುತ್ತಿರಲಿಲ್ಲ. ಅವಳ ದುಃಖವೂ ಅಷ್ಟೇ, ತಾತ್ಕಾಲಿಕವಾದುದು. ಕಾಲ ಎಲ್ಲವನ್ನು ಮರೆಸುತ್ತದೆ. ಸಾವನ್‌ನ ನೆನಪಾಗಿ ಮಗುವೊಂದಿದೆ, ಅದೇ ಸಾಕು ನನಗೆ ಎಂದಳು. ಬಹುಶಾ ನೀನು ಕೇಳಿದ ಹಾಗೆ ನಾನೂ ಅವಳನ್ನು ಕೇಳಬಹುದು ಎಂದುಕೊಂಡಳೇನೋ.''

ಇಬ್ಬರ ನಡುವೆ ಸ್ವಲ್ಪ ಕಾಲ ಮೌನ ಆವರಿಸಿತು. ಕೃತ್ತಿಕಾ ರಾಹುಲ್‌ನ ಬಗ್ಗೆಯೇ ಯೋಚಿಸುತ್ತಿದ್ದರೆ ರಾಹುಲ್ ತನ್ನದೇ ಆದ ಲೋಕದಲ್ಲಿ ಮುಳುಗಿ ಹೋಗಿದ್ದ. ಇಷ್ಟೆಲ್ಲ ನೋವನ್ನು ಇಷ್ಟು ದಿನ ತಾನೊಬ್ಬನೇ ಹೇಗೆ ಅನುಭವಿಸಿದ ಎಂದು ಆಶ್ಚರ್ಯ ಪಟ್ಟಳು.

"ಇಷ್ಟೆಲ್ಲ ಹೇಳಿದನಂತರವೂ...'' ರಾಹುಲ್ ಮುಂದೆ ಏನೋ ಹೇಳುವವನಿದ್ದ.

"ನಂಬ್ತೀನಿ ಖಂಡಿತ ನಂಬ್ತೀನಿ.'' ಕೃತ್ತಿಕಾ ತಡೆದಳು.

"ನಿನ್ನ ದಿಢೀರ್ ರಾಜೀನಾಮೆಗೆ ಕಾರಣ, ಇಷ್ಟು ಉದ್ವೇಗ ಆವೇಶಕ್ಕೆ ಕಾರಣ ಹೇಳಲೇ ಇಲ್ಲವಲ್ಲ.'' ರಾಹುಲ್ ಪ್ರಶ್ನಿಸಿದ.

ಕೃತ್ತಿಕಾ ಒಂದು ನಿಮಿಷ ಮೌನವಾದಳು. ಹೇಳಲೋ ಬೇಡವೋ ತೊಳಲಾಡಿದಳು. ಅನಂತರ ಮಧ್ಯಾಹ್ನ ನಡೆದ ಘಟನೆಯನ್ನು ವಿವರವಾಗಿ ಹೇಳಿದಳು. ಹೇಳಿದನಂತರ ಮನಸ್ಸು ಹಗುರವಾದ ಹಾಗಾಯಿತು.

"ಎಲ್ಲರೂ ನನ್ನನ್ನು ತಪ್ಪಾಗಿ ತಿಳಿದುಕೊಂಡರು. ಹಾಗಂತ ನನಗೇನೂ ವ್ಯಥೆಯಿಲ್ಲ. ಅದು ಅವರ ಹಕ್ಕು. ಆದರೆ ವಿನಾಕಾರಣ ಅಪಾದನೆಗೆ ಗುರಿಯಾಗಿದ್ದಕ್ಕೆ ಮಾತ್ರ ನೋವಾಯಿತು. ಪ್ರಪಂಚವೇ ಹೀಗೆ.'' ವಿಷಾದದಿಂದ ಹೇಳಿದಳು.

"ಮನುಷ್ಯರ ಸ್ವಭಾವವೇ ಹಾಗೆ. ತಮಗಿಲ್ಲದ್ದು ಇನ್ನೊಬ್ಬರಿಗೆ ಸಿಕ್ಕಿದಾಗ ಹೊಟ್ಟೆಕಿಚ್ಚು ಪಡುತ್ತಾರೆ. ತಮ್ಮ ಅಸಹನೆಯನ್ನು ಹೇಗೆ ತೋರಿಸಿಕೊಳ್ಳುತ್ತಾರೆ. ಅದಿರಲಿ ರಾಜೀನಾಮೆ ನೀಡಿದೆಯಲ್ಲ. ಮುಂದೇನು ಮಾಡಬೇಕೆಂದು ಯೋಚಿಸಿದ್ದೀಯಾ?''

ಕೃತ್ತಿಕಾ ನಿರುತ್ತರಳಾದಳು. ಈ ಪ್ರಶ್ನೆಗೆ ಅವಳ ಬಳಿ ಉತ್ತರವಿರಲಿಲ್ಲ. ಅವಳ ಭವಿಷ್ಯವೇನು ಎಂದು ಅವಳಿಗೇ ಗೊತ್ತಿಲ್ಲದಿರುವಾಗ ರಾಹುಲ್‌ನಿಗೇನು ಹೇಳಿಯಾಳು?

"ಸದ್ಯಕ್ಕಂತೂ ಏನೂ ನಿರ್ಧರಿಸಿಲ್ಲ. ಮುಂದೆ ನೋಡೋಣ. ಬೇರೆ ಕಡೆ ಎಲ್ಲಿಯಾದರೂ ಕೆಲಸಕ್ಕೆ ಟ್ರೈ ಮಾಡ್ತೀನಿ.'

"ಬೇರೆ ಕಡೆ ಪ್ರಯತ್ನ ಪಡುವುದರ ಬದಲು ನಮ್ಮಲ್ಲೇ ಮುಂದುವರಿಯಬಹುದಲ್ಲ?''

"ಸ್ವಾಭಿಮಾನವನ್ನು ಬಿಟ್ಟು ಹೇಗೇಗೋ ಬದುಕಬೇಕೆಂದುಕೊಂಡಿದ್ದರೆ ನಾನಿಲ್ಲಿತನಕ ಬರ್ತಾನೇ ಇರಲಿಲ್ಲ. ಒಂದ್ಸಲ ಬೇಡ ಎಂದು ನಿರ್ಧರಿಸಿದ ಮೇಲೆ ಆಯಿತು.''

"ಹೋಗಲಿ, ಆಫೀಸಿನ ಕೆಲಸ ಬೇಡ. ಬೇರೆ ಕೆಲಸ ಕೊಟ್ಟರೆ ಆಗಬಹುದಾ?''

"ಬೇರೆ ಅಂದ್ರೆ?''

"ಅಮ್ಮನನ್ನು, ಮೇಘನಾಳನ್ನು ನೋಡಿಕೊಳ್ಳುವ ಕೆಲಸ."

"ಆ ಕೆಲಸಕ್ಕೆ ಬಂದೇ ತಾನೇ ಇಷ್ಟೊಂದು ಆಪಾದನೆಗಳಿಗೆ ಗುರಿಯಾಗಿದ್ದು?"

"ನಾನು ಹೇಳಿದ್ದೇ ಬೇರೆ ಅರ್ಥದಲ್ಲಿ. ನೀನು ಅರ್ಥ ಮಾಡಿಕೊಂಡಿದ್ದೇ ಬೇರೆ."

"ಅಂದ್ರೆ?" ಕೃತ್ತಿಕಾ ಆಶ್ಚರ್ಯದಿಂದ ಕೇಳಿದಳು.

"ನೇರವಾಗಿ ಕೇಳ್ತೀನಿ ಕೃತ್ತಿಕಾ ನಿನ್ನ ಪ್ರಾಮಾಣಿಕ ಅಭಿಪ್ರಾಯ ಹೇಳು. ಐ ವಾಂಟ್ ಟು ಮ್ಯಾರಿ ಯೂ." ಕೃತ್ತಿಕಾ ಕತ್ತೆತ್ತಿ ರಾಹುಲ್ ಮುಖ ನೋಡಿದಳು. ಅಲ್ಲೆಲ್ಲಾದರೂ ವ್ಯಂಗ್ಯ ಅಥವಾ ತಮಾಷೆ ಕಾಣಬಹುದೆಂದು.

"ಹಾಸ್ಯ ಮಾಡ್ತಾ ಇದ್ದೀರಾ?" ನಂಬಲಾಗದವಳಂತೆ ಕೇಳಿದಳು.

"ಹಾಸ್ಯ ಮಾಡುವ ವಯಸ್ಸು ಮೀರಿ ಹೋಗಿದೆ. ನನ್ನ ಪ್ರಶ್ನೆಗೆ ಉತ್ತರ ಹೇಳಲಿಲ್ಲವಲ್ಲ."

"ಹೀಗಾಯಿತಲ್ಲ ಎಂದು ಕರುಣೆ, ಅನುಕಂಪದಿಂದ ನನ್ನನ್ನು ಈ ಪ್ರಶ್ನೆ ಕೇಳ್ತಾ ಇದ್ದೀರಾ?"

"ಕರುಣೆ ಅನುಕಂಪಗಳು ಭಾವನೆಗಳನ್ನು ಹುಟ್ಟಿಸುತ್ತವೆ ಎಂದು ನನಗೆ ಗೊತ್ತಿಲ್ಲ. ಹೆಣ್ಣಾಗಲಿ ಗಂಡಾಗಲಿ ಪರಸ್ಪರ ಆಕರ್ಷಿತರಾಗಬೇಕಾದರೆ ಪ್ರೀತಿ ಇರಬೇಕಷ್ಟೇ. ನೀನು ಯೋಚಿಸೋ ರೀತೀಲಿ ನಾನು ಯೋಚಿಸಿದ್ದಿದ್ದರೆ ನಾನ್ಯಾವಾಗಲೋ ಯಾರಾದರೂ ಅನಾಥ ಹುಡುಗಿಯನ್ನು ಮದುವೆಯಾಗುತ್ತಿದ್ದೆ." ರಾಹುಲ್ ನಕ್ಕು ನುಡಿದ.

"ಆದರೆ ನಿಮ್ಮ ಅಭಿಪ್ರಾಯವನ್ನು ಇನ್ನೊಬ್ಬರ ಮೇಲೆ ಬಲವಂತವಾಗಿ ಹೇರುವುದು ತಪ್ಪು. ಪ್ರೀತಿ ಎನ್ನುವುದು ಒಂದು ನಿಮಿಷದಲ್ಲಿ ಉಕ್ಕಿ ಹರಿಯುವಂತಾದ್ದಲ್ಲ."

"ನನ್ನ ಅಭಿಪ್ರಾಯ ಹೇಳಿದೆ. ಆದಕ್ಕೇ ಈಗ ನಿನ್ನ ಒಪ್ಪಿಗೆ ಕೇಳ್ತಾ ಇರುವುದು."

"ನಾನು ಬೇಡ ಅಂದರೆ?" ಕೃತ್ತಿಕಾ ಮರು ಸವಾಲು ಹಾಕಿದಳು.

"ಆದಕ್ಕೆ ಕಾರಣ ಕೇಳಬಹುದೇ? ನನ್ನಲ್ಲೇನಾದರೂ ದೋಷವಿದೆಯೇ ಅಥವಾ ಎರಡನೆ ವರ ಎಂದೇ ಅಥವಾ ದುಷ್ಟನೇ?" ರಾಹುಲ್ ವಿನೀತನಾಗಿ ಕೇಳಿದ.

"ದೋಷ ಇರುವುದು ನನ್ನಲ್ಲೇ ಆದ್ದರಿಂದ ಬೇಡ ಎನ್ನುತ್ತಿರುವುದು. ಪ್ರೀತಿ, ಪ್ರೇಮದ ಬಗ್ಗೆ ನನ್ನ ಮನಸ್ಸು ಕಲ್ಲಾಗಿ ಬಿಟ್ಟಿದೆ. ಮದುವೆ ಅನ್ನೋ ಪದ ನನ್ನ ಬದುಕಿನಲ್ಲೇ ಇಲ್ಲ. ನೀವು ಅನುರೂಪಳಾದ ಬೇರೆ ಯಾರನ್ನಾದರೂ ಮದುವೆಯಾಗಿ. ನನ್ನ ಜಾಗದಲ್ಲಿ ಬೇರೆ ಇನ್ನಾರೇ ಇದ್ದಿದ್ದರೂ ಸಂತೋಷದಿಂದ ಒಪ್ಪಿಕೊಳ್ತಾ ಇದ್ರು ಅಂತ ನನಗೆ ಗೊತ್ತು. ನನ್ನಿಂದ ಸಾಧ್ಯವಿಲ್ಲ, ಅಲ್ಲದೆ ನಾನು ಆ ಉದ್ದೇಶ ಇಟ್ಟುಕೊಂಡು ನಿಮ್ಮ ಮನೆಗೆ ಬರಲಿಲ್ಲ."

"ಪ್ರೀತಿ ಪ್ರೇಮದ ಬಗ್ಗೆ ಇಷ್ಟು ಕಟುವಾಗಿ ಹೇಳಬೇಕಾದರೆ ನಿನ್ನ ಬದುಕಿನಲ್ಲಿ ಏನೋ ಘಟನೆ ನಡೆದಿರಬೇಕು. ಇಲ್ಲ ಯಾರನ್ನಾದ್ರೂ ಪ್ರೀತಿಸಿ ಮೋಸ ಹೋಗಿರಬೇಕು. ನಾನು ಆಗಲೇ ಹೇಳಿದೆನಲ್ಲ ಪ್ರೀತಿಸುವುದು ಅವರವರ ಹಕ್ಕೆಂದು. ಆದರೆ ಅದನ್ನೇ ಮೂಲವಾಗಿಟ್ಟುಕೊಂಡು ಇನ್ನೊಬ್ಬರನ್ನು ಅದೇ ಮಾನದಂಡದಿಂದ ಅಳೆಯುವುದು ತಪ್ಪು. ಸಂಘರ್ಷ ಮಾಡಿದ ತಪ್ಪಿಗೆ ನಾನೇನು ಇಡೀ ಹೆಣ್ಣು ಕುಲವನ್ನು ದ್ವೇಷಿಸಲಿಲ್ಲವಲ್ಲ. ನನ್ನ ತಾಯಿ ಹೆಣ್ಣು ನನ್ನ ಮಗಳೂ ಹೆಣ್ಣು. ಬೇರೆ ಯಾರನ್ನೋ ಮದುವೆಯಾಗುವ ಹಾಗಿದ್ದಿದ್ದರೆ ಬಂದು ನಿನ್ನನ್ನೇ ಯಾಕೆ ಕೇಳ್ತಾ ಇದ್ದೆ? ನಿನ್ನ ಗುಣ, ನಡತೆ ಎಲ್ಲಕ್ಕಿಂತ ಹೆಚ್ಚಾಗಿ ಸ್ವಾಭಿಮಾನ ನನಗೆ ಮೆಚ್ಚಿಗೆಯಾಯಿತು.

ಯಾವತ್ತೋ ಕೇಳಬೇಕೆಂದುಕೊಂಡಿದ್ದೆ. ಆದರೆ ನಿನ್ನ ಅಭಿಪ್ರಾಯವನ್ನು ಸ್ವಲ್ಪ ನಿಧಾನವಾಗಿಯೇ ತಿಳಿದುಕೊಳ್ಳೋಣ ಎಂದು ನಾನೇ ತಡೆದೆ.''

ಕೃತ್ತಿಕಾ ಮೌನಿಯಾದಳು. ಬೇರೆ ಯಾರೇ ಆಗಿದ್ದರೂ ತಮ್ಮನ್ನು ಅದೃಷ್ಟಶಾಲಿಗಳೆಂದು ಭಾವಿಸಿ ಈ ತಕ್ಷಣ ಹೂಂ ಎನ್ನುತ್ತಿದ್ದರೇನೋ. ಎಷ್ಟು ಜನ ಹೆಣ್ಣು ಮಕ್ಕಳಿಗೆ ಈ ಅದೃಷ್ಟ ಅರಸಿ ಬರುತ್ತದೆ? ಯಾವ ದೋಷವನ್ನೂ ಕಾಣದ ಗಂಡು ರಾಹುಲ್. ಆದರೆ ಆದೊಂದು ಘಟನೆ ತನ್ನ ಬಾಳಿನಲ್ಲಿ ನಡೆಯದೆ ಹೋಗಿದ್ದಿದ್ದರೆ? ಓಹ್ ದೇವರೆ ನನ್ನನ್ನು ಎಂತಹ ಅಗ್ನಿಪರೀಕ್ಷೆಗೆ ಗುರಿ ಮಾಡಿದೆ! ಮಿಡುಕಿದಳು. ಪ್ರತಿ ಹೇಳದೆ ಹೂಂ ಎನ್ನಲೇ? ಒಂದು ಕ್ಷಣ ಯೋಚನೆ ಬಂತು. ಅನಂತರ ತನ್ನ ಯೋಚನೆಗೆ ತನಗೇ ನಾಚಿಕೆಯಾಯಿತು. ನಂಬಿ ಎಲ್ಲವನ್ನು ನನ್ನ ಹತ್ತಿರ ಹೇಳುತ್ತಿರುವಾಗ ಅವನಿಗೆ ಮೋಸ ಮಾಡುವುದು ಸರಿಯಲ್ಲವೆಂದು ಅವಳ ಮನಸ್ಸು ಛೀಮಾರಿ ಹಾಕಿತು. ಕತ್ತೆತ್ತಿ ರಾಹುಲ್‌ನ ಮುಖವನ್ನೇ ನೋಡಿದಳು. ಇವಳ ಉತ್ತರಕ್ಕೆ ಕಾದಿದ್ದವನಂತೆ ಕಂಡ. 'ಅನುರಾಗ್, ನನ್ನ ಬದುಕನ್ನೇ ಹಾಳು ಮಾಡಿಬಿಟ್ಟೆಯಲ್ಲ.' ಗೊಣಗಿಕೊಂಡಳು.

"ಕೃತ್ತಿಕಾ ಬದುಕಿನಲ್ಲಿ ಸಮಗುರಿವಿಲ್ಲದಂತೆ ನಡೆದ ಘಟನೆಗಳಿಗೆ ನಮ್ಮನ್ನೇ ಹೊಣೆಗಾರರನ್ನಾಗಿ ಮಾಡಿಕೊಳ್ಳುವುದು ತಪ್ಪು. ಸಂದರ್ಭಗಳು, ಕೆಲವೊಮ್ಮೆ ಅಸಹಾಯಕತೆ, ಇನ್ನು ಕೆಲವೊಮ್ಮೆ ಭ್ರಮೆಗೆ ಬಲಿಯಾಗಿ ತಪ್ಪು ಹೆಜ್ಜೆ ಇಡುತ್ತೇವೆ. ನನ್ನ ಮನಸ್ಸಿನ ದುಃಖವನ್ನು ಇಷ್ಟು ದಿನ ಯಾರ ಎದುರೂ ಹೇಳಿಕೊಳ್ಳಲಾಗದೆ ನಾನೊಬ್ಬನೇ ನುಂಗಿ, ನುಂಗಿ ಒದ್ದಾಡುತ್ತಿದ್ದೆ. ನಿನ್ನ ಹತ್ತಿರ ಹೇಳಿಕೊಂಡ ಮೇಲೆ ಮನಸ್ಸು ಹಗುರವಾದ ಹಾಗಾಗಿದೆ. ಮದುವೆಗೆ ಒಪ್ಪಿಗೆ ಮುಂದಿನ ಪ್ರಶ್ನೆ. ದುಃಖವನ್ನು ಇನ್ನೊಬ್ಬರ ಜೊತೆ ಹಂಚಿಕೊಂಡರೆ ಅದರ ಭಾರ ಇಳಿಯುವುದು. ನನ್ನಲ್ಲಿ ನಂಬಿಕೆ ಇದ್ರೆ ಹೇಳಬಹುದು ಎನಿಸಿದರೆ ಮಾತ್ರ ಹೇಳು.''

ರಾಹುಲ್‌ನ ಮಾತುಗಳಿಗೆ ಕೃತ್ತಿಕಾ ಸೋತಳು.

'ಪ್ರೀತಿ, ಪ್ರೇಮವೆಂದರೇನು ಅರಿಯದ ವಯಸ್ಸಿನಲ್ಲಿ ನನ್ನ ಬದುಕಿನಲ್ಲೂ ವ್ಯಕ್ತಿಯೊಬ್ಬನ ಆಗಮನವಾಯಿತು. ತಂದೆ ತಾಯಿಯ ಸ್ವಾರ್ಥದಿಂದ ನೊಂದಿದ್ದಾಗ ನನ್ನ ಮನಸ್ಸನ್ನು ಆಕ್ರಮಿಸಿದವನು ಅವನೇ. ಹಿಂದು ಮುಂದು ಯೋಚಿಸದೆ ಅವನಿಗೆ ಮರುಳಾಗಿಬಿಟ್ಟೆ ನನ್ನನ್ನೇ ಒಪ್ಪಿಸಿಕೊಂಡೆ. ಅವನು ಸಂಪೂರ್ಣ ನನ್ನವನೇ ಎಂದು ಭಾವಿಸಿದೆ. ನಯನ ಬಂದು ಹೇಳುವವರೆಗೂ ನಾನು ಕೆಸರಿನಲ್ಲಿ ಕಾಲಿಟ್ಟಿದ್ದು ಗೊತ್ತಾಗಲೇ ಇಲ್ಲ. ಬಹುಶಃ ಗೊತ್ತಾಗುತ್ತಲೂ ಇರಲಿಲ್ಲವೇನೋ? ಅನುರಾಗ್‌ನ ಅನುರಾಗಕ್ಕೆ ನಾನು ತೆತ್ತ ಬೆಲೆ ಮಾತ್ರ ಅಪಾರ.''

ಸ್ವಗತದಲ್ಲೆಂಬಂತೆ ಹೇಳಿಕೊಂಡಳು.

* * * * *

ಈಗೆರಡು ದಿನಗಳಿಂದ ಕೃತ್ತಿಕಾಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಕೆಲಸ ಸಿಕ್ಕಿದ್ದು ಸಂತೋಷಕ್ಕೆ ಸ್ವಲ್ಪ ಕಾರಣವಾಗಿದ್ದರೆ ಮನೆಯ ಉಸಿರು ಕಟ್ಟಿಸುವ ವಾತಾವರಣದಿಂದ ಪಾರಾಗಿ ಹೋಗುತ್ತಿರುವುದು ಅವಳ ಹೆಚ್ಚಿನ ಸಂತೋಷಕ್ಕೆ ಕಾರಣವಾಗಿತ್ತು. ಸ್ಟೆನೋಗ್ರಫಿಯಲ್ಲಿ ಡಿಪ್ಲೊಮೋ ಮುಗಿಸಿದಂದಿನಿಂದ ಕೆಲಸಕ್ಕೆ ಅರ್ಜಿ ಹಾಕುತ್ತಲೇ ಇದ್ದಳು. ಒಂದೆರಡು ಕಡೆ ಸಿಕ್ಕರೂ ಸಂಬಳ ಕಡಿಮೆ ಎಂದು ಅವಳೇ ಹೋಗಿರಲಿಲ್ಲ. ಈಗ ಸಿಕ್ಕಿದ ಕೆಲಸ ಯಾವುದರಲ್ಲೂ ಕಡಿಮೆಯಿರಲಿಲ್ಲ. ಒಳ್ಳೆ ಸಂಬಳ, ಹೆಸರಿರುವ ಕಂಪನಿ, ಜೊತೆಗೆ ಸಿಟಿ ಬೇರೆ. ಬೇಡ ಎನ್ನಲು

ಕಾರಣಗಳೇ ಇರಲಿಲ್ಲ. ಸಿಗುತ್ತದೆ ಎಂಬ ನಂಬಿಕೆಯೇ ಇಲ್ಲದಿರುವಾಗ ಅದೃಷ್ಟ ಅವಳನ್ನೇ ಅರಸಿ ಬಂದಿತ್ತು. ಖರ್ಚಿಗೆ ತಾಯಿ ಮುಂದೆ ಅಥವಾ ತಂದೆಯ ಮುಂದೆ ಕೈಯೊಡ್ಡಬೇಕಾಗಿ ಬಂದಾಗಲಂತೂ ಅವಳ ಜೀವ ಹಿಡಿಯಾಗುತ್ತಿತ್ತು. ನಾಲ್ಕು ಜನ ಮಕ್ಕಳಲ್ಲಿ ಅವಳೇ ಹಿರಿಯುವಳು. ಇಬ್ಬರು ತಂಗಿಯರು. ಕೊನೆಯವನು ವಂಶೋದ್ಧಾರಕ. ಇನ್ನೊಂದು ವರ್ಷದಲ್ಲಿ ತಂದೆ ರಿಟೈರ್ಡ್ ಆಗಲಿದ್ದರು. ಬಂದ ಸಂಬಳ ಸಂಸಾರಕ್ಕೆ ಸಾಲುತ್ತಿರಲಿಲ್ಲವಾದ್ದರಿಂದ ಇನ್ನು ಉಳಿಸುವ ಮಾತೇ ಇರಲಿಲ್ಲ. ತನ್ನ ವಯಸ್ಸಿನ ಹುಡುಗಿಯರ ಹಾಗೆ ಕಾಲೇಜಿಗೆ ದಿನಾ ಒಂದೊಂದು ತರಹದ ಡ್ರೆಸ್ ಹಾಕಿಕೊಂಡು ಎಲ್ಲರ ಹಾಗೆ ನಕ್ಕು ನಲಿಯಬೇಕೆಂಬ ಆಸೆಯಿದ್ದರೂ ಬಡತನದಿಂದಾಗಿ ಕಾಲೇಜ್ ಸೇರಲಾಗಲಿಲ್ಲ. ಉತ್ತಮ ಮಾರ್ಕ್ಸ್ ಎಸ್. ಎಸ್. ಎಲ್. ಸಿ.ಯಲ್ಲಿ ಬಂದದ್ದರಿಂದ ಸುಲಭವಾಗಿ ಸ್ಟೆನೋಗ್ರಫಿ ಡಿಪ್ಲೊಮಾಕ್ಕೆ ಸೇರಿಕೊಂಡಳು. ಪಾಲಿಗೆ ಬಂದದ್ದೇ ಪಂಚಾಮೃತ ಎಂದುಕೊಂಡು ಅದನ್ನೇ ಶ್ರದ್ಧೆಯಿಂದ ಕಲಿತಳು. ರಿಸಲ್ಟ್ ಬಂದು ಕೆಲಸದ ಬೇಟೆ ಪ್ರಾರಂಭವಾದನಂತರವೇ ಅವಳಿಗೆ ಉಸಿರು ಕಟ್ಟತೊಡಗಿದ್ದು. ಕ್ಲಾಸಿಗೆ ಹೋಗುವಾಗ ದಿನದ ಹೆಚ್ಚಿನ ಭಾಗ ಹೊರಗೆ ಕಳೆಯುತ್ತಿತ್ತು. ಅಲ್ಲದೆ ಓದುವುದು, ಬರೆಯುವುದು ಇದ್ದುದರಿಂದ ಸಮಯ ಸರಿದುದರ ಅರಿವೇ ಆಗುತ್ತಿರಲ್ಲಿಲ. ಮನೆಯಲ್ಲೇ ಕುಳಿತುಕೊಂಡಾಗಲೇ ಅವಳಿಗೆ ಬದುಕಿನ ಬವಣೆ ಅರ್ಥವಾಗತೊಡಗಿದ್ದು. ಮಾತು ಮಾತಿಗೂ ಸಿಡುಕುವ ತಾಯಿ, ಬೇಜವಾಬ್ದಾರಿಯ ತಂದೆ. ಮನೆಯ ಪರಿಸ್ಥಿತಿ ಅರಿವಿದ್ದರೂ ಎಲ್ಲರ ಹಾಗೆ ತಾವೂ ಇರಬೇಕೆಂದು ಬಯಸುವ ತಂಗಿಯರು. ಒಂದೆರಡು ತಿಂಗಳು ಕಳೆಯುವಷ್ಟರಲ್ಲಿ ಅವಳಿಗೆ ತಲೆ ಚಿಟ್ಟು ಹಿಡಿದು ಹೋಗಿತ್ತು. ಪ್ರಾಯಕ್ಕೆ ಬಂದ ಹೆಣ್ಣು ಮಕ್ಕಳು ಕಣ್ಣ ಎದುರಿಗಿದ್ದರೂ ತಂದೆಯ ತೀರದ ದಾಹ ನೋಡಿ ಈ ಉಸಿರು ಕಟ್ಟಿಸುವ ವಾತಾವರಣದಿಂದ ಒಮ್ಮೆ ಬಿಡುಗಡೆ ಪಡೆದರೆ ಸಾಕೆಂದು ದಿನವೂ ದೇವರಲ್ಲಿ ಬೇಡುತ್ತಿದ್ದಳು. ಮೂರು ತಿಂಗಳು ನರಳಿದನಂತರ ಕೆಲಸ ಸಿಕ್ಕಿದಾಗ ಅವಳ ಆನಂದಕ್ಕೆ ಪಾರವೇ ಇರಲಿಲ್ಲ. ಮೊದಲನೇ ಸಂಬಳ ಪೂರ್ತಿ ದೇವರಿಗೆ ಹರಕೆ ತೀರಿಸಲು ಖರ್ಚಾಗಬಹುದು ಎಂದುಕೊಂಡು ನಕ್ಕಿದ್ದಳು. ತಮ್ಮ ನಂತರ ಸಂಸಾರದ ನೊಗಕ್ಕೆ ಹೆಗಲು ಕೊಡುವವಳು ಸಿಕ್ಕಿದ್ದರಿಂದ ತಂದೆಯೂ ಖುಶಿಯಾಗಿದ್ದರು. ಅಕ್ಕನ ಸಂಬಳದಲ್ಲಿ ತಮ್ಮಲ್ಲಿ ಬೇಡಿಕೆಗಳು ಈಡೇರುತ್ತದೆಂದು ತಂಗಿಯಂದಿರಿಗೂ ಸಂತಸ. ಮದುವೆ ಮಾಡಿಕೊಡಬೇಕಾಗಿದ್ದ ಮಗಳನ್ನು ದುಡಿಯಲು ಕಳುಹಿಸುತ್ತಿದ್ದೇವೆಂದು ಅಲ್ಪಸ್ವಲ್ಪ ನೊಂದುಕೊಂಡಿದ್ದರೆ ಅದು ಅವಳ ತಾಯಿ ಮಾತ್ರ. ಅದನ್ನು ಆಡಿಯೂ ತೋರಿಸಿದ್ದರು ಗಂಡ ಎದುರಿಗಿಲ್ಲದಿದ್ದಾಗ.

"ಅಮ್ಮ ನೀನು ಅದನ್ನೆಲ್ಲ ಯೋಚಿಸಿಕೊಂಡು ತಲೆ ಕೆಡಿಸಿಕೊಳ್ಳಬೇಡ. ತಿಂಗಳು ತಿಂಗಳು ನಾನು ಸ್ವಲ್ಪ ಹಣ ಕಳುಹಿಸಿಕೊಡ್ತೀನಿ. ರಮ, ವಿಜಿ, ಬಾಲುವನ್ನು ಚೆನ್ನಾಗಿ ನೋಡಿಕೋ. ನಾನಂತೂ ಕಷ್ಟಪಟ್ಟಿದ್ದು ಸಾಕು. ಅವರೂ ನರಳುವುದು ಬೇಡ. ಅಪ್ಪನ ಮಾತಿಗೆ ಕಿವಿ ಕೊಡಬೇಡ. ಈ ವಯಸ್ಸಿನಲ್ಲಿ ಅವರನ್ನು ಬದಲಾಯಿಸಲು ಸಾಧ್ಯವಿಲ್ಲ.'' ತಾಯಿಗೆ ಸಮಾಧಾನ ಹೇಳಿದ್ದಳು.

"ಬಡತನ ಕೆಟ್ಟದ್ದು ನಿಜ, ಆದರೆ ನಿಮ್ಮ ಅಪ್ಪನಂತಹ ಬೇಜವಾಬ್ದಾರಿ ಅಪ್ಪ ಇರುವುದು ಅದಕ್ಕಿಂತ ಕೆಟ್ಟದ್ದು. ಎಲ್ಲರ ಹಾಗೆ ಸಂಸಾರ, ಮಕ್ಕಳು ಮನೆಂತ ಗಮನ ಕೊಟ್ಟಿದ್ದಿದ್ದರೆ ಸಾಕಿತ್ತು. ನೆಮ್ಮದಿಯಿಂದ ಇರಬಹುದಿತ್ತು.' ನೊಂದು ನುಡಿದಿದ್ದರು.

ಬದುಕಿನುದ್ದಕ್ಕೂ ತನ್ನ ಗಂಡನ ಕೈಲಿ ಪೈಸೆ ಪೈಸೆಗೂ ಹೊಡೆದಾಡಿ ನರಳಿದ ತಾಯಿಯನ್ನು ಕಂಡು ಅಯ್ಯೋ ಎನಿಸಿತು. ಕೆಲಸಕ್ಕೆ ಸೇರಲು ಹೊರಟ ಅವಳಲ್ಲಿದ್ದದ್ದು ಒಂದೇ ಆಸೆ, ತಂಗಿಯರು, ತಮ್ಮ, ತಾಯಿಯನ್ನು ಸಾಧ್ಯವಾದಷ್ಟು ಸಂತೋಷವಾಗಿಡಬೇಕು. ತಾನು ನರಳಿದರೂ ಚಿಂತೆಯಿಲ್ಲ. ಕೆಲಸಕ್ಕೆ ಸೇರಿ ಇರಲು ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ ಸೇರಿಕೊಂಡಳು. ಮನೆಯ ಕಿರಿಕಿರಿಯ ವಾತಾವರಣ ತಪ್ಪಿದ್ದು, ಜೊತೆಗೆ ಸ್ವಾತಂತ್ರ್ಯ ಅವಳ ಮನಸ್ಸಿಗೆ ಮುದ ನೀಡಿತ್ತು. ಒಂದನೇ ತಾರೀಕಷ್ಟೇ, ಅದೂ ಹಣ ಕಳುಹಿಸಿಬೇಕಾದಾಗ ಮಾತ್ರ ಅವಳಿಗೆ ಮನೆಯ ನೆನಪಾಗುತ್ತಿತ್ತು. ಹೊಸ ಗೆಳತಿಯರು, ಸ್ವಾವಲಂಬನೆ ಅವಳಿಗೆ ಧೈರ್ಯ ನೀಡಿದ್ದವು.

ಹೇಗೆ ತಿಂಗಳುಗಳು ಉರುಳಿ ವರ್ಷವಾಯಿತು. ತಂದೆ ರಿಟೈರ್ಡ್ ಆಗಿದ್ದರು. ಅವರ ಹಣದ ಬೇಡಿಕೆ ಬೆಳೆಯುತ್ತಲೇ ಇತ್ತು. ಜೊತೆಗೆ ತಂಗಿಯರು, ತಮ್ಮಂದಿರು ತಮಗೆ ಪ್ರತ್ಯೇಕವಾಗಿ ಹಣ ಕಳುಹಿಸು ಎಂದು ಬರೆದಾಗಲೆಲ್ಲ ಮನಸ್ಸಿಗೆ ನೋವಾಗುತ್ತಿತ್ತು. ಅವಳು ಯಾರಿಗೂ ಬೇಕಿರಲಿಲ್ಲ, ಅವಳ ಹಣ ಮಾತ್ರ ಬೇಕಿತ್ತು. ಯಾವ ಕಾಗದಲ್ಲಿ ಯಾರೂ ನೀನು ಹೇಗಿದ್ದಿಯಾ ಬಾ, ಎಂದು ಬರೆಯುತ್ತಿರಲಿಲ್ಲ. ದುಡ್ಡಿನ ಹೊರತಾಗಿ ಬೇರೆ ಮಾತುಗಳೇ ಇರುತ್ತಿರಲಿಲ್ಲ. ಇಲ್ಲಿಯ ಯಾಂತ್ರಿಕ ಜೀವನ ಬೇಸರವಾಗಿ ಮನೆಗೆ ಹೋದ ಕೂಡಲೇ ಅವರ ಬೇಡಿಕೆಗಳನ್ನು ಕೇಳಿದ ತಕ್ಷಣ ಎರಡು ದಿನಕ್ಕೆಂದು ಹೋದವಳು ಒಂದೇ ದಿನಕ್ಕೆ ಬಂದು ಬಿಡುತ್ತಿದ್ದಳು. ಕೆಲಸ, ಹಣ ಅವಳ ದೃಷ್ಟಿಯಲ್ಲಿ ಮೌಲ್ಯ ಕಳೆದುಕೊಳ್ಳತೊಡಗಿತ್ತು. ಇವರೇನು ತನ್ನನ್ನು ದುಡಿಯುವ ಯಂತ್ರವೆಂದು ತಿಳಿದುಕೊಂಡಿದ್ದಾರೇನೋ? ನನಗೂ ಭಾವನೆಗಳಿವೆ, ನಾನೂ ಎಲ್ಲರ ಹಾಗೆ ಹೆಣ್ಣು ಅನ್ನುವುದನ್ನೇ ಮರೆತು ವರ್ತಿಸುತ್ತಾರಲ್ಲ ಎಂದು ಆಶ್ಚರ್ಯಪಡುತ್ತಿದ್ದಳು. ಹೇಗೆ ಎಷ್ಟು ದಿನ ಅನ್ನುವುದಕ್ಕೆ ಅವಳ ಬಳಿ ಉತ್ತರವಿರಲಿಲ್ಲ.

ಇಂತಹ ಸಂದರ್ಭದಲ್ಲೇ ಪ್ರೀತಿ, ಪ್ರೇಮಕ್ಕಾಗಿ ಹಂಬಲಿಸುತ್ತಿದ್ದ ಕೃತ್ತಿಕಾಳ ಬಾಳಿನಲ್ಲಿ ಅನುರಾಗ್ ಪ್ರವೇಶಿದ್ದ. ಆಫೀಸಿಗೆ ಆಗಾಗ ಯಾವುದೋ ಕಾಂಟ್ರಾಕ್ಟ್‌ಗೆಂದು ಬರುತ್ತಿದ್ದ ಆವನನ್ನು ಕೃತ್ತಿಕಾ ಮೊದಮೊದಲು ಅಷ್ಟು ಗಮನಿಸಿರಲಿಲ್ಲ. ಬೇಕಾದ ಪತ್ರಗಳನ್ನು ಟೈಪ್ ಮಾಡಿಸಿಕೊಳ್ಳಲು ಅವಳ ಟೇಬಲ್ಲಿಗೆ ಬರುತ್ತಿದ್ದ. ಮೊದಮೊದಲು ತನ್ನ ಪಾಡಿಗೆ ತಾನಿರುತ್ತಿದ್ದ ಅನುರಾಗ್ ದಿನಕಳೆದಂತೆ ಸಲಿಗೆ ತೋರಿಸಲಾರಂಭಿಸಿದ್ದ. ತನ್ನ ಹಾಸ್ಯದ ಮಾತುಗಳಿಂದ ಕೃತ್ತಿಕಾಳನ್ನು ನಗಿಸುತ್ತಿದ್ದ. ನೊಂದ ಮನಸ್ಸಿಗೆ ಅವನ ಮಾತುಗಳು ಖುಶಿ ನೀಡುತ್ತಿದ್ದವು. ಅವನು ಅವಳತ್ತ ತೆರೆದುಕೊಳ್ಳಲಾರಂಭಿಸಿದ. ಪರಿಚಯ ಗೆಳೆತನಕ್ಕೆ ತಿರುಗಿ ಅವನೊಡನೆ ಕಾಫಿ, ತಿಂಡಿಗೆ ಹೊರಗೆ ಹೋಗುವಷ್ಟು ಸಲಿಗೆ ಬೆಳೆದಿತ್ತು. ಒಂದು ದಿನ ಅವನು ಬರದಿದ್ದರೆ ಸಾಕು ಅವಳ ಮನ ಚಡಪಡಿಸುತ್ತಿತ್ತು. ಯಾಂತ್ರಿಕ ಜೀವನದಿಂದ ಕೃತ್ತಿಕಾಳಿಗೆ ಸ್ವಲ್ಪ ಬದಲಾವಣೆ ಸಿಕ್ಕ ಹಾಗಾಗಿತ್ತು. ಅವಳಿಗರಿವಿಲ್ಲದಂತೆ ಇತ್ತೀಚೆಗೆ ಅಲಂಕಾರದ ಕಡೆ ತುಸು ಹೆಚ್ಚೇ ಗಮನ ಕೊಡುತ್ತಿದ್ದಳು. ಆಫೀಸಿಗೆ ಬರುವ ಮೊದಲು ಎರಡು ಬಾರಿ ಕನ್ನಡಿಯಲ್ಲಿ ಮುಖ ನೋಡಿಕೊಂಡು ಬರುತ್ತಿದ್ದಳು. ಅನುರಾಗ್ ಆ ದಿನ ಏನಾದರೂ ಬರದಿದ್ದರೆ ಕೆಲಸ ಮಾಡಲು ಮನಸ್ಸೇ ಇರುತ್ತಿರಲಿಲ್ಲ. ಏನೋ ಒಂದು ವಿಧವಾದ ಶೂನ್ಯತೆ ಅವಳನ್ನು ಆವರಿಸಿಬಿಡುತ್ತಿತ್ತು. ಈ ಆಕರ್ಷಣೆಗೆ ಅರ್ಥವೇನು ಎಂದು ಅವಳಿಗೂ ಗೊತ್ತಿರಲಿಲ್ಲ. ಯಾಕೆಂದರೆ ಅನುರಾಗ್‌ನಿಗೆ ಈಗಾಗಲೇ ಮದುವೆಯಾಗಿ ಮಕ್ಕಳಿರುವ ವಿಷಯ ಅವಳಿಗೆ ತಿಳಿಯದ್ದೇನಲ್ಲ. ಜೊತೆಗೆ

ಅವರಿವರಿಂದ ಅವನ ಹೆಂಡತಿ ಒಳ್ಳೆ ಕೆಲಸದಲ್ಲಿದ್ದಾಳೆಂದು, ನೋಡಲು ಸುಂದರಿಯೆಂದು ವಿಷಯ ಸಂಗ್ರಹ ಮಾಡಿದ್ದಳು. ಇಷ್ಟೆಲ್ಲ ತಿಳಿದನಂತರವೂ ತಾನೇಕೆ ಅವನತ್ತ ಆಕರ್ಷಿತಳಾಗಿದ್ದೆನೆಂದು ಅವಳಿಗೆ ಅರ್ಥವಾಗಿರಲಿಲ್ಲ. ಇದು ಅವಳೊಬ್ಬಳದೇ ವಿಷಯವಾಗಿದ್ದಿದ್ದರೆ ಹಾಗೆ ಸುಮ್ಮನಾಗಿ ಬಿಡುತ್ತಿದ್ದಳೇನೋ. ಅನುರಾಗ್ ತನ್ನಲ್ಲಿ ವಿಶೇಷ ಆಸಕ್ತಿ ತೋರಿಸುತ್ತಿದ್ದುದನ್ನು ಅವಳೂ ಗಮನಿಸಿದ್ದಳು. ಅವಳು ಅಲಂಕಾರ ಮಾಡಿಕೊಂಡು ಬಂದಾಗಲೆಲ್ಲ ಮೌನವಾಗೇ ಅವನ ಕಣ್ಣುಗಳು ಮೆಚ್ಚುಗೆ ಸೂಸುತ್ತಿದ್ದವು. ಎಷ್ಟೋ ಬಾರಿ ಅವನನ್ನು ನೋಡಲೇಬಾರದೆಂದು ಮನಸ್ಸು ಗಟ್ಟಿ ಮಾಡಿಕೊಂಡು ಬೇರೆ ಸೆಕ್ಷನ್‌ನಲ್ಲಿ ಹೋಗಿ ಕುಳಿತಾಗ ಸಂಜೆತನಕ ತನಗಾಗಿ ಕಾದು ನಿಂತಿದ್ದನ್ನು ಕಂಡಾಗ ಅವಳ ನಿರ್ಧಾರವೆಲ್ಲ ತೂರಿಹೋಗಿತ್ತು. ತಾನು ಹೋಗುತ್ತಿರುವ ದಾರಿ ಸರಿಯಿಲ್ಲವೆಂದು ಗೊತ್ತಿದ್ದರೂ ಅಲ್ಲಿಂದ ಅವಳು ಕದಲಲಾಗಿರಲಿಲ್ಲ.

ಹಿಂದಿನ ದಿನ ತಂದೆ ತಾಯಿಯಿಂದ ತಕ್ಷಣ ಬಂದು ಹೋಗುವಂತೆ ಕಾಗದ ಬಂದಿತ್ತು. ಎರಡು ದಿನಗಳ ಹಿಂದೆಯಷ್ಟೇ ಊರಿಗೆ ತಾನೇ ಹೋಗಿ ಹಣ ಕೊಟ್ಟು ಬಂದಿದ್ದರಿಂದ ಇದು ಹಣಕ್ಕಾಗಿ ಬರೆದ ಕಾಗದವಲ್ಲವೆಂದು ಅವಳಿಗೆ ಗೊತ್ತಿತ್ತು. ಕಾರಣವೇನಿರಬಹುದು ಎಂದು ಯೋಚಿಸಿದಳು. ಎರಡು ದಿನಗಳ ಹಿಂದೆ ತಾನು ಊರಿಗೆ ಹೋದಾಗ ತಂದೆ ತಾಯಿ ಯಾವುದೋ ಗಂಡಿನ ವಿಷಯ ಮಾತನಾಡಿಕೊಳ್ಳುತ್ತಿದ್ದದ್ದು ಅವಳ ಕಿವಿಗೆ ಬಿದ್ದಿತ್ತು. ಒಪ್ಪಿದರೆ ಈ ಶ್ರಾವಣದಲ್ಲಿ ಮದುವೆ ಮಾಡಿ ಕೊಟ್ಟು ಬಿಡೋಣ, ಹೇಗಿದ್ರೂ ರಿಟೈರ್ಡ್ ಆದಾಗ ಬಂದ ದುಡ್ಡಿದೆಯಲ್ಲ ಹುಡುಗ ಬೇರೆ ಒಳ್ಳೆಯವನು, ವರದಕ್ಷಿಣೆ, ವರೋಪಚಾರ ಯಾವುದೂ ಬೇಡಾಂತ ಅವರೇ ಕೇಳಿಕೊಂಡು ಬಂದಿರುವಾಗ ಬೇಡ ಎನ್ನುವುದು ಸರಿಯಲ್ಲ. ಅವಳೊಬ್ಬಳದು ಮೊದಲು ಆಗಲಿ. ಅನಂತರ ನೋಡೋಣ ಎಂದು ತಂದೆ ತಾಯಿಗೆ ಹೇಳುತ್ತಿದ್ದದ್ದು ಕಿವಿಗೆ ಬಿದ್ದಿತ್ತು. ಆನಂತರ ಆ ಬಗ್ಗೆ ಅವರೇನು ಅವಳನ್ನು ಕೇಳಲಿಲ್ಲವಾದ್ದರಿಂದ ಅವಳೂ ಕುತೂಹಲ ತೋರಿಸಿರಲಿಲ್ಲ, ಗಮನವನ್ನು ಕೊಟ್ಟಿರಲಿಲ್ಲ. ಈಗ ಅದು ಅವಳಿಗೆ ಹೊಳೆದಿತ್ತು. ಮನಸ್ಸು ಪುಳಕಿತವಾಯಿತು. ನನ್ನದೇ ಸಂಸಾರ, ಗಂಡ, ಮಕ್ಕಳು ನೆನಸಿಕೊಂಡು ರೋಮಾಂಚನಗೊಂಡಳು. ಅನುರಾಗ್‌ನ ಬಗೆಗೆ ತನ್ನ ಭಾವನೆಗಳು ತೀವ್ರವಾಗುವ ಮೊದಲೇ ಮದುವೆ ಪ್ರಸ್ತಾಪ ಬಂದದ್ದು ಅವಳಿಗೆ ಸಂತೋಷವಾಗಿತ್ತು. ಅವಳು ಏನೂ ಅವನ ಬಗೆಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿರಲಿಲ್ಲ. ಅವನಾದರೂ ಅಷ್ಟೇ. ಸಂಜೆ ಬಸ್ಸಿಗೆ ಹೋದರಾಯಿತು ಮತ್ತೆ ಹೇಗಿದ್ದರೂ ರಜೆ ಹಾಕಬೇಕಲ್ಲ ಎಂದುಕೊಂಡಳು. ಅಷ್ಟರಲ್ಲಿ ಅನುರಾಗ್ ಬಂದ.

"ಎರಡು ದಿನ ರಜೆ ಹಾಕಿ ಬಿಟ್ಟಿದ್ದೀರಿ ಏನು ಸಮಾಚಾರ, ಅದೂ ನನಗೂ ಹೇಳದೆ?'' ಛೇಡಿಸಿದ.

ಕೃತ್ತಿಕಾ ಕೆಂಪಾದಳು.

"ಊರಿಂದ ತಕ್ಷಣ ಬಾ ಅಂತ ಕಾಗದ ಬಂದಿದೆ. ಬಹುಶಾ ಅಪ್ಪನಿಗೋ ಅಮ್ಮನಿಗೋ ಹುಶಾರಿಲ್ಲವೆಂದು ಕಾಣುತ್ತದೆ. ಹೋಗಿ ಬರುತ್ತೇನೆ.''

ವಿಷಯ ಸರಿಯಾಗಿ ನಿರ್ಧಾರವಾಗುವ ಮೊದಲೇ ಹೇಳುವುದು ಬೇಡವೆಂದುಕೊಂಡಳು.

"ಎರಡು ದಿನ ನಿಮ್ಮ ದರ್ಶನ ಭಾಗ್ಯವಿಲ್ಲ. ಬನ್ನಿ ಇಲ್ಲೇ ಕ್ಯಾಂಟೀನಿಗೆ ಹೋಗಿ ಕಾಫಿ ಕುಡಿದು ಬರೋಣ. ಇನ್ನೆರಡು ದಿನ ನಾನು ಒಂಟಿ.'' ಆಹ್ವಾನಿಸಿದ.

ಒಳ್ಳೆಯ ಮೂಡಿನಲ್ಲಿದ್ದ ಕೃತ್ತಿಕಾ ತಕ್ಷಣ ಹೂಂ ಎಂದಳು. ಇಬ್ಬರೂ ಹೆಚ್ಚು ಜನರಿಲ್ಲದ



ಕಡೆ ಆರಿಸಿ ಕುಳಿತುಕೊಂಡರು. ಅನುರಾಗ್ ಕಾಫಿಗೆ ಆರ್ಡರ್ ಮಾಡಿದ.

"ಕೃತ್ತಿಕಾ." ತಲೆ ಎತ್ತಿದಳು.

"ನಿಮ್ಮನ್ನು ಮೊದಲು ಭೇಟಿ ಮಾಡಿದ ದಿನದಿಂದಲೇ ನಾನು ನಿಮ್ಮನ್ನು ಪ್ರೀತಿಸ ಇದ್ದೇನೆ." ನೇರವಾಗಿ ಹೇಳಿದ.

"ನಿಮ್ಮ ಅಭಿಪ್ರಾಯವನ್ನು ಹೇಳಿ?"

ಕೃತ್ತಿಕಾ ಮಾತನಾಡಲಿಲ್ಲ. ಅವಳಿಗೆ ಏನು ಹೇಳುವುದೆಂದು ತೋಚಲಿಲ್ಲ.

"ನಿಮ್ಮ ತೊಳಲಾಟ ನನಗರ್ಥವಾಗುತ್ತೆ. ನೀವು ಊರಿಂದ ಬಂದನಂತರ ಹೇಳಿದರ ಆಗುತ್ತೆ. ಆದರೆ ನನಗೆ ಪ್ರಾಮಾಣಿಕ ಅಭಿಪ್ರಾಯ ಬೇಕು. ನಿಮ್ಮನ್ನು ನೀವು ಮೋ ಮಾಡಿಕೊಳ್ಳಬೇಡಿ. ನನ್ನಷ್ಟೇ ನೀವೂ ನನ್ನನ್ನು ಪ್ರೀತಿಸ್ತೀರಂತ ನನಗೆ ಚೆನ್ನಾಗಿ ಗೊತ್ತು. ಟೇ ಯುವರ್ ಓನ್ ಟೈಂ, ನಮ್ಮ ನಿಮ್ಮ ಭೇಟಿ ಎರಡು ದಿನಗಳನಂತರ."

ಎನ್ನುತ್ತ ಮೇಲೆದ್ದ. ಅಷ್ಟರಲ್ಲಿ ಕಾಫಿಯೂ ಮುಗಿದಿತ್ತು. ಎರಡು ದಿನ ಟ ಬೇಕಾದಷ್ಟಾಯಿತು ಎಂದುಕೊಂಡಳು. ಸದ್ಯ ಈಗಲೇ ನಿನ್ನ ಅಭಿಪ್ರಾಯ ಹೇಳೂಂತ ಬಲವ ಮಾಡಲಿಲ್ಲವಲ್ಲ ಎಂದು ನಿರಾಳವಾಗಿ ಅವಳೂ ಮೇಲೆದ್ದಳು. ಮದುವೇಂತ ಹೇಳಿದರೆ ಸಾ ಅವನೂ ಸುಮ್ಮನಾಗುತ್ತಾನೆ. ಮದುವೆಯನಂತರ ನಾನು ಕೆಲಸದಲ್ಲಿ ಮುಂದುವರೆದ ನೋಡೋಣ ಎಂದುಕೊಂಡಳು.

*　　*　　*　　*　　*

ಮನೆ ತಲುಪಿದಾಗ ರಾತ್ರಿಯಾಗಿತ್ತು. ಬಿಸಿ ನೀರಿನಲ್ಲಿ ಸ್ನಾನ ಮಾಡಿದ ಕೂಡ ಮನಸ್ಸು ಹಗುರವಾಯಿತು. ತಾಯಿ ತಂದೆ ಎಂದಿಗಿಂತ ಹೆಚ್ಚಾಗಿ ಆದರಿಸುವುದನ್ನು ಕಂ ಕೃತ್ತಿಕಾಳ ಮನಸ್ಸು ತುಂಬಿ ಬಂತು. ಆಗಲೇ ನಾನು ಮದುವೆಯಾಗಿ ಗಂಡನ ಮನೆ ಹೋ ಹಾಗೆ ನಿಶ್ಚಯಿಸಿ ಬಿಟ್ಟಿದ್ದಾರೇನೋ? ಹುಡುಗ ಒಪ್ಪಿದರೆ ಸಾಕೆ ನಾನು ಅವನನ್ನು ಒಪ್ಪಬೇಡ ಎನ್ನುತ್ತ ಊಟ ಮಾಡಿ ಮುಗಿಸಿದಳು. ಪ್ರಯಾಣದ ಆಯಾಸ, ಹೊಟ್ಟೆ ತುಂಬಿದ ಕಾರಣ ಕ ಎಳೆದು ಬರುತ್ತಿತ್ತು. ಅಷ್ಟರಲ್ಲಿ ತಂದೆ ಕರೆದರು.

"ನೋಡಮ್ಮ ಇತ್ತೀಚೆಗೆ ನಿಮ್ಮ ಅಮ್ಮನ ಆರೋಗ್ಯ ಸರಿ ಇಲ್ಲ. ಕಣ್ಮುಚ್ಚುವ ಮೊದ ಹೆಣ್ಣು ಮಕ್ಕಳ ಮದುವೆ ನೋಡಿ ಸಾಯಬೇಕೆಂದು ಹಟ ಹಿಡಿದಿದ್ದಾಳೆ. ಈಗ ದುಡ್ಡಿಗ ತೊಂದರೆ ಇಲ್ಲ. ರಿಟೈರ್ಡ್ ಆದಾಗ ಬಂದ ಹಣ ಇದೆ. ಬಾಲುವಿನದ್ದು ಹೇಗೋ ನಡೆಯು ಎರಡು ದಿನದ ಕೆಳಗೆ ಶಾಸ್ತ್ರಿಗಳು ಯಾವುದೋ ಸಂಬಂಧ ನೋಡಿದ್ದಾರೆ. ಅವರಿಗೆ ಹುಡ ಚೆನ್ನಾಗಿದ್ದು, ಸಂಸಾರ ತೂಗಿಸಿಕೊಂಡು ಹೋದರೆ ಸಾಕಂತೆ. ಹುಡುಗನೂ ಒಳ್ಳೆ ಕೆಲಸದಲ್ಲಿದ್ದಾನ ವರದಕ್ಷಿಣೆ, ವರೋಪಚಾರ ಏನೂ ಬೇಡ. ಮದುವೇನೂ ಸಿಂಪಲ್ ಆಗಿ ಮಾಡಿಕೊ ಸಾಕಂತೆ. ನೀನು ಹೂಂ ಎಂದರೆ ಶಾಸ್ತ್ರಿಗಳಿಗೆ ಗಂಡಿನ ಕಡೆಯವರನ್ನು ಕರೆದುಕೊಂಡು ಬರ ಹೇಳಬಹುದು. ಒಪ್ಪಿದರೆ ಮುಂದಿನ ಮಾತುಕತೆ ಆಡ್‌ಬಹುದಲ್ವ?"

ಕೃತ್ತಿಕಾಳ ಮನಸ್ಸು ಆ ಕ್ಷಣಕ್ಕೆ ಅನುರಾಗ್‌ನನ್ನು ಮರೆಯಿತು.

"ನನ್ನದೇನಿದೆಯಪ್ಪ ನೀವೆಲ್ಲ ಒಪ್ಪಿದರೆ ಆಯಿತು. ವರದಕ್ಷಿಣೆ ಬೇಡ ಎನ್ನುವವ ಈಗಿನ ಕಾಲದಲ್ಲಿ ಹುಡುಕಿದರೂ ಸಿಗುವುದು ಕಷ್ಟ"

ಮನದ ತುಂಬ ಉಕ್ಕಿ ಬರುತ್ತಿದ್ದ ಹರ್ಷದ ಅಲೆಗಳನ್ನು ಅಡಗಿಸುತ್ತ ಹೇಳಿದಳು.

"ನನ್ನ ತಲೆ ಮೇಲಿಂದ ದೊಡ್ಡ ಭಾರ ಇಳಿಸಿದೆಯಮ್ಮ. ನಿಮ್ಮಮ್ಮನಂತೂ ನೀನೆಲ್ಲಿ ಒಪ್ಪುವುದಿಲ್ಲವೋ ಎಂದು ಗಾಬರಿಯಾಗಿದ್ದಳು."

"ಹುಡುಗ ಬಂದು ನೋಡಿದ ಮೇಲೆ ತಾನೇ ಮುಂದಿನ ಮಾತು." ಕೃತ್ತಿಕಾ ನಾಚುತ್ತ ಹೇಳಿದಳು.

"ಹುಡುಗ ರಮಾಳನ್ನು ಅವನ ಫ್ರೆಂಡ್ ಮದುವೇಲಿ ನೋಡಿ ಆಗಲೇ ಒಪ್ಪಿಕೊಂಡು ಬಿಟ್ಟಿದ್ದಾನಮ್ಮ. ಮದುವೇನೇ ಬೇಡ ಎನ್ನುತ್ತಿದ್ದವನು ಒಪ್ಪಿಕೊಂಡದ್ದೇ ಹೆಚ್ಚಂತೆ. ತಂದೆ ತಾಯಿ ಒಂದ್ಸಲ ನೋಡಿಬಿಡಲೀಂತ ಅಷ್ಟೇ. ಸದ್ಯ ಅವರಿಗೆ ಮಗ ಮದುವೆಗೆ ಒಪ್ಪಿಕೊಂಡದ್ದೇ ದೊಡ್ಡದು. ಒಟ್ಟಿನಲ್ಲಿ ರಮಾಳ ಅದೃಷ್ಟ ಚೆನ್ನಾಗಿದೆ."

ಕೃತ್ತಿಕಾ ನಿಂತಲ್ಲೇ ಶಿಲೆಯಾದಳು. ಅಂದ್ರೆ ಅಂದ್ರೆ ಮದುವೆ ತನಗಲ್ಲ ರಮಾಳಿಗೆ. ಹಾಗಾದ್ರೆ ತಾನಂದುಕೊಂಡಿದ್ದೆಲ್ಲ ಬರೀ ಭ್ರಮೆ! ಬಹುಶಾ ಇವರೆಲ್ಲ ನನ್ನನ್ನು ಯಂತ್ರ ಎಂದು ಭಾವಿಸಿ ಮರೆತೇ ಬಿಟ್ಟಿರಬೇಕು. ಮುಖದ ಮೇಲೆ ವಿಷಾದದ ನಗೆ ಮೂಡಿ ಮಾಯವಾಯಿತು.

"ನೀನಾದ್ರೆ ಕೆಲಸದಲ್ಲಿದ್ದೀಯಮ್ಮ. ಆಮೇಲೆ ಮದುವೆ ಮಾಡಬಹುದು. ಕೆಲಸದಲ್ಲಿರೋ ಹೆಣ್ಣು ಅಂದ್ರೆ ಯಾರಾದ್ರೂ ಮದುವೆಯಾಗ್ತಾರೆ. ಅವರಿಬ್ಬರದೇ ಯೋಚನೆ ನನಗಿದ್ದದ್ದು. ಹಾಗೇ ಸ್ವಲ್ಪ ಸಾಲವನ್ನೂ ತೆಗೆದುಬಿಡು. ಕೊನೆಗಳಿಗೇಲಿ ದುಡ್ಡು ಸಾಲದೇ ಬಂದ್ರೆ ಕಷ್ಟ. ಮದುವೆ ಗೊತ್ತಾದ ಕೂಡಲೇ ಒಂದು ವಾರ ರಜೆ ಹಾಕಿಬಿಡು. ಓಡಾಟ ಎಲ್ಲ ನಿನ್ನದೇ. ನಾವೆಲ್ಲ ತಂದೆ ತಾಯಿ ನೀನೇ."

ತಂದೆ ಹೇಳುತ್ತಿದ್ದರು. ಕೃತ್ತಿಕಾಳ ಕಿವಿಗೆ ಅದೊಂದೂ ಬೀಳಲೇ ಇಲ್ಲ. ತಂದೆ ತಾಯಿಯ ಸ್ವಾರ್ಥದ ಪರಿಚಯ ಚೆನ್ನಾಗಿ ಆಗಿತ್ತು. ದುಡಿಯುವ ಮಗಳನ್ನು ಮದುವೆ ಮಾಡಿಕೊಟ್ಟರೆ ಮುಂದೆ ತಮ್ಮ ಗತಿಯೇನು ಎಂಬ ಯೋಚನೆ ಅವರನ್ನು ಕಾಡುತ್ತಿತ್ತು. ಪ್ರತಿಯೊಬ್ಬ ತಂದೆ ತಾಯಿಯೂ ಹೇಗೆ ಯೋಚನೆ ಮಾಡಿದರೆ ಹೆಣ್ಣು ಮಕ್ಕಳ ಗತಿಯೇನು ಯೋಚಿಸಿದಳು.

"ಆಯ್ತು ದುಡ್ಡು ಕಳುಹಿಸಿ ಕೊಡ್ತೀನಿ. ಮದುವೆ ಏರ್ಪಾಡು ಮಾಡಿ" ಎಂದವಳೇ ರೂಮಿಗೆ ಹೋದಳು. ನಿದ್ರೆ ಹಾರಿಹೋಗಿತ್ತು. ಬೆಳಗಾದರೆ ಸಾಕು ಎಂದು ಚಡಪಡಿಸಿದಳು. ಹಾಸಿಗೆ ಮುಳ್ಳಿನಂತೆ ಒತ್ತುತ್ತಿತ್ತು. ಸಮಯ ಸರಿಯುತ್ತಲೇ ಇಲ್ಲ ಎನಿಸಿತು. ಹೊರಳಾಡುತ್ತಲೇ ಬೆಳಗು ಹರಿಸಿದಳು. ಎರಡು ದಿನ ರಜೆ ಹಾಕಿದವಳು ಒಂದೇ ದಿನಕ್ಕೆ ಹೊರಟು ನಿಂತಾಗ ಎಲ್ಲರಿಗೂ ಆಶ್ಚರ್ಯ. ಹೊರಡುವ ಮುನ್ನ ಕನ್ನಡಿಯಲ್ಲೊಮ್ಮೆ ಮುಖ ನೋಡಿಕೊಂಡಳು. ರಮಾಳಿಗಿಂತ ನೀನು ಸುಂದರಿಯೆಂದು ಕನ್ನಡಿ ಹೇಳಿತು. ಯಾವ ಗಂಡೂ ಒಪ್ಪಲಾರದಂತಹ ಕುರೂಪಿ ಏನಲ್ಲ ನಾನು ಎಂದು ಮನಸ್ಸಿನಲ್ಲೇ ಅಂದುಕೊಂಡಳು. ತಂಗಿಯ ಬಗ್ಗೆ ಅಸೂಯೆಯಾಗದಿದ್ದರೂ ತಂದೆ ತಾಯಿಯ ಸ್ವಾರ್ಥಕ್ಕೆ ಹೇಸಿಗೆಯಾಯಿತು.

"ಯಾಕೆ, ಎರಡು ದಿನ ರಜೆ ಹಾಕಿದ್ದೇನೆ ಎಂದೆಯಲ್ಲ, ಇದ್ದು ಹೋಗಬಾರದೇ, ನಿನ್ನೆ ತಾನೇ ಬಂದಿದ್ದಿಯ?" ತಂದೆ ಬೆಣ್ಣೆಯಲ್ಲಿ ಕೂದಲು ತೆಗೆದ ಹಾಗೆ ಹೇಳಿದಾಗ ತಾಯಿಯೂ ತಮ್ಮ ಧ್ವನಿ ಸೇರಿಸಿದರು. ಕೃತ್ತಿಕಾಳಿಗಂತೂ ಅಲ್ಲಿಂದ ಹೊರಟರೆ ಸಾಕಾಗಿತ್ತು.

"ಇಲ್ಲಮ್ಮ ನಾನು ಹೋಗಲೇಬೇಕು. ಅದೂ ಅಲ್ಲದೆ ಮದುವೆಗೆ ದುಡ್ಡು ಬೇಕೂಂತ ಅಪ್ಪ ಹೇಳಿದರಲ್ಲ. ಈಗಲಿನಿಂದಲೇ ಹೋಗಿ ಸಾಲದ ವ್ಯವಸ್ಥೆ ಮಾಡಬೇಕು, ಈಗಲೇ ಎಲ್ಲ ರಜೆ ಹಾಕಿದರೆ ಹೇಗೆ?"

ಗಂಡಿನವರು ಬಂದಾಗ ತನ್ನನ್ನು ರಜೆ ಹಾಕಿ ಬರಲು ಹೇಳಬಹುದು ಎಂದುಕೊಂಡ
ಹೇಳಿದಳು.

"ಹಾಗೇ ಮಾಡು." ತಂದೆ ಆತುರದಿಂದ ಹೇಳಿದರು.

"ಇವತ್ತೇ ಶಾಸ್ತ್ರಿಗಳಿಗೆ ಹೇಳಿ ಕಳುಹಿಸುತ್ತೇನೆ. ನಾಳೇನೇ ನೋಡಿದ ಶಾಸ್ತ್ರ
ಮಾಡಿಕೊಂಡು ಹೋಗಲಿಂತ. ಬೀಗರಿಗೆ ನಾನಾಗಲೇ ನಿನ್ನ ಬಗ್ಗೆ ಹೇಳಿಬಿಟ್ಟಿದ್ದೇನೆ. ಈಗಿ
ಕಾಲದಲ್ಲಿ ತಂಗಿಯರ ಮದುವೆ ಆಗುವವರೆಗೂ ಆಗುವುದಿಲ್ಲ ಎಂದು ಹೇಳುವವರು ತುಂ
ಅಪರೂಪ. ಅಂತಹ ಮಗಳನ್ನು ಪಡೆಯಲು ಪುಣ್ಯ ಮಾಡಿದ್ದಿರಿ ಎಂದು ಹೊಗಳಿದರು
ನಮಗೂ ಭಯವಾಗಿ ಬಿಟ್ಟಿತ್ತು. ಹಿರಿಯ ಮಗಳನ್ನು ಇಟ್ಟುಕೊಂಡು ಕಿರಿಯವಳಿಗೆ ಯಾ
ಮದುವೆ ಮಾಡ್ತಾ ಇದ್ದೀರಾಂತ ಕೇಳಿಬಿಟ್ಟರೆ ಎಂದು. ಅದಕ್ಕೆ ಮೊದಲೇ ಎಲ್ಲ ವಿಷಯ
ಹೇಳಿಬಿಟ್ಟೆ ಈಗ ತಂಟೆ, ತಕರಾರೇ ಇಲ್ಲ ನೋಡು."

ಕೃತ್ತಿಕಾ ಪರ್ಸನೆತ್ತಿಕೊಂಡು, ಚಪ್ಪಲಿ ಮೆಟ್ಟಿಕೊಂಡಳು. ಯಾರಿಗೂ ಹೋಗಿ ಬರುತ್ತೇ
ಎಂದು ಹೇಳಬೇಕೆಂದು ಅನಿಸಲಿಲ್ಲ. ಹಾಗೇ ಮೆಟ್ಟಿಲಿಳಿದಳು. ತಂದೆ ಹಿಂದೆ ಹಿಂದೆಯ
ಗೇಟಿನವರೆಗೂ ಬಂದರೂ ಹಿಂತಿರುಗಿ ನೋಡಲಿಲ್ಲ.

ಹಾಸ್ಟೆಲಿಗೆ ಬಂದವಳೇ ಆಫೀಸಿಗೆ ಹೊರಟಳು. ರಜೆಯನ್ನು ಕ್ಯಾನ್ಸಲ್ ಮಾಡಿಸಿದರಾಯಿತು
ಇಲ್ಲದಿದ್ದರೆ ಮೀನಾಕ್ಷಿಯನ್ನು ಕರೆದುಕೊಂಡು ಯಾವುದಾದರೂ ಸಿನಿಮಾಕ್ಕೆ ಹೋದರಾಯಿತ
ಇಲ್ಲಿ ಒಬ್ಬಳೇ ಇದ್ದರೆ ಖಂಡಿತ ಹುಚ್ಚು ಹಿಡಿಯುತ್ತದೆ ಎಂದುಕೊಂಡು ಆಫೀಸಿಗೆ ಬಂದಳ
ಬಂದನಂತರ ಯಾಕೋ ರಜೆಯನ್ನು ಕ್ಯಾನ್ಸಲ್ ಮಾಡಿಸುವುದು ಬೇಡ ಎನಿಸಿತು. ಮೀನಾ
ಇನ್ನೂ ಬಂದಿರಲಿಲ್ಲವಾದ್ದರಿಂದ ಅವಳಿಗಾಗಿ ಕಾಯುತ್ತ ಕುಳಿತುಕೊಂಡಳು.

"ಕೃತ್ತಿಕಾ" ಇತ್ತ ತಿರುಗಿದಳು. ಅನುರಾಗ್ ನಿಂತಿದ್ದ.

"ವಾಟ್ ಎ ಸರ್‌ಪ್ರೈಸ್, ಎರಡು ದಿನ ರಜೇಂತ ಹಾಕಿದ್ದೇನೆ ಎಂದು ಹೇಳಿದಿರಿ
ನೀವಿಲ್ಲದೆ ಹೇಗಪ್ಪ ಆಫೀಸಿಗೆ ಬರುವುದು ಅಂತ ಯೋಚನೆ ಮಾಡ್ತಾನೆ ಬಂದೆ. ಈ
ಕಾಂಟ್ರಾಕ್ಟನ್ನು ಇವತ್ತು ಕೊಡಲೇಬೇಕಿತ್ತು. ಬೇರೆ ಯಾರನ್ನಾದ್ರೂ ಕಳುಹಿಸಿರೋಣಾಂದ್ರೆ ನಾನ
ಸೈನ್ ಮಾಡಬೇಕಿತ್ತು. ಯಾಕೆ ಹುಶಾರಿಲ್ಲವ, ಮುಖವೆಲ್ಲ ಬಾಡಿಹೋಗಿದೆ."

ಕಳಕಳಿಯಿಂದ ಕೇಳಿದಾಗ ಕೃತ್ತಿಕಾ ಉಕ್ಕಿ ಬರುತ್ತಿದ್ದ ಅಳುವನ್ನು ಕಷ್ಟಪಟ್ಟು ನಿಯಂತ್ರಿಸಿದಳ

"ಹಾಗೇನಿಲ್ಲ, ಪ್ರಯಾಣದ ಆಯಾಸಕ್ಕೆ ಹಾಗಾಗಿದೆ ಅಷ್ಟೇ."

"ನಿಮ್ಮ ಟೇಬಲನ್ನು ಬಿಟ್ಟು ಇದೇನು ಇಲ್ಲಿ ಕುಳಿತುಕೊಂಡಿದ್ದೀರಾ? ಯಾಕೆ ಒಬ್ಬರ
ಕುಳಿತುಕೊಂಡರೆ ನಾನು ಬರ್ತೀನಿಂತಲಾ?"

"ರಜೆ ಹಾಕಿದ್ದೇನಲ್ಲ. ಹಾಸ್ಟೆಲಿನಲ್ಲಿ ಒಬ್ಬಳೇ ಕುಳಿತುಕೊಂಡು ಮಾಡುವುದೇನೆಂದ
ಬಂದೆ. ಮೀನಾಕ್ಷಿ ಬಂದರೆ ಅವಳನ್ನು ರಜೆ ಹಾಕಿಸಿ ಯಾವುದಾದರೂ ಸಿನಿಮಾ
ಹೋಗೋಣಾಂತ ಅಂದುಕೊಂಡಿದ್ದೇನೆ."

"ಸೋ ಯೂ ಆರ್ ಫ್ರೀ ಟುಡೇ. ಹಾಗಿದ್ರೆ ಒಳ್ಳೆಯದೇ ಆಯಿತು ಬಿಡಿ. ಇನ್ನೊಂದ
ಹತ್ತು ನಿಮಿಷದಲ್ಲಿ ನನ್ನ ಕೆಲಸ ಮುಗಿದುಹೋಗುತ್ತೆ. ನಾನೇ ನಿಮಗೆ ಕಂಪೆನಿ ಕೊಡುತ್ತೇನ
ನೀವು ಹೂಂ ಅಂದರೆ ಮಾತ್ರ. ಇವತ್ತು ಕಾರು ತಂದಿದ್ದೇನೆ."

ಕೃತ್ತಿಕಾ ಮೀನಾಕ್ಷಿಗೆ ಕಾಯುವ ಬದಲು ಮೇಲೆದ್ದಳು.

"ಮಧ್ಯಾಹ್ನ ಒಂದು ಸೈನ್ ಮಾಡಿ ತೆಗೆದುಕೊಳ್ಳುತ್ತೇನೆ. ನೀವು ನಾನು ಕೇಳಿದ ತಕ್ಷಣ ಜೂಂ ಅಂದದ್ದೇ ದೊಡ್ಡದು. ಬನ್ನಿ ಬನ್ನಿ."

ಅನುರಾಗ್ ಸಹ ಹೊರಟ. ಕೃತ್ತಿಕಾ ಅವನನ್ನು ಹಿಂಬಾಲಿಸಿದಳು.

"ನೀವೇಕೋ ಇವತ್ತು ಔಟ್ ಆಫ್ ಮೂಡ್ ಆದ ಹಾಗೆ ಕಾಣುತ್ತದೆ." ಕಾರಿನ ಬಾಗಿಲು ತೆರೆಯುತ್ತ ಅನುರಾಗ್ ಕೇಳಿದ.

"ಕಾರಣಗಳು ಬೇಕಾದಷ್ಟಿವೆ. ಯಾವುದನ್ನು ಹೇಳಲಿ." ಅನ್ಯಮನಸ್ಕಳಾಗಿ ಕೃತ್ತಿಕಾ ನುಡಿದಳು.

"ಹಾಗಿದ್ದರೆ ನನಗೀಗ ಬೇಕಾಗಿರುವುದು ನಾನು ಅವತ್ತು ಕೇಳಿದ ಪ್ರಶ್ನೆಗೆ ಉತ್ತರ." ಮೆತ್ತಗೆ ಕೇಳಿದ. ಕಾರಿನಲ್ಲಿ ಅವನ ಪಕ್ಕ ಕುಳಿತ ಕೃತ್ತಿಕಾ ಒಂದು ಸಲ ಅವನತ್ತ ನೋಡಿದಳು.

"ಈ ಜಗತ್ತಿನಲ್ಲಿ ನನ್ನವರು ಅಂತ ಇದ್ರೆ, ನಾನ್ಯಾರನ್ನಾದ್ರೂ ಪ್ರೀತಿಸಿದ್ದರೆ ಅದು ನೀವೇ. ಐ ಲವ್ ಯೂ ಅನುರಾಗ್." ಅವನ ಕೈಯನ್ನು ಭದ್ರವಾಗಿ ಹಿಡಿದುಕೊಂಡಳು. ಅವರಿಬ್ಬರ ಅನುರಾಗದ ಅಧ್ಯಾಯ ಪ್ರಾರಂಭವಾಗಿತ್ತು.

* * * * *

ಕೃತ್ತಿಕಾ ಹಾಸ್ಟೆಲ್ ಬಿಟ್ಟು ಮನೆ ಮಾಡಿದಳು. ತಂದೆ ತಾಯಿಗೆ ಈ ಬಗ್ಗೆ ತಿಳಿಸುವ ಗೋಜಿಗೇ ಹೋಗಲಿಲ್ಲ. ದೊಡ್ಡ ನಗರವಾದ್ದರಿಂದ ಇವರಿಬ್ಬರ ಸಂಬಂಧದ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳಲು ಹೋಗಲಿಲ್ಲ. ಅನುರಾಗ್ ಈಗ ಮನೆಗೆ ಬರುತ್ತಿದ್ದರಿಂದ ಆಫೀಸಿನಲ್ಲಿ ಅವರು ಭೇಟಿ ಕಡಿಮೆ ಮಾಡತೊಡಗಿದರು. ಅವನೆಂದೂ ಮದುವೆಗೆ ಪ್ರಾಮಿಸ್ ಮಾಡಲೇ ಇಲ್ಲ. ಕೃತ್ತಿಕಾಳಾದರೂ ಅಷ್ಟೇ, ಎಂದೂ ಅದರ ವಿಷಯ ಕೇಳಲೂ ಇಲ್ಲ. ಆ ನಿರೀಕ್ಷೆಯನ್ನು ಇಟ್ಟುಕೊಳ್ಳಲೂ ಇಲ್ಲ. ಅವಳಿಗೆ ಬೇಕಾಗಿದ್ದು ಅನುರಾಗ್‌ನ ಪ್ರೀತಿ ಮಾತ್ರ, ಅದಕ್ಕಾಗಿ ಇಡೀ ಸಮಾಜವನ್ನೇ ಎದುರಿಸಲು ಸಿದ್ಧಳಾಗಿದ್ದಳು. ಅನುರಾಗ್‌ನ ಆಗಮನ ಅವಳ ಬದುಕಿನಲ್ಲಿ ದೊಡ್ಡ ಬದಲಾವಣೆಯನ್ನೇ ತಂದಿತ್ತು. ದಿನವೂ ಅವಳು ನೆನೆಸಿಕೊಂಡಾಗಲೆಲ್ಲ ಬರದಿದ್ದರೂ ಆಗಾಗ್ಗೆ ಬರುತ್ತಿದ್ದ. ಈಗಂತೂ ಅವನಿಲ್ಲದ ಬದುಕನ್ನು ಊಹಿಸಿಕೊಳ್ಳಲಾಗದ ಸ್ಥಿತಿ ತಲುಪಿಬಿಟ್ಟಿದ್ದಳು. ಆತ ಅವಳ ಜೀವನದ ಅವಿಭಾಜ್ಯ ಅಂಗವಾಗಿ ಬಿಟ್ಟಿದ್ದ. ಅವನು ಇವತ್ತು ಬರುತ್ತಾನೆ, ನಾಳೆ ಬರುತ್ತಾನೆ ಎಂದು ಕಾಯುವುದರಲ್ಲಿ ಅವಳಿಗೆ ದಿನ ಸರಿದುದರ ಅರಿವೇ ಆಗುತ್ತಿರಲಿಲ್ಲ. ಬಂದು ಹೋದನಂತರ ಪುನಾ ಯಾವಾಗ ಬರುತ್ತಾನೆಂದು ಕಾಯುವುದು ಇದೇ ಅವಳ ಕೆಲಸವಾಗಿತ್ತು. ಇಷ್ಟೆಲ್ಲ ಇದ್ದರೂ ಒಮ್ಮೊಮ್ಮೆ ಅವಳನ್ನು ಅಪರಾಧಿ ಭಾವ ಕಾಡುತ್ತಿತ್ತು. ಅನುರಾಗ್‌ನ ಹೆಂಡತಿಗೆ ತಾನು ಮೋಸ ಮಾಡುತ್ತಿಲ್ಲವಷ್ಟೇ? ಒಂದು ಕ್ಷಣ ಅಷ್ಟೇ. ಅನಂತರ ಆ ಯೋಚನೆಯನ್ನು ಮನಸ್ಸಿನಿಂದ ತಳ್ಳಿ ಬಿಡುತ್ತಿದ್ದಳು. ಬಹುಶಾ ಅವನ ಹೆಂಡತಿ ಅವನ ಕಡೆ ಸಾಕಷ್ಟು ಗಮನ ಕೊಟ್ಟಿಲ್ಲವೇನೋ ಅಥವಾ ನೋಡಲು ಸುಂದರಿಯಲ್ಲದಿರಬೇಕು. ಅನುರಾಗ್ ಹೆಂಡತಿಯನ್ನು ಅಷ್ಟೊಂದು ಪ್ರೀತಿಸುವಂತಿದ್ದರೆ ನನ್ನಲ್ಲೇಕೆ ಅನುರಕ್ತನಾಗುತ್ತಿದ್ದ. ನಿನ್ನನ್ನು ಮೊದಲು ನೋಡಿದ ದಿನವೇ ನಿನ್ನನ್ನು ಪ್ರೀತಿಸಲಾರಂಭಿಸಿದೆ ಎಂದು ಹೇಳಲಿಲ್ಲವೆ? ಹಣವಿದೆ, ಅಂತಸ್ತಿದೆ ಏನಿದ್ದರೇನು, ಮನಶಾಂತಿಯಿಲ್ಲವಲ್ಲ. ಬಹುಶಾ ನನ್ನ ಬಳಿ ಅವನಿಗೆ ಮಾನಸಿಕ ನೆಮ್ಮದಿ ದೊರೆಯಬಹುದು. ಅವಳ ಮನ ಏನೇನೋ ಯೋಚಿಸುತ್ತಿತ್ತು. ಕೆಲವು ವಾರಗಳ ಹಿಂದೆ ನಡೆದ ಘಟನೆ ನೆನಪಾಯಿತು. ಅನುರಾಗ್‌ನ ಶರ್ಟಿನ ಗುಂಡಿ ಕಿತ್ತು

ಹೋಗಿತ್ತು. ಅದನ್ನೇ ಹಾಕಿಕೊಂಡು ಬಂದಿದ್ದ ಒಂದೆರಡು ಸಲ. ನೋಡಿ ಸುಮ್ಮನಾಗಿದ್ದ ಕೃತ್ತಿಕಾ ಮೂರನೇ ಸಲ ಅದನ್ನು ಅವನಿಗೆ ತೋರಿಸಿದಳು.

"ಓಹ್ ಇದಾ, ಇರಲಿ ಬಿಡು, ಮನೆಗೆ ಹೋದ ಮೇಲೆ ಹೊಲೆದುಕೊಳ್ಳುತ್ತೇನೆ."

ತಕ್ಷಣ ಕೃತ್ತಿಕಾ ಅವನ ಶರ್ಟನ್ನು ಕಳಚಿ ಹೊಲಿದು ಕೊಟ್ಟಿದ್ದಳು. ಬಹುಶಾ ಅವನ ಹೆಂಡತಿಗೆ ಅಷ್ಟು ಸಮಯವಿಲ್ಲದಿರಬಹುದು ಅಥವಾ ಗಂಡನ ಬಗ್ಗೆ ನಿರಾಸಕ್ತಿ ಇರಬಹುದು ಎಂದುಕೊಂಡಿದ್ದಳು. ಆದರೂ ಕೃತ್ತಿಕಾಳ ಮನ ಒಮ್ಮೊಮ್ಮೆ ಅಳುಕುತ್ತಿತ್ತು. ಅವಳು ಗಂಡನೊಡನೆ ಹೇಗೇ ನಡೆದುಕೊಳ್ಳಲಿ ಗಂಡನ ಕಡೆ ಗಮನ ಕೊಡದೆ ಇರಲಿ, ಆದರೆ ಅವಳನ್ನು ಸಮಾಜ ಹೆಂಡತಿ ಎಂದು ಗೌರವಿಸುತ್ತದೆ. ಆದರೆ ತನ್ನನ್ನು? ಇಟ್ಟುಕೊಂಡವಳು ಎಂದು. ತಾನೆಂದೂ ಅವನ ಹೆಂಡತಿಯ ಸ್ಥಾನಕ್ಕೆ ಏರಲಾರೆ. ಹೆಂಡತಿಯ ಕರ್ತವ್ಯಗಳನ್ನು ನಿಷ್ಠೆಯಿಂದ ಮಾಡಿದರೂ ಹೆಂಡತಿ ಎನಿಸಿಕೊಳ್ಳಲಾಗುವುದಿಲ್ಲ. ಕೃತ್ತಿಕಾಳೆಂದೂ ಅವನಿಂದ ಹಣವನ್ನು ನಿರೀಕ್ಷೆ ಮಾಡಿರಲಿಲ್ಲ. ಒಳ್ಳೊಳ್ಳೆ ಉಡುಗೊರೆಗಳನ್ನು ತಂದಾಗ ಅವಳೇ ಬೇಡ ಎಂದು ತಿರಸ್ಕರಿಸಿ ಇನ್ನು ಮುಂದೆ ತರಬಾರದೆಂದು ಹೇಳಿ ಬಿಟ್ಟಿದ್ದಳು. ಅವನಿಂದ ಅವಳಿಗೆ ಬೇಕಾಗಿದ್ದುದು ಪ್ರೀತಿ ಮತ್ತು ರಕ್ಷಣೆ. ಅದು ಅವಳಿಗೆ ದೊರಕಿತ್ತು. ಅದಕ್ಕಿಂತ ಹೆಚ್ಚಿಗೆ ಅವಳು ಏನನ್ನೂ ನಿರೀಕ್ಷಿಸಿರಲಿಲ್ಲ. ಅವಳಿಗಿದ್ದ ಸಮಾಧಾನವೆಂದರೆ ತಾನೇನು ಅವನನ್ನು ಅವನ ಹೆಂಡತಿ ಮಕ್ಕಳಿಂದ ದೂರ ಮಾಡಿಲ್ಲ ಎಂಬುದು. ತಾನಾಗೇ ಗಂಡನನ್ನು ದೂಡಿದ್ದಾಳೆ. ನಾನು ಅವನಿಗೆ ಪ್ರೀತಿ, ಸಾಂತ್ವನ ನೀಡಿದ್ದೇನೆ. ಅದರ ಬದಲು ಅವನಿಂದ ನಾನೇನನ್ನೂ ನಿರೀಕ್ಷೆ ಮಾಡಿಲ್ಲ. ಹಾಗಿದ್ದ ಮೇಲೆ ಯಾಕೆ ಕೊರಗಬೇಕು ಎಂದುಕೊಂಡು ಯೋಚನೆಗಳಿಂದ ಮುಕ್ತಳಾಗಲು ಪ್ರಯತ್ನಿಸಿದ್ದಳು.

ಎಂದೂ ತನ್ನ ಹೆಂಡತಿ, ಸಂಸಾರದ ಬಗ್ಗೆ ಒಂದೇ ಒಂದೂ ಮಾತನಾಡದ ಅನುರಾಗ್ ಒಂದು ದಿನ ತನ್ನ ಅಪರೂಪದ ಮೂಡ್‌ನಲ್ಲಿ ಹೆಂಡತಿ ಬಗ್ಗೆ ಮಾತನಾಡಿದ್ದ.

"ಜೀವನ ಮತ್ತು ಪ್ರೀತಿ ಎರಡೂ ತುಂಬ ಬೆಲೆ ಕಟ್ಟಲಾಗದ್ದು ಹಾಗೂ ನಾಜೂಕಾದದ್ದು. ನಮ್ಮ ಮದುವೆ ಆದ ಕೆಲವೇ ತಿಂಗಳಲ್ಲಿ ನನ್ನ ಹೆಂಡತಿಗೆ ಕೆಲಸದಲ್ಲಿ ಪ್ರಮೋಷನ್ ಸಿಕ್ಕಿ ನನ್ನ ಎರಡರಷ್ಟು ಸಂಪಾದಿಸತೊಡಗಿದಳು. ಅನಂತರ ನನ್ನಂತಹ ಸಾಮಾನ್ಯನನ್ನು ಮದುವೆಯಾದದ್ದಕ್ಕೆ ಪಶ್ಚಾತಾಪ ಪಡತೊಡಗಿದಳು." ಕೃತ್ತಿಕಾ ಕೇಳತೊಡಗಿದಳು, ಅನುರಾಗ್ ಮುಂದುವರಿಸಿದ.

"ಅವಳಲ್ಲಿ ನನ್ನ ಬಗ್ಗೆ ಪ್ರೀತಿಗಿಂತ ಹೆಚ್ಚಾಗಿ ಹೆಂಡತಿಯಾಗಿ ಮಾಡಬೇಕಾದ ಕರ್ತವ್ಯವಿತ್ತು ಅಷ್ಟೇ. ರಾತ್ರಿ ಇಡೀ ಆಫೀಸಿನ ಫೈಲ್‌ಗಳನ್ನು ತಂದು ಸಿಗರೆಟ್ ಬೂದಿ ಮಾಡುತ್ತ ರೂಮಿನಲ್ಲಿ ಕಾಲ ಹಾಕುತ್ತಿದ್ದೆ. ಎಲ್ಲ ಅವಳ ಮೂಡು ಹಾಗೂ ಮರ್ಜಿಯಂತೆ ನಡೆಯಬೇಕಿತ್ತು. ನಾನು ಸದಾ ಮನೆಯಿಂದ ಹೊರಗಿರಲು ಇನ್ನೊಂದು ಕಾರಣವಿದೆ. ಮನೆ ತನ್ನದೆಂಬ ಅಹಂ ಅವಳಿಗೆ." ಕಹಿಯಾಗಿ ನಕ್ಕ.

"ನನ್ನ ಮನೆಯಲ್ಲೇ ನಾನು ಅಪರಿಚಿತ. ಸಿಗರೆಟು ಸೇದಲು ಹೊರಗೆ ಹೋಗಬೇಕು, ಆಕಸ್ಮಾತ್ ಸೇದಿದರೂ ಕಿಟಕಿ ಬಾಗಿಲುಗಳನ್ನು ತೆರೆದಿಟ್ಟು ಸೇದಬೇಕು. ತಕ್ಷಣ ಆ್ಯಶ್‌ಟ್ರೇಯನ್ನು ಕಾಲಿ ಮಾಡಬೇಕು. ಮನೆಯಲ್ಲಿ ಪ್ರತಿಯೊಂದು ವಸ್ತುವಿನ ಮೇಲೂ ಅವಳದೇ ಸಾಮ್ರಾಜ್ಯ, ಹಿಡಿತ."

ತನಗಿರುವ ದುರ್ಬಲತೆ ಎಂದರೆ ಎರಡು ಮಕ್ಕಳು ಎಂದು ಒಪ್ಪಿಕೊಂಡ.

"ನಯನ ತನಗೆ ಒಳ್ಳೆ ಕೆಲಸವಿದೆಯೆಂದು ಸದಾ ಹಂಗಿಸುತ್ತಲೇ ಇರುತ್ತಾಳೆ. ಕಾರು, ಒಡವೆ, ಬಂಗಲೆ ತುಂಬ ಬೆಲೆ ಬಾಳುವ ಸಾಮಾನುಗಳು, ಬ್ಯಾಂಕ್ ಬ್ಯಾಲೆನ್ಸ್ ಇದಿಷ್ಟೇ ಅವಳ ಬದುಕಾದ್ದರಿಂದ ಅವಳಲ್ಲಿ ನಾನು ಹೆಚ್ಚಿಗೆ ಏನನ್ನೂ ನಿರೀಕ್ಷಿಸುವ ಹಾಗಿಲ್ಲ. ಅವಳಿಗೆ ನನ್ನ ವೀಕ್‌ನೆಸ್ ಸಹ ಗೊತ್ತು. ಮಕ್ಕಳಿಗಾಗಿಯಾದರೂ ನಾನು ಅವಳನ್ನು ಬಿಟ್ಟುಹೋಗುವುದಿಲ್ಲವೆಂದು ಚೆನ್ನಾಗಿ ತಿಳಿದುಕೊಂಡಿರುವುದರಿಂದಲೇ ನಾನು ಅವಳಿಗೆ ಬೇಡ."

ಹೀಗೆ ಎರಡು ವರ್ಷಗಳು ಉರುಳಿ ಹೋದವು. ಕೃತ್ತಿಕಾಳ ತಂಗಿ ರಮಾ ಈಗ ಮಗುವೊಂದರ ತಾಯಿಯಾಗಿದ್ದಳು. ರಮಾಳ ಮದುವೆಯನಂತರ ಕೃತ್ತಿಕಾ ಹೆಚ್ಚಾಗಿ ಮನೆಗೆ ಹೋಗುತ್ತಿರಲಿಲ್ಲ. ಮನಸ್ಸು ಬಂದಾಗ ಒಂದಷ್ಟು ಹಣ ಕಳುಹಿಸಿಬಿಡುತ್ತಿದ್ದಳು. ಅಂದು ಆಫೀಸು ಮುಗಿಸಿಕೊಂಡು ಬಂದಾಗ ಮನೆ ಬಾಗಿಲಲ್ಲಿ ಕುಳಿತುಕೊಂಡಿದ್ದ ತಂದೆಯನ್ನು ಕಂಡು ಆಶ್ಚರ್ಯವಾಯಿತು. ಈ ಎರಡು ವರ್ಷಗಳಲ್ಲಿ ಅವರೆಂದೂ ಬಂದಿರಲಿಲ್ಲ. ಕೆಲಸವಿಲ್ಲದೆ ಹೀಗೆಲ್ಲ ಬರುವವರಲ್ಲವೆಂದು ಗೊತ್ತಿದ್ದ ಕೃತ್ತಿಕಾ ಮಾತನಾಡಲಿಲ್ಲ. ಈ ದಿನ ಅನುರಾಗ್ ಬರಬೇಕು, ಅದನ್ನು ತಂದೆ ನೋಡಬೇಕು ಎಂದು ಅವಳ ಮನ ಆಶಿಸಿತು. ಎಲ್ಲಕ್ಕಿಂತ ಹೆಚ್ಚಾಗಿ ಅವರ ಪ್ರತಿಕ್ರಿಯೆ ತಿಳಿದುಕೊಳ್ಳಬೇಕಿತ್ತು. ಕಾಫಿ ಮಾಡಿ ತಂದೆಗೆ ಕೊಟ್ಟಳು.

"ನಾನು ಈಗಲೇ ಹೊರಡಬೇಕಮ್ಮ." ಪೀಠಿಕೆ ಹಾಕಿದಾಗ ಕೃತ್ತಿಕಾ ಮಾತನಾಡಲಿಲ್ಲ.

"ವಿಜಿಗೆ ಗಂಡು ಬಂದಿದೆ. ಶ್ರೀಮಂತರು ಬೇರೆ. ಸ್ವಲ್ಪ ಡಿಮ್ಯಾಂಡ್ ಮಾಡ್ತಾ ಇದ್ದಾರೆ. ಒಳ್ಳೆ ಕಡೆ ಸಂಬಂಧ ಸಿಕ್ಕಿರುವಾಗ ದುಡ್ಡಿನ ಮುಖ ನೋಡ್ತಾ ಕೂತುಕೊಂಡ್ರೆ ಆಗುತ್ತಾ? ರಮಾಳ ಗಂಡನೇ ನೋಡಿದ್ದು. ಅವಳಿಗೂ ಚಿಕ್ಕ ವಯಸ್ಸೇನಲ್ಲವಲ್ಲ. ಅಲ್ಲದೆ ಅವಳು ನಿಮ್ಮಿಬ್ಬರಷ್ಟು ರೂಪವತಿಯೇನಲ್ಲ. ನಿಮ್ಮ ಅಮ್ಮನಿಗಂತೂ ಆರೋಗ್ಯವೇ ಸರಿ ಇಲ್ಲ. ಇವತ್ತು ಇದ್ದ ಹಾಗೆ ನಾಳೆ ಇರುವುದಿಲ್ಲ. ಅವಳೊಬ್ಬಳ ತಲೆಯ ಮೇಲೆ ಅಕ್ಷತೆ ಕಾಳು ಹಾಕಿ ಕಟ್ಟಿದರೆ ಸಾಕು ಎಂದು ಒದ್ದಾಡ್ತಿದ್ದಾಳೆ."

ವಿಜಿಗೆ ಚಿಕ್ಕ ವಯಸ್ಸೇನಲ್ಲ ಆದರೆ ನನಗೆ ಚಿಕ್ಕ ವಯಸ್ಸೇ ಎಂದು ಕೇಳಬೇಕೆನಿಸಿತು. ಮಾತುಗಳು ಗಂಟಲಿನಿಂದ ಈಚೆಗೆ ಬರಲಿಲ್ಲ. ಕೇಳಿದರೂ ಅದರಿಂದ ಪ್ರಯೋಜನವಿಲ್ಲವೆಂದು ಗೊತ್ತಿತ್ತು.

"ಮದುವೆ ಆಗುವವಳು ಅವಳು, ಮಾಡ್ತಾ ಇರುವವರು ನೀವು. ಇದರಲ್ಲಿ ನನ್ನ ಅಭಿಪ್ರಾಯ ಕೇಳುವಂತಹುದೇನಿದೆ ಎಲ್ಲವನ್ನೂ ಮೊದಲೇ ನಿರ್ಧರಿಸಿಕೊಂಡಿರುವಾಗ." ಒರಟಾಗಿ ಹೇಳಿದಳು.

"ಅದಕ್ಕಲ್ಲ ನಾನು ಬಂದಿದ್ದು, ಇತ್ತೀಚೆಗೆ ನೀನು ಆಫೀಸಿನವರೋ, ಯಾರೋ ಗೊತ್ತಿಲ್ಲ ಅವರ ಜೊತೆ ತುಂಬ ತಿರುಗಾಡುತ್ತಿದ್ದೀಯ ಎಂದು ಯಾರೋ ಹೇಳಿದರು."

"ಅದು ನನ್ನ ಸ್ವಂತ ವಿಷಯ. ನನ್ನ ಬಗ್ಗೆ ಇಲ್ಲೀತನಕ ಇಲ್ಲದ ಯೋಚನೆ ಈಗ ಶುರುವಾಯಿತಾ? ನಿಮಗೆ ಬೇಕಾಗಿರುವುದು ಹಣ ತಾನೇ, ಎಷ್ಟು ಬೇಕು ಹೇಳಿ ಕೊಡ್ತೀನಿ."

"ಛೇ ನಾನೇನು ನಿನ್ನನ್ನು ದೂರಲಿಲ್ಲ." ತಂದೆ ಹೇಳಿದರು.

"ವಿಜಿಗೆ ಮದುವೆ ಗೊತ್ತಾಗಿದೆಯಲ್ಲ. ಅವಳ ಗಂಡನ ಮನೆಯವರಿಗೆ ನಿನ್ನ ವಿಷಯ ಗೊತ್ತಿಲ್ಲ ಅದಕ್ಕೆ. ಹೀ.. ಹಿಹಿ... ಹಿ... ರಮಾನ ಮನೆಯವರ ಹಾಗಲ್ಲ ಇವರು. ದೊಡ್ಡವಳನ್ನು ಬಿಟ್ಟು ಕೊನೆಯವಳಿಗೆ ಮದುವೆ ಅಂದ್ರೆ ಏನಾದ್ರೂ ಕೊಂಕು ತೆಗೆಯಬಹುದು. ಅದೂ ಅಲ್ದೆ

ಈ ವಿಷಯ ಎಲ್ಲ ಚಾಡಿ ಕೇಳಿದರೆ ಕಷ್ಟವಾಗುತ್ತದೆ. ಮದುವೆ ಆದ ಮೇಲೆ ಗೊತ್ತಾದರೆ ಗೊತ್ತಾಗಲಿ. ಆಗ ಏನಾದರೂ ಸಬೂಬು ಹೇಳಬಹುದು. ಅದಕ್ಕೆ ನೀನಿರೋ ವಿಷಯವನ್ನೇ ಹೇಳಿಲ್ಲ. ನೀನು ಮದುವೆಗೆ ಬಂದು...'' ತಡವರಿಸಿದರು.

"ನಾನು ಮದುವೆಗೆ ಬರಬಾರದು ಎಂದು ತಾನೇ, ಆಯ್ತು ಬರುವುದಿಲ್ಲ.'' ಕಟುವಾಗಿ ಹೇಳಿದಳು.

"ನೀನು ಇಟ್ಟುಕೊಂಡಿರುವವನು ತುಂಬ ಸಾಹುಕಾರನಂತೆ. ತುಂಬ ದುಡ್ಡು ಕೊಡ್ತಾನಾ? ಇರಲಿ ಬಿಡು. ಜನರ ಬಾಯಿಗೆ ಬೀಳಬೇಡ ಅಷ್ಟೇ. ದುಡ್ಡು ಇದ್ದಿದ್ದರೆ ಸ್ವಲ್ಪ ಬೇಕಾಗಿತ್ತು. ರಮಾನ ಮದುವೆ ತರಹ ಮಾಡಿದರೆ ಇವರು ಒಪ್ಪೋ ಜನವಲ್ಲ.''

"ನನ್ನ ಹತ್ತಿರ ಈಗ ಒಂದು ನಯಾಪೈಸೆ ಸಹ ಇಲ್ಲ. ನನಗೂ ಮಾಡಿ ಮಾಡಿ ಸಾಕಾಗಿ ಹೋಗಿದೆ.'' ಕೃತ್ತಿಕಾ ವ್ಯಗ್ರಳಾದಳು.

"ಈಗಲೇ ಬೇಕೂಂತ ಎಲ್ಲಿ ಹೇಳಿದೆ. ನಾಲ್ಕೈದು ದಿನ ಬಿಟ್ಟು ಕಳುಹಿಸಿಕೊಡು ಪರವಾಗಿಲ್ಲ. ಆ ವ್ಯಕ್ತಿ ಕೊಡೋ ದುಡ್ಡನ್ನೆಲ್ಲ ಬ್ಯಾಂಕಿನಲ್ಲಿ ಹಾಕಿಡು ಸಮಯಕ್ಕೆ ಬೇಕಾಗುತ್ತೆ. ಇಂತಹವರನ್ನು ಜಾಸ್ತಿ ದಿನ ನಂಬಲಾಗುವುದಿಲ್ಲ, ಅದಕ್ಕೆ ಈಗಲೇ ಸಾಧ್ಯವಾದಷ್ಟು ಕೀಳು.''

"ಅಪ್ಪಾ.'' ಕೃತ್ತಿಕಾ ಅಬ್ಬರಿಸಿದಳು. "ಹೊರಡ್ತೀಯೋ ನಾನು ಮನೆ ಬಿಟ್ಟು ಹೋಗಲೋ?''

"ನಾನೇನು ತಪ್ಪಿನ ಮಾತನಾಡಿದೆ ಅಂತ ಹೇಗಾಡ್ತಿಯ? ಇದ್ದುದನ್ನು ಇದ್ದ ಹಾಗೆ ಹೇಳಿದೆ ಅಷ್ಟೇ. ಅದೂ ನಿನ್ನ ಒಳ್ಳೆಯದಕ್ಕೇ ಹೇಳಿದ್ದು. ನೀನು ಯಾವನನ್ನೋ ಇಟ್ಟುಕೊಂಡಿದ್ದಿ ಎಂದು ಎಲ್ಲರೂ ಹೇಳುತ್ತಿರುವಾಗ ನಾನು ಕೇಳಿದುದರಲ್ಲಿ ತಪ್ಪೇನಿದೆ? ನಂಗೇನು ಕೆಲಸವಿಲ್ಲ ಹೋಗ್ತೀನಿ. ದುಡ್ಡು ಕಳುಹಿಸುವುದು ಮರೀಬೇಡ. ಇವಳೊಬ್ಬಳ ಮದುವೆಯಾದ ಮೇಲೆ ನಿನ್ನ ಸುದ್ದಿಗೆ ಯಾರು ಬರ್ತಾರೆ, ಸಂಪಾದಿಸ್ತೀನಿ ಅಂತ ಕೊಬ್ಬು ನಿನಗೆ.''

ದುರ್ದಾನ ತೆಗೆದುಕೊಂಡವಂತೆ ಹೊರಟು ಹೋದರು. ತಂದೆ ಹೋದ ದಾರಿಯನ್ನೇ ಹೇಸಿಗೆಯಿಂದ ನೋಡಿದಳು. ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೆ, ಮಗಳು ತಪ್ಪು ದಾರಿ ಹಿಡಿದರೂ ಬಯ್ಯದೆ, ಬುದ್ಧಿ ಹೇಳದೆ ತನ್ನ ಸ್ವಾರ್ಥ ನೋಡಿಕೊಂಡ ತಂದೆಯನ್ನು ಕಂಡು ಈತ ಅಪ್ಪನೋ ದುಡ್ಡಿನ ಪಿಶಾಚಿಯೋ ಎನಿಸಿತು. ಇದಾದ ಎಂಟು ದಿನಕ್ಕೆ ಮದುವೆ ದಿನಾಂಕ ಗೊತ್ತಾದ ಪತ್ರ ಬಂತು. ಬ್ಯಾಂಕಿನಲ್ಲಿ ಉಳಿಸಿಟ್ಟಿದ್ದ ಹಣವನ್ನೆಲ್ಲ ಕಳುಹಿಸಿ ಎಂಟು ದಿನ ರಜೆ ಹಾಕಿದಳು. ವಿಜಯ ಮದುವೆ ಸಂಭ್ರಮದಿಂದ ನಡೆಯುತ್ತಿರುವಾಗ ಕೃತ್ತಿಕಾ ಅನುರಾಗ್‌ನೊಡನೆ ಊಟಿಯಲ್ಲಿದ್ದಳು.

* * * * *

ಎರಡು ದಿನ ರಜೆ ಇದ್ದುದರಿಂದ ಕೃತ್ತಿಕಾ ಮನೆಯಲ್ಲೇ ಇದ್ದಳು. ಅನುರಾಗ್ ಬರುತ್ತಾನೋ ಇಲ್ಲವೋ ಗೊತ್ತಿರಲಿಲ್ಲ. ಕಳೆದ ವಾರ ನಡೆದ ಘಟನೆ ಇದ್ದಕ್ಕಿದ್ದ ಹಾಗೆ ನೆನಪಾಯಿತು. ಶನಿವಾರ ಬಂದು ಸಿನಿಮಾಕ್ಕೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದ ಅನುರಾಗ್ ಬರಲೇ ಇಲ್ಲ. ಇಡೀ ದಿನವೆಲ್ಲ ಅತ್ತಿದ್ದಳು. ಒಂಟಿತನ ಎಷ್ಟು ಕಾಡಿತ್ತೆಂದರೆ ಅನುರಾಗ್‌ನೊಡನೆ ಎಲ್ಲ ಸಂಬಂಧಗಳನ್ನು ಕಿತ್ತು ಹಾಕಿಬಿಡಬೇಕು ಎನಿಸಿತ್ತು. ಎರಡು ದಿನಗಳನಂತರ ಅನುರಾಗ್ ಬಂದಿದ್ದ. ಚಿಕ್ಕ ಮಗನಿಗೆ ಜ್ವರ ಬಂದಿದ್ದರಿಂದ ಬರಲಾಗಲಿಲ್ಲವೆಂದು ಕ್ಷಮೆ ಕೇಳಿದ. ಅವನನ್ನು ಕಂಡು ಕೂಡಲೇ ಕೃತ್ತಿಕಾಳ ಸಿಟ್ಟು ಸೆಡವು ಎಲ್ಲ ಮಾಯವಾದವು.

ಅವಳ ನಿರ್ಧಾರ ಗಾಳಿ ಪಾಲಾಗಿತ್ತು. ಅವಳು ಅವನಿಂದ ಪ್ರೀತಿಯ ಹೊರತು ಏನನ್ನೂ ಬಯಸಿರಲಿಲ್ಲ. ಅದೂ ಅವಳ ಪಾಲಿಗೆ ಪೂರ್ತಿ ದಕ್ಕಿರಲಿಲ್ಲ.

'ನನಗೀಗ ಮೂವತ್ತು ವರ್ಷಗಳು' ಕೃತ್ತಿಕಾ ಯೋಚಿಸಿದಳು. ಅವಳ ಬದುಕಿನ ಒಳ್ಳೆಯ ದಿನಗಳು ಅರ್ಧ ಪ್ರೀತಿ ನೀಡಿದ ವ್ಯಕ್ತಿಗಾಗಿ ಕಳೆದು ಹೋಗಿದ್ದವು. ಹೀಗೇ ಎಷ್ಟು ದಿನ, ಮುಂದೇನು ಎಂಬ ಪ್ರಶ್ನೆಗಳು ಅವಳನ್ನು ಈಗ ಕಾಡತೊಡಗಿದ್ದವು. ಸೇಡನ್ನು ಯಾರ ಮೇಲೆ ತೀರಿಸಿಕೊಂಡೆ ಎಂದು ಯೋಚಿಸಿದಳು. ಈಗ ಒಂದು ವಾರದಿಂದ ಅನುರಾಗ್ ಬಂದಿರಲಿಲ್ಲ. ಆರೋಗ್ಯ ಸರಿಯಿಲ್ಲವೆಂದು ಯಾರ ಹತ್ತಿರವೋ ಹೇಳಿಕಳುಹಿಸಿದ್ದ. ನೋಡಬೇಕೆಂದು ಕೃತ್ತಿಕಾಳಿಗೆ ಅನಿಸಿದರೂ ನೋಡಿ ಬರುವ ಧೈರ್ಯವಾಗಿರಲಿಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ ನಯನಳನ್ನು ಎದುರಿಸಲು ಅವಳು ಸಿದ್ಧಳಿರಲಿಲ್ಲ. ನೀನು ಯಾರೆಂದು ಕೇಳಿದರೆ ಏನೆಂದು ಹೇಳುವುದು? ಅನುರಾಗ್ ಇಟ್ಟುಕೊಂಡವಳು ಎಂದೆ? ಫೋನ್ ಮೂಲಕ ಮಾತನಾಡಲು ಪ್ರಯತ್ನಿಸಿದಾಗಲೂ ನಯನಳೇ ಎತ್ತಿದ್ದರಿಂದ ಹಾಗೇ ಇಟ್ಟುಬಿಟ್ಟಿದ್ದಳು. ಅಷ್ಟರಲ್ಲಿ ಕಾಲಿಂಗ್ ಬೆಲ್ ಸದ್ದಾಯಿತು. ಎದ್ದು ಬಂದು ಬಾಗಿಲು ತೆರೆದಳು. ಎದುರಿಗೆ 32–33ರ ಹರಯದ ಯುವತಿಯೊಬ್ಬಳು ನಿಂತಿದ್ದಳು. ಒಂದು ಕ್ಷಣ ಗಲಿಬಿಲಿಗೊಳಗಾದಳು. ನಯನ ಇರಬಹುದೇ ಎಂದು ಅವಳ ಅಂತರಾತ್ಮ ನುಡಿಯಿತು. ಅವಳೆಂದೂ ನಯನಳನ್ನು ನೋಡಿರಲಿಲ್ಲ.

"ನಾನು ನಯನ." ಬಂದಾಕೆ ನುಡಿದಳು. "ಒಳಗೆ ಬರಬಹುದೇ?"

ಕೃತ್ತಿಕಾ ಶಾಕ್‌ನಿಂದ ಚೇತರಿಸಿಕೊಳ್ಳುವ ಮೊದಲೇ ಕೇಳಿದಳು. ಕೃತ್ತಿಕಾ ಏನೂ ಹೇಳಲು ತೋಚದೆ ಒಳನಡೆದಳು. ನಯನ ಒಂದು ಬಾರಿ ಮನೆಯತ್ತ ಕಣ್ಣಾಡಿಸಿದಳು. "ನನ್ನನ್ನು ನೋಡಿ ಆಶ್ಚರ್ಯವಾಯಿತಾ, ಕುಳಿತುಕೋ ಕೃತ್ತಿಕಾ ನಿನ್ನ ಹತ್ತಿರ ಮಾತನಾಡಬೇಕಾಗಿದೆ." ನಗುತ್ತ ಹೇಳಿದಳು.

"ಕಾಫಿ ಮಾಡಿ ತರ್‍ತೀನಿ ಒಂದ್ನಿಮಿಷ."

ಅಲ್ಲಿಂದ ಪಾರಾದರೆ ಸಾಕೆಂದು ಹೇಳಿದ ಕೃತ್ತಿಕಾ, ನಯನಳ ಉತ್ತರಕ್ಕೂ ಕಾಯದೆ ಒಳಗೆ ಹೋದಳು.

ಈ ರೀತಿ ನಯನಳನ್ನು ಎದುರಿಸಲು ಅವಳು ಸಿದ್ಧತೆಗಳನ್ನು ಮಾಡಿಕೊಂಡಿರಲಿಲ್ಲ. ಅಲ್ಲದೆ ಹೀಗೆ ಬರುತ್ತಾಳೆಂದು ಊಹಿಸಿಯೂ ಇರಲಿಲ್ಲ. ಅಲ್ಲದೆ ಅವಳ ಕಲ್ಪನೆಯ ನಯನಳಿಗೂ, ಈ ನಯನಳಿಗೂ ಹೋಲಿಕೆಯೇ ಇರಲಿಲ್ಲ. ಮಧ್ಯ ವಯಸ್ಸಿನ, ಬೊಜ್ಜು ಬೆಳೆಸಿಕೊಂಡ ಹೆಂಗಸಿನ ಚಿತ್ರವನ್ನು ಕಲ್ಪಿಸಿಕೊಂಡಿದ್ದಳು. ಆದರೆ ಇಲ್ಲಿಯ ನಯನಳ ಚಿತ್ರ ಅದಕ್ಕೆ ತದ್ವಿರುದ್ಧವಾಗಿತ್ತು. ತೆಳ್ಳಗೆ ಬೆಳ್ಳಗೆ ಬಳುಕುವ ನಯನ ಕಾಡಿಗೆ ಹೊರತು ಬೇರೆ ಯಾವುದೇ ಅಲಂಕಾರವನ್ನು ಮಾಡಿಕೊಂಡಿರಲಿಲ್ಲ. ಅವಳ ಕಪ್ಪು ಕೂದಲು ಸೊಂಟದಿಂದ ಕೆಳಗಿತ್ತು. ಅವಳ ಮುಂದೆ ಕೃತ್ತಿಕಾ ಸಪ್ಪೆಯಾಗಿ ಕಾಣುತ್ತಿದ್ದಳು. ಅನುರಾಗ್ ಹುಶಾರಿಲ್ಲವೆಂದು ಕೇಳಿದಾಗಿನಿಂದ ಸರಿಯಾಗಿ ನಿದ್ರೆ ಮಾಡಿರಲಿಲ್ಲ. ಕಣ್ಣುಗಳು ಕೆಂಪಗಾಗಿ, ಊದಿಕೊಂಡಿದ್ದವು. ತಲೆ ಕೂದಲೆಲ್ಲ ಕೆದರಿ ಹುಚ್ಚಿಯ ಹಾಗೆ ಕಾಣುತ್ತಿದ್ದಳು. ಕೂದಲಿಗೆ ಸ್ವಲ್ಪ ನೀರು ಸವರಿಕೊಂಡು ಹಾಗೇ ಸರಿ ಮಾಡಲೆತ್ನಿಸಿದಳು. ಬೆಳಿಗ್ಗೆಯಿಂದ ನೈಟಿ ಬದಲಾಯಿಸದೆ ಇದ್ದುದಕ್ಕೆ ತನ್ನನ್ನು ತಾನೇ ಬಯ್ದುಕೊಳ್ಳುತ್ತ ಕಾಫಿ ಮಾಡಿದಳು. ಹಬೆಯಾಡುತ್ತಿದ್ದ ಕಾಫಿಯ ಕಪ್ಪನ್ನೆತ್ತಿಕೊಂಡು ನಯನಳ ಮುಂದಿರಿಸಿದಳು. ಆಗಿನಿಂದ ಕೇಳಬೇಕೆಂದುಕೊಂಡಿದ್ದ ಪ್ರಶ್ನೆ ಹೊರ ಬಂತು.

"ಅನುರಾಗ್ ಹೇಗಿದ್ದಾರೆ?''

"ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದೇವೆ. ಮೈಲ್ಡ್ ಹಾರ್ಟ್ ಅಟ್ಯಾಕ್ ಎಂದು ಡಾಕ್ಟರ್ ಹೇಳಿದರು. ನನ್ನ ದೊಡ್ಡ ಮಗ ಅವರ ಜೊತೆಗಿದ್ದಾನೆ.'' ನಯನ ಉತ್ತರಿಸಿದಳು.

"ನಿನ್ನನ್ನು ಎಷ್ಟೊಂದು ದ್ವೇಷಿಸ್ತಾ ಇದ್ದೆ ಅಂದ್ರೆ ಎಷ್ಟೋ ಬಾರಿ ಬಂದು ಕೊಲೆ ಮಾಡಲೇ ಎಂದು ಯೋಚಿಸಿದ್ದೆ. ಫೋನ್ ಎತ್ತಿದಾಗ ಉತ್ತರಿಸದ ಹಾಗೆ ಇಟ್ಟಾಗ ಅದು ನೀನೇಂತ ನನಗೆ ಗೊತ್ತಾಯಿತು. ಅನುರಾಗ್‌ನನ್ನು ನೀನು ತುಂಬ ಪ್ರೀತಿಸುತ್ತಿರಬೇಕಲ್ಲವೆ? ಮದುವೆ ಮಕ್ಕಳನ್ನು ಅವನ ಪ್ರೀತಿಗಾಗಿ ತ್ಯಾಗ ಮಾಡಿದೆ. ಇಷ್ಟೆಲ್ಲ ಮಾಡಿದರೂ ನಿನಗೆ ಕೊನೆಗೆ ಸಿಕ್ಕಿದ್ದೇನು? ನೀನು ಪ್ರೀತಿಸಿದವನು ಕಾಯಿಲೆ ಬಿದ್ದಾಗಲು ನಿನಗೆ ಅವನ ಬಳಿ ಇರಲು ಅಧಿಕಾರವಿಲ್ಲ, ಅವನ ಮುಖ ನೋಡುವ ಹಾಗಿಲ್ಲ, ಸೇವೆ ಮಾಡುವ ಭಾಗ್ಯವಿಲ್ಲ. ಹಾಗಿದ್ದ ಮೇಲೆ ನಿನ್ನದೆಂತಹ ಜೀವನ?'' ಕೃತ್ತಿಕಾ ಉತ್ತರಿಸಲಿಲ್ಲ.

"ನಿನ್ನ ಒಂಟಿತನ ನನಗರ್ಥವಾಗುತ್ತದೆ. ಕೊನೇ ಪಕ್ಷ ನನಗೆ ಮಕ್ಕಳಾದ್ರೂ ಇದ್ದಾರೆ. ಇದರಲ್ಲಿ ಯಾರನ್ನು ದೂಷಿಸುವುದೆಂದು ನನಗೆ ಗೊತ್ತಿಲ್ಲ. ನಾವು ಮೂವರೂ ಈ ಸ್ಥಿತಿಗೆ ಕಾರಣಕರ್ತರು.''

ಒಂದು ನಿಮಿಷ ಉಸಿರೆಳೆದುಕೊಂಡಳು.

"ನನ್ನ ಗಂಡನ ಪ್ರೀತಿಗೆ ಇನ್ನೊಬ್ಬಳು ಪಾತ್ರಳೆಂದು ತಿಳಿದಾಗ ಮೌನವಾಗಿ ರೋದಿಸಿದೆ. ಬಹುಶಾ ಅನುರಾಗ್ ನನಗೆ ತಿದ್ದಿಕೊಳ್ಳಲು ಒಂದೇ ಒಂದು ಅವಕಾಶ ಕೊಡಬಹುದಿತ್ತು. ನಾನೆಲ್ಲಿ ತಪ್ಪಿದ್ದೇನೆ ಎಂದು ಹೇಳಬಹುದಿತ್ತು. ಆದರೆ ಅನುರಾಗ್ ಗುರಿ ಇಲ್ಲದೆ ಮುಂದೆ ಹೋದ. ಇದರಿಂದ ಅವನೇನಾದರೂ ಸುಖಿಯಾಗಿದ್ದಾನೆಂದು ನೀನು ತಿಳಿದುಕೊಂಡಿದ್ದರೆ ಅದು ನಿನ್ನ ಭ್ರಮೆಯಷ್ಟೇ. ಪ್ರೀತಿ ಮತ್ತು ನಿಷ್ಠೆಯ ಮಧ್ಯೆ ಸಿಕ್ಕಿಹಾಕಿಕೊಂಡು ನರಳುತ್ತಿದ್ದಾನೆ. ಪ್ರೀತಿ ಅವನಿಗೆ ಬೇಕು. ಅದಕ್ಕಾಗಿ ನಿಷ್ಠೆಯನ್ನು ಬಿಡಲಾರ. ನಾನು ಅವನನ್ನೇನೂ ದೂರುವುದಿಲ್ಲ. ನನ್ನೊಡನೆ ಎಂದೂ ಕೆಟ್ಟದಾಗಿ ಆಗಲಿ, ಕೀಳಾಗಿಯಾಗಲಿ ನಡೆದುಕೊಂಡಿಲ್ಲ. ಮನೆ, ಮಕ್ಕಳನ್ನು ಚೆನ್ನಾಗಿಯೇ ನೋಡಿಕೊಂಡಿದ್ದಾನೆ. ನಿನಗೆ ಗೊತ್ತಾ, ಮಕ್ಕಳಿಗೆ ನನಗಿಂತ ಅವನೆಂದರೆ ಪ್ರಾಣ. ಆದರೆ ನೀನು? ಎಲ್ಲರಿಗಿಂತ ಹೆಚ್ಚಾಗಿ ನರಳಿದೆ. ಐ ಫೀಲ್ ಸಾರಿ ಫಾರ್ ಯೂ'' ಎನ್ನುತ್ತ ಎದ್ದು ನಿಂತಳು.

"ಪ್ಲೀಸ್ ಕೃತ್ತಿಕಾ, ನಿನ್ನ ಭವಿಷ್ಯದ ಬಗ್ಗೆ ಯೋಚನೆ ಮಾಡು. ಇನ್ನೂ ಕಾಲ ಮಿಂಚಿ ಹೋಗಿಲ್ಲ. ನೀನೂ ಚೆನ್ನಾಗಿರಬಹುದು, ನಾನೂ ಚೆನ್ನಾಗಿರಬಹುದು. ನಾನು ಮಾಡಿದ ತಪ್ಪೇನೆಂದು ನನಗರ್ಥವಾಗಿದೆ. ಗಂಡ, ಮಕ್ಕಳಿಗಿಂತ ನನಗೆ ಕೆಲಸ, ಕಾರು, ಬಂಗಲೆ, ಹಣವೇ ಹೆಚ್ಚಾಗಿತ್ತು. ಹಣವಾಗಲಿ ಸೋಕಾಲ್ಡ್ ಸ್ವಾತಂತ್ರ್ಯವಾಗಲಿ ಎಲ್ಲ ಆಗಲು ಸಾಧ್ಯವಿಲ್ಲ. ನನ್ನ ತಪ್ಪನ್ನು ತಿದ್ದಿಕೊಳ್ಳಲು ಖಂಡಿತ ಪ್ರಯತ್ನಿಸುತ್ತೇನೆ ಉಳಿದದ್ದು ನಿನಗೆ ಬಿಟ್ಟದ್ದು.'' ಬಾಗಿಲು ದಾಟಿದವಳು ಒಂದು ನಿಮಿಷ ನಿಂತಳು.

"ನಿನ್ನನ್ನು ನೋಡುವವರೆಗೆ ಖಂಡಿತ ದ್ವೇಷಿಸುತ್ತಿದ್ದೆ. ಆದರೆ ಈಗ ಐ ಪಿಟಿ ಯೂ. ದೇವರು ನಿನಗೆ ಒಳ್ಳೆಯದು ಮಾಡಲಿ'' ಎನ್ನುತ್ತ ಕೃತ್ತಿಕಾಳನ್ನು ಅವಳ ಲೋಕದಲ್ಲಿ ಬಿಟ್ಟು ಹೊರಟು ಹೋದಳು. ಅವಳು ಹೊರಟು ಹೋದ ಎಷ್ಟೋ ಹೊತ್ತಿನನಂತರವೂ ಕೃತ್ತಿಕಾ ಹಾಗೇ ನಿಂತಿದ್ದಳು.

"ಬಹುಶಾ ನಯನ ಬಂದು ಹೇಳುವವರೆಗೂ ನನಗೆ ನನ್ನದು ತಪ್ಪೂಂತ ಗೊತ್ತಾಗುತ್ತಲೇ ಇರಲಿಲ್ಲ. ಅವಳೊಬ್ಬಳೇ ನನ್ನ ತಪ್ಪನ್ನು ತೋರಿಸಿದವಳು. ಅನಂತರ ಕೆಲಸ ಬಿಟ್ಟುಬಿಟ್ಟೆ ಅನುರಾಗ್‌ನ ನೆರಳು ಸುಳಿಯದ ಕಡೆ ಇರಬೇಕೆಂದು ನಿಶ್ಚಯಿಸಿ ನಿಮ್ಮಲ್ಲಿ ಕೆಲಸಕ್ಕೆ ಸೇರಿದ್ದು. ತಂದೆ, ತಾಯಿಗಳು ನನ್ನ ಕಡೆ ಸ್ವಲ್ಪ ಪ್ರೀತಿ ತೋರಿಸಿದ್ದರೂ ಸಾಕಿತ್ತು. ಅಥವಾ ನಾನು ಮಾಡ್ತಾ ಇದ್ದುದನ್ನು ತಪ್ಪೂಂತ ಹೇಳಿದ್ದರೂ ಆಗ್ತಾ ಇತ್ತು, ತಿದ್ದಿಕೊಳ್ತಾ ಇದ್ದೆ. ಅದಕ್ಕೆ ಅವರು ಅವಕಾಶವನ್ನೇ ಕೊಡಲಿಲ್ಲ. ನನ್ನನ್ನು ದುಡಿಯುವ ಯಂತ್ರ ಅಂತ ತಿಳಿದುಕೊಂಡರು. ನನ್ನಂತಹ ಪರಿಸ್ಥಿತಿ ಮಾತ್ರ ಯಾವ ಹೆಣ್ಣು ಮಕ್ಕಳಿಗೂ ಬಾರದಿರಲಿ." ಕೃತ್ತಿಕಾ ಕಹಿಯಾಗಿ ಹೇಳಿದಳು.

ರಾಹುಲ್ ಒಂದು ನಿಮಿಷ ಸುಮ್ಮನಿದ್ದ. ಅನಂತರ ಜೇಬಿನಿಂದ ಫೋಟೋವೊಂದನ್ನು ತೆಗೆದು ಕೃತ್ತಿಕಾಳಿಗೆ ತೋರಿಸಿದ.

"ಇವನೇ ತಾನೇ ಆ ಅನುರಾಗ್?"

ರಾಹುಲ್‌ನೊಡನೆ ಹೆಗಲ ಮೇಲೆ ಕೈ ಹಾಕಿ ನಿಂತುಕೊಂಡಿದ್ದ ಅನುರಾಗ್‌ನ ಆ ಫೋಟೋ ನೋಡಿ ಕೃತ್ತಿಕಾ ಬೆಚ್ಚಿ ಬಿದ್ದಳು.

"ನಿ... ನಿಮಗೆ... ಹೇಗೆ... ಗೊತ್ತು."

"ಇವನು ನನ್ನ ಬಾಲ್ಯದ ಗೆಳೆಯ." ರಾಹುಲ್ ನಕ್ಕು ನುಡಿದ.

"ಅಂದ್ರೆ ನಾನು ನಿಮ್ಮಲ್ಲಿ ಕೆಲಸಕ್ಕೆ ಸೇರಿದ ಮೇಲೆ ನಿಮ್ಮ ಅವನ ಭೇಟಿಯಾಗಿತ್ತೆ?"

"ಆ ಕೆಲಸಕ್ಕೆ ಸೇರಿದ ಮೇಲಲ್ಲ, ಸೇರುವ ಮೊದಲು ಪಿ.ಎ. ಪೋಸ್ಟ್‌ಗೆ ಅಪ್ಲಿಕೇಶನ್ಸ್ ಬಂದಾಗ ನಾನೇ ಖುದ್ದಾಗಿ ಎಲ್ಲವನ್ನು ನೋಡ್ತಾ ಇದ್ದೆ. ಆಗ ಏನೋ ಕೆಲಸದ ಮೇಲೆ ಬಂದ ಅನುರಾಗ್ ತಾನು ಸಹಾಯ ಮಾಡುತ್ತೇನೆಂದು ಹೇಳಿ ನೋಡತೊಡಗಿದ್ದ. ನಿನ್ನ ಫೋಟೋವಿದ್ದ ಅಪ್ಲಿಕೇಶನ್ ಕಂಡಾಗ ನಿನ್ನ, ಅವನ ಸಂಬಂಧದ ಬಗ್ಗೆ ಹೇಳಿದ." ಮುಂದೇನು ಹೇಳುತ್ತಾನೆಂದು ಕೃತ್ತಿಕಾ ಉಸಿರು ಬಿಗಿ ಹಿಡಿದಳು.

"ಈ ರೀತಿ ಮಾಡಿದ ತಪ್ಪನ್ನು ಅವನೊಬ್ಬನೇ ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲ. ಎರಡೂ ಕೈ ಸೇರಿದರೆ ಚಪ್ಪಾಳೆ ತಾನೇ ಎಂದ. ಅಲ್ಲದೆ ಈಗ ತನ್ನ ಹೆಂಡತಿ ನಯನ ತನ್ನನ್ನು ತುಂಬ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಳೆಂದು, ಬೇರೆ ಯಾರಿಗಾಗಿಯೋ ತನ್ನ ಸಂಸಾರವನ್ನು ಮುರಿದುಕೊಳ್ಳಲು ಇಷ್ಟವಿಲ್ಲವೆಂದು ಹೇಳಿ ತಾನೇ ನಿನ್ನನ್ನು ದೂರ ಮಾಡಿದ್ದಾಗಿ ಹೇಳಿದ. ಇಷ್ಟು ಸಾಲದೆಂಬಂತೆ ನಿನಗೆ ಕೆಲಸ ಕೊಟ್ಟರೆ ಆಫೀಸಿನ ಮರ್ಯಾದೆ ಹಾಳಾಗುತ್ತದೆ, ನಿನ್ನನ್ನೇ ಬಲೆಗೆ ಹಾಕಿಕೊಳ್ಳಲು ಹಿಂಜರಿಯಲಾರಳು, ನಾನೊಂದು ಸಲ ಅವಳ ಬಲೆಗೆ ಬಿದ್ದು ಅನುಭವಿಸಿದ್ದು ಸಾಕಾಗಿದೆ. ನೀನೂ ಅದಕ್ಕೆ ಒಳಗಾಗಬೇಡ ಎಂದು ಎಚ್ಚರಿಸಿದ."

"ನೀವು ಅವನ ಮಾತನ್ನೇ ನಂಬಿಬಿಟ್ಟಿರಾ?" ಕಣ್ಣೀರು ತುಂಬಿಕೊಂಡ ಕೃತ್ತಿಕಾ ಕೇಳಿದಳು.

"ನಂಬಿದ್ದರೆ ನಿನ್ನನ್ನಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದೆ? ತಾನು ತಪ್ಪು ಮಾಡಿದ್ದು ಅಲ್ಲದೆ ತಪ್ಪನ್ನೆಲ್ಲ ನಿನ್ನ ಮೇಲೆ ಹಾಕಿದ ಅವನ ಬಗ್ಗೆ ಹೇಸಿಗೆಯೆನಿಸಿತು. ಅಸಹಾಯಕ ಹೆಣ್ಣಿನ ದುರ್ಬಲತೆಯನ್ನು ಚೆನ್ನಾಗಿ ಬಳಸಿಕೊಂಡ. 'ನಾನು ಮೊದಲಿನಿಂದಲೂ ಹೆಂಗಸರ ಪರ, ಅವರೆಷ್ಟೇ ತಪ್ಪು ಮಾಡಿದರೂ ಅದನ್ನು ನಾವೇ ನಮ್ಮ ತಲೆ ಮೇಲೆ ಹಾಕಿಕೊಳ್ಳಬೇಕೇ ಹೊರತು ಹೀಗೆಲ್ಲ ಅಪಪ್ರಚಾರ ಮಾಡಬಾರದು ಎಂದಿದ್ದಕ್ಕೆ ಸಿಟ್ಟು ಮಾಡಿಕೊಂಡು ಹೋದ. ಹೆಣ್ಣು ಮಕ್ಕಳನ್ನು ಎಕ್ಸ್‌ಪ್ಲಾಯಿಟ್ ಮಾಡುವವರನ್ನು ಕಂಡ್ರೆ ನನಗೆ ಅತಿ ಕೋಪ. ನಾನು ಆ ಕ್ಷಣವೇ

ನಿರ್ಧರಿಸಿದೆ ಕೆಲಸ ನಿನಗೇ ಕೊಡುವುದು ಎಂದು.'' ಕೃತ್ತಿಕಾ ಕೃತಜ್ಞತೆಯಿಂದ ಅವನ ಮುಖ ನೋಡಿದಳು.

"ಆದರೆ ಮದುವೆಯಾಗುವ ಯೋಚನೆ ಬಂದಿದ್ದು ಇತ್ತೀಚೆಗೆ. ನನ್ನ ಮೊದಲ ಮದುವೆ ಆ ರೀತಿ ಆದ ಮೇಲೆ ಇನ್ನೊಮ್ಮೆ ಮದುವೆ ಆದ್ರೆ ಜೀವನದಲ್ಲಿ ತುಂಬ ನೊಂದವಳನ್ನು ಎಂದು ನಿರ್ಧರಿಸಿದ್ದೆ. ಎಲ್ಲಾ ವಿಧದಲ್ಲೂ ಸರಿಯಾಗಿರುವವರನ್ನು ಯಾರು ಬೇಕಾದರೂ ಮದುವೆಯಾಗ್ತಾರೆ. ಸೋ ನೀನೇ ಯಾಕಾಗಬಾರದು ಎಂದು ಯೋಚಿಸಿದೆ. ನಿನ್ನ ಧೈರ್ಯ, ಸ್ವಾಭಿಮಾನ ಎರಡೂ ಮೆಚ್ಚಿಗೆಯಾದವು. ಅಮ್ಮನಿಗೂ ಸೂಕ್ಷ್ಮವಾಗಿ ನಿನ್ನ ಬಗ್ಗೆ ಹೇಳಿದ್ದೆ. ಬೇಗ ಮದುವೆ ಮಾಡಿಕೊಂಡು ಬಿಡು ಎಂದು ನಿನ್ನೆಯಿಂದ ಹೇಳ್ತಾನೆ ಇದ್ದಾಳೆ. ಮೇಘನಾಳಂತು ಆಂಟಿ ನನಗೆ ಹೇಳದೆ ಹೋಗಿದ್ದಾರೆ. ಇನ್ನೊಂದು ಸಲ ಬಂದರೆ ಮಾತನಾಡಿಸುವುದೇ ಇಲ್ಲ ಅಂತ ಹೇಳ್ತಾ ಇದ್ದಾಳೆ.''

"ಅಂದ್ರೆ... ಅಂದ್ರೆ... ನಿಮಗೆ ಮೊದಲೇ ಎಲ್ಲ ವಿಷಯ ಗೊತ್ತಿತ್ತು.''

"ಗೊತ್ತಿರುವುದಕ್ಕೇ ನೀನು ಅಷ್ಟೊಂದು ಕೋಪ ಮಾಡಿಕೊಂಡರೂ ನೊಂದ ಹೆಣ್ಣೆಂದು ಸುಮ್ಮನಾಗಿದ್ದು. ಇಲ್ಲದ್ದಿದ್ದರೆ ಬೇರೆ ಯಾರೇ ಆಗಿದ್ದರೂ ಗೆಟ್‌ಔಟ್ ಎಂದಬಿಡುತ್ತಿದ್ದೆ. ಅಷ್ಟೊಂದು ಸಿಟ್ಟು ನನಗೆ. ಇಲ್ಲದಿದ್ದರೆ ನಿನಗೆ ಒಂದು ವಾರ ನಮ್ಮ ಮನೇಲಿರಲು ಅಷ್ಟು ಸುಲಭವಾಗಿ ಹೇಳ್ತಾ ಇದ್ದೆನೇನು? ಹೆಣ್ಣು ಮಕ್ಕಳು ಹೀಗೆಲ್ಲ ಇದ್ದರೆ ಜನ, ಸಮಾಜ ಏನು ಹೇಳಬಹುದೆಂದು ನಾನೇನು ಅರಿಯದವನಲ್ಲ. ಅಮ್ಮನೂ ನಿನ್ನನ್ನು ಒಪ್ಪಲಿ ಎಂದಾಸೆಯಿತ್ತು.''

"ನನ್ನ ಕತೆ ತಿಳಿದೂ ತಿಳಿದೂ ನನ್ನನ್ನು ಇಷ್ಟಪಡ್ತೀರಾ?''

"ಕಳೆದು ಹೋಗಿದ್ದು ಹೋಯಿತು. ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಯಾಕೆ ಹೀಗಾಯ್ತು ಎನ್ನುವುದಕ್ಕೆ ಕೆಲವು ಬಾರಿ ನಮ್ಮಲ್ಲಿ ಉತ್ತರ ಇರುವುದಿಲ್ಲ. ಬಹುಶಾ ಇದನ್ನೇ ವಿಧಿ, ಹಣೆಬರಹ ಎನ್ನುತ್ತಾರೇನೋ. ಎಲ್ಲಾ ಸರಿ ಇದ್ದ ನನ್ನ ಬದುಕೇ ಹಾಗಾಯಿತು. ನೀನು ಮಾಡಿದ್ದು ನನ್ನ ದೃಷ್ಟೀಲಿ ತಪ್ಪೇ ಅಲ್ಲ. ನನ್ನ ಮನವನ್ನು ತುಂಬಿದ್ದೀಯ ಮನೆಯನ್ನು ತುಂಬಿದರೆ ಐ ಕನ್‌ಸಿಡರ್ ಮೈಸೆಲ್ಫ್ ವೆರಿ ಲಕ್ಕಿ. ಹಾಗೆಂದು ನಾನು ಬಲವಂತ ಮಾಡ್ತಿಲ್ಲ. ನಿನ್ನ ಅಭಿಪ್ರಾಯವನ್ನೂ ಗೌರವಿಸುತ್ತೇನೆ.''

"ನೋ ನೋ ಸರ್, ಸಾರಿ ರಾಹುಲ್ ಬಹುಶಾ ನನ್ನಷ್ಟು ಅದೃಷ್ಟವಂತಳು ಈ ಜಗತ್ತಿನಲ್ಲಿ ಯಾರೂ ಇಲ್ಲ ಅನ್ಸುತ್ತೆ. ಇಂತಹ ರೆಡಿಮೇಡ್ ಸಂಸಾರ ಎಷ್ಟು ಜನರಿಗೆ ಸಿಗುತ್ತೆ.'' ಹಾಸ್ಯವಾಗಿ ಹೇಳಿದಳು.

"ಹಾಗಿದ್ದ ಮೇಲೆ ನಿನ್ನದೇನು ಅಭ್ಯಂತರವಿಲ್ಲ ತಾನೇ?''

"ನನ್ನ ಒಂದು ಪ್ರಶ್ನೆಗೆ ಉತ್ತರ ಹೇಳಿ, ನೀವು ಇನ್ನೂ ಸಂಘರ್ಷಳನ್ನು ಇಷ್ಟಪಡ್ತೀರಾ?''

"ಜಲಸಿ ಧೈ ನೇಮ್ ಈಸ್ ವುಮೆನ್.''

"ನೀನು ಅನುರಾಗ್‌ನನ್ನು ಇನ್ನೂ ಇಷ್ಟಪಡುವುದಾದರೆ...'' ಕೃತ್ತಿಕಾ ಅವನ ಮಾತನ್ನು ತಡೆದಳು.

"ಅನುರಾಗ್ ಯಾರು, ನನಗೆ ರಾಹುಲ್‌ನ ಅನುರಾಗದ ಅರ್ಥ ಈಗ ಆಗ್ತಾ ಇದೆ.''

ಅವರಿಬ್ಬರ ನಗು ಅಲೆ ಅಲೆಯಾಗಿ ಹರಡಿತು.

ಮ್ಯಾಗಜಿನ್

ವಿಭಾಗ

ಸಣ್ಣ ಕಥೆ

ಬಿಲ್ ಪಡೆದಿರಲಿಲ್ಲ

ಅಭಿನಂದನಾ ಜಂಗಾಪಿ

ಮೈತುಂಬ ಬ್ಲಾಂಕೆಟ್ ಸುತ್ತಿಕೊಂಡು ಹಾಸಿಗೆಯಲ್ಲಿ ಮುದುರಿಕೊಂಡು ಮಲಗಿದ್ದೆ. ಆಗ ಇದ್ದಕ್ಕಿದ್ದಂತೆ ಯಾರೋ ಬಾಗಿಲು ಬಡಿಯುತ್ತಿರುವ ಶಬ್ದ ಕೇಳಿಸಿತು.

ಸಮಯ ರಾತ್ರಿ ಹನ್ನೆರಡು ಗಂಟೆಯ ಸಮೀಪ. ನಾನು ನಡುಗುತ್ತಲೇ ಎದ್ದು ಹೋಗಿ ಬಾಗಿಲು ತೆರೆದರೆ ಎದುರಿಗೆ ಪಕ್ಕದ ಮನೆಯ ಸಾವಿತ್ರಮ್ಮ. ಅವರ ಆಂತಕ ತುಂಬಿದ ಮುಖ ವಿಷಯವೇನೆಂದು ಸಾರಿ ಹೇಳುತ್ತಿದೆ. ಗರ್ಭಿಣಿ ಸೊಸೆಗೆ ಬೇನೆ ಶುರುವಾಗಿದೆ. ಮಗ ಊರು ಬಿಟ್ಟು ಎರಡು ದಿನವಾಯಿತು. ಇನ್ನೂ ಬಂದಿರುವಂತಿಲ್ಲ.

"ನಡೆಯಿರಿ ಈಗಲೇ ಬಂದೆ" ಎಂದು ಸಾವಿತ್ರಮ್ಮನನ್ನು ಸಾಗಹಾಕಿ ಒಳಗೆ ಬಂದು ಪ್ಯಾಂಟು, ಶರಟು ತೊಟ್ಟು ಸಮಯಕ್ಕಿರಲಿ ಎಂದು ಒಂದಿಷ್ಟು ಹಣವನ್ನು ಜೇಬಿಗೆ ತುರುಕಿದೆ. ಮನೆಯ ಬಾಗಿಲಿಗೆ ಬೀಗ ಹಾಕಿ ಯಾವುದಾದರೂ ಆಟೋ, ಟ್ಯಾಕ್ಸಿಯೋ ಸಿಗುತ್ತೇನೋ ಎಂದು ನೋಡಲು ಬೀದಿಗಿಳಿದೆ. ಅದೃಷ್ಟವಶಾತ್ ಎದುರಿಗೆ ಒಂದು ಆಟೋ ಬಂತು. ಹೆಚ್ಚು ಹಣ ಕೊಡುತ್ತೇನೆಂದಾಗಲೇ ಆತ ಬರಲು ಒಪ್ಪಿದ.

ಆಸ್ಪತ್ರೆ ಸೇರುವ ವೇಳೆಗೆ ಹತ್ತಿರ ಹತ್ತಿರ ಒಂದು ಗಂಟೆ. ಎಲ್ಲರಿಗೂ ನಿದ್ದೆಯ ಸಮಯ. "ಇವಕ್ಕೇನು ಹೊತ್ತೂ ಗೊತ್ತೂ ಒಂದೂ ಇರೋಲ್ಲ. ಯಾವಾಗೆಂದರೆ ಆಗ ಬಂದುಬಿಡುತ್ತವೆ ನಮ್ಮ ಪ್ರಾಣ ತಿನ್ನಲು" ಎಂದು ಡಾಕ್ಟರ್ ರೇಗಿದಾಗ

ಕೇಳಬೇಕೆನಿಸಿತು, "ನೀವೂ ಹೆಣ್ಣು, ನಿಮಗ
ಒಂದೋ ಎರಡೋ ಮಕ್ಕಳಿರಬಹುದು. ಇಂತಹ
ಸಂದರ್ಭ ನಿಮಗೆದುರಾದಾಗ ಅಂದು ಅ
ನಿಮ್ಮ ಕೈಯಲ್ಲಿತ್ತೇ." ಆದರೆ ಬಾಯಿಯಿಂ
ಮಾತು ಹೊರಡಲಿಲ್ಲ. ಅದು ಮೂಕವಾಗಿತ್ತು

ಸಿಡಿಗುಡುತ್ತಲೇ ಪೇಶೆಂಟ್‌ನನ್ನು ಪರೀಕ್ಷಿಸಿ
ಡಾಕ್ಟರ್ "ಕಂಡೀಶನ್ ತುಂಬ ಸೀರಿಯಸ್ಸಾಗಿ
ನನ್ನಿಂದ ಸಾಧ್ಯವಿಲ್ಲ. ಬೇಗೆಲ್ಲಾದರೂ ಕರೆದುಕೊಂ
ಹೋಗಿ" ಎಂದಾಗ ಆ ಅರ್ಧ ರಾತ್ರಿಯ
ಹೋಗುವುದಾದರೂ ಎಲ್ಲಿಗೆ. ಸಾವಿತ್ರಮ
ಕಂಗಾಲು. ನೂರರ ಒಂದಷ್ಟು ನೋಟುಗಳನ
ಕೈಗಿತ್ತೆ. "ನೋಡೋಣ ಪ್ರಯತ್ನಿಸುವೆ" ಎಂ
ಡಾಕ್ಟರ್ ಒಂದು ಚೀಟಿಯಲ್ಲಿ ಏನೋ ಗೀಚಿ "
ಔಷಧಿಗಳನ್ನು ಬೇಗ ತನ್ನಿ" ಎಂದರು.

ನಿರಂತರವಾಗಿ ಇಪ್ಪತ್ತನಾಲ್ಕು ಗಂಟೆಯು
ತೆರೆದಿರುವ ಮೆಡಿಕಲ್ ಸ್ಟೋರ್ ಇರುವುದ
ಇಲ್ಲಿಗೆ ಒಂದು ಕಿಲೋಮೀಟರ್‌ಗೂ ಹೆ
ದೂರದಲ್ಲಿ. ಆಟೋದವನು ಯಾವಾಗಲೂ
ಹೊರಟು ಹೋಗಿದ್ದ. ಈಗ ನಡೆದು ಹೋಗ
ವಿಧಿಯಿಲ್ಲ. ನಿಧಾನಿಸುವಂತೆಯೂ ಇಲ್ಲ. ಅ
ಪೇಶೆಂಟ್ ಸ್ಥಿತಿ ಗಂಭೀರವಾಗಿದೆ. ಓಡಿದೆ, ಓಡಿ
ಓಡಿದೆ. ಅಂಗಡಿಯಾತನಿಗೂ ನಿದ್ದೆ. ಪಾಪ ಅವನ
ಮನುಷ್ಯನಲ್ಲವೇ. ಅಂದ ಮೇಲೆ ನಿದ್ದೆ ಮಾಡದಿದ್ದ
ಹೇಗೆ? ಕೂಗಿ ಎಬ್ಬಿಸಿದೆ. ಚೀಟಿ ನೋಡಿ
ಅವನೇನೋ ಕೊಟ್ಟ. ನಾನೆಷ್ಟೋ ಹಣ ಕೊ
ಒಂದೂ ನೆನಪಿಲ್ಲ.

ಬೆಳಗಿನ ಐದು ಗಂಟೆ ವೇಳೆಗೆ ಮಗುವಿ
ಅಳು ಧ್ವನಿ ಕೇಳಿಸಿದಾಗ ಸಾವಿತ್ರಮ್ಮನ ಮುಖದ

**ಆತ ತನ್ನ ಅನಾರೋಗ್ಯವನ್ನೂ ಮ
ಬೇರೆಯುವ ಕಷ್ಟದಲ್ಲಿ ಹಾಲುಗುಂ
ಸಹಾಯ ಪಡೆದಾಕೆಯ ಗಂಡ ಮಾರನೆಯ
ದಿನ ಬಂದು ಖರ್ಚು ವೆಚ್ಚಗಳ ಬಿಲ
ಕೇಳಿದ!**

ನಗು, ಆಕೆಗೆ ಏನೋ ಒಂದು ತರ ನೆಮ್ಮದಿ. ಎಲ್ಲ ಮುಗಿದ ಮೇಲೆ ಇಲ್ಲಿ ನನಗಿನ್ನೇನು ಕೆಲಸ. "ಮನೆಗೆ ಹೋಗಿ ಯಾರನ್ನಾದರೂ ಕಳುಹಿಸುವೆ" ಎಂದು ಸಾವಿತ್ರಮ್ಮನಿಗೆ ಹೇಳಿ ಕುಳಿತಿದ್ದವನು ಎದ್ದು ನಿಂತೆ. ಒಮ್ಮೆಲೇ ತಲೆ ಧಿಮ್ಮೆಂದಿತು. ಮೈಗೆ ಬಗ್ಗನೆ ಬೆಂಕಿ ಹತ್ತಿದಂತಾಯಿತು. ಕುಸಿದು



ಬಿದ್ದೆ.

ಪ್ರಯಾಸದಿಂದ ಕಣ್ಣು ತೆರೆದಾಗ ಎಡ ತೋಳು ಭಾರವಾದಂತೆ ಕಂಡಿತು. ಅತ್ತ ನೋಡಿದರೆ ಡ್ರಿಪ್ಸ್ ಇಳಿಯುತ್ತಿದೆ. ಸುತ್ತ ಆತ್ಮೀಯ ಗೆಳೆಯರೆಲ್ಲ ನಿಂತಿದ್ದಾರೆ. ನನಗೇನಾಗಿದೆ?

ಓಹ್ ಈಗ ನೆನಪಾಗುತ್ತಿದೆ. ನಿನ್ನೆ ರಾತ್ರಿ ಕಾಡುತ್ತಿದ್ದ ಮಲೇರಿಯಾ.

ಸಂಜೆಯ ವೇಳೆಗೆ ಸಾವಿತ್ರಮ್ಮನ ಮಗ ಬಂದ. ಬಂದವನು ನನ್ನ ಆರೋಗ್ಯವನ್ನು ಕುರಿತು ವಿಚಾರಿಸಲಿಲ್ಲ. ಥ್ಯಾಂಕ್ಸ್ ಕೂಡ ಹೇಳಲಿಲ್ಲ. ಅದು ನನಗೆ ಬೇಕಾಗಿಯೂ ಇರಲಿಲ್ಲ. ಕಡೆಗೂ ಅವನ ಬಾಯಿಯಿಂದ ಮಾತು ಹೊರಟಿತ್ತು.

"ನನ್ನ ಹೆಂಡತಿಗಾಗಿ ನೀವು ಎಷ್ಟು ಹಣ ಖರ್ಚು ಮಾಡಿದಿರೋ ಅದರ ಬಿಲ್ ಕೊಡಿ. ನಿಮ್ಮ ಹಣ ವಾಪಾಸು ಕೊಡುತ್ತೇನೆ."

ನಾನು ಅವನ ಮುಖವನ್ನೊಮ್ಮೆ ನೋಡಿ ನಸುನಕ್ಕೆ. ಮತ್ತೇನು ಮಾಡಲಿ, ಆಟೋದವನಿಗೆ ಕೊಟ್ಟ ಹಣಕ್ಕಾಗಲಿ, ಡಾಕ್ಟರಿಂದಾಗಲಿ, ಔಷಧಿ ಕೊಂಡಿದ್ದಕ್ಕಾಗಲಿ ನಾನು ಬಿಲ್ ಪಡೆದಿರಲಿಲ್ಲ.

ಧಾರಾವಾಹಿ—೨

ಆಪರೇಷನ್ ಹಿತೈಷಿ

ಕೆ. ವಿ. ರಾಜೇಶ್ವರಿ

'ಈ ಅಪ್ಪ, ಅಮ್ಮ, ಮದುವೆ ಮದುವೆ ಅಂತ ಏಕೆ ಹೀಗಾಡ್ತಾರೋ. ಪ್ರತಿದಿನ ಬೆಳಗಾದರೆ ಇವತ್ತಿಗೇನು ಅನ್ನೋ ಚಿಂತೆ. ಅಪ್ಪನಿಗೆ ಬರೋ ಸಂಬಳ .ಮನೆ ಬಾಡಿಗೆ, ಊಟ ತಿಂಡಿಗೂ ಸಾಕಾಗೋಲ್ಲ. ನಾನು ಪಿ.ಯು.ಸಿ. ಓದಿ ಮುಗಿಸಿದ ಮೇಲೆ ಎಲ್ಲಾದ್ರೂ ಕೆಲಸಕ್ಕೆ ಸೇರ್ತೀನಿ ಅಂತ ಬಡ್ಕೊಂಡೆ. ಆದರೆ ಅಪ್ಪ ಅಮ್ಮ ಕೇಳಬೇಕಲ್ಲ. ಹೆಣ್ಣು ಮಗಳನ್ನು ದುಡಿಮೆಗೆ ಕಳಿಸಿ ಉಣ್ಣೋಕ್ಕಿಂತ ಸಾಯೋದು ಮೇಲು. ನಾನು ಸತ್ತ ಮೇಲೆ ಆ ಕೆಲಸ ಮಾಡುವೆಯಂತೆ ಅಂತ ನನ್ನ ಬಾಯಿ ಕಟ್ಟಿ ಹಾಕಿದರು. ಈ ಕಾಲದಲ್ಲೂ ಅಪ್ಪನಂತಾವರು ಇದ್ದಾರೆ ಅಂದ್ರೆ ಆಶ್ಚರ್ಯವಾಗುತ್ತೆ. ಮನೆಯ ಕಷ್ಟವೆಲ್ಲ ಇವರಿಗ್ಯಾಕೆ ಗೊತ್ತಾಗೊಲ್ಲ. ನಾನು ದುಡಿಯಲಿಕ್ಕೆ ಹೋದ್ರೆ ಏನು ತಪ್ಪು? ಉಪವಾಸ ಇದ್ದರೂ ಸರಿಯೇ, ಹೆಣ್ಣು ಮಗಳು ಕೆಲಸಕ್ಕೆ ಹೋಗೋದು ಮಾತ್ರ ಬೇಡವಂತೆ. ಏನು ಬುದ್ದಿಗಳೋ, ಏನು ಜನರೋ' ರಜನಿ ಒಳಗೊಳಗೇ ಬೈದುಕೊಂಡಳು.

'ಹೋಗಲಿ ನನಗ್ಯಾಕೆ ಓದು, ನಾನು ಮನೆಯಲ್ಲೇ ಇರ್ತೀನಿ ಅಂದ್ರೆ ಅದಕ್ಕೂ ಒಪ್ಪೋಲ್ಲ ಏನು ತಂದೆ ತಾಯಿಗಳೋ, ಮಕ್ಕಳಿಗೆ ಯಾವ ವಿಷಯದಲ್ಲೂ ಸ್ವಾತಂತ್ರ್ಯ ಕೊಡೋಲ್ಲ' ಮತ್ತಷ್ಟು ಬೈದುಕೊಂಡಳು.

ಅಷ್ಟರಲ್ಲಿ "ರಜನಿ, ರಜನಿ" ಎಂದು ಕೂಗಿಕೊಂಡು ಅವಳ ಆತ್ಮೀಯ ಸ್ನೇಹಿತೆ ಸುನಂದ ಬಂದಳು.

ಸ್ನೇಹಿತೆಯ ಧ್ವನಿಯನ್ನು ಕೇಳಿ ತುಂಬ ಖುಶಿಯಿಂದ. ಹೊರಗೆ ಬಂದಳು ರಜನಿ "ಬಾರೇ ಸುನಿ" ಎಂದು ಆಹ್ವಾನಿಸುತ್ತ.

ಸುನಂದ ಒಳಗೆ ಬಂದಳು.

"ಬಾರೇ ಅಡುಗೆ ಮನೆಯಲ್ಲಿ ಕೂತ್ಕೊಂಡು ಮಾತಾಡೋಣ."

ಸುನಂದ ಅಡುಗೆ ಮನೆಗೆ ಬಂದಳು.

"ಸ್ವಲ್ಪ ಕಾಫೀ ಕುಡೀತಿಯೇನೇ ಸುನೀ?"

"ಬೇಡವೇ, ಈಗ ತಾನೇ ಕುಡಿದು ಬಂದೆ."

"ಇರಲಿ, ಒಂದು ಗುಟುಕು ಕುಡಿಯೇ" ಎಂದು ಗ್ಲಾಸಿನಲ್ಲಿ ಒಂದು ಚೂರು ಕಾಫಿ ಹಾಕಿ ಕೊಟ್ಟಳು.

ಅಡುಗೆ ಮನೆಯ ಒಂದು ಮೂಲೆಯಲ್ಲಿ ಹಾಕಿದ್ದ ಪುಸ್ತಕಗಳನ್ನು ನೋಡುತ್ತ "ಏನೇ, ಆಗಲೇ ಪರೀಕ್ಷೆಗೆ ಓದೋಕೆ ಶುರು ಮಾಡಿಬಿಟ್ಟೆಯಾ?" ಎಂದಳು ಸುನೀ.

"ಹುಂ, ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಮಾಡೋ ನಾನು ಮುಂಚೆ ಓದಿದ್ರೆ ಆಯ್ತು, ರ್‍ಯಾಂಕು ಬರೋದೊಂದು ಕಡಿಮೆ. ಮನೇಲಿ ಇರೋದೇ ಒಂದು ಸಣ್ಣ ಟೇಬಲ್ಲು. ನಾನು, ಇಲ್ಲದಿದ್ದರೆ ಶೀನು ಇಬ್ಬರಲ್ಲಿ ಒಬ್ಬರು ಓದ್ಕೋಬೇಕು. ನಿನ್ನೆ ಎಲ್ಲ ಶೀನು ತನ್ನ ಪುಸ್ತಕಗಳೆಲ್ಲ ಹರಡಿಕೊಂಡು ಬರ್‍ಕೋತಿದ್ದ. ಅವನು ನನ್ನ ಪುಸ್ತಕಗಳನ್ನ ತಂದು ಇಲ್ಲಿ ಹಾಕಿದ್ದಾನೆ."

"ಅಂದ ಹಾಗೆ ಬಿ.ಎಸ್‌ಸಿ. ಮುಗಿದ

ಮೇಲೆ ಏನೇ ಮಾಡ್ತೀಯಾ ರಜನಿ?''

"ನಂಗೇನೋ ಯಾವುದಾದ್ರೂ ಕೆಲಸಕ್ಕೆ ಸೇರ್ಕೊಂಡು, ಮನೆಗೆ ಸ್ವಲ್ಪ ಸಹಾಯ ಮಾಡಬೇಕು ಅಂತ ಆಸೆ. ಆದರೆ ಅಪ್ಪನಂತ ಹಿಟ್ಲರ್‌ಗಳು ಇರೋವರೆಗೂ ನಮ್ಮ ಮಾತು ಯಾವುದು ತಾನೇ ನಡೆಯುತ್ತೆ ಹೇಳು. ಅವರು ಜೀವಂತವಾಗಿ ಇರೋವರೆಗೂ ಹೆಣ್ಣು ಮಗಳನ್ನು ಸಂಪಾದನೆಗೆ ಕಳಿಸೋಲ್ಲವಂತೆ. ನಾನು ಸತ್ತ ಮೇಲೆ ಬೇಕಾದ್ರೆ ಕೆಲಸಕ್ಕೆ ಸೇರು ಅಂತ ಅಪ್ಪ ಹೇಳಿದ ಮೇಲೆ ಸುಮ್ಮನಾಗಿಬಿಟ್ಟೆ. ಹೆಣ್ಣುಮಕ್ಕಳ ಸಂಪಾದನೆ ಅಂದ್ರೆ ಇವರ್‍ಯಾಕೆ ಇಷ್ಟು ಕೀಳಾಗಿ ನೋಡ್ತಾರೋ ನಂಗೊತ್ತಿಲ್ಲ.'' ತಂದೆಗೆ ತಮ್ಮ ಸಂಭಾಷಣೆ ಕೇಳದ ಹಾಗೆ ಮೆಲ್ಲಗೆ ಹೇಳಿದಳು ರಜನಿ.

"ನಮ್ಮ ದೇಶದ ತಂದೆ ತಾಯಿಗಳಿಗೆಲ್ಲ ಇದೊಂದು ತರಾ ರೋಗ ಕಣೇ. ಇವರಿಗೆ ಹೆಣ್ಣು ಮಗಳು ಸಂಪಾದಿಸಿದ್ದು ತಿಂದರೆ ಅಲರ್ಜಿ. ಅದೇ ಗಂಡು ಮಗ ಸಂಪಾದಿಸೋದಾದ್ರೆ ತಲೆ ಮೇಲೆ ವಜ್ರದ ಕಿರೀಟ ಇಟ್ಟ ಹಾಗೆ. ಇವರು ಹೀಗೆ ಮಾಡೋ ಭೇದಾನೆ ನಮ್ಮಲ್ಲಿ ಗಂಡು ಹೆಣ್ಣಿನ ಅಸಮಾನತೆಗೆ ಕಾರಣವಾಗಿರೋದು.''

"ಇಂತಹವರೆಲ್ಲ ಇರೋವರೆಗೂ ಹೆಣ್ಣಿನ ಉದ್ಧಾರ ಸಾಧ್ಯವಿಲ್ಲ ಕಣೇ.''

"ಇಂತಹವರನ್ನೆಲ್ಲ ತಿದ್ದೋದಕ್ಕೆ ಅದೆಷ್ಟು ಜನ ಮಹಾತ್ಮಾ ಗಾಂಧಿಗಳು, ವಿವೇಕಾನಂದರು, ರಾಜಾರಾಂ ಮೋಹನರಾಯರಂತಹವರು ಹುಟ್ಟಿ ಬರಬೇಕೋ ಕಾಣೆ'' ಎಂದಳು ಸುನಂದ ಬೇಸರದಿಂದ.

"ಅಂತಹವರು ಹುಟ್ಟಿ ಬಂದ್ರೂ ಇಂತಹವರನ್ನ ತಿದ್ದೋಕೆ ಶತಶತಮಾನಗಳು ಬೇಕು. ಜಗತ್ತು ಎಷ್ಟು ಮುಂದುವರೀತಾ ಇದೆ, ವಿಜ್ಞಾನ ಎಷ್ಟು ಬೆಳೀತಾ ಇದೆ ಅಂತ ನೋಡ್ತಾ ಇದ್ರೂ ಇವರ ಬುದ್ಧಿಗಳು ಮಾತ್ರ ಶತಮಾನಗಳ ಹಿಂದಕ್ಕೇ ಓಡ್ತಾ ಇದೆ.''


"ಇದನ್ನೆಲ್ಲ ಮಾತಾಡ್ತಾ ಇದ್ರೆ ತಲೆ ಕೆಡುತ್ತೆ ಅಷ್ಟೇ. ಉಪಯೋಗವಂತೂ ಒಂದು ಚೂರೂ ಇಲ್ಲ.''

"ನಾನು ಮಾತ್ರ ನನ್ನ ಪ್ರಯತ್ನವನ್ನ ಬಿಡೋದೇ ಇಲ್ಲ. ಬಿ.ಎಸ್‌ಸಿ. ಮುಗಿದ ಮೇಲೆ ಹೇಗಾದ್ರೂ ಅಪ್ಪನ ಮನ ಒಲಿಸಿ ಕೆಲಸಕ್ಕೆ ಸೇರಲೇಬೇಕು ಅಂತ ಮನಸ್ಸು ಮಾಡಿದ್ದೀನಿ. ಅಪ್ಪ ಸುಮ್ಮನೆ ಮದುವೆ ಮದುವೆ ಅಂತ ಹಾರಾಡ್ತಾರೆ. ಈ ಕಾಲದಲ್ಲಿ ಸಾವಿರಾರು ರೂಪಾಯಿ ವರದಕ್ಷಿಣೆ ಹಣ ಸುರ್‍ಯೋವ್ರ ಮದುವೆಗಳೇ ಕಷ್ಟವಾಗಿರುವಾಗ, ಇನ್ನು ನಮ್ಮಂತಹ ಬಡವರು ಮದುವೆ ಬಗ್ಗೆ ಕನಸಿನಲ್ಲೂ ಯೋಚಿಸಬಾರದ ವಿಷಯ.''

"ಆದರೂ ನಿಮ್ಮಪ್ಪನಿಗೆ ಒಂದು ಭ್ರಾಂತು ಇದೆಯಲ್ಲ.''

"ಯಾರಾದ್ರೂ, ಒಂದು ದೇವಸ್ಥಾನದ ಪೂಜಾರಿ ಆದ್ರೂ ಸರಿಯೇ, ನನ್ನನ್ನ ಕೊಟ್ಟು ಮದುವೆ ಮಾಡಿಕೊಟ್ಟುಬಿಡೋಕೂ ಅಪ್ಪ ತಯಾರು. ಒಟ್ಟಿನಲ್ಲಿ ನನ್ನ ಮದುವೆಯಾದರೆ ಅವರ ಜವಾಬ್ದಾರಿ ಕಳೆಯುತ್ತೆ ಅನ್ನೋ ಭ್ರಮೆ ಅವರದು.''

"ಅಲ್ಲವೇ, ಪೂಜಾರಿ ಕೂಡ ಸೂಟು, ಬೂಟು, ವಾಚು, ಉಂಗುರ, ಐದೋ ಹತ್ತೋ ಸಾವಿರ ವರದಕ್ಷಿಣೆ, ಹತ್ತೋ ಹದಿನೈದೂ ಸವರನ್ ಬಂಗಾರ, ಚೆನ್ನಾದ ಮದುವೆ ಇಷ್ಟೆಲ್ಲ ಬಯಸ್ತಾನೆ ಅಂತ ನಿಮ್ಮಪ್ಪನಿಗೆ ಗೊತ್ತಿಲ್ವಾ?''



"ಗೊತ್ತಿಲ್ಲದೆ ಏನು, ವರದಕ್ಷಿಣೆ ತಗೊಳ್ಳದೇ ಇರೋ ಮಹಾನುಭಾವರೂ ಈ ಪ್ರಪಂಚದಲ್ಲಿ ಸಾಕಷ್ಟಿದ್ದಾರೆ. ಅಂತಹವರಲ್ಲಿ ಯಾರಾದ್ರೂ ಒಬ್ಬರು ಸಿಗದೇ ಹೋಗ್ತಾರಾ ಅಂತ ಅಪ್ಪನ ಹಗಲುಗನಸು."

"...."

"ಅವರಿಗೆ ನಾವು ಏನು ಹೇಳಿದ್ರೂ ಅರ್ಥ ಆಗೋಲ್ಲ ಅಂತ ಈಗ ಹೇಳೋದನ್ನು ಬಿಟ್ಟಿದ್ದೀನಿ. ಏನಾದ್ರೂ ಹೇಳೋದಕ್ಕೆ ಹೋದರೆ ಕಾಲೇಜಿನಲ್ಲಿ ನೀನು ಕಲಿತು ಬಂದಿರೋದು, ಹಿರಿಯರಿಗೆ ಎದುರುತ್ತರ ಕೊಡೋದನ್ನಾ ಅಂತ ಮೂದಲಿಸ್ತಾರೆ. ಅದಕ್ಕೇ ಬಾಯಿ ಮುಚ್ಚಿಕೊಂಡು ಇರೋದೇ ಕ್ಷೇಮ ಅಂತ ಏನೂ ಮಾತಾಡೋಲ್ಲ."

"ಹೋಗಲಿ ಬಿಡು, ಹೇಗೂ ನಮಗೆ ಮದುವೆ ಮಾಡಿ ಕಳಿಸೋದು ತಪ್ಪಲ್ಲ. ಅಲ್ಲಿಯವರೆಗೂ ಅವರ ಮನಸ್ಸಿಗೇಕೆ ನೋವುಂಟು ಮಾಡಬೇಕು."

"ಅಪ್ಪ ಇರೋದು ಪ್ರೈವೇಟ್ ಫರ್ಮ್‌ನ ಕೆಲಸದಲ್ಲಿ. ಇದ್ದಬದ್ದ ಹಣ, ಯಾವ ಯಾವ ಮೂಲದಿಂದ ಹಣ ಬರುತ್ತೋ ಆದನ್ನೆಲ್ಲ ಸಾಲ ಅಂತ ತೆಗೆದು ಅಕ್ಕನ ಮದುವೆ ಮಾಡಿದರು. ಈಗ ಬರೋ ಸಂಬಳದಲ್ಲಿ ಅರ್ಧ ಸಾಲಗಳಿಗೇ ಹೋಗುತ್ತೆ."

"ಈಗಂತೂ ಹದಿನೈದು ಇಪ್ಪತ್ತು ದಿನಗಳಿಂದ ಆಫೀಸಿಗೆ ಕೂಡ ಹೋಗಿಲ್ಲ ಅಲ್ವಾ?"

"ಹೂಂ, ರಜೆ ಇಲ್ಲದೆ ಇರೋದ್ರಿಂದ ಸಂಬಳವೂ ಬರೋಲ್ವಂತೆ, ಅಪ್ಪ ಹೇಳ್ತಾ ಇದ್ದರು. ಹಾಗಾಗಿ ಈ ತಿಂಗಳು ಮನೆ ಬಾಡಿಗೆ ಕೂಡ ಕೊಟ್ಟಿಲ್ಲ. ಇದರ ಜೊತೆಗೆ ಮುಂದಿನ ತಿಂಗಳು ಅಕ್ಕ ಎರಡನೇ ಹೆರಿಗೆಗೆ ಅಂತ ತವರಿಗೆ ಬರ್ತಾಳಂತೆ. ಮೊನ್ನೆ ಪತ್ರ ಬಂತು. ಪತ್ರ ಬಂದಾಗಲಿಂದ ಅಪ್ಪ ಅಮ್ಮ ಒಂದೇ ಯೋಚನೆ ಮಾಡ್ತಿದ್ದಾರೆ, ಈ ಖರ್ಚನ್ನ ಹೇಗೆ ನಿಭಾಯಿಸೋದು ಅಂತ."

"ನಿಮ್ಮ ಅಕ್ಕನಿಗೆ ಅಪ್ಪನ ಕಷ್ಟ ಗೊತ್ತಾಗಬೇಡವೇನೇ?"

"ಹುಂ ಇವರು ಹೇಳಿದ್ರೆ ತಾನೇ, ತನ್ನ ಯಾರೊಬ್ಬರ ಮುಂದೆ ಹೇಳ್ಕೋಳ್ಳೋದು ಅಪ್ಪ ಇಷ್ಟವಿಲ್ಲ. ಸಾಲ ಸೋಲ ಮಾಡಿಯಾದ ತಮ್ಮ ಮರ್ಯಾದೆ ಉಳಿಸ್ಕೋತಾರೆ. ಅವ ಕೊರಳಲ್ಲಿ ಮೂರು ಸವರನ್ ಚೈನ್ ಒಂದಿದೆ. ಬರೋದ್ರಿಂದ ಆದರ ಖರ್ಚಿಗೆ ದಾರಿಯಾಗ ಅಷ್ಟೇ." ವಿಷಾದದಿಂದ ಹೇಳಿದಳು ರಜನಿ.

"ಥೂ ಈ ಹೆಂಗಸರೂ ಹಾಗೇ ಇದ ಬಿಡು. ಒಂಚೂರೂ ಪ್ರತಿಭಟಿಸೋಲ್ಲ. ಗ ಕೇಳಿದ ತಕ್ಷಣ ತಾಳಿ ಕೂಡ ತೆಗೆದುಕೊ ಬಿಡೋಕೆ ತಯಾರಾಗಿರ್ತಾರೆ. ಇನ್ನು ನಮ್ಮಂತಹ ಏನು ಮಾತಾಡಿ ತಾನೇ ಏನು ಪ್ರಯೋ ಹೇಳು." ಸುನಂದ ಕೂಡ ವಿಷಾದದಿಂದ ಹೇಳಿದಳು.

"ಏನು ಜೀವನವೋ, ಏನು ಕತೆಯೋ ಬೇ ಬಂದುಬಿಟ್ಟಿದೆ." ರಜನಿಯೆಂದಳು ಬೇಸರದಿ

"ಬೇಸರ ಯಾಕೆ, ಇನ್ನೂ ಮದುವೆಯಾಗ್ಬೇ ಮಕ್ಕಳಾಗ್ಬೇಕು." ಜೋರಾಗಿ ನಗುತ್ತ ಹೇಳಿದ ಸುನಂದ.

"ಷ್" ಅವಳ ಬಾಯನ್ನು ಬೆರಳುಗಳಿ ಮುಚ್ಚುತ್ತ "ಸದ್ಯ ಮಹರಾಯ್ತಿ, ಮೆತ್ತಗೆ ನ ಆಮೇಲೆ ನಿನ್ನ ನಗುವಿನ ಕಾರಣ ಕೇಳಿ ಫ ಬ್ರೈನ್ ವಾಷ್ ಮಾಡಿಬಿಟ್ಟಾರು" ಎಂದಳು

"ಅಲ್ಲಾ ಹೇ, ನನಗಿನ್ನೊಂದು ಅನುಮಾ

"ಏನದು?"

"ಅಲ್ಲವೇ ನಿಮ್ಮಪ್ಪ ಕಾಲಿನ ಮೂಳೆ ಫ್ರಾ ಆಯ್ತೂಂತ ಬ್ಯಾಂಡೇಜ್ ಹಾಕ್ಕೊಂ ಮಲಗಿದ್ದಾರೆ. ಆ ಶ್ರೀಮಂತ ಹಣ್ಣು ಗಿ ತಂದುಕೊಟ್ಟು ನೋಡ್ಕೊಂಡು ಹೋಗ್ತಾನೆ. ಇ ಬದಲು ಕೋರ್ಟಿನಲ್ಲಿ ಒಂದಷ್ಟು ಕಾಂಪೆನ್ಸೇಶ ಟ್ರೈ ಮಾಡಬಹುದಿತ್ತಲ್ಲೇ. ಸಂಬಳ ಇ ಬ್ಯಾಂಡೇಜ್ ಹಾಕ್ಕೊಂಡು. ಮೂರು ತಿಂ ಮಲಗಿದ್ರೆ ನಿಮ್ಮ ಸಂಸಾರ ನಡೆಯೋದು ಹೇಗ



"ನಾನೆಷ್ಟೋ ಹೇಳ್ದೆ ಕಣೆ. ಆದರೆ ನನ್ನ ಮಾತು ಯಾರು ಕೇಳ್ತಾರೆ ಹೇಳು. ಅಪ್ಪನ ಬುದ್ಧಿ ನಿನಗೇ ಗೊತ್ತಲ್ಲ. ಸಾಯೋ ಸಮಯದಲ್ಲಿ ಕೂಡ ಅವರು ಒಬ್ಬರಿಂದ ಏನೂ ಅಪೇಕ್ಷಿಸೋಲ್ಲ. ತಮ್ಮ ಕೈಯಲ್ಲಾದ್ರೆ ಬೇರೆಯವರಿಗೆ ಕೊಡೋದೇ ಹೊರತು ತೆಗೆದುಕೊಂಡು ಗೊತ್ತಿಲ್ಲ."

"...."

"ಇನ್ನು ಆ ಶ್ರೀಮಂತನೋ ಅಪ್ಪನಿಗೆ ತನ್ನ ಮಾತಿನಿಂದಲೇ ಮೋಡಿ ಮಾಡಿಬಿಟ್ಟಿದ್ದಾನೆ ಅಂತ ಕಾಣುತ್ತೆ. ಅಪ್ಪನ ಕಾಲಿನ ಮೂಳೆ ಮುರಿದದ್ದಕ್ಕೆ, ಬೇರೆ ಕಡೆ ಗಾಯಗಳಾಗಿದ್ದಕ್ಕೆ ತಾನೇ ಟ್ರೀಟ್‌ಮೆಂಟ್ ಕೊಡಿಸ್ತಾ ಇದ್ದಾನೆ. ಬೇಕಾದ ಔಷಧಿಗಳನ್ನೆಲ್ಲ ಕೊಡಿಸ್ತಾ ಇದ್ದಾನೆ. ಪ್ರತಿದಿನ ಬಂದು ನೋಡ್ಕೊಂಡು ಹೋಗ್ತಾನೆ. ಬರೋವಾಗೆಲ್ಲ ಹಣ್ಣು ಹಂಪಲು ತಂದುಕೊಡ್ತಾನೆ. ಇದರಿಂದ ಅವನು ತುಂಬ ಒಳ್ಳೆಯವನು ಅನ್ನೋ ಭಾವನೆ ಅಪ್ಪನಿಗೆ ಬಂದುಬಿಟ್ಟಿದೆ. ಇಂತಾವನನ್ನು ಅಪ್ಪ ಕೋರ್ಟಿಗೆಳೀತಾರಾ? ಬೇಕಾದ್ರೆ ಆತ ಆ್ಯಕ್ಸಿಡೆಂಟ್ ಮಾಡಲೇ ಇಲ್ಲ ಅಂತ ಬೇಕಾದ್ರೂ ಹೇಳಿಬಿಡ್ತಾರೆ ಆತನನ್ನ ಉಳಿಸೋದಕ್ಕೋಸ್ಕರ."

"ನಿಮ್ಮ ಮನೆಯ ಪರಿಸ್ಥಿತಿ ಆತನಿಗೆ ಹೇಳಿದ್ರೆ ಏನಾದ್ರೂ ಹಣದ ಸಹಾಯಾನೂ ಮಾಡಬಹುದು ಆತ."

"ನಾನು ರಜೆಯಲ್ಲಿದ್ದೀನಿ, ಸಂಬಳ ಬರೋಲ್ಲ ಅನ್ನೋ ವಿಷಯ ಕೂಡ ಅಪ್ಪ ಆತನಿಗೆ ಹೇಳ್ಕೊಂಡಿಲ್ಲ ಅಂದ ಮೇಲೆ ಹಣದ ಸಹಾಯ ಕೇಳ್ತಾರಾ? ಬದಲಿಗೆ ನಮಗೆ ಯಾವುದಕ್ಕೂ ತೊಂದರೆಯಿಲ್ಲ, ನೀವೇನೂ ಆತಂಕ ಪಟ್ಕೋಬೇಡಿ ಅಂತ ಬಂದಾಗಲೆಲ್ಲ ಹೇಳ್ತಾ ಇರ್ತಾರೆ. ಇದರ ಜೊತೆಗೆ ಆತನಿಗೆ ಬೇಕಾದಷ್ಟು ಫ್ಯಾಕ್ಟರಿಗಳು, ವ್ಯಾಪಾರ ವಹಿವಾಟು ಇದೆಯಂತೆ. ಅಪ್ಪನ ಹತ್ತಿರ ಕೂತು ಒಂದು ಐದು ನಿಮಿಷ ಮಾತಾಡೋಕೂ ಪುರಸೊತ್ತಿಲ್ಲ. ಬರ್ತಾರೆ, ಯೋಗಕ್ಷೇಮ ವಿಚಾರಿಸ್ತಾರೆ. ಏನಾದ್ರೂ ತೊಂದರೆ ಇದ್ದರೆ ಹೇಳಿ, ಯಾವುದಕ್ಕೂ ಸಂಕೋಚ ಪಟ್ಕೋ ಅಂತ ಹೇಳ್ತಾನೆ. ಅಂತಾದ್ದೇನೂ ಇಲ್ಲ ಅಂತ ಹೇಳಿಬಿಡ್ತಾರೆ. ಸರಿ ಆತ ಹೊರಟುಹೋಗ ಒಂದು ವೇಳೆ ಹಣದ ತೊಂದರೆ ಇದೆ ಅಂದ್ರೆ ಸಹಾಯ ಮಾಡಿದ್ರೂ ಮಾಡ್ತಾನೇನೋ."

"ಹೋಗಲಿ ನೀನಾದ್ರೂ ಹೇಳಿದ್ರೆ ಆತನಿ

"ನಾನಾ" ಎಂದು ಎದೆಯ ಮೇಲ ಇಟ್ಟುಕೊಂಡು "ಸದ್ಯ ನಾನು ಅಂತಹ ಕ ಮಾಡೋಲ್ಲ. ಆಮೇಲೆ ಅಪ್ಪ ಇನ್ನೇನೂ ಒಂದೋ ನನ್ನನ್ನು ಸಾಯಿಸ್ತಾರೆ, ಇಲ್ಲ ತ ಸಾಯ್ತಾರೆ. ಇವೆಲ್ಲ ಯಾಕೆ ಬೇಕು."

"ಒಟ್ಟಿನಲ್ಲಿ ಈ ಹಿರಿಯರನ್ನು ತಿದ್ ಅವರನ್ನ ಹುಟ್ಟಿಸಿದ ಆ ಬ್ರಹ್ಮನಿಂದಲೂ ಸಾಧ್ಯ ಕಣೇ. ಇವರು ಯಾರು ಹೇಳಿದ ಮಾತೂ ಕೇಳೋ ತಾವೂ ಯೋಚನೆ ಮಾಡೋಲ್ಲ ಅಲ್ಲವಾ?"

"ಸಾವಿರ ಸಾರಿ ಹೇಳು ಆ ಮಾತು."

"ಎಷ್ಟು ಹೊತ್ತು ಮಾತಾಡಿದ್ರೂ ಇ ನಾನು ಹೋಗಿ ಬರಲೇನೇ, ಆಮೇಲೆ ಮನೆಯ ಒಂದು ಕೋರ್ಟ್ ಮಾರ್ಷಲ್ ಎದುರಿಸಬೇಕಾಗ ಕತ್ತಲಾಗೋದರ ಒಳಗೆ ಮನೆಗೆ ಯಾಕೆ ಬರಲ ಅಂತ" ಎಂದಳು ಸುನಂದ ನಗುತ್ತ.


ರಜನಿಯೂ ನಗುತ್ತ "ಸರಿ ಹೋಗಿ ನಾವೆಲ್ಲರೂ ಒಂದಲ್ಲ ಒಂದು ರೀತಿ ಇವರ ಕೈ ಕ ಸಿಕ್ಕಿಕೊಂಡು, ಸ್ವಾತಂತ್ರ್ಯ ಕಳ್ಕೊಂಡು, ಯಾವುದ ಧೈರ್ಯವಿಲ್ಲದೆ ನರಳ್ತಿರೋವ್ರು ತಾನೇ" ಎಂದ

ಅವಳು ಹೊರಡುವ ಹೊತ್ತಿನಲ್ಲಿ ರಜನಿ ತಾಯಿ ಲಲಿತಮ್ಮ ಬಂದರು.

"ಒಂದ್ನಿಮಿಷ ಇರೇ, ಕುಂಕುಮ ಕೊಡ್ತಿ ಆಮೇಲೆ ಅಮ್ಮ ನೋಡಿದ್ರೆ ಬೈತಾರೆ. ಮುಸ್ಸ ಹೊತ್ತು ಮುತ್ತೈದೆಗೆ ಕುಂಕುಮ ಕೊಡಲಿಲ್ಲ ಅಂ ಎಂದು ಸುನಂದಳಿಗೆ ಮಾತ್ರ ಕೇಳುವಂತೆ ಗೊ ಒಳಗೆ ಹೋದಳು.

ಸುನಂದ ಲಲಿತಮ್ಮನಿಗೆ ನಮಸ ಮಾಡಿದಳು.

(ಸಶ





ಕೆ. ಎ. ಸುಧಾಮಣಿ
ಮಧುವನಹಳ್ಳಿ


ಪ್ರತಿಯೊಂದೂ ಹತ್ತು ರೂಪಾಯಿ ಬಹುಮಾನ ಪಡೆದಿದೆ

ರಂಗೋಲಿ

ಸೂಚನೆ

ರಂಗೋಲಿ ಚಿತ್ರಗಳನ್ನು ಕಪ್ಪು ಶಾಯಿ ಅಥವಾ ಪೆನ್ಸಿಲ್‌ಗಳಲ್ಲಿ ಮಾತ್ರ ಬರೆಯಿರಿ. ನೀಲಿ ಶಾಯಿಯಲ್ಲಿ ಬರೆಯಬೇಡಿ.

ರಂಗೋಲಿ ಚಿತ್ರಗಳೊಂದಿಗೆ ನಿಮ್ಮ ಪಾಸ್ ಪೋರ್ಟ್ ಸೈಜಿನ ಕಪ್ಪು ಬಿಳುಪು ಛಾಯಾಚಿತ್ರವನ್ನು ಕಳುಹಿಸಲು ಮರೆಯದಿರಿ.





ಎಂ. ಜಯಮ್ಮ
ಬೆಂಗಳೂರು

ಧಾರಾವಾಹಿ–೯

ಅಂತಿಮ ಅಧ್ಯಾಯ

ತೆಲುಗು ಮೂಲ :
ಕೊನಕಂಚಿ
ಲಕ್ಷ್ಮೀನರಸಿಂಹರಾವ್

ಕನ್ನಡಕ್ಕೆ :
ಎಂ. ಎಲ್.
ರಾಘವೇಂದ್ರರಾವ್

"ಆಫ್‌ಕೋರ್ಸ್. ಆ ಮನುಷ್ಯನ್ನ ನೀವು ಪತ್ತೆ ಹಚ್ಚಿದ್ದೀರಾ?"

"ಇಲ್ಲ, ಆದರೆ ಒಂದು ತಿಂಗಳಿನಲ್ಲಿ ನಾನು ಆತನನ್ನು ಎಲ್ಲಿದ್ದರೂ ಪತ್ತೆ ಮಾಡ್ತಲ್ಲೆ ಅಂತ್ಲೇ ನನ್ನ ನಂಬಿಕೆ. ನಂಬಿಕೆ ಏನು ಖಂಡಿತ ಪತ್ತೆ ಮಾಡ್ತೀನಿ. ಆದರೆ ಇದು ಹೇಳಿ ಅದರಿಂದ ಏನಾದರೂ ಪ್ರಯೋಜನ ಇದೇ ಅಂತೀರಾ?"

"ಖಂಡಿತವಾಗಲೂ. ಆಕೆಗೆ ನಾನು ಮಾಡದ ಚಿಕಿತ್ಸೆ ಅಂತೂ ಇಲ್ಲ. ಮೋಡ್ ಆಫ್ ಟ್ರೀಟ್‌ಮೆಂಟ್ ಬದಲಾಯಿಸುತ್ತ ಎಲ್ಲ ರೀತಿಯ ಪ್ರಯೋಗಗಳನ್ನು ಮಾಡಿದೆ. ಆದರೆ ಆಕೆ ಗಂಡನನ್ನು ಆಕೆ ಎದುರು ನಿಲ್ಲಿಸಿದ್ದು ಒಂದೇ ಮಾಡಲಿಲ್ಲ. ಅದೊಂದನ್ನು ಕೂಡ ಮಾಡಿ ಆಗಲೂ ಕೂಡ ಆಕೆ ನಮ್ಮ ಲೋಕಕ್ಕೆ ಬಾರದಿದ್ದರೆ ಆಕೆ ಇನ್ನು ಜೀವನದಲ್ಲಿ ನಮ್ಮ ಮನುಷ್ಯಳಾಗಲಾರಳು."

ಕ್ಷಣ ಕಾಲ ಭಾರವಾದ ನಿಶ್ಶಬ್ದ, ದೂರವಾಣಿ ತಂತಿಯಂತೆ.

"ಆಲ್‌ರೈಟ್. ಈ ಕಡೇ ಪ್ರಯೋಗ ಕೂಡ ಮಾಡೋಣ. ಲೆಟ್ ವಿ ಬೆಸ್ಟ್ ಆಫ್ ದಿ ಪೂರ್ ವರ್ಷಾಸ್ ಫೇಟ್. ಬೈ ಡಾಕ್ಟರ್, ಒನ್ಸ್ ಎಗೇನ್ ಸಾರಿ" ಎನ್ನುತ್ತ ಫೋನ್ ಇಟ್ಟ ಕುಮಾರ್.

ಸರಿಯಾಗಿ ಅದೇ ಸಮಯದಲ್ಲಿ ಹಾಸಿಗೆ ಮೇಲೆ ಮಲಗಿದ್ದ ಸುಚರಿತ ಈ ಹಾಸ್ಪಿಟಲ್‌ನಿಂದ ಓಡಿಹೋಗುವುದು ಹೇಗೆ ಅಂತ ಯೋಚಿಸುತ್ತಿದ್ದಾಳೆ.

ಇಲ್ಲಿ ಕುಮಾರ್, ರಾಮರಾವ್‌ಗೆ ತಿಳಿಯದ ವಿಷಯ ಒಂದಿದೆ. ಅದು ಸುಚರಿತ ಎಂದೋ ಗುಣಮುಖಳಾಗಿ ಮಾಮೂಲು ಮನುಷ್ಯ ಳಾಗಿದ್ದಾಳೆ ಎಂದು.

ಒಂದು ಮೆಂಟಲ್ ಪೇಶೆಂಟ್ ಮೆಂಟಲ್ ಪೇಶೆಂಟಾಗಿ ಇದ್ದರೇನೇ ಡಾಕ್ಟರ್‌ಗಳು ಚಿಕಿತ್ಸೆ ಮಾಡಿ ಅವಳನ್ನು ಮಾಮೂಲು ಮನುಷ್ಯಳನ್ನಾಗಿ ಮಾಡುವುದಕ್ಕೆ ಅವಕಾಶವಿದೆ. ಆದರೆ ಒಬ್ಬ ಆರೋಗ್ಯವಂತ ವ್ಯಕ್ತಿ ಮೆಂಟಲ್ ಪೇಶೆಂಟಾಗಿ ನಟಿಸುತ್ತಿದ್ದರೆ ಆ ವ್ಯಕ್ತಿಯನ್ನು ಆ ದೇವರು ಕೂಡ ಮಾಮೂಲು ಮನುಷ್ಯನನ್ನಾಗಿ ಮಾಡಲಾರ.

ಡಾ. ರಾಮರಾವ್ ಚಿಕಿತ್ಸೆಯ ಫಲವಾಗಿ ಅವಳು ಎಂದೋ ಮಾಮೂಲು ಮನುಷ್ಯ ಳಾಗಿದ್ದಾಳೆ; ಬಹಳ ದಿನಗಳ ಹಿಂದೆಯೇ.

ಈಗ ಅವಳು ಇನ್ನೂ ಉನ್ಮಾದದಲ್ಲಿ ಇರೋ ಹಾಗೆ, ಹುಚ್ಚಿಯಂತೆ ನಟಿಸುತ್ತಿದ್ದಾಳೆ. ಈ ವಿಷಯ ಆ ಡಾಕ್ಟರ್‌ಗಳಿಬ್ಬರಿಗೂ ಗೊತ್ತಿಲ್ಲ.

ಅವಳನ್ನು ಇನ್ನೂ ಹುಚ್ಚಿಯನ್ನಾಗಿ ಭಾವಿಸುತ್ತ ರಾಮರಾವ್ ಬಳಸುತ್ತಿರುವ ಮಾತ್ರೆಗಳು

ಚುಚ್ಚುಮದ್ದುಗಳು ಮಾಮೂಲು ಮನುಷ್ಯರಿಗೆ ಉಪಯೋಗಿಸಿದರೆ ಅವರಿಗೆ ಆ ಔಷಧಿಗಳು ವಿಷಕ್ಕಿಂತಲೂ ಅಪಾಯಕಾರಿಯಾಗಿ ಕೆಲಸ ಮಾಡುತ್ತದೆ.

ಆದರೆ ಸುಚರಿತಳ ಮೇಲೆ ಇದರ ಪ್ರಭಾವ ಬೀರದಿರುವುದು ನಿಜಕ್ಕೂ ವಿಚಿತ್ರವೇ.

ಗುರುದಾಸ್ ಮನೆ ಮುಂದಣ ಅಂಗಳ.

ಗುರುದಾಸ್ ಮನೆ ಎದುರಿನಲ್ಲಿ ಒಂದು ಕಿಲೋಮೀಟರ್ ದೂರದವರೆಗೂ ದೊಡ್ಡದಾಗಿ ಚಪ್ಪರ ಹಾಕಿದ್ದಾರೆ. ಭಗವದ್ಗೀತೆ ಮಧುರವಾಗಿ ಕೇಳಿಬರುತ್ತಿದೆ. ಗುರುದಾಸ್ ಮನೆ ಬರಿಯಾಗೆ ಎರಡು ಕಿಲೋಮೀಟರ್‌ಗಳ ದೂರದಲ್ಲೇ ಆರಕ್ಷಕರು ಕಾರುಗಳನ್ನು ನಿಲ್ಲಿಸುತ್ತಿದ್ದಾರೆ. ಸಂಚಾರಕ್ಕೆ ಅಡ್ಡಿಯಾಗದಂತೆ, ಆ ಹಾದಿ ಮೂಲಕ ಹಾದುಹೋಗುವ ವಾಹನಗಳನ್ನು ಬೇರೆ ಮಾರ್ಗದತ್ತ ತಿರುಗಿಸುತ್ತಿದ್ದಾರೆ.

ಅಲ್ಲಿ ನಡೆಯುತ್ತಿರುವ ಕೋಲಾಹಲ, ದಟ್ಟೈಸಿರುವ ಜನವನ್ನು ನೋಡುತ್ತಿದ್ದರೆ ಅಲ್ಲೇನೋ ರಾಷ್ಟ್ರೀಯ ನಾಯಕನ ಬೃಹತ್ ಸಭೆ ನಡೆಯುವುದೇನೋ ಅನ್ನೋ ಭ್ರಮೆ ಬರುತ್ತದೆ.

ಆ ದಿನ ಬೆಳಿಗ್ಗೆ ಅಭ್ಯಂಜನ ಸ್ನಾನ ಮಾಡಿದ ಗುರುದಾಸ್. ರೇಶ್ಮೆ ಉಡುಪುಗಳನ್ನು ಧರಿಸಿದ. ಮನೆಯಿಂದ ಬೆಂಗಾವಲು ಹಿಂದೆ ಬರಲು ವೆಂಕಟೇಶ್ವರಸ್ವಾಮಿ ಗುಡಿಗೆ ಹೋಗಿ ಅರ್ಚನೆ ಮಾಡಿಸಿದ. ಪೂಜೆಗಳೆಲ್ಲ ಮುಗಿದ ಮೇಲೆ ಮನೆಗೆ ಹಿಂದಿರುಗಿ ಬಂದ.

ಅಷ್ಟು ಹೊತ್ತಿಗಾಗಲೇ ಅವನನ್ನು ಭೇಟಿ ಮಾಡುವ ಸಲುವಾಗಿ ನಗರಸಭಾ ಸದಸ್ಯರು, ಪುರ ಪ್ರಮುಖರು ಬಂದು ಕುಳಿತಿದ್ದಾರೆ. ನಾಲ್ವರು ಶಾಸಕರು, ಇಬ್ಬರು ಎಂ.ಪಿ.ಗಳು ಕೂಡ ಆಗಷ್ಟೇ ಆಗಮಿಸಿದರು.

ಅವರುಗಳೆಲ್ಲ ಬೊಕೇಗಳನ್ನು ನೀಡಿದರು. ಕಾರು ಇಳಿದೊಡನೆ ಬೊಕೇಗಳನ್ನು ಸ್ವೀಕರಿಸಿದ ಗುರುದಾಸ್ ಅವರನ್ನೆಲ್ಲ ಮುಗುಳ್ನಗೆಯಿಂದ ಮಾತನಾಡಿಸಿ ಮನೆಯೊಳಕ್ಕೆ ಹೊರಟುಹೋದ.

ಒಳಗೆ ಹೆಜ್ಜೆ ಇಡುತ್ತಿದ್ದ ಹಾಗೇ ಗುರುದಾಸ್ ತನ್ನ ಅಂತರಂಗದ ಪ್ರಮುಖ ಸಹಾಯಕ ಮುಕುಂದನನ್ನು ಕರೆದು ಕೇಳಿದ.

"ಅವನು ಯಾರು ಅಂತ ಗೊತ್ತಾಯ್ತ?"

"ಗೊತ್ತಾಯ್ತು ಸಾರ್, ಆರ್. ಆರ್. ಆಸ್ಪತ್ರೆಯಲ್ಲಿ ಕೆಲಸ ಮಾಡ್ತಿದ್ದಾನೆ. ಹೊಸದಾಗಿ ಎರಡು ತಿಂಗಳ ಹಿಂದಷ್ಟೇ ಮದ್ವೆ ಆಯ್ತು. ಸಂಬಳ ಸಾವಿರದ ಇನ್ನೂರು. ಇಬ್ಬರು ತಮ್ಮಂದಿರಿದ್ದಾರೆ ಒಬ್ಬ ಡಿಗ್ರಿ ಓದುತ್ತಿದ್ದಾನೆ, ಇನ್ನೊಬ್ಬ ಎಸ್. ಎಸ್. ಎಲ್. ಸಿ."

"ಆ ವಿವರಗಳೆಲ್ಲ ನನಗೆ ಅಗತ್ಯ ಇಲ್ಲ. ಅವನು ನನ್ನ ಬಗ್ಗೆ ಯಾಕೆ ಎನ್‌ಕ್ವಯಿರಿ ಮಾಡ್ತಿದ್ದಾನೆ ಅನ್ನೋದಷ್ಟೇ ನನಗೆ ಬೇಕು."

"ಅದೇ ಇನ್ನೂ ಗೊತ್ತಾಗಲಿಲ್ಲ. ನಾಳೆಗೆಲ್ಲ ತಿಳಿದುಕೊಳ್ತೀನಿ."

"ಅವನಿಗೂ ಪೋಲೀಸ್ ವಿಭಾಗಕ್ಕೂ ಸಂಬಂಧ...?"

ಗುರುದಾಸ್ ಮಾತು ಮುಗಿಯುವ ಮೊದಲೇ ಫೋನ್ ಮೊಳಗಿತು.

ಅತ್ತಲಿಂದ ನಗರ ಕಮಿಶನರ್ ಶುಭಾಶಯ ಹೇಳಿ ಕೇಳುತ್ತಿದ್ದಾರೆ. "ಹೇಗಿದೆ ಸರ್ ಏರ್ಪಾಡು

ಇಲ್ಲಿಯವರೆಗೆ...

ಬನ್ನೂರ್‌ನ ಖ್ಯಾತ ಪ್ರಖ್ಯಾತ ವೈದ್ಯರು ಸುಚರಿತಳ ಮಾನಸಿಕ ರೋಗವನ್ನು ಗುಣಪಡಿಸಲು ಡಾ. ರಾಮಮೂರ್ತಿಯವರಲ್ಲಿ ಚಿಕಿತ್ಸಿಸುತ್ತಾರೆ. ಹತ್ತು ವರ್ಷಗಳ ಚಿಕಿತ್ಸೆಯೂ ಆಕೆಗೆ ಗುಣವಾಗುವುದಿಲ್ಲ. ಆಕೆಯ ಪತಿಯನ್ನು ಹುಡುಕುತ್ತ ಗುರುದಾಸ್‌ನನ್ನು ಸಂಪರ್ಕಿಸಲೆತ್ನಿಸುತ್ತಾರೆ. ಅತ ಭ್ರಷ್ಟ ಕ್ರಿಮಿನಲ್. ....ಮುಂದೆ ಓದಿ

ಗಳೆಲ್ಲ, ಸೆಕ್ಯೂರಿಟಿ ಸಾಕಾಗುತ್ತೆ, ಇನ್ನಷ್ಟು ಆರಕ್ಷಕರನ್ನು ಕಳುಹಿಸಲೇ?''

"ಬೇಕಿಲ್ಲ. ಅಂದಹಾಗೆ ನನ್ನ ಮೇಲೆ ನಿಮ್ಮ ವಿಭಾಗದವರು ಯಾರಾದರೂ ಇನ್ವೆಸ್ಟಿಗೇಟ್ ಮಾಡ್ತಿದ್ದಾರಾ?'' ಕೇಳಿದ.

"ಅದೇನ್ ಸರ್ ಹಾಗೆ ಕೇಳ್ತಿದ್ದೀರಾ. ಅಂತಾದ್ದೇನಾದರೂ ಇದ್ದರೆ ನಾನು ನಿಮಗೆ ಮೊದಲೇ ತಿಳಿಸ್ತೀನಲ್ಲ. ಆದರೂ ಯಾಕೆ ಕೇಳ್ತಿದ್ದೀರಾ?''

"ಅಂ ಏನೂ ಇಲ್ಲ, ಸುಮ್ನೆ ಕೇಳ್ದೆ ಅಷ್ಟೇ. ಬರ್ತೀನಿ, ನನಗೋಸ್ಕರ ಬಹಳಷ್ಟು ಜನ ಕಾಯ್ತಾ ಇದ್ದಾರೆ'' ಎಂದು ಫೋನ್ ಇಟ್ಟ.

ಅತ್ತ ಕಡೆ ಕಮಿಶನರ್ ಅಂದುಕೊಂಡರು ಮನಸ್ಸಿನಲ್ಲಿ. 'ಗುರುದಾಸ್ ಆಡಿದ ಮಾತಿನಲ್ಲಿ ಏನೋ ವಿಶೇಷ ಕಂಡುಬರುತ್ತಿದೆ.'

'ಅಂದರೆ ಯಾರಿಗೋ ಹೋಗೋ ಕಾಲ ಸನ್ನಿಹಿತವಾಗಿದೆ. ತಾನು ನಗರದಲ್ಲಿ ವಾರಸುದಾರರಿಲ್ಲದ ಗುರ್ತಿಸಲಾಗದ ಹೆಣವನ್ನು ನೋಡಲಿದ್ದೇನೆ ಅಂತಾಯ್ತು. ಪಾಪ ಯಾರೋ ಆ ನಿರ್ಭಾಗ್ಯ.

ಗುರುದಾಸ್ ಫೋನ್ ಇಟ್ಟು ಮತ್ತೆ ಮುಕುಂದನತ್ತ ತಿರುಗಿದ. "ಅವನಿಗೂ ಆರಕ್ಷಕ ವಿಭಾಗಕ್ಕೂ ಏನಾದರೂ ಸಂಬಂಧವಿದೆಯೇ?''

"ಇರಲಾರದು'' ಎನ್ನುತ್ತ ತನ್ನ ಬಳಿಯಿದ್ದ ಫೈಲ್ಸ್ ಗುರುದಾಸ್ ಮುಂದೆ ಇಟ್ಟ ಮುಕುಂದ.

ಅದರಲ್ಲಿ ಆರ್. ಆರ್. ಹಾಸ್ಪಿಟಲ್‌ನ ಅಟೆಂಡೆನ್ಸ್ ಪುಸ್ತಕದ ಎಲ್ಲ ಜೆರಾಕ್ಸ್ ಪ್ರತಿಗಳು ಇದ್ದುವು. "ಕಳೆದ ಮೂರು ವರ್ಷಗಳಲ್ಲಿ ಅವನು ಮಧ್ಯೆಗೆ ಹತ್ತು ದಿನ ವಿನಾ ಎಂದೂ ರಜೆ ಹಾಕಿಲ್ಲ. ಆಫೀಸ್‌ನಲ್ಲಿ ಒಳ್ಳೆ ಸಮರ್ಥ ಕೆಲಸಗಾರನಂತೆ. ಈ ವಿಚಾರಣೆ ಆರಂಭಕ್ಕೆ ಮುನ್ನ ಆ ಹಾಸ್ಪಿಟಲ್ ಎಂ. ಡಿ. ಪ್ರತ್ಯೇಕ ಕೊಟಡಿಯಲ್ಲಿ ಒಂದು ಗಂಟೆ ಇದ್ದನಂತೆ ಅವನು.''

ಗುರುದಾಸ್ ತನ್ನ ಮುಂದಿದ್ದ ಆರ್. ಆರ್. ಹಾಸ್ಪಿಟಲ್ ಅಟೆಂಡೆನ್ಸ್ ಪುಸ್ತಕವನ್ನು ಸ್ವಲ್ಪಾವ್ರೂ ಗಣನೆಗೆ ತೆಗೆದುಕೊಳ್ಳಲಿಲ್ಲ. ಎರಡು ನಿಮಿಷ ಮೌನವಾಗಿ ಇದ್ದುಬಿಟ್ಟ.

"ಸರಿ ಅವನ ವಿಷಯ ನಾಳೆ ನೋಡೋಣ. ಇವತ್ತು ಇಪ್ಪತ್ತೆರಡು. ಇವತ್ತು ರಕ್ತಪಾತ ನಡೆಯೋದು ನನಗಿಷ್ಟವಿಲ್ಲ.''

ಗುರುದಾಸ್ ಹೊರಗೆ ಕಾಯುತ್ತಿರುವ ಜನರ ಬಳಿಗೆ ಹೋಗಲು ಎರಡು ಹೆಜ್ಜೆ ಹಾಕಿದ.

"ಇನ್ನೊಂದು ವಿಷಯ ನಿಮಗೆ ಹೇಳಲಿಲ್ಲ. ಚಕ್ರಧರನ ಬೆನ್ನ ಮೂಳೆ ಮುರಿದಿದೆ. ರಿಬ್ಸ್ ಮೂರು ಫ್ರ್ಯಾಕ್ಚರ್ ಆಗಿದೆ. ಒಂದು ಕಾಲು, ಕೈ ನರ ತಪ್ಪಿದೆ. ತಲೆಗೆ ಏಳು ಹೊಲಿಗೆ ಬಿದ್ದಿದೆ. ಬದುಕುಳಿಯೋದು ಅಷ್ಟಕ್ಕಷ್ಟೇ ಅಸಾಧ್ಯ.''

ಗುರುದಾಸ್ ಮುಕುಂದನ ಮಾತು ಕೇಳಿಸಿಕೊಳ್ಳಲೇ ಇಲ್ಲ.

"ಆದರೂ ಜೀವ ಇದೆಯಲ್ಲ. ಅದಕ್ಕೆ ಯೋಚನೆ ಮಾಡ್ಬೇಕು ನಾವು. ಅವನು ನನ್ನ ಕುರಿತು ಯಾಕೆ ಎನ್‌ಕ್ವಯರಿ ಮಾಡಿ ವಿವರಗಳನ್ನು ಸಂಪಾದಿಸಲಿಕ್ಕೆ ಪ್ರಯತ್ನಿಸಿದ, ತಿಳಿದುಕೊಳ್ಳೋ ವರೆಗಷ್ಟೇ ಅವನ ಉಸಿರು ಆಡುತ್ತದೆ. ಆಮೇಲೆ ಅವನು ಬದುಕಬೇಕೋ ಬೇಡವೋ ನಾನು ನಿರ್ಧರಿಸ್ತೀನಿ'' ಎಂದು ಹೊರ ನಡೆದ.

ಗುರುದಾಸ್ ಬುದ್ಧಿವಂತಿಕೆ ಎಲ್ಲ ಅವನ ವಿಸ್ತೃತ ಪರಿಚಯ, ಸಂಬಂಧಗಳ ಮೇಲೆ ಆಧಾರ ಪಟ್ಟಿದೆ. ಪೋಲೀಸರು ಅವನನ್ನು ಯಾವ ಮೊಕದ್ದಮೆಯಲ್ಲೂ ಅಪರಾಧಿಯಾಗಿ ಸಾಬೀತು ಪಡಿಸಲಿಲ್ಲ. ಕಾರಣ ಅವರಿಗೆ ನಡೆದ ಯಾವ ಅಪರಾಧವಾದರೂ ಗುರುದಾಸ್ ಕೈವಾಡವಿದೆ ಅಂತ ಸ್ಪಷ್ಟಪಡಿಸಲಿಕ್ಕೆ ಯಾವುದೇ ಆಧಾರಗಳೂ ಸಿಗುವುದಿಲ್ಲವಾದ್ದರಿಂದ.

ಗುರುದಾಸ್ ಅನಂತರ ಕೆಳಗೆ ಎಷ್ಟೋ ಮೆಟ್ಟಿಲುಗಳಿವೆ. ಪ್ಲಾನಿಂಗ್ ಮಾತ್ರವೇ ಗುರುದಾಸ್ ಕೊಡುತ್ತಾನೆ. ಬಹಳ ಸಾರಿ ಆ ಕೆಲಸ ಕೂಡ



ಅವನ ಸಹಾಯಕರು ಮಾಡುತ್ತಾರೆ. ಕೆಲಸದ ಪ್ರಾಮುಖ್ಯತೆಯನ್ನು ಹಿಡಿದು ಮಾತ್ರವೇ ಪ್ಲಾನಿಂಗ್ ತಾನು ಮಾಡಬೇಕೆ, ಆ ಕೆಲಸ ಕೆಳಗಿನವರಿಗೆ ಒಪ್ಪಿಸಬೇಕೇ ಅನ್ನೋದು ಗುರುದಾಸ್ ತೀರ್ಮಾನಿಸುತ್ತಾನೆ.

ನಡೆಯಬೇಕಾದ ಕಾರ್ಯಕ್ರಮ ಗುರುದಾಸ್ ಅನಂತರ ಹತ್ತನೇ ಹೆಜ್ಜೆಯಲ್ಲಿ ನಡೆಯುತ್ತದೆ. ಅವನ ಬಳಿಕ ಕೆಳಗಿರುವ ಹತ್ತು ಬೆಸುಗೆಯಲ್ಲಿ ಯಾವ ಒಂದು ಬೆಸುಗೆ ತುಂಡಾಗುತ್ತದೆ ಅನ್ನೋ ಸಮಸ್ಯೆಯೇ ಇಲ್ಲ. ಕತ್ತರಿಸಲಿಕ್ಕೆ ಯಾರಾದರೂ ಪ್ರಯತ್ನಿಸಿದರೆ ನಗರದ ಪೋಲೀಸರಿಗೆ ಒಂದು ಗುರ್ತು ತಿಳಿಯದ ಶವ ಸಿಗುತ್ತದೆ ಅಷ್ಟೇ.

ಅಪರಾಧಕ್ಕೂ ಪ್ರಾಮಾಣಿಕತೆಗೂ ಎಂದೂ ಹೊಂದಾಣಿಕೆ ಕುದುರುವುದಿಲ್ಲ. ಅವು ಎಂದೂ ಪರಸ್ಪರ ಸಂಘರ್ಷಕ್ಕೆ ಒಳಗಾಗುತ್ತಲೇ ಇರುತ್ತದೆ. ಆದರಲ್ಲಿ ಬಹಳ ಸಾರಿ ಅಪರಾಧದ್ದೇ ಮೇಲುಗೈಯಾಗುತ್ತದೆ ಅನ್ನೋದು ನಗ್ನ ಸತ್ಯ.

ಯಾವುದೇ ಕೆಲಸದಲ್ಲಾದರೂ ಯಶಸ್ಸು ನೋಡಬೇಕಾದಲ್ಲಿ ಬೇಕಾದ್ದು ಧೈರ್ಯ. ಕಿಲ್ಲರ್ ಇನ್‌ಸ್ಟಿಂಕ್ಟ್. ಈ ಇನ್‌ಸ್ಟಿಂಕ್ಟ್ ಇಲ್ಲದವನು ಎಂದೂ ಎತ್ತರಕ್ಕೆ ಏರಲಾರ.

ಕಾನೂನನ್ನು ಜಾರಿಗೊಳಿಸುವ ಪೋಲೀಸರಿಗೆ ಕೆಲವು ನಿಯಮ, ನಿಬಂಧನೆಗಳು ಇರುತ್ತವೆ. ಅವುಗಳನ್ನು ಅತಿಕ್ರಮಿಸಿದರೆ ಕೇಳಲು ಕೋರ್ಟುಗಳಿವೆ. ಉನ್ನತಾಧಿಕಾರಿಗಳಿದ್ದಾರೆ, ಅವರುಗಳನ್ನು ವಿಮರ್ಶಿಸಲು ಪತ್ರಿಕೆಗಳಿವೆ.

ಆದರೆ ಅಪರಾಧಿಗಳಿಗೆ ಒಂದು ಲಾ ಅಂತ ಇರುವುದಿಲ್ಲ. ಅವರು ಏನೂ ಮಾಡಬಲ್ಲರು. ಎಷ್ಟೇ ವಿಧ್ವಂಸವನ್ನಾದರೂ ಸೃಷ್ಟಿಸಬಲ್ಲರು.

ಅದನ್ನೇ ಜಂಗಲ್ ಲಾ ಎನ್ನುತ್ತಾರೆ. ಬಲಹೀನನ ಮೇಲೆ ಬಲವಂತನು ತೋರುವ ತುಳಿತ, ಲೂಟಿ, ದೌರ್ಜನ್ಯ.

ಪೋಲೀಸ್ ಶಾಖೆಯಲ್ಲಿ ಗುರುದಾಸ್‌ಗೆ ಮಿತ್ರರಿರುವಂತೆ ಶತ್ರುಗಳು ಕೂಡ ಇದ್ದಾರೆ. ಅವರನ್ನು ಪ್ರಾಮಾಣಿಕರು, ಕರ್ತವ್ಯನಿಷ್ಠ ಅಧಿಕಾರಿಗಳು, ದೇವರಂತವರು ಎಂದು ಕೆಲವರು ಆಡಿಕೊಳ್ಳುವ ಮಾತು ನಿಜವೆಂದು, ಗುರುದಾಸ್ ಮಾತ್ರ ಅಂತವರನ್ನು ಖಟ್‌ಮಲ್ (ಹಿಂದಿಯಲ್ಲಿ ತಿಗಣೆ ಎಂದು ಅರ್ಥ) ಎಂದು ಮುದ್ದಾಗಿ ಕರೆಯುತ್ತಿರುತ್ತಾನೆ. ಅಂತಾವರು ಅವನ ದೃಷ್ಟಿಯಲ್ಲಿ ಕೈಲಾಗದವರು.

ಅಂತಾ ಖಟ್‌ಮಲ್ ಪ್ರಭು.

ಡಿಪಾರ್ಟ್‌ಮೆಂಟ್‌ಗೆ ಸೇರುವುದಕ್ಕೆ ಮುಂಚೆ ತರಬೇತಿ ಮುಗಿದ ಕೂಡಲೇ ಪ್ರತಿಜ್ಞೆ ಮಾಡಿ ಮೊತ್ತಮೊದಲ ಬಾರಿ ಹುದ್ದೆ ವಹಿಸಿಕೊಂಡಾಗ ಅವನು ಎರಡು ಸಹಿಗಳನ್ನು ಮಾಡಿದ.

ಒಂದು ಜಾಯಿನಿಂಗ್ ರಿಪೋರ್ಟ್ ಮೇಲೆ. ಎರಡನೆಯದು ದಿನಾಂಕವಿಲ್ಲದೆ ಬರೆದ ರಾಜೀನಾಮೆ ಪತ್ರದ ಮೇಲೆ. ಹಾಗೆ ದಿನಾಂಕವಿಲ್ಲದೆ ಬರೆದಿಟ್ಟುಕೊಂಡ ರಾಜೀನಾಮೆ ಪತ್ರ ಸದಾ ಅವನ ಕಿಸೆಯಲ್ಲಿರುತ್ತದೆ.

ಉದ್ಯೋಗಕ್ಕಾಗಿ ಹಣ ಸಂಪಾದನೆಗೋಸ್ಕರ ಬದುಕುತ್ತೇನೆ ಅಂತ ಅಂದುಕೊಳ್ಳೋನ್ನ ಯಾವ ಸಣ್ಣ ಘಟನೆಯಾದರೂ ಹೆದರಿಸುತ್ತದೆ. ಆದರೆ ನೌಕರಿಯನ್ನು ಕೇರ್ ಪಿನ್ ಆಗಿ ಕಾಣುವಾತನನ್ನು ಏನೂ ಮಾಡುವುದಿಲ್ಲ.

ಅಪರಾಧಗಳಿಗೆ ಅನುಗುಣವಾಗಿ ಪ್ರಭು ಕ್ರಿಮಿನಲ್ ಹಂಟಿಂಗ್ ಪಾಲಸೀ ಬದಲಾಗುತ್ತಿತ್ತು.

ರಾಜಕೀಯದಲ್ಲಿ ಅಪರಾಧಿಗಳು ಯಾವಾಗ ಪ್ರವೇಶಿಸಿ ನಾಯಕರಾಗಿ ಹೋದರೋ ಆಗ ಈ ಪೋಲೀಸ್ ವ್ಯವಸ್ಥೆಗೆ ಕಷ್ಟಗಳು ಆರಂಭವಾಯಿತೆಂದು ಹೇಳಬಹುದು.

ಪ್ರಭು ಎರಡು ತಿಂಗಳುಗಳಿಗೆ ಒಂದು ಸಾರಿ ಟ್ರಾನ್ಸ್‌ಫರ್ ಆಗುತ್ತಿದ್ದ. ಬುದ್ಧಿವಂತರು, ವ್ಯಕ್ತಿತ್ವವುಳ್ಳವರು, ಪ್ರಜ್ಞಾವಂತರು ಮಾತ್ರವೇ ಯಾರಿಗೂ ತಲೆಬಾಗುವುದಿಲ್ಲ. ಇವರು ತಾವು ಅಂದುಕೊಂಡದ್ದನ್ನು ಸಾಧಿಸುತ್ತಾರೆ.

(ಸಶೇಷ)

ರಾಗಸಂಗಮ

ಲಾಟರಿ

ಬಹುಮಾನ ರೂ. 200

* ಓದುಗರಿಗಾಗಿ 'ರಾಗಸಂಗಮ' ನಡೆಸುವ ಒಂದು ನೂತನ 'ಲಾಟರಿ ಡ್ರಾ' ಇದು.

* ಈ ಲಾಟರಿಗಾಗಿ ನೀವು ಒಂದು ಪೈಸೆ ಕೂಡ ಹಣ ಕೊಡುವ ಅಗತ್ಯವಿಲ್ಲ.

* 'ರಾಗಸಂಗಮ' ಪತ್ರಿಕೆಯನ್ನು ಕೊಂಡು ಓದುವ ಪ್ರತಿಯೊಬ್ಬರೂ ಈ 'ಲಾಟರಿ ಡ್ರಾ' ನಲ್ಲಿ ಭಾಗವಹಿಸಬಹುದು.

* 'ಪದರಂಗ' 'ಜಾಣ್ಮೆ ಸ್ಪರ್ಧೆ' ಮುಂತಾದುವುಗಳನ್ನು ನಡೆಸಿದರೆ ಒಂದು ವರ್ಗದ ಓದುಗರು ಮಾತ್ರ ಆದರಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

* ಆದರೆ 'ರಾಗಸಂಗಮ' ಓದುಗರೆಲ್ಲರೂ ಆಸಕ್ತಿಯಿಂದ ಭಾಗವಹಿಸಬೇಕೆಂಬ ಉದ್ದೇಶದಿಂದ, ಅವರ ವಯಸ್ಸು, ವಿದ್ಯಾಭ್ಯಾಸ, ಬುದ್ಧಿವಂತಿಕೆ, ಇವುಗಳನ್ನು ಆಧಾರವಾಗಿಟ್ಟು ಸ್ಪರ್ಧೆಯನ್ನು ನಡೆಸದೆ ಬಹಳ ಸುಲಭವಾದ ಈ 'ಲಾಟರಿ ಡ್ರಾ'ವನ್ನು ನಡೆಸುತ್ತೇವೆ.

* ನೀವು ಮಾಡಬೇಕಾದ್ದು ಬಹಳ ಸುಲಭವಾದದ್ದು ಹಾಗೂ ಶ್ರಮವಿಲ್ಲದ್ದು.

* ನಿಮಗಾಗಿ ಈ ಪುಟದಲ್ಲಿ 'ಲಾಟರಿ ಡ್ರಾ ಸಂಖ್ಯೆ'ಯೊಂದಿಗೆ ಕೂಡಿದ ನಮ್ಮ ವಿಳಾಸವನ್ನು ಮುದ್ರಿಸಿದ್ದೇವೆ. ಇದನ್ನು ಕತ್ತರಿಸಿ ತೆಗೆದು ಅಂಚೆ ಕಾರ್ಡಿನ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಿ, ಹಾಗೂ ಅದೇ ಮಗ್ಗುಲಿನ, ಬರಹಕ್ಕೆ ಮೀಸಲಾಗಿರುವ ಖಾಲಿ ಜಾಗದಲ್ಲಿ ಇದೇ ಪುಟದಲ್ಲಿ ಸೂಚಿಸಿರುವ ವಿವರಗಳನ್ನು ಬರೆದು ಕೊನೆಯ ತಾರೀಖು ಮತ್ತು ಸಮಯದೊಳಗೆ ನಮ್ಮ ಕೈ ಸೇರುವಂತೆ ಕಳುಹಿಸಿ.

ನೆನಪಿಡಿ : ನಮ್ಮ ವಿಳಾಸವನ್ನು ಮಾತ್ರ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಬಹುದೇ ವಿನಾ ಬೇರೆ ಏನನ್ನೂ ಅಂಟಿಸಬಾರದು. ಇತರ ವಿವರಗಳನ್ನೆಲ್ಲಾ ಕೈಯಲ್ಲೇ ಬರೆದು ಕಳುಹಿಸಬೇಕು.

* ಪ್ರತಿ ವಾರವೂ ಲಾಟರಿ ಟಿಕೆಟ್ಟುಗಳನ್ನು 'ಡ್ರಾ' ಪದ್ಧತಿಯಲ್ಲಿ ಆಯ್ಕೆ ಮಾಡಿ, ನಾಲ್ವರು ಅದೃಷ್ಟಶಾಲಿ ಓದುಗರಿಗೆ ತಲಾ ರೂ. 50 ರಂತೆ ರೂ. 200 ಬಹುಮಾನ ನೀಡಲಾಗುವುದು.

* 'ಡ್ರಾ'ನಲ್ಲಿ ಯಶಸ್ವಿಯಾದವರ ಹೆಸರು ಮತ್ತು ವಿಳಾಸ ಪ್ರಕಟವಾಗುವ 'ರಾಗಸಂಗಮ'ದ ಸಂಚಿಕೆ : 6–12–92.

* ನಿಮ್ಮ 'ಲಾಟರಿ ಟಿಕೇಟ್' ಅಂಚೆ ಕಾರ್ಡುಗಳು ನಮ್ಮ ಕಚೇರಿಗೆ ಬಂದು ಸೇರಬೇಕಾದ ಕೊನೆಯ ತಾರೀಖು ಮತ್ತು ಸಮಯ : ಶುಕ್ರವಾರ 13–11–92 ಸಂಜೆ 5 ಗಂಟೆ.

ಅಂಚೆ ಕಾರ್ಡಿನ ವಿಳಾಸದ ಸ್ಥಳದಲ್ಲಿ ಇದನ್ನು ಕತ್ತರಿಸಿ ಅಂಟಿಸಿ.

ರಾಗಸಂಗಮ ಲಾಟರಿ ಡ್ರಾ – ೧೫೧

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646
41, ಕೋಟೆ 'ಬಿ' ಬೀದಿ
ಬೆಂಗಳೂರು – 560 002
BANGALORE - 560 002

ಅಂಚೆ ಕಾರ್ಡಿನ ವಿಳಾಸದ ಮಗ್ಗುಲಲ್ಲಿರುವ ಖಾಲಿ ಸ್ಥಳದಲ್ಲಿ ಈ ಕೆಳಕಂಡಂತೆ ಬರೆದು ಅದರ ಕೆಳಗೆ ತಾರೀಕಿನೊಂದಿಗೆ ಕೂಡಿದ ನಿಮ್ಮ ಸಹಿಯನ್ನು ಮಾಡಬೇಕಾದದ್ದು ಅವಶ್ಯ.

ಶುಲ್ಕವೇ ಇಲ್ಲದ ಈ 'ರಾಗಸಂಗಮ ಲಾಟರಿ ಡ್ರಾ' ನಲ್ಲಿ ನಾನು ಭಾಗವಹಿಸಲು ಇಚ್ಛೆಸುತ್ತೇನೆ. ಇದರಲ್ಲಿ ಸಂಪಾದಕರ ತೀರ್ಪೇ ಅಂತಿಮ ಹಾಗೂ ಕಾನೂನುಬದ್ಧವಾದದ್ದು ಎಂದು ಅರಿತಿದ್ದೇನೆ.

ಅಂಚೆ ಕಾರ್ಡಿನ ಪೂರ್ಣ ಖಾಲಿ ಇರುವ ಮುಂಬದಿಯಲ್ಲಿ ಈ ಕೆಳಗೆ ಕೇಳಿರುವ ವಿವರಗಳನ್ನು ಓದಲು ಸಾಧ್ಯವಾಗುವಂತೆ ಸ್ಪಷ್ಟವಾಗಿ ಬರೆಯಿರಿ.

ನಿಮ್ಮ ಹೆಸರು : ಸಂಪೂರ್ಣ ವಿಳಾಸ ; ಅಂಚೆ ; ಪಿನ್‌ಕೋಡ್ ; ಹೋಬಳಿ ; ತಾಲ್ಲೂಕ್ ; ಜಿಲ್ಲೆ ; ರಾಜ್ಯ.

ಒಂದು ಪುಟದ ಮಿನಿ ಕಥೆ

ಮರಳಿ ಗೂಡಿಗೆ

ಶಂಕರಗೌಡ ವೈ. ಪಾಟೀಲ

ಪಿ. ಯು. ಸಿ. ಮುಗಿದು ಇಂಜಿನಿಯರಿಂಗ್ ಸೀಟ್ ಸಿಕ್ಕಾಗ ಶ್ರೀಧರನಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ತಾನು ಕಂಡ ಕನಸು ನನಸಾಯಿತೆಂದು ಸಂತೋಷ ಪಟ್ಟನು. ಡೊನೇಶನ್ ಇಲ್ಲದೆ ಮೆರಿಟ್ ಲಿಸ್ಟ್‌ನಲ್ಲಿ ರ್‍ಯಾಂಕ್ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದ.

ಶ್ರೀಧರನಿಗೇನೋ ಸಂತೋಷ. ಆದರೆ ಅವನ ತಂದೆಯವರು "ನೋಡು ಶ್ರೀಧರ್, ನೀನು ಬಹಳ ಮುಗ್ಧ. ನಿನಗೆ ಹಾಸ್ಟೆಲ್ ಜೀವನ ಸರಿಯಾಗೋದಿಲ್ಲ. ಇದೇ ಊರಿನಲ್ಲಿ ಬಿ. ಎ. ಅಥವಾ ಬಿ.ಎಸ್ಸಿ. ಮಾಡು'' ಎಂದಾಗ,

ಶ್ರೀಧರನು "ಅಪ್ಪಾ ನಾನು ಇಲ್ಲಿಯವರೆಗೆ ಓದಿದ್ದೇ ಇಂಜಿನಿಯರ್ ಕೋರ್ಸ್ ಸಲುವಾಗಿ, ವಿಶ್ವೇಶ್ವರಯ್ಯನವರಂತೆ ಶ್ರೇಷ್ಠ ಇಂಜಿನಿಯರ್ ಆಗಬೇಕೆಂಬುದೇ ನನ್ನಾಸೆ. ದಯವಿಟ್ಟು ನನ್ನಾಸೆಯನ್ನು ನುಚ್ಚುನೂರು ಮಾಡಬೇಡ'' ಎಂದಾಗ ಅವನ ತಂದೆಯವರು ಮರು ಮಾತಾಡದೆ ಸುಮ್ಮನಾದರು.

ಅಡ್ಮಿಶನ್ ಮಾಡಿಸಿ, ಹಾಸ್ಟೆಲ್ ರೂಮ್ ಕೊಡಿಸಿ, ಮರಳಿ ಬರುವಾಗ ಅವನ ತಂದೆಯವರು "ಶ್ರೀಧರ್ ನಾನು ಇರುವುದು ನೂರು ಕಿ. ಮೀ. ದೂರದಲ್ಲಿ. ಆಗಿಂದಾಗ್ಗೆ ನೀನು ತಪ್ಪದೇ ಪತ್ರ ಬರೀತಾ ಇರು'' ಎಂದು ಹೇಳಿ ಟ್ರೈನ್ ಹತ್ತಿದಾಗ ಶ್ರೀಧರನಿಗರಿವಿಲ್ಲದಂತ ಕಣ್ಣಂಚಿನಲ್ಲಿ ನೀರೂರಿತು. ಅನಿವಾರ್ಯವಾಗಿ ತಂದೆಯನ್ನು ಬೀಳ್ಕೊಟ್ಟು ರೂಮಿಗೆ ಬಂದು ಅತ್ತ. ಅತ್ತೂ ಅತ್ತೂ ತನಗೇ ತಾನೇ ಸಮಾಧಾನ ಮಾಡಿಕೊಂಡ. ಧೈರ್ಯ ತಂದುಕೊಂಡ. ಅಂದಿನ ಇಡೀ ರಾತ್ರಿ ಅವನಿಗೆ ನಿದ್ರೆಯೇ ಬರಲಿಲ್ಲ.


ಮರುದಿನ ಮೊದಲನೇ ಪೀರಿಯಡ್‌ಗೆ ಅಟೆಂಡಾದ. ನಿರಾತಂಕವಾಗಿ ಅಭ್ಯಾಸ ನಡೆಸಿದ. ಈ ವೇಳೆಯಲ್ಲಿ ತನ್ನ ತಂದೆಗೊಂದು ಪತ್ರ ಬರೆದ. ಹದಿನೈದು ದಿನಗಳು ಕಳೆದವು. ಕೆಲ ಸೀನಿಯರ್ ವಿದ್ಯಾರ್ಥಿಗಳೂ ಅಲ್ಪಸ್ವಲ್ಪ ಪರಿಚಯವಾದರು.

ಹೀಗಿರುವಾಗ, ಒಂದು ರಾತ್ರಿ 12 ಗಂಟೆಯ ವೇಳೆಗೆ ಯಾರೋ ರೂಮಿನ ಬಾಗಿಲು ತಟ್ಟಿದ ಶಬ್ದ. ಶ್ರೀಧರ್ ಆಧೈರ್ಯಗೊಂಡ. ಬಾಗಿಲಿನ ಬಡಿತ ಜೋರಾಯಿತು. ಕೊನೆಗೆ ಹೆದರಿಕೆಯಿಂದ ಬಾಗಿಲು ತೆರೆದಾಗ ನಾಲ್ಕು ಜನ ಸೀನಿಯರ್ ವಿದ್ಯಾರ್ಥಿಗಳು. ಅಲ್ಪಸ್ವಲ್ಪ ಪರಿಚಯದ ಮುಖಗಳು. ಹೆಚ್ಚಿಗೆ ಏನೂ ಮಾತಾಡದೆ ಶ್ರೀಧರನ ಬಾಯಿಮುಚ್ಚಿ ತಮ್ಮ ರೂಮಿಗೆ ಎಳೆದೊಯ್ದರು. ಅಲ್ಲಿ "ಲೇಯ್ ಬಕರಾ, ನೀನಿನ್ನೂ ಬಚ್ಚಾ, ನಾವು ಹೇಳಿದ್ದು ಕೇಳ್ಲಿಲ್ಲ ಅಂದ್ರ ನಿನ್ನ ಗತಿ ಕಾಣೆಸ್ತೀವಿ'' ಎಂದು ಹೆದರಿಸಿದಾಗ ಶ್ರೀಧರನಿಗೆ ರ್‍ಯಾಗಿಂಗ್ ಬಗೆಗೆ ಓದಿದ ಕೇಳಿದ ಕಲ್ಪನೆ ಮೂಡತೊಡಗಿತು. ನಾಲ್ಕೂ ಜನ ತಮಗ ತೃಪ್ತಿಯಾಗುವಂತ ಕೀಟಲೆ ಕೊಟ್ಟು ತಮ್ಮೆಲ್ಲ ಕೆಲಸಗಳನ್ನು ಮಾಡಿಸಿಕೊಂಡು "ಈ ವಿಷಯ ಏನಾದರೂ ಹೊರಗಡೆ ಯಾರ ಮುಂದಾದರೂ ಬಾಯಿ ಬಿಟ್ಟರೆ, ನಿನ್ನ ಹೆಣದ ಮೂಳೆ ಕೂಡ ಸಿಗೋದಿಲ್ಲ'' ಎಂದು ಹೆದರಿಸಿದರು.

ಪ್ರತಿದಿನ ಈ ರೀತಿ ಕಾಟ ಕೊಡುವುದರಿಂದ ಶ್ರೀಧರನು ಮಾನಸಿಕವಾಗಿ ಕಂಗೆಟ್ಟನು. ತಂದೆ ಹೇಳಿದ ಮಾತುಗಳು ನೆನಪಾಗತೊಡಗಿದವು. ಬಿ.ಎ. ಅಥವಾ ಬಿ.ಎಸ್ಸಿ. ಮಾಡಿದ್ದರೆ ಒಳ್ಳೆಯದಿತ್ತೆಂದು ಭಾವಿಸಿದ. ಬಿಕ್ಕಿ ಬಿಕ್ಕಿ ಅಳತೊಡಗಿದ. ಇನ್ನೇನು ಮಾಡುವುದು?

ಕೊನೆಗೊಂದು ದಿನ ಗಟ್ಟಿ ಧೈರ್ಯ ಮಾಡಿ, ರಾತ್ರಿ ಮೂರು ಗಂಟೆಯ ಸುಮಾರಿಗೆ ತನ್ನ ಗಂಟು ಮೂಟೆಯನ್ನೆಲ್ಲ ಕಟ್ಟಿಕೊಂಡು ರೂಮಿನಿಂದ ಹೊರಬಿದ್ದ. ಹೊರಗೆ ಬಂದಾಗ ಹಾಸ್ಟೆಲ್ ಗೇಟ್ ಹಾಕಿತ್ತು. ಹೊರಗಡೆ ವಾಚಮನ್ ತಿರುಗಾಡುತ್ತಿದ್ದ. ಅತ್ತ ಇತ್ತ ನೋಡಿ ಧೈರ್ಯದಿಂದ ಕಾಂಪೌಂಡ್ ಗೋಡೆ ಹತ್ತಿ ಜಿಗಿದಾಗ, ಕಾಲುಗಳೇ ಮುರಿದ ಅನುಭವ. ಆ ವಿದ್ಯಾರ್ಥಿಗಳು ಕೊಟ್ಟ ನೋವಿಗಿಂತ ಇದೆಷ್ಟೋ ವಾಸಿ ಎಂದುಕೊಳ್ಳುತ್ತ ಬಸ್‌ಸ್ಟ್ಯಾಂಡ್ ಕಡೆಗೆ ಬಿರುಗಾಳಿಯಂತೆ ಓಡತೊಡಗಿದ.

ನಿರೀಕ್ಷೆ



ನಾಳೆಗಳು ಗೆಳತಿ
ಜೀವನ ಪುಸ್ತಕದ
ಮುಂದಿನ ಹಾಳೆಗಳು

ನೆನಪುಗಳು ಗೆಳತಿ
ಬದುಕಿನ ಕಹಿಯ
ಸ್ಫುರಿಸುವ ಜ್ವಾಲಾಮುಖಿಗಳು

ಕತೆಗಳು ಗೆಳತಿ
ಹುಸಿ ಕಲ್ಪನೆಯಿಂದ ತುಂಬಿಹ
ನೋವಿನ ಅಲೆಗಳು

ಕನಸುಗಳು ಗೆಳತಿ
ನಾಳೆ ನಿಜವಾಗದ
ನನಸುಗಳು

ಹೆಜ್ಜೆಗಳು ಗೆಳತಿ
ಬಾಳಿನ ತಾಳಕೆ
ಕುಣಿಯುವ ಗೆಜ್ಜೆಗಳು

ಸುಮಗಳು ಗೆಳತಿ
ದುಂಬಿಯ ನಿರೀಕ್ಷಿಸುತಿಹ
ವನಸುಮಗಳು.

ಸಾವಿತ್ರಿ ಚಳಗೇರಿ

ಧಾರಾವಾಹಿ—೧೪

ಜೀವನ ಗಂಗೋತ್ರಿ

ಭಾರತಿ ಕೇಶವ್

"ಅಂದರೆ ನಾನು ತಮಾಷೆಗೆ ಮಗನನ್ನು ಇಲ್ಲಿಗೆ ಕರೆದುಕೊಂಡು ಬಂದೆ ಎಂದು ತಿಳಿದಿರಾ?"

"ಅದೆಲ್ಲ ಬೇರೆ ಮಾತಾಯಿತು. ಈಗಿನ ಸಂದರ್ಭವೇ ಬೇರೆ. ಈಗ ಈ ಎಳೆಬತ್ತಿಗಳನ್ನು ಬಳೆಸುವುದರತ್ತ ನೀನು ಗಮನ ಹರಿಸಬೇಕು."

"ಅದು ನಿಜ. ಆದರೆ ನನಗೆ ಅಷ್ಟೇ ಮುಖ್ಯ ಮಧುವಿನ ವಿದ್ಯಾಭ್ಯಾಸ."

"ಅದು ಹೇಗೋ ಆಗುತ್ತದೆ."

"ಅಂದರೆ?"

"ರಾಮನಗರದ ಶಾಲೆಗೆ ಹೋಗಲಿ ಅವನು."

"ಅದು ನನಗೆ ಇಷ್ಟವಿಲ್ಲ."

"ಈಗ ಇಷ್ಟ ಅನಿಷ್ಟಗಳ ಪ್ರಶ್ನೆಯಿಲ್ಲ ಪಾರ್ವತಿ. ಇದುವರೆಗೆ ಅವನೊಬ್ಬನೇ ಇದ್ದ ಹೇಗೋ ನಡೆಯಿತು. ಈಗ ಪರಿಸ್ಥಿತಿ ಬದಲಾಗಿದೆ. ಒಬ್ಬನನ್ನು ನೋಡಿಕೊಳ್ಳುವ ಕಡೆ ನೀನೀಗ ಮೂರು ಮಕ್ಕಳ ಜವಾಬ್ದಾರಿಯನ್ನು ಹೊರಬೇಕು."

"ಅದು ನನಗೂ ಗೊತ್ತಿರುವ ವಿಷಯ ತಾನೆ?"

"ಅದು ಸರಿ, ಆದರೆ ಇದು ನಿನ್ನೊಬ್ಬಳಿಂದ ನಿರ್ವಹಿಸಲು ಆಗುವ ಕೆಲಸವಲ್ಲ."

"ಹಾಗೆ ನಾನು ಕೈ ಚೆಲ್ಲಿ ಕುಳಿತರೆ ಆದೀತೇ. ಧೈರ್ಯ ತಂದುಕೊಂಡು ಏನಾದರೂ ಮಾಡಲೇಬೇಕು."

"ಅಂದರೆ ನೀನು ಹಳ್ಳಿಗೆ ಬರುವುದಿಲ್ಲವೇ ಪಾರ್ವತಿ?"

"ಎಷ್ಟು ಪರಿಯಲ್ಲಿ ನಿಮಗೆ ಹೇಳಿದರೆ ಅರ್ಥವಾದೀತು. ನನಗೆ ಆ ಹಳ್ಳಿ ಮನೆಯ ಜೀವನ ಹಿಡಿಸುವುದಿಲ್ಲ. ಸಗಣಿಯಿಂದ ನೆಲ ಸಾರಿಸುವುದು, ಬಾವಿಯಿಂದ ನೀರು ಸೇದುವುದು, ಕೆರೆಗೆ ಹೋಗಿ ಬಟ್ಟೆ ಒಗೆಯುವುದು ನನ್ನಿಂದ ಸಾಧ್ಯವಿಲ್ಲ."

"ನೀನು ಅದ್ಯಾವ ಕೆಲಸವನ್ನೂ ಮಾಡಬೇಡ. ಬಂದು ನನ್ನ ಜೊತೆಯಲ್ಲಿರು ಸಾಕು. ಆ ಕೆಲಸವನ್ನೆಲ್ಲ ನಾನು ಮಾಡಿಕೊಡುತ್ತೇನೆ."

"ಇಲ್ಲ."

"ಕೊನೆಯಪಕ್ಷ ಈ ಎರಡು ಮಕ್ಕಳು ಸ್ವಲ್ಪ ದೊಡ್ಡವರಾಗುವವರೆಗಾದರೂ ಹಳ್ಳಿಯಲ್ಲಿ ಬಂದಿರು ಪಾರ್ವತಿ."

"ನಾನೀಗ ಈ ಮಕ್ಕಳೊಂದಿಗೆ ಬಂದರೆ ಇನ್ನು ನೀವು, ಅತ್ತೆ ನನ್ನನ್ನು ಕಳುಹಿಸುವುದಿಲ್ಲ."

"ಅದು ಹೇಗೆ ಹೇಳುತ್ತೀ?"

"ಅದು ನನಗೆ ಖಾತ್ರಿ."

"ಹಾಗಾದರೆ ಇಲ್ಲಿ ಏನು ಮಾಡುತ್ತೀ, ತಿಂಗಳ ಹಸಿ ಬಾಣಂತಿ ನೀನು. ಇಲ್ಲಿ ನಿನ್ನನ್ನು ನೋಡುವವರು ಯಾರಿದ್ದಾರೆ, ಕೇಳುವವರು ಯಾರಿದ್ದಾರೆ?"

"ಯಾರ ಭಾಗಕ್ಕೆ ಯಾರೂ ಇಲ್ಲವೋ ಅವರ ಭಾಗಕ್ಕೆ ಪರಮಾತ್ಮ ಇದ್ದೇ ಇರುತ್ತಾನೆ ಬಿಡಿ."

"ಅದು ಸರಿ, ನಿನ್ನ ಹಾಗೆ, ಇದ್ದವರನ್ನು ಒದ್ದು ಬರುವವರಿಗೆ ಏನು ಹೇಳಬೇಕು ಹೇಳು."

"ಏನೂ ಹೇಳಬೇಡಿ, ಒಟ್ಟಿನಲ್ಲಿ ನಿಮ್ಮ

ಸಲಹೆ ನನಗೆ, ನನ್ನ ಸಲಹೆ ನಿಮಗೆ ಹಿಡಿಸದೇ ಹೋದಮೇಲೆ ಮಾಡುವುದೇನು?''

"ನಿನ್ನ ಸಲಹೆಯಾದರೂ ಏನು?''

"ಈ ಮೊದಲೇ ಹೇಳಿಲ್ಲವೇ ನಾನು; ಈ ಪಟ್ಟಣದಲ್ಲಿ ಸಾವಿರಾರು ಮಂದಿ ಇದ್ದಾರೆ. ಓದಿದವರು ಇದ್ದಾರೆ, ಓದದವರೂ ಇದ್ದಾರೆ. ಬದುಕು ಸಾಗಿಸಬೇಕೆನ್ನುವವರಿಗೆ ಹಲವು ಹತ್ತು ಮಾರ್ಗಗಳಿವೆ ಇಲ್ಲಿ. ಅದಕ್ಕೇ ಅಲ್ಲವೇ ಕೆಟ್ಟು ಪಟ್ಟಣ ಸೇರು ಎಂಬ ಗಾದೆ ಇರುವುದು. ನೀವೂ ಇಲ್ಲಿಯೇ ಇದ್ದು ಏನಾದರೊಂದು ಕೆಲಸ ಪ್ರಾರಂಭಿಸಿ. ಅದೃಷ್ಟದ ನೆರವೂ ಇದ್ದಲ್ಲಿ ಹೇಗಾದರೂ ಮುಂದೆ ಬರಬಹುದು.''

"ಅದು ಸಾಧ್ಯವಿಲ್ಲವೆಂದು ಹೊಸದಾಗಿ ಹೇಳಬೇಕಾ ಪಾರ್ವತಿ. ಹಳ್ಳಿ ಮನೆಯನ್ನೇನು ಮಾಡುವುದು, ಅಮ್ಮನನ್ನೇನು ಮಾಡುವುದು? ಕಾಣದ ಈ ಊರಿನಲ್ಲಿ ಬಂದು ನಾವು ಮಾಡುವುದಾದರೂ ಏನು? ಅದು ಸಾಧುವಾದ ಮಾರ್ಗವಲ್ಲ. ಈಗ ನೀನು ಮಕ್ಕಳನ್ನು ಕರೆದುಕೊಂಡು ಹೊರಟು ಬಾ. ಮುಂದೆ ಹೇಗಾಗುವುದೋ ನೋಡೋಣ.''

"ಅದು ಸಾಧ್ಯವಿಲ್ಲ.''

"ಸರಿ ಹಾಗಿದ್ದರೆ ನಿನ್ನ ಹಣೆಬರಹವನ್ನು ನೀನು ಅನುಭವಿಸಿಕೊಂಡಿರು. ನಾನು ನಾಳೆ ಹಳ್ಳಿಗೆ ಹಿಂದಿರುಗಬೇಕು'' ಎಂದು ಹೇಳಿ ಪಾರ್ವತಿಯ ಕೈಗೆ ನೂರು ರೂಪಾಯಿಗಳನ್ನು ಕೊಟ್ಟರು.

ಮರುದಿನ ನಾನು ಶಾಲೆಗೆ ಹೊರಟಾಗ ಅಪ್ಪ ಕೂಡ ಬಂದರು. ಇವನ ಶಾಲೆಯವರೆಗೆ ಜೊತೆಯಲ್ಲಿ ಹೋಗಿ ಅನಂತರ ಹಳ್ಳಿಯ ಕಡೆ ಹೊರಡುತ್ತೇನೆ ಎಂದು ಅಪ್ಪ ಅಮ್ಮನಿಗೆ ಹೇಳಿದ್ದರು. ದಾರಿಯಲ್ಲಿ ಅಪ್ಪ ನನ್ನೊಡನೆ ಹೇಳಿದರು "ನಿನ್ನಮ್ಮನದು ಒಂದೇ ಹಟ, ಇದೇ ಊರಿನಲ್ಲಿರಬೇಕೆಂದು. ತನಗೂ ಕಷ್ಟ ಮಕ್ಕಳಿಗೂ ಕಷ್ಟ ಎಂದು ಅವಳು ಯೋಚಿಸುವುದೇ ಇಲ್ಲ.''

"ಇರಲಿ ಬಿಡಪ್ಪ, ಏನು ಮಾಡುವುದು?'' ಎಂದೆ ನಾನು.

"ಹಾಗಲ್ಲ ಮಧು, ನಾನು, ನಿನ್ನ ಅಜ್ಜಿ ಹಳ್ಳಿಯಲ್ಲಿ; ನೀನು, ನಿನ್ನ ಅಮ್ಮ ತಂಗಿಯರು ಇಲ್ಲಿ. ಎರಡೆರಡು ಕಡೆ ಒದ್ದಾಡುವುದರ ಬದಲು ಎಲ್ಲರೂ ಒಂದು ಕಡೆಯಲ್ಲಿ ಇರಬಾರದೇಕೆ ಎಂದರೆ ಕೇಳುವುದೇ ಇಲ್ಲವಲ್ಲ ಅವಳು.''

"ಅಮ್ಮನಿಗೆ ಹಳ್ಳಿ ಇಷ್ಟವಿಲ್ಲ ಅಪ್ಪ, ಬೆಂಗಳೂರು ಪೇಟೆಯೇ ಇಷ್ಟ ಅಮ್ಮನಿಗೆ.''

"ಆಸೆಗಳು, ಇಷ್ಟಗಳು ನೂರೆಂಟಿರಬಹುದು. ಆದರೆ ಎಲ್ಲ ನೆರವೇರಬೇಕೆಂದರೆ ಸಾಧ್ಯವೇ? ಅದಕ್ಕೂ ಸ್ವಲ್ಪ ಕಡಿವಾಣ ಹಾಕಬೇಕು. ಈಗ ಹಳ್ಳಿಗೆ ಹೋದರೆ ನಿಮ್ಮನ್ನೆಲ್ಲ ಕರೆದು ತರಲಿಲ್ಲ ಎಂದು ಅಜ್ಜಿ ಎಷ್ಟು ಬೇಸರಪಟ್ಟುಕೊಳ್ಳುತ್ತಾಳೆ ಗೊತ್ತಾ?''

"ಅಮ್ಮನಿಗೆ ಹಳ್ಳಿಯ ಜೀವನ ಸುತಾರಾಂ ಇಷ್ಟವಿಲ್ಲ. ನೀವೇಕೆ ಸುಮ್ಮನೆ ಒದ್ದಾಡುತ್ತೀರಿ?''

"ಆಯಿತು ಹಳ್ಳಿಗೆ ಹೋಗಿ ನೋಡುತ್ತೇನೆ. ನಿಮ್ಮ ಅಜ್ಜಿ ಏನಾದರೂ ಇಲ್ಲಿಗೆ ಬರಲೊಪ್ಪುತ್ತಾಳೋ ಎಂದು. ಬಂದರೆ ಕೊನೆಯಪಕ್ಷ ಎಳೆಯ ಮಕ್ಕಳು ದೊಡ್ಡವರಾಗುವವರೆಗೆ ಅವಳು ಇಲ್ಲಿಯೇ ಇರಲಿ.''

"ಹಾಗೆಯೇ ಮಾಡಿ ಅಪ್ಪ.''

"ಆದರೆ ನೀನು ಈ ವಿಚಾರವನ್ನು ಈಗಲೇ ನಿನ್ನ ಅಮ್ಮನ ಮುಂದೆ ಹೇಳಬೇಡ.''

ಇಲ್ಲಿಯವರೆಗೆ....

ನನ್ನ ಬಾಲ್ಯ ತೀರಾ ಬಡತನದ್ದು. ನನ್ನ ಅಮ್ಮ ನನಗಾಗಿ ಬಹಳ ಕಷ್ಟಪಡುತ್ತಿದ್ದಳು. ನನ್ನ ವಿದ್ಯಾಭ್ಯಾಸಕ್ಕಾಗಿ ಕಸ ಮುಸುರೆಯ ಕೆಲಸ ಮಾಡಿಕೊಂಡು ಬೆಂಗಳೂರಿನಲ್ಲಿ ನೆಲೆನಿಂತು ನನ್ನನ್ನು ಶಾಲೆಗೆ ಸೇರಿಸಿದಳು. ಇಬ್ಬರೂ ತಂಗಿಯರೂ ಹುಟ್ಟಿದರು, ...ಮುಂದೆ ಓದಿ

"ಯಾಕೆ?''

"ಮತ್ತೆ ಅದಕ್ಕೆ ಇನ್ನೇನು ಆಕ್ಷೇಪಣೆ ಎತ್ತುತ್ತಾಳೋ. ಆದರಿಂದಾಗಿ ನೀನು ಏನೂ ತಿಳಿಯದವನಂತೆ ಸುಮ್ಮನಿದ್ದುಬಿಡು. ಅಲ್ಲದೆ ನಿನ್ನ ಅಜ್ಜಿ ಇಲ್ಲಿಗೆ ಬರುವುದೂ ನಿಶ್ಚಯವಿಲ್ಲ.''

"ಹಾಗೇ ಆಗಲಿ ಅಪ್ಪ.''

"ನೀನಿನ್ನು ಶಾಲೆಗೆ ಹೋಗು ನಾನು ಹಳ್ಳಿಯ ಕಡೆ ಹೊರಡುವ ಬಸ್ಸು ಹತ್ತುತ್ತೇನೆ.''

"ಆಯಿತು ಅಪ್ಪ'' ಎಂದು ನುಡಿದ ಮಧು ಶಾಲೆಯ ಕಡೆ ನಡೆದ.

ಮಧು ಅಪ್ಪ ಹೇಳಿದ ಹಾಗೆ ಅಜ್ಜಿಯೊಂದಿಗೆ ಬರಬಹುದೇನೋ ಎಂದು ಬಹಳಷ್ಟೇ ಕಾದ. ಆದರೆ ಅಪ್ಪ ಬರುವ ಸೂಚನೆ ಕಂಡುಬರಲಿಲ್ಲ. ಊರಿನಿಂದ ಹಳ್ಳಿಗೆ ಹೋಗಿ ತಿಂಗಳಾದರೂ ಅಪ್ಪ ಹಿಂತಿರುಗಿ ಬಾರದೆ ಇದ್ದಾಗ ಮಧುವಿಗೆ ಸ್ಪಷ್ಟವಾಯಿತು. ಅವರು ಇನ್ನು ಈಗ ಬರುವುದಿಲ್ಲ. ಅಜ್ಜಿಯನ್ನು ಕರೆದು ತರುವುದಿಲ್ಲ ಎಂದು. ಅಜ್ಜಿ ಇಲ್ಲಿಗೆ ಬಂದಿರುವುದಿಲ್ಲ ಎಂಬುದು ಅವನಿಗೆ ಕಾತ್ರಿಯಾಯಿತು. ಆದಿನ ರಾತ್ರಿ ಅವನು ಊಟಕ್ಕೆ ಕುಳಿತಾಗ ತಾಯಿಯೊಂದಿಗೆ ಹೇಳಿದ.

"ಅಮ್ಮ ಅಪ್ಪ ಹಳ್ಳಿಗೆ ಹೋಗಿ ತಿಂಗಳಾಯಿತಲ್ಲವೇ?''

"ಆಯಿತು ಮಧು.''

"ಅಪ್ಪ ನನ್ನೊಡನೆ ಹೇಳಿದ್ದರು. ಅಜ್ಜಿ ಇಲ್ಲಿ ಬಂದಿರಲು ಒಪ್ಪಿದರೆ ಇಲ್ಲಿಗೆ ಕರೆದು ತರುತ್ತೇನೆ ಎಂದು. ಬರಲೇ ಇಲ್ಲ.''

"ಅವರು ಇಲ್ಲಿಗೆ ಬರುವುದಿಲ್ಲ ಮಧು. ನಾನು ಅಲ್ಲಿ ಹೋಗಿ ಇರಲಿ ಎಂದು ಅವರು ಆಸೆ ಪಡುತ್ತಾರೆ. ಅದು ನನ್ನಿಂದ ಸಾಧ್ಯವಿಲ್ಲ.''

"ಅಮ್ಮ ನೀನೊಬ್ಬಳು ಎಷ್ಟು ಎಂದು ಒದ್ದಾಡುತ್ತೀಯೆ. ಕೊನೆಯ ಪಕ್ಷ ಅಪ್ಪ ಹೇಳುವ ಹಾಗೆ ಈ ಪುಟ್ಟ ಮಕ್ಕಳಿಬ್ಬರೂ ದೊಡ್ಡವರಾಗುವವರೆಗಾದರೂ ನೀನು ಅಪ್ಪ, ಅಜ್ಜಿಯೊಂದಿಗೆ ಹಳ್ಳಿಯಲ್ಲಿರಮ್ಮ. ನಾನು ರಾಮನಗರದ ಶಾಲೆಗೆ ಹೋಗಿ ಬರುತ್ತೇನೆ.''

"ಬೇಡ ಮಧು, ಬಹಳ ಕಷ್ಟಪಟ್ಟು ನಿನ್ನೊಂದಿ ಆ ಪರಿಸರದಿಂದ ಹೊರಬಂದಿದ್ದೇನೆ. ಮತ್ತೆ ವರ್ತುಲದೊಳಗೆ ಸೇರಿಕೊಂಡೆನೆಂದ ಹೊರಬರುವುದು ಬಹಳ ಕಷ್ಟ. ಇಷ್ಟು ದಿ ನಿನ್ನೊಬ್ಬನ ಜವಾಬ್ದಾರಿ ಇತ್ತು. ಈಗ ಈ ಇಬ್ಬ ಹೆಣ್ಣುಮಕ್ಕಳ ಜವಾಬ್ದಾರಿಯೂ ನನ್ನ ಮೇಲಿ ಗಂಡು ಹುಡುಗನ ಜವಾಬ್ದಾರಿಗಿಂತ ಹೆ ಮಕ್ಕಳ ಜವಾಬ್ದಾರಿ ದೊಡ್ಡದು. ನಿನ್ನೊಂದಿಗೆ ಇಬ್ಬರು ಹೆಣ್ಣು ಮಕ್ಕಳನ್ನು ವಿದ್ಯಾವಂತ ನ್ನಾಗಿಯೂ, ಸ್ವಾವಲಂಬಿಗಳಾಗಿಯೂ ಮಾಡು ಹೊಣೆ ನನ್ನದಾಗಿದೆ. ಹಾಗಾಗಿ ಇಲ್ಲಿರುವು ಹಿತ ಮಧು.''

"ಆದರೆ ನಮ್ಮೆಲ್ಲರನ್ನೂ ನೋಡಿಕೊಳ್ಳುವು ನಿನಗೆ ಕಷ್ಟವಾಗುವುದಿಲ್ಲವೇನಮ್ಮ?''

"ಮಧು, ಕಷ್ಟ ಪಡಲೆಂದೇ ಹುಟ್ಟಿದವ ನಾನು. ಸುಖ ಬೇಕು ಎಂದರೆ ಅದು ಸಿಗುವುದಾದ ಹೇಗೆ ಹೇಳು.''

"ಅಮ್ಮ ನೀನು ಕಷ್ಟ ಪಡುವುದನ ನೋಡುವುದೇ ನನಗೆ ಕಷ್ಟವಮ್ಮ.''

"ಯಾಕೆ ಹೆದರುತ್ತೀ ಮಧು, ದೇವ ದಯೆ ಎಂಬುದು ಇರುವತನಕ ಹೇಗೋ ನಡೆಯುತ್ತದೆ. ಒಮ್ಮೆ ನೀನು ವಿದ್ಯಾವಂತನಾ ಒಳ್ಳೆಯ ಹುದ್ದೆ ಪಡೆದೆಯೆಂದರೆ ನಮ್ಮ ಕಷ್ಟಗಳೆ ಪರಿಹಾರ ವಾಗುತ್ತದೆ.''

"ಅಮ್ಮ ಅದಕ್ಕೆಲ್ಲ ಇನ್ನೂ ಬಹ ಸಮಯವಿದೆಯಲ್ಲಮ್ಮ. ಬಹಳ ವರ್ಷ ಕಾಯಬೇಕಾಗುವುದು ನೀನು.''

"ಹೇಗೋ ಆಗುತ್ತದೆ ಬಿಡು. ಆದರೆ ನೀನ ಹೇಳುವುದರಲ್ಲೂ ನಿಜಾಂಶವಿದೆ ಮಧು. ಸುಖ ದಿನಗಳು ಓಡಿದಷ್ಟು ವೇಗವಾಗಿ ದುಃಖದ ದಿನಗ ಓಡುವುದಿಲ್ಲ. ಒಟ್ಟಿನಲ್ಲಿ ನಮ್ಮ ಕಷ್ಟಗಳೆ ನೀಗುವವರೆಗೆ ನಮ್ಮ ಬಾಳದೋಣಿ ಹಾಗೋ ಹೀಗೋ ತೇಲುತ್ತಿದ್ದರೆ ಅದೇ ದೊಡ್ಡ ಭಾಗ



ಮುಳುಗದಿದ್ದರೆ ನಮ್ಮ ಪುಣ್ಯ."

"ಅಮ್ಮ ನಿನ್ನ ಕಷ್ಟವನ್ನು ನೆನೆದರೆ ನನಗೆ ಭಯವಾಗುತ್ತದೆ ಅಮ್ಮ."

"ಭಯಭೀತನಾಗಬೇಡ ಮಧು, ಎಂತಾ ಸಂಕಷ್ಟದ ಸಮಯದಲ್ಲೂ ಧೈರ್ಯವೊಂದೇ ದಾರಿದೀಪ. ನಾಳೆ ಬರಲಿರುವ ಒಳ್ಳೆಯ ದಿನಗಳ ನಿರೀಕ್ಷೆಯಲ್ಲಿ ಇಂದಿನ ಕಷ್ಟಗಳನ್ನು ನುಂಗುವುದಷ್ಟೇ ಮನುಷ್ಯನ ಧ್ಯೇಯವಾಗಬೇಕು."

"ಆಗಲಿ ಅಮ್ಮ, ನೀನೇ ಇಷ್ಟೊಂದು ಧೈರ್ಯವಾಗಿರುವಾಗ ನಾನೇಕೆ ಹೆದರಲಿ ಹೇಳು."

"ಹೆದರುವುದು ಹೆದರದಿರುವುದು ಅಷ್ಟೇನು ಮುಖ್ಯವಲ್ಲ ಮಧು. ಚೆನ್ನಾಗಿ ಓದಿ ಮುಂದೆ ಬರುವದಷ್ಟೇ ನಿನ್ನ ಬದುಕಿನ ಧ್ಯೇಯವಾಗಬೇಕು. ಅದಲ್ಲದೆ ಬೇರಾವುದನ್ನೂ ನೀನು ಈಗ ನೆನೆಯಕೂಡದು, ಮನಸ್ಸಿಗೆ ಅಂಟಿಸಿಕೊಳ್ಳಬಾರದು."

ಎರಡೆರಡು ಮಕ್ಕಳನ್ನು ಹಡೆದು ಹಸಿ ಬಾಣಂತಿಯಾದ ಅಮ್ಮ ಅವಳ ಆರೈಕೆಯನ್ನು ಅವಳೇ ಮಾಡಿಕೊಂಡಳು. ಸರಸಮ್ಮನ ದಯೆ ಎಂಬುದೊಂದು ಈ ಸಂದರ್ಭದಲ್ಲಿ ಅವಳಿಗೆ ದೊಡ್ಡ ಆಸರೆಯಾಯಿತು. ಮಕ್ಕಳಿಗೆ, ಅಮ್ಮನಿಗೆ ಸ್ನಾನಕ್ಕೆ ಬಿಸಿನೀರು ನಿತ್ಯ ಒದಗಿಸುತ್ತಿದ್ದರಲ್ಲದೆ ತಾತ್ಕಾಲಿಕವಾಗಿ ಮನೆಯ ಕೆಲಸ ಕಾರ್ಯಗಳಿಗೆ ಬೇರೊಬ್ಬರನ್ನು ನಿಯಮಿಸಿಕೊಂಡು ಅಮ್ಮನಿಗೆ ರಜೆ ಇತ್ತಿದ್ದರು. ಮನೆಯ ಸುತ್ತ ಮುತ್ತಲಿನವರಿಗೆಲ್ಲ ಅಮ್ಮ ಒಂದಲ್ಲ ಒಂದು ವಿಧದಲ್ಲಿ ನೆರವಾಗಿಯೇ ಇದ್ದಳು. ಯಾರು ಯಾವ ಸಮಯಕ್ಕೆ ಕರೆದರೂ ಓಗೊಡುತ್ತಿದ್ದಳು ಅಮ್ಮ. ನೆರೆಹೊರೆಯವರಲ್ಲಿ ಅಮ್ಮನಿಂದ ಉಪಕೃತರಾಗದವರೇ ಇಲ್ಲ ಎನ್ನಬಹುದು. ಈಗ ಅವರೆಲ್ಲ ಕನಿಕರಿಸಿ ಕೊಟ್ಟ ಹಾಲು ತರಕಾರಿ, ಬಟ್ಟೆಗಳು ಅಮ್ಮನ ನೆರವಿಗೆ ಬಂತು. ಹೇಗೋ ಮಕ್ಕಳು ಮೂರು ತಿಂಗಳ ಮುದ್ದು ಕಂದಮ್ಮಗಳಾದವು. ಆ ಮಕ್ಕಳ ಅಳು, ನಗು ಆಟಪಾಟಗಳಿಂದ ಅಮ್ಮನಿಗಿಂತ ಹೆಚ್ಚಾಗಿ

ಸಂತೃಪ್ತಿಪಟ್ಟವನೆಂದರೆ ನಾನೇ. ಅಮ್ಮನಿಗ
ಮುದ್ದುಮಕ್ಕಳ ಬಾಲಲೀಲೆಗಳನ್ನು ಕಾಣಲು ಬಿ
ಇತ್ತಾದರೂ ಎಲ್ಲಿ? ದುಡಿಮೆ, ದುಡಿಮೆ ನಿರ
ದುಡಿಮೆ. ಹಳಿತರ ಪಥ ನಡೆಯಬೇಕಾ
ಹೇಗೆ? ದುಡಿಯುವುದು ಎರಡು ಕೈ
ತಿನ್ನುವುದು ನಾಲ್ಕು ಬಾಯಿ ಈಗ. ಎಷ್ಟು ದುಡಿ
ಸಾಲದು. ಅಮ್ಮ ಮೈಮರೆತು, ಶ್ರದ್ಧೆಯಿ
ಶ್ರಮದಿಂದ ದುಡಿದಳು. ಎದ್ದ ಬಾಣಂತಿಗೆ ಕೈತ
ಕೆಲಸ. ಬಿಡುವು ಎಂಬುದು ಅಪರೂಪದ
ದುಡಿಮೆಯೇ ದೇವರು, ದೈವ ಎಂದು ನಂಬಿ
ಅವಳು. ಕಷ್ಟಕ್ಕೆ ಹೆದರಲಿಲ್ಲ, ಬೆಚ್ಚಿಬೀಳ
ಅವಳ ನಡೆ ನುಡಿಗಳು ನನಗೆ ಮಾರ್ಗದ
ವಾಗಿದ್ದವು.

"ಹುಲ್ಲಾಗು ಬೆಟ್ಟದಡಿ, ಮ
ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿದಿ ಸು
ಬೆಲ್ಲ ಸಕ್ಕರೆಯಾಗು ದೀನ ದುರ್ಬಲ
ಎಲ್ಲರೊಳಗೊಂದಾಗು ಮಂಕುತಿಮ್ಮ

ಈ ಸೂತ್ರಕ್ಕನುಗುಣವಾಗಿ ಇತ್ತು
ಅಮ್ಮನ ಜೀವನ. ಬದುಕಿನಲ್ಲಿ ಯ
ಅನುಕರಿಸಬಹುದ, ಅನುಸರಿಸಬಹುದಾದ ಜ
ಅಮ್ಮನದು.

ಅಮ್ಮನಿಗೆ ಈಗ ದುಡಿಮೆ ಎನ್ನು
ಅನಿವಾರ್ಯವಾಯಿತು. ಅಮ್ಮ ಟೊಂಕ ಕಟ್ಟಿ
ಅಚಲ ನಿರ್ಧಾರ ಮಾಡಿದಳು. ನೆರೆಹೊರೆಯ
ನೆರವಿಗೆ ಬಂದರು. ಸರಸಮ್ಮನ ಉಪಕಾರವನ್ನ
ನಾನು, ಅಮ್ಮ ಈ ಜನ್ಮದಲ್ಲಿ ಮರೆಯುವಂ
ಮತ್ತೆ ಎಷ್ಟು ಜನ್ಮಗಳನ್ನೆತ್ತಿ ಬರಬೇಕೋ ನ
ಅಮ್ಮ ಆ ತಾಯಿಯ ರುಣ ಸಂದಾಯ ಮಾ
ಬರೀ ನಾನು ಮಾಡಿದೆ, ನಾನು ಮಾಡುತ್
ನನ್ನಿಂದಲೇ ಎಲ್ಲ, ನಮ್ಮ ಅನಿಸಿಕೆಗಳು ಮ
ಹುಟ್ಟಿನಿಂದ ಸಾವಿನವರೆಗೆ ನಾವು ಹಲವು ಮ
ಹಲವು ವಿಧದಲ್ಲಿ ರುಣಿಗಳಾಗಿರುತ್ತೇವೆ ಎಂಬ
ಖಂಡಿತ.

(ಸು

'ರಾಗಸಂಗಮ' ಲಾಟರಿ ಡ್ರಾ–೧೪೬೪

ಬಹುಮಾನ ರೂ. 200 ಇದ್ದ ಈ ಲಾಟರಿ ಡ್ರಾನಲ್ಲಿ ಒಟ್ಟು 1091 ಜನ ಭಾಗವಹಿಸಿದ್ದು ಈ ಕೆಳಕಂಡ ನಾಲ್ಕು ಜನ ಡ್ರಾನಲ್ಲಿ ವಿಜೇತರಾಗಿದ್ದಾರೆ. ವಿಜೇತರುಗಳಿಗೆ ಬಹುಮಾನದ ಹಣ ತಲಾ ರೂ. 50ರಂತೆ 3 ದಿನಗಳೊಳಗಾಗಿ ಕಳುಹಿಸಿ ಕೊಡಲಾಗುವುದು. ವಿಜೇತರಿಗೆ ಶುಭಾಶಯಗಳು.

ವಿಜೇತರ ಹೆಸರು ಮತ್ತು ವಿಳಾಸ :

1. **ಸಿ. ಕೆ. ಕರುಣಾಶ್ರೀ,** D/o ಕೃಷ್ಣಶೆಟ್ಟಿ, ಬೂದಿಮುಟ್ಲು, **ವೇಪನಪಲ್ಲಿ – 635 121,** ಕೃಷ್ಣಗಿರಿ ತಾಲ್ಲೂಕು, ಧರ್ಮಪುರಿ ಜಿಲ್ಲೆ, ತಮಿಳುನಾಡು.
2. **ಕಲ್ಪನಾ ವೇಣುಗೋಪಾಲ್,** 'ಪದ್ಮಾವತಿ ನಿಲಯ', 41, 7ನೇ ಮುಖ್ಯರಸ್ತೆ, ಆವಲಹಳ್ಳಿ ಬಿ.ಡಿ.ಎ. ಲೇಔಟ್, ಬನಶಂಕರಿ 3ನೇ ಹಂತ, **ಬೆಂಗಳೂರು – 560 085.**
3. **ಸಿ. ಬಬಿತ,** ಛನ್ನಿಗನ ತೋಟ, **ಹೊನ್ನೇಸರ – 577 417,** ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
4. **ತಾರಾ ಗುಲ್ಲಿ,** ನಿತ್ಯಾನಂದ ಭವನ, ರಂಗ್‌ವಾಲಾ ಬಿಲ್ಡಿಂಗ್, ಜಾಕಬ್ ವೃತ್ತ, ಮೋಸಸ್ ರಸ್ತೆ, **ಮುಂಬಯಿ – 400 011.**

ವಿ.ಸೂ. : **'ರಾಗಸಂಗಮ'**ದ ಮುಂಬರುವ ಸಂಚಿಕೆಯಲ್ಲಿ ವಿಜೇತರುಗಳ ಭಾವಚಿತ್ರವನ್ನು ಪ್ರಕಟಿಸಲಿರುವುದರಿಂದ ವಿಜೇತರುಗಳು ತಮ್ಮ ಕಪ್ಪುಬಿಳುಪು ಪಾಸ್‌ಪೋರ್ಟ್ ಆಕಾರದ ಭಾವಚಿತ್ರವನ್ನು ಈ ಕೂಡಲೇ (ಎಂದರೆ ಒಂದು ವಾರದೊಳಗಾಗಿ) ನಮ್ಮ ಕೈ ಸೇರುವಂತೆ ಕಳುಹಿಸಿ ಕೊಡಬೇಕಾಗಿ ಕೋರುತ್ತೇವೆ.

ಮುಂದಿನ ಸಂಚಿಕೆ

ಶುಕ್ರವಾರ 13–11–92ರಂದು ಎಲ್ಲೆಡೆ ಲಭ್ಯ

ಈ ಸಂಚಿಕೆಯಲ್ಲಿ

ಬೇಲೂರು ರಾಮಮೂರ್ತಿ ಅವರ

ಸಾಗರ ಸೇರದ ನದಿಗಳು

ಸಂಪೂರ್ಣ ಕಾದಂಬರಿ ಪ್ರಕಟವಾಗುತ್ತದೆ

ಪ್ರಶ್ನೋತ್ತರ

'ಕೆಎಸ್ಸಾರ್'

* ಆರ್. ಶಂಕರನಾರಾಯಣ ರಾಜು,
ಬೆಂಗಳೂರು

ತೆರಿಗೆ ಇಲ್ಲದ ವಸ್ತು ಯಾವುದು ಕೆಎಸ್ಸಾರ್‌ರವರೇ?

— ಲಂಚ.

* ಮುಳವಳ್ಳಿ ಚಂದ್ರು,
ಸಕಲೇಶಪುರ

ಪ್ರಿಯ ಅಂಕಲ್, ಭಾರತದ ಇಂದಿನ ಸಮಸ್ಯೆಗೆ ಕಾರಣವೇನು?

— ಮೇಲಿನ ಪ್ರಶ್ನೆಯ ಉತ್ತರವೇ.

* ಶಶಿಕಲಾ, ಮುಂಬಯಿ

ಎಲ್ಲ ವಸ್ತುಗಳ ಬೆಲೆ ಏರುತ್ತಿದ್ದರೂ ಪೋಸ್ಟ್ ಕಾರ್ಡಿನ ಬೆಲೆ ಏರಲಿಲ್ಲವಲ್ಲ, ಯಾಕೆ?

— ನಿಜವಾಗಿಯೂ ಕೇಂದ್ರ ಸರ್ಕಾರವು ಬಡವರಿಗೆ ಮಾಡುತ್ತಿರುವ ಒಂದೇ ಉಪಕಾರವಿದು.

* ಸಂಜೀವ್‌ಕುಮಾರ್ ಚೋಡಿ,
ವಂಬಳ

ಅವಿವಾಹಿತ ಮಹಿಳೆಗೆ ತಾಯ್ತನದ ಹಕ್ಕಿದೆಯೇ?

— ಮಹಿಳೆಯರಾದ ಪ್ರತಿಯೊಬ್ಬರಿಗೂ ತಾಯ್ತನದ ಹಕ್ಕಿದೆ.

* ಹನುಮೇಶ ಎಂ. ಜಗ್ಗರೆ,
ಹಿರೇಅರಳಿಹಳ್ಳಿ

ಒಂದು ಸರಕಾರವು ತೀರಾ ನೀಚ
ಇಳಿದಾಗ ಉದ್ಭವಿಸಬಹುದಾದ ಸಮಸ್ಯೆ
ಕೆಎಸ್ಸಾರ್ ಅಂಕಲ್‌ರವರೇ?

— ಈಗ ನಾವು ಅನುಭವಿಸುತ್ತಿರು

* ಎನ್. ಇರ್ಶಾದ್, ಬೆಳಗಾಂ

ಶಾಸಕರು ಕೊಲೆ ಮಾಡಿದರೂ ಅ
ಮರಣದಂಡನೆಯ ಶಿಕ್ಷೆ ಯಾಕೆ ವಿಧಿ
ದಿಲ್ಲ?

— ಮರಣದಂಡನೆ ಶಿಕ್ಷೆಯನ್ನು ಸಾ
ರಿಗೂ ವಿಧಿಸುವುದಿಲ್ಲವೆಂಬ ಸಿದ್ಧಾಂ
ಕೇಂದ್ರ ಸರ್ಕಾರ ಅನುಸರಿಸುತ್ತಿದೆ.

* ಕಣತೂರು ಕೆಂಪರಾಜ್, ಚಿಕ್ಕಬಳ್ಳಾ

ಜನರು ಕಾಲ ಕೆಟ್ಟು ಹೋ
ಅನ್ನುತ್ತಾರೇಕೆ?

— ಕಾಲದಲ್ಲೇ ಎಲ್ಲವೂ ಅಡ
ರುವುದರಿಂದ– ಜನ, ಸರ್ಕಾರ ಇತ್ಯಾದಿ

* ಎಲಿಯಾಸ್ ಲೋಬೋ, ವಾಪಿ

ಬೆಳದಿಂಗಳ ರಾತ್ರಿ ಚಂದ್ರನೇಕೆ
ತ್ತಿರುತ್ತಾನೆ?

— ಸಂಪೂರ್ಣ ಬಿಡುಗಡೆಯಾದ ಸ

* ಎಸ್. ಪ್ರವೀಣ್‌ಕುಮಾರ್, ಸಿರ್ಸಿ

ಗುರುವಿಲ್ಲದೆ ಕಲಿಯುವ ವಿದ್ಯೆಯು
ಕೃಪೆಯೋ, ಛಲದ ಸಾಧನೆಯೋ?

— ಛಲದ ಸಾಧನೆಯಾದರೂ
ದೈವ ಕೃಪೆ ಎನ್ನುವರು.

* ಶ್ರೀಧರ ಮಯ್ಯ,
ಸಾಗರ

ರಾಜಕೀಯ ಹೊಲಸೋ, ರಾಜಕಾರಣಿಗಳು ಹೊಲಸೋ?

– ರಾಜಕಾರಣಿಗಳಿಂದ ರಾಜಕೀಯ.

* ಸುಮ ಕೆ. ವಿ; ಶಿವಮೊಗ್ಗ

ವರದಕ್ಷಿಣೆ ವಿರೋಧಿಗಳಾಗಿದ್ದೂ, ವರ ವರದಕ್ಷಿಣೆ ಬೇಡವೆಂದಾಗ ಆತನನ್ನು ಸಂಶಯದಿಂದ ನೋಡುವುದೇಕೆ?

– ಮಾತಿನಲ್ಲಿ ಆಡುವುದನ್ನು ಕಾರ್ಯರೂಪಗೊಳಿಸದವರ ಮಧ್ಯೆ ಹೀಗೂ ಒಬ್ಬರಿದ್ದಾರೆ ಎಂದಾಗ ಸಂಶಯ ಬರುವುದು ಸಹಜವೇ.

* ಕೆ. ಎನ್. ಮನು ರೈ, ಸೋಮವಾರಪೇಟೆ

ಜನಸೇವೆಗೆಂದು ಹೊರಟವನಿಗೆ ಮೊದಲು ಸಿಕ್ಕುವುದೇನು ಗುರು?

– ಇಂದು ಚಾಕು ಚೂರಿ ಏಟು. ಕೆಲವೊಮ್ಮೆ ಗುಂಡೇಟೂ ಸಹ.

* ಎಸ್. ಪ್ರಕಾಶ, ಜಯಪುರ


ಹಣ ಕೊಡದೆ ಸಿಗುವ ವಸ್ತು ಈ ಜಗತ್ತಿನಲ್ಲಿ ಏನಾದರೂ ಇದೆಯೇ, ಬೇಗ ತಿಳಿಸಿ?



– ಎಂದೆಂದಿಗೂ ಮಾತೃ ವಾತ್ಸಲ್ಯ.

* ಸುನೀಲ ವಸಂತ ಕಾಮತ್, ಸಿದ್ದೇಶ್ವರ

ಗಾಂಧೀಜಿಯವರು ಸ್ವರ್ಗದಲ್ಲಿ ಏನು ಮಾಡುತ್ತಿದ್ದಾರೆ ಅಂಕಲ್?



– ಅಲ್ಲೂ ಸುರಾಪಾನ ನಿಷೇಧಕ್ಕಾಗಿ ಸತ್ಯಾಗ್ರಹ ಮಾಡುತ್ತಿರಬೇಕು.

* ಎಸ್. ಎಲ್. ವಿ. ಅನಿಲ್‌ಕುಮಾರ್,
ಮುದಗಲ್

'ರಾಗಸಂಗಮ' ಪತ್ರಿಕೆಯ ಪ್ರಪ್ರಥಮ ಸಂಚಿಕೆ ಈಗಿನ ಪ್ರತಿಯಂತೆ ಇತ್ತೆ?

– ಇದೇ ಆಕಾರದಲ್ಲಿದ್ದು ಮುದ್ರಣದ ಗುಣಮಟ್ಟ ಬಹಳ ತಗ್ಗಿನಲ್ಲಿತ್ತು.

* ಜಯಲಕ್ಷ್ಮಿ ಸುಂದರೇಶನ್,
ಮೈಸೂರು

ಇತ್ತೀಚಿನ ಪ್ರತಿಭಟನೆ, ಮುಷ್ಕರ, ಮೆರವಣಿಗೆ ಸಾಗಿರುವ ಹಾದಿ ಸರಿಯಿದೆಯೇ?

– ಕೆಲವೊಂದಕ್ಕೆ ಇದು ಅಗತ್ಯವಾದರೂ ಇಂದಿನ ದಿನಗಳಲ್ಲಂತೂ ಅಗತ್ಯವಿಲ್ಲದಿದ್ದಕ್ಕೇ ಆಗುತ್ತಿದೆ.

* ಮಕ್ಕಳ ಕಥೆ

ಬಣ್ಣದ ಹಕ್ಕಿ ಮತ್ತು ನರಿ

ಎಂ. ಶಿವಾಜಿರಾವ್

ಒಂದು ಕಾಡಿನಲ್ಲಿ ಒಂದು ಎತ್ತರವಾದ ಮರದ ಮೇಲೆ ವಿವಿಧ ಬಣ್ಣಗಳ ಹಕ್ಕಿಯೊಂದು ತನ್ನ ಮರಿಗಳೊಂದಿಗೆ ವಾಸವಾಗಿತ್ತು. ಹಕ್ಕಿಯನ್ನು ಮರಿಗಳೊಂದಿಗೆ ನುಂಗಬೇಕೆಂದು ನರಿಯೊಂದು ಒಂದು ದಿನ ಮರದ ಕೆಳಗೆ ಕುಳಿತುಕೊಂಡು ತನ್ನ ಬಾಲದಿಂದ ಮರವನ್ನು ಬಡಿಯಲಾರಂಭಿಸಿತು. ಅದನ್ನು ಕಂಡ ಹಕ್ಕಿಯು "ನರಿಯಣ್ಣ, ನನ್ನ ಮರವನ್ನೇಕೆ ಬಡಿಯುತ್ತಿದ್ದೀಯೆ?'' ಎಂದು ಕೇಳಿತು. "ಹೀಗೆ ಬಡಿಯುತ್ತಿದ್ದರೆ ಮರ ನೆಲಕ್ಕೆ ಬೀಳುತ್ತದೆ. ಆಗ ನಾನು ನಿನ್ನನ್ನೂ, ನಿನ್ನ ಮರಿಗಳನ್ನು ನುಂಗಬಹುದು'' ಎಂದು ನರಿ ಬೆದರಿಸಿದಾಗ ಹಕ್ಕಿ ನಿಜವಾಗಿಯೂ ಹೆದರಿತು. "ನರಿಯಣ್ಣ, ಹಾಗೆ ಮಾಡಬೇಡ. ನಿನಗೆ ರುಚಿರುಚಿಯಾದ ರೊಟ್ಟಿಗಳನ್ನೂ, ಜೇನುತುಪ್ಪವನ್ನೂ ನಾನು ಕೊಡಿಸುತ್ತೇನೆ. ಮರವನ್ನು ಮಾತ್ರ ಬಡಿಯಬೇಡ. ನನ್ನ ಮರಿಗಳು ಸತ್ತು ಹೋದರೆ ನನ್ನ ಗತಿ ಏನು?'' ಎಂದು ಗೋಳಾಡಿತು. ಮನಸ್ಸಿನಲ್ಲಿಯೇ ನಕ್ಕ ನರಿ "ಆಗಲಿ'' ಎಂದಿತು.

ಮಾರನೆಯ ದಿನ ನರಿ ಮತ್ತು ಹಕ್ಕಿ ಕಾಡಿನಲ್ಲಿ ಹೊರಟವು. ಊರಿಗೆ ಸ್ವಲ್ಪ ದೂರದಲ್ಲಿ ಮುದುಕಿಯೊಬ್ಬಳು ತನ್ನ ಮೊಮ್ಮಗಳೊಂದಿಗೆ ಪ್ರಯಾಣ ಬೆಳೆಸಿದ್ದಳು.

ಅವಳ ತಲೆಯ ಮೇಲಿದ್ದ ಬುಟ್ಟಿ
ಗರಿಗರಿಯಾದ ಅಕ್ಕಿ ರೊಟ್ಟಿಗಳಿದ್ದವು. ಪ
ಚೆಂಬಿನ ತುಂಬ ಜೇನು ತುಪ್ಪವಿತ್ತು. ಅ
ನೋಡಿದ ಹಕ್ಕಿ "ನಾನು ನೆಲದ ಪ
ಸತ್ತಂತೆ ಮಲಗಿಕೊಳ್ಳುತ್ತೇನೆ. ಅದನ್ನು ನೋ
ಮೊಮ್ಮಗಳು ಬುಟ್ಟಿಯನ್ನು ನೆಲದ ಮೇ
ನನ್ನನ್ನು ಎತ್ತಿಕೊಳ್ಳಲು ಯತ್ನಿಸುತ್ತಾಳೆ. ನ
ಪೊದೆಯಲ್ಲಿ ಅಡಗಿರು. ಬುಟ್ಟಿಯು ನ
ಮೇಲೆ ಇಟ್ಟ ಕೂಡಲೇ ನೀನು ಓಡಿಹೋ
ಅದನ್ನು ಎತ್ತಿಕೊಂಡು ಬಾ'' ಎಂದು ಉಪಾ
ಹೇಳಿಕೊಟ್ಟಿತು.

"ಆಗಲಿ'' ಎಂದು ನರಿಯು ದೂ
ಪೊದೆಯ ಹಿಂದೆ ಅಡಗಿಕೊಂಡಿತು. ಅ
ಸಮೀಪದಲ್ಲಿಯೇ ಬಣ್ಣದ ಹಕ್ಕಿ ಸ
ಬಿದ್ದಂತೆ ನೆಲದ ಮೇಲೆ ಬಿದ್ದಿತ್ತು. ಅದ
ಕಂಡಳು ಅಜ್ಜಿ. ಅವಳಿಗೆ ಬಹಳ ಆಶೆಯುಂ
ಯಿತು. "ಈ ಹಕ್ಕಿ ನೋಡು ಎಷ್ಟು ಚೆನ್ನಾಗಿ
ಇಂತಾ ಸುಂದರ ಹಕ್ಕಿಯನ್ನು ನಾನು ನೋಡಿ
ಇಲ್ಲ'' ಎಂದು ಅಜ್ಜಿ ಮೊಮ್ಮಗಳಿಗೆ ಹ
ದಳು.

"ಹೌದು, ಎಷ್ಟು ಚೆನ್ನಾಗಿದೆ. ಅದ
ಎತ್ತಿ ಊರಿಗೆ ತೆಗೆದುಕೊಂಡು ಹೋಗೋ
ಎಂದು ಮೊಮ್ಮಗಳು ಹೇಳಿದಾಗ ಅಜ್ಜಿ ಬ
ಎನ್ನಲಿಲ್ಲ.

ಮೊಮ್ಮಗಳು ಹಕ್ಕಿಯನ್ನು ಎತ್ತಿಕೊಳ್ಳ
ತಲೆಯ ಮೇಲಿದ್ದ ಬುಟ್ಟಿಯನ್ನು ಕೆಳಗಿಟ್ಟ
ಅದನ್ನೇ ಗಮನಿಸುತ್ತಿದ್ದ ನರಿ ಭರ್ರನೆ
ಬಂದು ಮೊಮ್ಮಗಳನ್ನೂ, ಅಜ್ಜಿಯನ್ನೂ ಹೆದ
ಬುಟ್ಟಿಯನ್ನು ಎತ್ತಿಕೊಂಡು ಓಡಿ ಹೋಯಿ
ನರಿ ಓಡಿ ಹೋದ ಕೂಡಲೇ ಬಣ್ಣದ ಹ
ಹಾರಿ ಹೋಯಿತು.

ಇದನ್ನು ಕಂಡು ಅಜ್ಜಿ, ಮೊಮ್ಮಗ
ಆಶ್ಚರ್ಯದಿಂದ ನೋಡುತ್ತ ನಿಂತರು.

ನರಿ ಇನ್ನೊಮ್ಮೆ ಮರಕ್ಕೆ ಬಾಲ ಬಡಿಯುತ್ತ ನಿಂತಿತು. "ಪುನಃ ಏಕೆ ಬಂದಿದ್ದೀಯೆ?'' ಎಂದು ಹಕ್ಕಿ ಕೇಳಿತು.

"ನನಗೆ ಹಸಿವಾಗಿದೆ, ಆಹಾರ ಬೇಕು.'' ನರಿ ಉತ್ತರಿಸಿತು.

"ಅದಕ್ಕೆ ನಾನೇನು ಮಾಡಲಿ?'' ಹಕ್ಕಿ ಕೇಳಿತು.

"ನನಗೆ ಆಹಾರ ಕೊಡಿಸು.''

ಹೀಗೆಯೇ ಬಿಟ್ಟರೆ ಈ ನರಿ ನಿತ್ಯವೂ ನನ್ನನ್ನು ಸತಾಯಿಸುತ್ತದೆ ಎಂದು ಹಕ್ಕಿ ಯೋಚಿಸಿತು.

ಎರಡೂ ಊರಿನತ್ತ ಹೊರಟವು. ಕೆಲವು ಕಾಡು ಕೋಳಿಗಳು ಕೂಗುತ್ತಿದ್ದವು. ಅವುಗಳ ಬಳಿ ಬೇಟೆಗಾರರು ಸುತ್ತುತ್ತಿರುವುದು ನರಿಗೆ ಕಾಣಿಸಲಿಲ್ಲ.

"ಅಲ್ಲಿ ಕೋಳಿಗಳಿವೆ, ನೀನು ಹೋಗು'' ಎಂದು ಹೇಳಿದಾಗ ನರಿಗೆ ಬಹಳ ಸಂತೋಷವಾಯಿತು."ನೀನು ನಿಜವಾದ ಸ್ನೇಹಿತ'' ಎಂದು ಅದು ಹಕ್ಕಿಯನ್ನು ಪ್ರಶಂಸಿಸಿತು.

ನರಿ ಒಮ್ಮೆಲೇ ಕಾಡು ಕೋಳಿಗಳ ಮೇಲೆ ಎರಗಿತು. ದಟ್ಟವಾಗಿ ನಿಂತಿದ್ದ ಕೋಳಿಗಳು ಚೆಲ್ಲಾಪಿಲ್ಲಿಯಾಗಿ ಚದುರಿದವು.



"ನಾಳೆ ಬಾ. ಇಬ್ಬರೂ ಊರಿನ ಬಳಿಗೆ ಹೋಗೋಣ. ಅಲ್ಲಿ ನೂರಾರು ಕೋಳಿಗಳಿವೆ ನಿನಗೆ ಆಹಾರ ಸಿಗುತ್ತದೆ'' ಎಂದು ಹಕ್ಕಿ ಹೇಳಿದಾಗ ನರಿಗೆ ಸಂತೋಷವಾಯಿತು.

* * * *

ಆ ರಾತ್ರಿ ನರಿಗೆ ನಿದ್ರೆಯಲ್ಲಿ ಕೋಳಿಗಳನ್ನು ಸಮೃದ್ಧವಾಗಿ ತಿಂದ ಕನಸುಗಳು. ಬೆಳಗ್ಗಿನ ವರೆಗೂ ನರಿಗೆ ನಿದ್ರೆ ಹತ್ತಲಿಲ್ಲ.

ಬೆಳಿಗ್ಗೆ ನರಿಗೆ ಎಚ್ಚರವಾಯಿತು. ಅಷ್ಟು ಹೊತ್ತಿಗೆ ಹಕ್ಕಿ ಪ್ರಯಾಣಕ್ಕೆ ಸಿದ್ಧವಾಗಿತ್ತು.

ಕೂಡಲೇ ಮರೆಯಲ್ಲಿ ನಿಂತಿದ್ದ ಬೇಟೆಗಾರರು ಬಾಣಗಳನ್ನು ಬಿಟ್ಟರು. ಕೋಳಿಗಳು ಚೆದರಿ ಹೋಗಿದ್ದರಿಂದ ಬಾಣ ಅವುಗಳಿಗೆ ತಾಕಲಿಲ್ಲ. ಚೂಪಾದ ಬಾಣಗಳು ಹಾರಿಬಂದು ನರಿಯ ಕುತ್ತಿಗೆಯನ್ನು ಸೀಳಿ ಹಾಕಲು ನರಿ ಅಲ್ಲಿಯೇ ಸತ್ತು ಬಿದ್ದಿತು.

ಅದನ್ನು ಕಂಡು ಬಣ್ಣದ ಹಕ್ಕಿ ಅತಿಯಾಸೆ ಗತಿಕೇಡು ಎಂದು ಹೇಳಿಕೊಳ್ಳುತ್ತ ಅಲ್ಲಿಂದ ಹಾರಿಹೋಯಿತು.

ಸಿನಿ ಬಿಟ್ಸ್

ರಾಜನ್–ನಾಗೇಂದ್ರರ ಪ್ರತಿಭೆಗೆ ಮತ್ತೊಂದು ಗರಿ ಪೆಂಡ್ಯಾಲ ಪ್ರಶಸ್ತಿ

ಸುಶ್ರಾವ್ಯ ಸುಮಧುರ ಸಂಗೀತ ಸಂಯೋಜನೆಯಿಂದ ಕಳೆದ 40 ವರ್ಷಗಳಾದ ಕನ್ನಡ ಚಿತ್ರಪ್ರೇಮಿಗಳ ಮನ ತಣಿಸುತ್ತಾ ಬಂದಿರುವ ರಾಜನ್–ನಾಗೇಂದ್ರ ಸೋದರರ ಪ್ರತಿಭೆಗೆ ಮತ್ತೊಂದು ಗರಿ ಸೇರಿದಂತಾಗಿದೆ. ಈಚೆಗೆ ಖ್ಯಾತ ಸಂಗೀತ ನಿರ್ದೇಶಕ ಹಾಗೂ ಗಾಯಕ ಪೆಂಡ್ಯಾಲ ಅವರ ಹೆಸರಿನಲ್ಲಿ ನೀಡುತ್ತಿರುವ ಪ್ರಶಸ್ತಿಯನ್ನು ರಾಜನ್–ನಾಗೇಂದ್ರ ಪಡೆದುಕೊಂಡಿದ್ದಾರೆ. ಹೈದರಾಬಾದ್‌ನ ಅಭಿನಂದನಾ ಸಾಂಸ್ಕೃತಿ ಸಂಸ್ಥೆ ನೀಡುವ ಈ ಪ್ರಶಸ್ತಿಯನ್ನು ಈಚೆಗಷ್ಟೇ ಹೈದರಾಬಾದ್‌ನ ರವೀಂದ್ರ ಭಾರತಿ ಸಭಾಂಗಣದಲ್ಲಿ ರಾಜನ್–ನಾಗೇಂದ್ರ ಸ್ವೀಕರಿಸಿದ್ದಾರೆ.



ರಾಜನ್–ನಾಗೇಂದ್ರ ಸಹೋದರರಲ್ಲಿ ರಾಜನ್ ಅವರು ನಾಗೇಂದ್ರ ಅವರಿಗಿಂತ ಎರಡು ವರ್ಷ ಹಿರಿಯರು. ಮುಂದಿನ

ವರ್ಷಕ್ಕೆ 60 ವರ್ಷ ಪೂರೈಸಲಿರುವ ರಾಜನ್ ಅವರು ತಮ್ಮ ಸಹೋದರ ನಾಗೇಂದ್ರ ಅವರೊಡಗೂಡಿ ಸಂಗೀತ ನಿರ್ದೇಶನ ನೀಡಿದ ಮೊದಲ ಚಿತ್ರ **ಸೌಭಾಗ್ಯ ಲಕ್ಷ್ಮಿ**. ಈ ಚಿತ್ರ ಬಿಡುಗಡೆಯಾಗಿ 40 ವರ್ಷಗಳಾಗಿವೆ. ಆಗಿನಿಂದ ಈಗಿನವರೆಗೂ ರಾಜನ್–ನಾಗೇಂದ್ರ ಅವರು ಜನರಂಜನೆಯ ಸಂಗೀತವನ್ನು ನೀಡುವ ಕಾಯಕವನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಬರುತ್ತಿದ್ದಾರೆ. **ಎರಡು ಕನಸು, ಕಳ್ಳ ಕುಳ್ಳ, ಸಿಂಗಪೂರ್‌ನಲ್ಲಿ ರಾಜ ಕುಳ್ಳ, ಗಂಧದ ಗುಡಿ, ಗಿರಿಕನ್ಯೆ, ಚಂದನದ ಗೊಂಬೆ, ಪ್ರೇಮಪರ್ವ, ಪರಸಂಗದ ಗೆಂಡೆತಿಮ್ಮ, ಹೃದಯಗೀತೆ** ಹಾಗೂ **ಮತ್ತೆ ಹಾಡಿತು ಕೋಗಿಲೆ** ಮುಂತಾದ ಚಿತ್ರಗಳ ಗೀತೆಗಳು ಇಂದಿಗೂ ಸುಶ್ರಾವ್ಯತೆಗೆ ಹೆಸರಾಗಿ ಜನಪ್ರಿಯವಾಗಿದೆ.

"ಚಿಕ್ಕ ವಯಸ್ಸಿನಲ್ಲಿ ಬಯಲು ನಾಟಕಗಳನ್ನು ವೀಕ್ಷಿಸಲು ರಾತ್ರಿ ಅಲ್ಲಿಗೆ ಹೋದಾಗ ನಮ್ಮ ಮನ ಸೆಳೆಯುತ್ತಿದ್ದುದು ಅಲ್ಲಿನ ಸಂಗೀತ. ಸಂತೋಷ, ದುಃಖ, ಆಶ್ಚರ್ಯ, ಹಾಸ್ಯ, ಸಾಹಸ ಹೀಗೆ ವಿವಿಧ ರೀತಿಯ ಮಟ್ಟುಗಳಲ್ಲಿ ರಂಗಮಂದಿರದ ಮುಂದೆಯೇ ಕುಳಿತಿರುತ್ತಿದ್ದ ಸಂಗೀತಗಾರರು ತಕ್ಕ ರೀತಿಯ ಸಂಗೀತ ನೀಡುತ್ತಿದ್ದರು. ಗ್ರಾಮ್ಯ ಸಂಗೀತ, ನಾಟಕದ ಜನಾಕರ್ಷಕ ಹಾಡಿನ ಶೈಲಿಯನ್ನು ನಾವು ಅನೇಕ ಚಿತ್ರಗಳಲ್ಲಿ ಉಪಯೋಗಿಸಿದ್ದೇನೆ'' ಎನ್ನುತ್ತಾರೆ ರಾಜನ್–ನಾಗೇಂದ್ರ.

ಇಲ್ಲಿಯವರೆಗೂ 260ಕ್ಕೂ ಹೆಚ್ಚು ಕನ್ನಡ ಚಿತ್ರಗಳಿಗೆ ಸಂಗೀತ ನೀಡಿರುವ ರಾಜನ್–ನಾಗೇಂದ್ರ ಅವರು ಸುಮಾರು 50 ತೆಲುಗು ಹಾಗೂ ತಮಿಳು ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ಕಳೆದ ಎರಡು ವರ್ಷದ ಹಿಂದೆ ಅವರು ಸಂಗೀತ ನೀಡಿದ **'ಪ್ರೇಮಿ ಖೈದಿ'** ಚಿತ್ರ ಯಶಸ್ಸು ಗಳಿಸಿದ ನಂತರ ಅವರು ತೆಲುಗು ಚಿತ್ರರಂಗದಲ್ಲಿಯೂ ಬಿಜಿ ಆಗಿದ್ದಾರೆ. ವಾಸ್ತವವಾಗಿ ಅವರು ಈ ಹಿಂದೆ ಆಂಧ್ರ ಪ್ರದೇಶ ಸರ್ಕಾರದ ಶ್ರೇಷ್ಠ ಸಂಗೀತ ನಿರ್ದೇಶಕ ಪ್ರಶಸ್ತಿ ಗಳಿಸಿದ್ದರು.

ತಮ್ಮ ಸರಳ, ಸೌಮ್ಯ ವ್ಯಕ್ತಿತ್ವಕ್ಕೆ ಹೆಸರಾಗಿರುವ ರಾಜನ್–ನಾಗೇಂದ್ರ ಜೋಡಿ ಇನ್ನೂ ಹೆಚ್ಚಿನ ಸಾಧನೆಗೆ ಕಾರಣರಾಗಿ ಕೀರ್ತಿವಂತರಾಗಲಿ ಎಂದು ಹಾರೈಸೋಣ.

ಪನೋರಮಾಕ್ಕೆ 'ಸಂಗ್ಯಾ ಬಾಳ್ಯಾ' ಸುಂದರಕೃಷ್ಣ ಅರಸ್ ಪ್ರತಿಭೆಗೆ ಅರ್ಹ ಮನ್ನಣೆ

ಚಿತ್ರರಂಗಕ್ಕೆ ಸಹ ನಿರ್ದೇಶಕರಾಗಿ ಪಾದಾರ್ಪಣೆ ಮಾಡಿದ ಸುಂದರಕೃಷ್ಣ ಅರಸ್ ತಮ್ಮ ವಿಶಿಷ್ಟ ಧ್ವನಿಯಿಂದ ಹಾಗೂ ಉತ್ತಮ ನಟನೆಯಿಂದ ಮುಂದೆ ಜನಪ್ರಿಯರಾದರು. ಆದರೆ ನಿರ್ದೇಶನದ ಕೆಲಸ ಅವರಿಗೆ ಗೀಳಿನಂತಾಗಿತ್ತು. ಮನಸ್ಸಿನಲ್ಲಿ ಅವರಿಗೆ ಒಳ್ಳೊಳ್ಳೆಯ ಚಿತ್ರಗಳನ್ನು ನಿರ್ದೇಶಿಸಲೇಬೇಕೆನ್ನುವ

ಆಕಾಂಕ್ಷೆ ಪ್ರಬಲವಾಗಿತ್ತು. ಕಳೆದ ವರ್ಷ ಅವರು 'ಚಕ್ರ' ಎನ್ನುವ ಸ್ವಾತಂತ್ರ್ಯಪೂರ್ವ ಕಾಲದ ಕಥೆಯ ಹಿನ್ನೆಲೆಯುಳ್ಳ ಒಂದು ಚಿತ್ರವನ್ನು ನಿರ್ದೇಶಿಸಿದ್ದರು. ಈ ವರ್ಷ ಅವರು ನಿರ್ದೇಶಿಸಿದ 'ಸಂಗ್ಯಾ ಬಾಳ್ಯಾ' ಚಿತ್ರಕ್ಕೆ ಪನೋರಮಾಗೆ ಪ್ರವೇಶ ಸಿಕ್ಕಿದೆ. ದಕ್ಷಿಣ ಭಾರತದ ಪ್ರಾದೇಶಿಕ ಸಮಿತಿ ಮದ್ರಾಸಿನಲ್ಲಿದೆ. ಈ ಸಮಿತಿ ಕನ್ನಡದ ಆರು ಚಿತ್ರಗಳನ್ನು ತಿರಸ್ಕರಿಸಿತ್ತು. ಆದರೆ ದೆಹಲಿಯಲ್ಲಿ ಕೇಂದ್ರ ಸಮಿತಿಯ ಸದಸ್ಯರಾಗಿದ್ದ ಬಿ. ಸರೋಜಾದೇವಿ ಯವರು ಕನ್ನಡಕ್ಕಾದ ತೀವ್ರ ಅನ್ಯಾಯ ವನ್ನು ಪ್ರತಿಭಟಿಸಿದ್ದ ರಿಂದ ಮತ್ತೆ ಆರು ಚಿತ್ರಗಳನ್ನು ವೀಕ್ಷಿಸಿ ನಿರ್ಧಾರ ಕೈಗೊಳ್ಳಲಾಯಿತಂತೆ.



'ಸಂಗ್ಯಾ ಬಾಳ್ಯಾ' ಚಿತ್ರದಲ್ಲಿ ಉಮಾಶ್ರೀ

'ಸಂಗ್ಯಾ ಬಾಳ್ಯಾ' ಬೆಂಗಳೂರಿನ ಒಂದೇ ಚಿತ್ರಮಂದಿರದಲ್ಲಿ ಬಿಡುಗಡೆಯಾಗಿದ್ದರೂ ಈ ಚಿತ್ರದ ನಿರೂಪಣಾ ಶೈಲಿ ಸಾರ್ವತ್ರಿಕ ಮೆಚ್ಚುಗೆ ಗಳಿಸಿರುವುದು ವೇದ್ಯವಾಗುತ್ತದೆ. ಪತ್ರಿಕಾ ವಿಮರ್ಶೆಗಳೂ ಸುಂದರಕೃಷ್ಣ ಅರಸ್ ಅವರ ಅಚ್ಚುಕಟ್ಟಿನ ಕೆಲಸವನ್ನು, ಕಲಾವಿದರೆಲ್ಲರ ಅಭಿನಯವನ್ನು ಪ್ರಶಂಸಿಸಿವೆ. ಒಟ್ಟಿನಲ್ಲಿ 'ಸಂಗ್ಯಾ ಬಾಳ್ಯಾ'ಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ದೊರಕಿರುವ ಗೌರವ ಸುಂದರಕೃಷ್ಣ ಅರಸ್ ಅವರ ನಿರ್ದೇಶನ ಪ್ರತಿಭೆಗೆ ದೊರಕಿರುವ ಪ್ರಶಂಸೆ ಎಂದರೆ ತಪ್ಪೇನಿಲ್ಲ. ○ ಸ್ವರ್ಣ

ಕ್ರೀಡಾಂಗಣ

ಗೀತ್ ಸೇಥಿ ಭಾರತದ ಮೊಟ್ಟ ಮೊದಲ ವೃತ್ತಿನಿರತ ಬಿಲಿಯರ್ಡ್ಸ್ ಚಾಂಪಿಯನ್

ಎರಡು ಅಮೆಚೂರ್ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ನಲ್ಲಿ ವಿಶ್ವ ಚಾಂಪಿಯನ್ ಆದ ಗೀತ್ ಸೇಥಿಯವರು ಎರಡು ವರ್ಷಗಳ ಹಿಂದೆ



ವೃತ್ತಿನಿರತ ಬಿಲಿಯರ್ಡ್ಸ್ ಪಟುವಾದರು. ಅಂತರ ರಾಷ್ಟ್ರೀಯ ರಂಗದಲ್ಲಿ ಅಮೆಚೂರ್ ಬಿಲಿಯರ್ಡ್ಸ್‌ನ ಮಟ್ಟಕ್ಕೂ ಹಾಗೂ ವೃತ್ತಿನಿರತ ಬಿಲಿಯರ್ಡ್ಸ್ ಮಟ್ಟಕ್ಕೂ ವಿಪರೀತ ವ್ಯತ್ಯಾಸವಿದೆ. ಹೀಗಾಗಿ ಹೆಚ್ಚಿನ ಹಣ ಸಂಪಾದನೆಯ ಉದ್ದೇಶದಿಂದ ವೃತ್ತಿನಿರತರ ಪಟ್ಟಿಗೆ ಗೀತ್‌ಸೇಥಿಯವರು ಸೇರಿದರೂ ವಿಶ್ವಮಟ್ಟದ ಚಾಂಪಿಯನ್‌ಷಿಪ್‌ನಲ್ಲಿ ಅವರ ಸಾಧನೆ ಏನೂ ಇರಲಾರದೆಂದು ಭಾವಿಸಲಾಗಿತ್ತು. ಆದರೆ ವೃತ್ತಿನಿತರ ಬಿಲಿಯರ್ಡ್ಸ್ ಮಟ್ಟದಲ್ಲೂ ಗೀತ್‌ಸೇಥಿಯವರನ್ನು ಕಡೆಗಣಿಸುವ ಹಾಗಿಲ್ಲ ಎನ್ನುವುದನ್ನು ಆಡಿದ ಮೊದಲ ಪಂದ್ಯದಲ್ಲೇ ಅವರು ತೋರಿಸಿಕೊಟ್ಟರು. ತಾವು ಭಾಗವಹಿಸಿದ ಮೊಟ್ಟಮೊದಲ ವಿಶ್ವಕಪ್‌ನಲ್ಲಿ ಗೀತ್‌ಸೇಥಿ ಜಯಗಳಿಸದಿದ್ದರೂ ಅವರೊಬ್ಬರ ಪ್ರಬಲ ಪ್ರತಿಸ್ಪರ್ಧಿ ಎನಿಸಿಕೊಂಡರು. ಈಗ್ಗೆ ಕೆಲವು ದಿನಗಳ ಹಿಂದೆ ನವದೆಹಲಿಯಲ್ಲಿ ನಡೆದ ವೃತ್ತಿನಿರತ ಬಿಲಿಯರ್ಡ್ಸ್ ಕ್ರೀಡೆಯಲ್ಲಿ ಅವರು ತಮ್ಮ ಎದುರಾಳಿ ರಸೆಲ್ ಅವರನ್ನು ಸೋಲಿಸಿ, ಭಾರತದ ಮೊಟ್ಟಮೊದಲ ವೃತ್ತಿನಿರತ ಬಿಲಿಯರ್ಡ್ಸ್ ಚಾಂಪಿಯನ್ ಎನಿಸಿಕೊಂಡರು.

○ಕ್ರೀಡಾಪ್ರಿಯ

ನಿಮ್ಮ ಭವಿಷ್ಯ

ಸ್ವಾಮಿ ನಿತ್ಯಾನಂದ

(ಭಾನುವಾರ 8–11–92ರಿಂದ
ಶನಿವಾರ 14–11–92ರವರೆಗೆ)

ರಾಶಿ	ಹೆಸರಿನ ಪ್ರಥಮ ಅಕ್ಷರ
ಮೇಷ	ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ
ವೃಷಭ	ಇ, ಉ, ಎ, ಒ, ವ, ವಿ, ವು, ವೆ, ವೊ
ಮಿಥುನ	ಕ, ಕಿ, ಕು, ಘ, ಙ, ಛ, ಕೆ, ಕೊ, ಹ
ಕಟಕ	ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ
ಸಿಂಹ	ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ
ಕನ್ಯಾ	ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ
ತುಲಾ	ರ, ರಿ, ರು, ರೆ, ರೊ, ತ, ತಿ, ತು, ತೆ
ವೃಶ್ಚಿಕ	ತೊ, ನ, ನಿ, ನು, ನೆ, ನೊ, ಯ, ಯಿ, ಯು
ಧನುಸ್ಸು	ಯೆ, ಯೊ, ಬ, ಬಿ, ಬು, ಧಿ, ಭ, ಢ, ಬೆ
ಮಕರ	ಬೊ, ಜ, ಜಿ, ಖಿ, ಖು, ಖೆ, ಖೊ, ಗ, ಗಿ
ಕುಂಭ	ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ
ಮೀನ	ದಿ, ದು, ಞ, ಝು, ಥ, ದೆ, ದೊ, ಚ, ಚಿ

ಮೇಷ

ಹಣಕಾಸಿನ ಪರಿಸ್ಥಿತಿ ನಿಧಾನ ಗತಿಯದಾಗಿರುತ್ತದೆ. ವ್ಯಾಪಾರ, ಉದ್ಯಮಗಳಲ್ಲಿ ಅಲ್ಪ ಸ್ವಲ್ಪ ಚೇತರಿಕೆ ಆಗಬಹುದು. ಉದ್ಯೋಗದಲ್ಲಿ ಗಡಿಬಿಡಿ ಉಂಟಾಗುತ್ತದೆ. ಮಹಿಳೆಯರಿಗೆ ಈ ವಾರ ಕಷ್ಟದ ಕಾಲವಾಗಿದೆ. ಎಲ್ಲದರಲ್ಲೂ ಆರಂಭದಲ್ಲಿ ತುಸು ಮಂದಗತಿ ತೋರಿ ಮುಂದೆ ಎಲ್ಲ ಸರಿಯಾಗುತ್ತದೆ. ಬಂಧುಗಳು, ಸ್ನೇಹಿತರ ಕೂಟದಿಂದ ಒಳಿತಿದೆ. ಕಲಾವಿದರಿಗೆ ಸಹಜ ಸ್ಥಿತಿಯಿದೆ. ಕಲಾವಿದರ ಹಳೆಯ ಸಾಲಗಳು ತೀರುತ್ತವೆ.

ವೃಷಭ

ಅನಾವಶ್ಯಕ ವೆಚ್ಚಗಳಿಗೆ ಈಗ ಕಡಿವಾಣ ಹಾಕಲೇಬೇಕಾಗಿದೆ. ಕುಟುಂಬದಲ್ಲಿ ಶುಭ ಕಾರ್ಯವೊಂದನ್ನು ನಡೆಸಲು ಅವಕಾಶವಾಗುತ್ತದೆ. ಉದ್ಯಮದಲ್ಲಿ ಹೊಸ ಪ್ರಯತ್ನಗಳಿಂದಾಗಿ ಹೆಚ್ಚಿನ ಆದಾಯ ಸಿಗುತ್ತದೆ. ವ್ಯಾಪಾರ ಅಭಿವೃದ್ಧಿ ದಾರಿಯತ್ತ ಹೊರಳುತ್ತದೆ. ವ್ಯಾಪಾರ ವೃದ್ಧಿಗೆ ಬೇಕಾದ ಸವಲತ್ತುಗಳು ಕೂಡಿ ಬರುತ್ತವೆ. ಕಲಾವಿದರು ಒಳ್ಳೆಯ ಆದಾಯ ಕಾಣುವರು.

ಮಿಥುನ

ಉದ್ಯೋಗದಲ್ಲಿ ಹೆಚ್ಚಿನ ಅಲೆದಾಟ ಉಂಟಾಗುತ್ತದೆ. ಹಣಕಾಸಿನ ಮುನ್ನಡೆಯಲ್ಲಿ ಕೆಲವು ತಡೆಗಳು ಕಾಣುತ್ತವೆ. ಉದ್ಯೋಗ ಒಳ್ಳೆಯ ರೀತಿಯಲ್ಲೇ ನಡೆದರೂ ಕೆಲವು ವಿಷಯಗಳಲ್ಲಿ ಅವಸರವಾಗಿ ಗಮನ ಹರಿಸಬೇಕಾಗುತ್ತದೆ. ಮಹಿಳೆಯರು ಈಡುಗೊಂಡ ಕಾರ್ಯದಲ್ಲಿ ಜಯಗಳಿಸುವರು. ಕೆಲವು ಹೊರ ವ್ಯವಹಾರಗಳು ಬಿಕ್ಕಟ್ಟನ್ನು ಉಂಟು ಮಾಡಲಿವೆ.

ಕಟಕ

ಕುಟುಂಬ ಜೀವನದಲ್ಲಿ ಕೆಲವು ನಿರ್ಬಂಧಗಳು ಉಂಟಾದರೂ ಅದನ್ನು ನಿಭಾಯಿಸುವುದು ಕಷ್ಟವಲ್ಲ. ಮಕ್ಕಳು ಚಿಂತೆ ತರುವರು. ವ್ಯಾಪಾರೋದ್ಯಮ ರಂಗದಲ್ಲಿ ನಿರಂತರತೆಯನ್ನು ಉಳಿಸಿಕೊಳ್ಳುವಿರಿ. ಉದ್ಯೋಗದಲ್ಲಿ ಕೆಲಸದ ಭಾರ ಹೆಚ್ಚುವುದರೊಂದಿಗೆ ಹೆಚ್ಚಿನ ಸಂಪಾದನೆಯೂ ಸಿಗಲಿದೆ. ಮಹಿಳೆಯರು ಬೇರೆಯವರನ್ನು ನಂಬಿ ಕೂಡಬಾರದು.

ಸಿಂಹ

ಕುಟುಂಬದಲ್ಲಿ ಎಲ್ಲವೂ ಒಳಿತಾಗಿ ಸಿಹಿ ಹರಿಯುತ್ತದೆ. ಹಣಕಾಸಿನ ವಿಷಯದಲ್ಲಿ ಹಲವು ಸಮಸ್ಯೆಗಳು ಏಳುತ್ತವೆ. ವ್ಯಾಪಾರ ಮತ್ತು ಉದ್ಯಮದಲ್ಲಿ ಮಾನಸಿಕ ತೃಪ್ತಿ

ಕಾಣಬರುದು. ವೆಚ್ಚ ಹೆಚ್ಚುತ್ತದೆ. ಕುಟುಂಬ ಜೀವನದಲ್ಲಿ ಒಂದು ರೀತಿಯ ಗೊಂದಲ ಕಂಡು ಬರುತ್ತದೆ. ಮಹಿಳೆಯರು ತುಂಬ ಎಚ್ಚರದಿಂದ ಇರಬೇಕಾದ ಕಾಲವಿದು.

ಕನ್ಯಾ

ಉದ್ಯೋಗದಲ್ಲಿ ಮಂದಸ್ಥಿತಿಯೇ ಮುಂದು ವರಿಯುತ್ತದೆ. ಬಂಧುಗಳಿಂದ ಒಳಿತಿದೆ. ಕೆಲಾವಿದರು ಹೊಸ ಒಪ್ಪಂದ ಗಿಟ್ಟಿಸುವರು. ಹೆಚ್ಚಿನ ಪ್ರಯತ್ನವನ್ನು ಹೂಡಿದಂತೆ ಬದುಕಿನಲ್ಲಿ ಉನ್ನತಿ ನಿಮ್ಮತ್ತ ಬರುತ್ತದೆ. ಆಡಂಬರದ ವೆಚ್ಚಗಳಿಂದಾಗಿ ಕುಟುಂಬ ಜೀವನದಲ್ಲಿ ಗಲಿಬಿಲಿ ಕಾಣುತ್ತದೆ. ಈ ವಾರ ಮನೋವ್ಯಾಕುಲತೆ ಕಂಡು ಬರುವಂತಿದೆ.

ತುಲಾ

ಹಣಕಾಸಿನ ಸವಲತ್ತಿನ ವಿಷಯದಲ್ಲಿ ಹೊಸ ತಿರುವು ಉಂಟಾಗುತ್ತದೆ. ಉದ್ಯೋಗದಲ್ಲಿ ಎಲ್ಲರೂ ನಿಮ್ಮನ್ನು ಅನುಸರಿಸುವಂತೆ ಮಾಡುವಿರಿ. ವ್ಯಾಪಾರೋದ್ಯಮವು ನಿಮಗೆ ಅನುಕೂಲಕರವಾಗಿ ನಡೆಯುತ್ತದೆ. ಕುಟುಂಬ ಜೀವನದಲ್ಲಿ ಎಲ್ಲ ರೀತಿಯ ಸವಲತ್ತುಗಳೂ ಒಳ್ಳೆಯ ರೀತಿಯಲ್ಲಿ ಕೂಡಿ ಬರುತ್ತವೆ. ಮನೆಯಲ್ಲಿ ಶುಭ ಕಾರ್ಯವೊಂದು ಜೋರಾಗಿ ನಡೆಯುತ್ತದೆ.

ವೃಶ್ಚಿಕ

ಹಿಂದೆ ಇದ್ದ ತೊಂದರೆಗಳು ಅಷ್ಟಾಗಿ ಇರಲಾರದು. ಉದ್ಯೋಗದಲ್ಲಿ ನಿರಂತರತೆ ಕಂಡುಬರುತ್ತದೆ. ವ್ಯಾಪಾರ ಮತ್ತು ಉದ್ಯಮದಲ್ಲಿ ಹಿಂದೆ ಇದ್ದ ಅಡೆತಡೆಗಳು ಸ್ವಲ್ಪ ಮಟ್ಟಿಗೆ ತೊಲಗಿ ನಿರಾಳವಾಗುತ್ತದೆ. ವಿದ್ಯಾರ್ಥಿಗಳು ಆಟೋಟಗಳಲ್ಲಿನ ಅಕ್ಕರೆಯನ್ನು ಇನ್ನಾದರೂ ಓದಿನಲ್ಲಿ ತೊಡಗಿಸಬೇಕು. ಹಣಕಾಸಿನ ಪರಿಸ್ಥಿತಿ ಒಂದೇ ರೀತಿ ಇರುತ್ತದೆ.

ಧನುಸ್ಸು

ವ್ಯಾಪಾರ ಮತ್ತು ಉದ್ಯಮ ಒಳ್ಳೆಯ ರೀತಿಯಲ್ಲಿ ಮೇಲ್ಮುಖವಾಗಿ ನಡೆಯುತ್ತದೆ. ಉದ್ಯೋಗದಲ್ಲಿ ಚುರುಕು ಉಂಟಾಗುತ್ತದೆ. ಮಹಿಳೆಯರು ಸಹೋದ್ಯೋಗಿಗಳು, ಸ್ನೇಹಿತೆಯ ರಿಂದ ಒಳಿತು ಕಾಣುವರು. ಮಹಿಳೆಯರು ಅತಿ ತಾಳ್ಮೆಯಿಂದ ಹೆಜ್ಜೆಯಿಡಬೇಕಾದ ಕಾಲವಿದು. ಹಣಕಾಸಿನ ಪರಿಸ್ಥಿತಿ ಹಿಂದಿಗಿಂತ ಹೆಚ್ಚು ಸ್ಪಷ್ಟಗೊಳ್ಳುತ್ತದೆ.

ಮಕರ

ಉದ್ಯೋಗದಲ್ಲಿರುವವರು ಪದವಿ ಬದಲಾವಣೆ ಕಾಣುತ್ತಾರೆ. ವ್ಯಾಪಾರ ಮತ್ತು ಉದ್ಯಮ ಉನ್ನತಿ ತಂದುಕೊಡುತ್ತದೆ. ಗಂಡ ಹೆಂಡಿರ ಸಂಬಂಧ ತಿಳಿವಳಿಕೆಯುದಿದ್ದು ಮಧುರವಾಗಿರುತ್ತದೆ. ಬೇಸಾಯ ರಂಗದಲ್ಲಿ ಒಳ್ಳೆಯ ಬೆಳೆ ಕಾಣುವಿರಿ. ಹಣಕಾಸು ಒಂದು ಮಟ್ಟಿಗೆ ಮನೋತೃಪ್ತಿ ತರುವಂತಿರುತ್ತದೆ.

ಕುಂಭ

ಉದ್ಯಮ ಮೊದಲಾದವುಗಳಲ್ಲಿ ನೀವು ಹೂಡುವ ಪ್ರಯತ್ನ ಒಳ್ಳೆಯ ಫಲ ತರಲಿದೆ. ಮಹಿಳೆಯರು ನೆಮ್ಮದಿಯ ನಿಟ್ಟುಸಿರು ಬಿಡುವರು. ಕುಟುಂಬದ ವಿಷಯದಲ್ಲಿ ಇನ್ನೂ ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಮುನ್ನಡೆಯಬೇಕು. ಬದುಕಿನ ದಾರಿಯಲ್ಲಿ ಭಾರೀ ಹೊಸ ತಿರುವನ್ನು ಕಾಣುವಿರಿ. ಉದ್ಯೋಗದಲ್ಲಿ ಹೆಚ್ಚಿನ ಅಕ್ಕರೆ ಉಂಟಾಗುತ್ತದೆ.

ಮೀನ

ವ್ಯಾಪಾರೋದ್ಯಮದಲ್ಲಿ ಹೊಸ ದಾರಿಯೇ ಸರಿ. ಈ ವಾರ ಮನೋವ್ಯಾಕುಲತೆ ಕಂಡು ಬಂದರೂ ಆ ಬಗ್ಗೆ ಯಾವುದೇ ಅವಸರದ ತೀರ್ಮಾನ ತೆಗೆದುಕೊಳ್ಳದಿರುವುದೇ ಕ್ಷೇಮ. ಹಣಕಾಸಿನ ಪರಿಸ್ಥಿತಿ ಧಾರಾಳದ್ದಾಗಿರುತ್ತದೆ. ಹೊರ ವ್ಯವಹಾರಗಳಿಂದ ಅನುಕೂಲವಿದೆ. ಮಹಿಳೆಯರ ಮಾತು ನಡೆಯುತ್ತದೆ. ಮನೆ, ಜಮೀನು, ವಾಹನಗಳಿಂದ ಬಹಳ ಒಳ್ಳೆಯ ಆದಾಯವಿದೆ.

ನಿಮ್ಮ ಪತ್ರಗಳು

ಬಿ. ಸನಾವುಲ್ಲಾ ಖಾನ್,
ಗೌರಿಬಿದನೂರು

25–10–92ರ 'ರಾಗ ಸಂಗಮ' ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾದ ಚಲನಚಿತ್ರವಾಗಲಿರುವ ಕಾದಂಬರಿ ಸೂರ್ಯದೇವರ ರಾಮಮೋಹನ್ ರಾವ್ ಅವರ 'ಪ್ರೀತಿಯ ಆಹ್ವಾನ' ಬಹಳ ಚೆನ್ನಾಗಿ ಮೂಡಿ ಬಂದಿದೆ. ಕಡಿಮೆ ಬೆಲೆಗೆ ಇಷ್ಟೊಂದು ದೊಡ್ಡ ಕಾದಂಬರಿಯನ್ನು ನೀಡಿದ 'ರಾಗ ಸಂಗಮ'ಕ್ಕೆ ಕೃತಜ್ಞತೆಗಳು. ಕವನ 'ಪ(ಂ)ಚನಿಗಳು' ಚೆನ್ನಾಗಿತ್ತು. ಮಕ್ಕಳ ಕಥೆ ಈ ಬಾರಿ ಬಹಳ ಚೆನ್ನಾಗಿತ್ತು. ಶಾಂಭವಿ ಮತ್ತು ಪೋಲೀಸ್ ಲಾಕಪ್ ಚಿತ್ರ ವಿಮರ್ಶೆ ಹಿಡಿಸಿದವು. ಈ ಬಾರಿಯ ಬೋನಸ್ 'ಹಾಸ್ಯ ಸಂಗಮ' ನೋಡಿ ಬಹಳ ಸಂತೋಷವಾಯಿತು.

ಸಿದ್ದಪ್ಪಾ ಸ. ಬಗ್ಗಣ್ಣವರ,
ಹುಲ್ಲೋಳಿ

ಕಾದಂಬರಿ 'ಪ್ರೀತಿಯ ಆಹ್ವಾನ' ಒಂದು ಶಬ್ದವನ್ನು ಕೂಡ ಬಿಡದೆ ಓದುವಂತೆ ಮಾಡಿತು. ಮಧು ಮತ್ತು ಸೀತಾಮಹಾಲಕ್ಷ್ಮಿಯರ ಪಾತ್ರಗಳಂತೂ ಕಾದಂಬರಿಯ ಕಥೆಗೆ ಮತ್ತಷ್ಟು ಕಳೆ ಕೊಟ್ಟಿದ್ದವು. ಪ. ರಾಮಕೃಷ್ಣ ಶಾಸ್ತ್ರಿಯವರ ಸಣ್ಣ ಕಥೆ 'ನಿರ್ಧಾರ' ತುಂಬ ಮಾರ್ಮಿಕವಾಗಿತ್ತು.

ಎಸ್. ಪ್ರಕಾಶ್,
ಮಕ್ಕಿಕೊಪ್ಪ

'ಪ್ರೀತಿಯ ಆಹ್ವಾನ' ಕಾದಂಬರಿ ಚೆನ್ನಾಗಿತ್ತು. ಒಂದು ಪುಟದ ಮಿನಿ ಕಥೆ ಮತ್ತು ಸಣ್ಣ ಕಥೆ 'ನಿರ್ಧಾರ' ತುಂಬ ಚೆನ್ನಾಗಿತ್ತು.

ಬಿ. ಸಿ. ಪರಮೇಶ್ವರಯ್ಯ,
ಕಡೂರು

ರಾಘವೇಂದ್ರ ರಾಜ್ ಕುಮಾರ್‌ರವರ ಸುಂದರ ಮುಖಪುಟದೊಂದಿಗೆ ಮೂಡಿ ಬಂದ ಸಂಪೂರ್ಣ ಕಾದಂಬರಿ 'ಪ್ರೀತಿಯ ಆಹ್ವಾನ' ತುಂಬಾ ಸೊಗಸಾಗಿ ಮೂಡಿ ಬಂದಿದೆ. ಇದು ಇತ್ತೀಚೆಗೆ ಕಾಲೇಜುಗಳಲ್ಲಿ ನಡೆಯುತ್ತಿರುವುದೇ. ಆದರೆ ಮದುವೆಯಾಗಿ, ಆಮೇಲೆ ಪ್ರೀತಿ ಮಾಡಿ ಮತ್ತೇ ಮದುವೆ ಅನ್ನುವುದು ಒಂದು ತರಾ ಹೊಸ ಅನುಭವ ಹಾಗೂ ಆಸಕ್ತಿ ತರುತ್ತದೆ. ಶಾಂಭವಿ ಹಾಗೂ ಪೋಲೀಸ್ ಲಾಕಪ್ ಚಿತ್ರವಿಮರ್ಶೆ ಉತ್ತಮವಾಗಿದ್ದು, ದೀಪಾವಳಿ ವಿಶೇಷ ಸಂಚಿಕೆ ಹೊಸತನ್ನೇ ತರುವಂತೆ ಪ್ರಕಟಗೊಂಡಿದೆ.


ಕಾಂತರಾಜು ಕೆ. ಎಚ್;
ಹೊನ್ನಗೊಂಡನಹಳ್ಳಿ


'ಪ್ರೀತಿಯ ಆಹ್ವಾನ' ಕಾದಂಬರಿ ಮೊದಲಿನಿಂದ ಕಡೆಯ ವರೆಗೂ ಕುತೂಹಲಕಾರಿಯಾಗಿತ್ತು. ಇಂತಹ ಉತ್ತಮ ಕಾದಂಬರಿ ಬರುತ್ತದೆಯೆಂದು ನಾನು ಊಹಿಸಿಯೂ ಇರಲಿಲ್ಲ. ಈ ಕಾದಂಬರಿ ಆಧಾರಿತ ಚಲನಚಿತ್ರ ಅತ್ಯುತ್ತಮ ಚಲನಚಿತ್ರವಾಗುತ್ತದೆ. ಇಂತಹ ಕಾದಂಬರಿಗಳಿರುವುದರಿಂದಲೇ ವಾರಕ್ಕೊಮ್ಮೆ 'ರಾಗಸಂಗಮ'ಕ್ಕಾಗಿ ಕಾಯಬೇಕಾಗುತ್ತದೆ.

ಶಂಕರ್‌ನಾಗ್,
ಕಟ್ಟೆಬೆಳಗುಲಿ

ದೀಪಾವಳಿ ವಿಶೇಷಾಂಕದಲ್ಲಿ ರಾಘವೇಂದ್ರ ರಾಜ್ ಕುಮಾರ್ ಅವರ ಮುಖ ಪುಟ ಬಹಳ ಸೊಗಸಾಗಿ ಮೂಡಿ ಬಂದಿದೆ. ಹಾಗೂ ಶಾಂಭವಿ ಮತ್ತು ಪೋಲೀಸ್ ಲಾಕಪ್ ಚಿತ್ರ ವಿಮರ್ಶೆಗಳು ಮೆಚ್ಚುವಂತಿದೆ.

ಸಂಪಾದಕಿ ಮತ್ತು ಪ್ರಕಾಶಕಿ : ಕಮಲಾ ಸುಂದರ್ ರಾಜನ್, ಸಂಗಮ ಪ್ರಕಾಶನ, ಅಂಚೆ ಪೆಟ್ಟಿಗೆ 6646, 41, ಕೋಟೆ 'ಬಿ' ಬೀದಿ, ಬೆಂಗಳೂರು–2; ದೂರವಾಣಿ : 625004; ಮುದ್ರಕರು : ವಿ. ರಾಮಯ್ಯ, ಶ್ರೀ ಸತ್ಯನಾರಾಯಣ ಪ್ರೆಸ್, 31, ಜೆ.ಬಿ.ಲೇನ್, ಕಾಟನ್‌ಪೇಟೆ, ಬೆಂಗಳೂರು–53





ಹಾಸ್ಯ ಸಂಗಮ

ಶೃಂಗೇರಿ ಸತೀಶ್

